
# ರೋಗ ಜಾನಪದ

## ಲೇಖನಗಳ ಸಂಗ್ರಹ



ಸಂಪಾದಕರು

ಪ್ರೊ. ಡಿ. ಲಿಂಗಯ್ಯ       ಡಾ. ಚಕ್ಕೆರೆ ಶಿವಶಂಕರ್

ತ್ರೈವಾರ್ಷಿಕ ಜಾನಪದ ಯೋಜನೆ ಪುಸ್ತಕ ಮಾಲೆ – ೫

# ರೋಗ ಜಾನಪದ

ಲೇಖನಗಳ ಸಂಗ್ರಹ

ಸಂಪಾದಕರು
**ಪ್ರೊ. ಡಿ. ಲಿಂಗಯ್ಯ**
**ಡಾ. ಚಕ್ಕೆರೆ ಶಿವಶಂಕರ್**

**ಕರ್ನಾಟಕ ಜಾನಪದ ಪರಿಷತ್ತು**
ನಂ.1, ಕರ್ನಾಟಕ ಸರ್ಕಾರಿ ನೌಕರರ ವಸತಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

**ROGA JANAPADA** - A Collection of Articles. Edited by Prof. D. Lingaiah and Dr. Chakkere Shivashankar. Published by : KARNATAKA JANAPADA PARISHATH, No.1, Karnataka Government Employee's Residential Layout, Near M.S. Ramaiah Hospital Gate, New B.E.L. Road, Bangalore - 560 054. Pages : 232 Price : Rs.120/- 2008

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೧೦೦೦

ಪುಟಗಳು : ೨೩೨

ಬೆಲೆ : ರೂ. ೧೨೦ (ಒಂದು ನೂರ ಇಪ್ಪತ್ತು ರೂಪಾಯಿ)

**ಹಕ್ಕುಗಳು ಆಯಾ ಲೇಖಕರಿಗೆ ಸೇರಿವೆ.**
**ಈ ಮುದ್ರಣದ ಹಕ್ಕು ಕರ್ನಾಟಕ ಜಾನಪದ ಪರಿಷತ್ತಿಗೆ ಸೇರಿದೆ.**

ಗ್ರಂಥ ಪ್ರಕಟಣ ಸಲಹಾ ಸಮಿತಿ

| | |
|---|---|
| ನಾಡೋಜ ಡಾ. ಜಿ. ನಾರಾಯಣ | ಅಧ್ಯಕ್ಷರು |
| ಶ್ರೀ ಟಿ. ತಿಮ್ಮೇಗೌಡ | ಸದಸ್ಯರು |
| ಶ್ರೀಮತಿ ಇಂದಿರಾ ಬಾಲಕೃಷ್ಣ | ಸದಸ್ಯರು |
| ಶ್ರೀ ಗೊ.ರು. ಚನ್ನಬಸಪ್ಪ | ಸದಸ್ಯರು |
| ನಾಡೋಜ ಡಾ. ಸಿದ್ಧಲಿಂಗಯ್ಯ | ಸದಸ್ಯರು |
| ಡಾ. ಎಂ.ಎ. ಜಯಚಂದ್ರ | ಸದಸ್ಯರು |
| ಪ್ರೊ. ಡಿ. ಲಿಂಗಯ್ಯ | ಸಂಪಾದಕರು |
| ಡಾ. ಚಕ್ಕೆರೆ ಶಿವಶಂಕರ್ | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು : ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಭಾರತದ ಎಲ್ಲಾ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ಸಮೃದ್ಧವಾದ, ವೈವಿಧ್ಯವಾದ ಜಾನಪದವಿದೆ. ಅದು ಗರಿಕೆಯ ಬೇರಿನಂತೆ ಬದುಕಿನ ಎಲ್ಲಾ ಮಜಲುಗಳಿಗೂ ಹರಡಿಕೊಂಡಿದೆ. ಜಾನಪದವಿಲ್ಲದೆ ಜನಜೀವನವಿಲ್ಲ ಎಂಬಂತೆ ಬದುಕಿನ ಅವಿಭಾಜ್ಯ ಅಂಗವಾಗಿದೆ. ಕರ್ನಾಟಕದ ಸಮಗ್ರ ಸಂಸ್ಕೃತಿ ಜಾನಪದ ಆಶಯದಿಂದ ಕೂಡಿದೆ. ಜನಪದ ಸಾಹಿತ್ಯ, ಭಾಷೆ, ಕಲೆ, ವಿಜ್ಞಾನ, ಆಚರಣೆ, ಆರಾಧನೆ, ಆಹಾರವಿಹಾರ, ವೇಷಭೂಷಣ, ಕಸಬು, ಐತಿಹ್ಯ, ಪುರಾಣ ಸಂಸ್ಕೃತಿ, ಸಂವಹನ ಮೊದಲಾದವು ಬದುಕಿನ ನೆಲೆಯೊಡನೆ ಮಡುಗಟ್ಟಿ ಅಮೃತಪ್ರಾಯವಾಗಿ ಜೀವನೋತ್ಸಾಹ ತುಂಬುತ್ತಿವೆ. ಇವುಗಳ ಸಂಗ್ರಹ ಸಂಪಾದನೆ ಅಧ್ಯಯನ ಅಧ್ಯಾಪನ ಆನ್ವಯಿಕತೆ ಜಾಗತಿಕ ತುರ್ತಾಗಿದೆ. ಜಾನಪದದ ಅರಿವಿನಿಂದ ಶಿಷ್ಟಪದ ಸುಪುಷ್ಟವಾಗಿ ಸುಸಂಸ್ಕೃತವಾಗಿ ಬೆಳೆಯುವ ಸಾಧ್ಯತೆಯಿದೆ.

ಜಾನಪದ ರೂವಾರಿ, ಜಾನಪದ ಜಂಗಮ, ನಾಡೋಜ ಎಚ್.ಎಲ್. ನಾಗೇಗೌಡರು ಸಮಗ್ರ ಜಾನಪದದ ಅಭಿವೃದ್ಧಿಗಾಗಿ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆಯನ್ನು ಹುಟ್ಟುಹಾಕಿದರು. ಜಾನಪದದ ಪ್ರತ್ಯಕ್ಷ ದರ್ಶನಕ್ಕೆ 'ಜಾನಪದ ಲೋಕ' ವನ್ನು ಸ್ಥಾಪಿಸಿದರು. ತಮ್ಮ ಜೀವಿತದ ಬಹುಭಾಗವನ್ನು ಜಾನಪದಕ್ಕೆ ಮೀಸಲಿಟ್ಟು, ಕನ್ನಡ ನಾಡಿನಲ್ಲೆಲ್ಲಾ ಸಂಚರಿಸಿ ಅಪಾರವಾದ, ಅಪರೂಪವಾದ, ವೈವಿಧ್ಯಮಯವಾದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ, ಜಾನಪದ ವಿದ್ವಾಂಸರ ಚಿಂತನಾಭಿವ್ಯಕ್ತಿಗೆ ಅನುವಾಗುವ 'ಜಾನಪದ ಜಗತ್ತು' ಪತ್ರಿಕೆಯನ್ನು ಪ್ರಾರಂಭಿಸಿ, ಯಶಸ್ವಿಯಾಗಿ ನಡೆಸಿದರು.

ಎಚ್.ಎಲ್. ನಾಗೇಗೌಡರ ಜಾನಪದದ ಕನಸನ್ನು ನನಸುಮಾಡಲು, ಕರ್ನಾಟಕ ಜಾನಪದ ಪರಿಷತ್ತು ತ್ರೈವಾರ್ಷಿಕ ಜಾನಪದ ಯೋಜನೆಯನ್ನು ಹಮ್ಮಿಕೊಂಡು ಕಾರ್ಯೋನ್ಮುಖವಾಗಿದೆ. ಅದರ ಹಲವು ಬೃಹತ್ ಯೋಜನೆಗಳಲ್ಲಿ ಶ್ರೀ ನಾಗೇಗೌಡರು ಸಂಗ್ರಹಿಸಿದ ಜನಪದ ಸಾಹಿತ್ಯ ಪ್ರಕಟಣೆಯೂ ಒಂದು. ಇದರಲ್ಲಿ 'ಜಾನಪದ ಜಗತ್ತು' ಪತ್ರಿಕೆಯಲ್ಲಿ ಪ್ರಕಟವಾದ ವಿಶೇಷ ಲೇಖನಗಳ ಸಂಗ್ರಹ ಪ್ರಕಟಣೆಯೂ ಸೇರಿದೆ. ಜಾನಪದವನ್ನು ಗಂಭೀರವಾಗಿ ಅಧ್ಯಯನ ಮಾಡುವವರಿಗೆ 'ರೋಗಜಾನಪದ' ಗ್ರಂಥ ಪ್ರಕಟಣೆ ಉಪಯುಕ್ತವಾಗುವುದೆಂದು ಭಾವಿಸಿದೆ. ಪ್ರಸ್ತುತ ಗ್ರಂಥವನ್ನು ಪ್ರೊ. ಡಿ. ಲಿಂಗಯ್ಯ ಮತ್ತು ಡಾ. ಚಕ್ಕೆರೆ ಶಿವಶಂಕರ್ ಸಂಪಾದಿಸಿದ್ದಾರೆ. ತ್ರೈವಾರ್ಷಿಕ ಜಾನಪದ ಯೋಜನೆಯ ಪುಸ್ತಕ ಮಾಲೆಯ ಐದನೆಯ ಕುಸುಮವಾಗಿ 'ರೋಗ ಜಾನಪದ' ಗ್ರಂಥ ಪ್ರಕಟವಾಗುತ್ತಿದೆ. ಸಹೃದಯರಿಗೆ ಈ ಗ್ರಂಥ ಪ್ರಿಯವಾಗಲಿ ಎಂದು ಆಶಿಸುತ್ತೇನೆ.

ಬೆಂಗಳೂರು
15-01-2008

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಸಂಪಾದಕರ ಮಾತು

ನಾಡೋಜ ಎಚ್.ಎಲ್. ನಾಗೇಗೌಡರು ಕರ್ನಾಟಕ ಜಾನಪದ ಪರಿಷತ್ತು ಮಹಾಸಂಸ್ಥೆಯನ್ನು ಹುಟ್ಟುಹಾಕಿದ ಮೇಲೆ, ಮಹತ್ವಾಕಾಂಕ್ಷೆಯ 'ಜಾನಪದ ಜಗತ್ತು' ಪತ್ರಿಕೆಯನ್ನು ಪ್ರಾರಂಭಿಸಿದರು. 1980ನೇ ಜನವರಿ ತಿಂಗಳಿನಲ್ಲಿ ಮೊದಲನೆಯ ಸಂಚಿಕೆ ಪ್ರಕಟವಾಯಿತು. ಮೊದಲು ದ್ವೈಮಾಸಿಕವಾಗಿ, ಅನಂತರ ತ್ರೈಮಾಸಿಕವಾಗಿ ಪತ್ರಿಕೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಕರ್ನಾಟಕದ ವಿದ್ವಾಂಸರು ವೈವಿಧ್ಯಮಯವಾದ ಲೇಖನಗಳನ್ನು ಬರೆದುಕೊಟ್ಟು ಪತ್ರಿಕೆ ಅರ್ಥಪೂರ್ಣವಾಗಿ ಪ್ರಕಾಶನಗೊಳ್ಳಲು ನೆರವಾಗಿದ್ದಾರೆ. ಆಗಾಗ ನಿರ್ದಿಷ್ಟ ವಿಷಯವನ್ನು ಕುರಿತಂತೆ ವಿಶೇಷ ಸಂಚಿಕೆಗಳೂ ಪ್ರಕಟವಾಗಿವೆ. ಅಂಥವುಗಳಲ್ಲಿ 'ರೋಗಜಾನಪದ' ವನ್ನು ಕುರಿತ ವಿಶೇಷ ಸಂಚಿಕೆಯೂ ಒಂದು. ಈ ಸಂಚಿಕೆ 2001–2002 ರಲ್ಲಿ ಸಂಯುಕ್ತ ಸಂಚಿಕೆಯಾಗಿ ಪ್ರಕಟವಾಯಿತು. ಈ ಲೇಖನಗಳು ಜಾನಪದದ ಗಂಭೀರ ಅಧ್ಯಯನಕ್ಕೆ ತೆರೆದುಕೊಳ್ಳುವಂಥವು. ರೋಗ ಜಾನಪದಕ್ಕೆ ಸಂಬಂಧಿಸಿದಂತೆ ವಿಶೇಷ ಸಂಚಿಕೆಗೆ ಹಿಂದೆಯೂ ಅನಂತರವೂ ಕೆಲವು ಲೇಖನಗಳು ಜಾನಪದ ಜಗತ್ತು ಪತ್ರಿಕೆಯಲ್ಲಿ ಪ್ರಕಟವಾದವು. ಸ್ವಲ್ಪ ಹೆಚ್ಚು ಕಡಮೆ ಎಲ್ಲವೂ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದವಾದುದರಿಂದ ಅವುಗಳನ್ನೆಲ್ಲ ಒಟ್ಟಿಗೆ ಸೇರಿಸಿ "ರೋಗ ಜಾನಪದ" ಗ್ರಂಥವನ್ನು ಸಿದ್ಧಪಡಿಸಿದೆ.

ಕನ್ನಡ ಜಾನಪದದ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಇದು ಮೊದಲ ಗ್ರಂಥ. ಇದು ಸಮಗ್ರ ಗ್ರಂಥವಲ್ಲ. ಕೆಲವು ಮಾದರಿಗಳು ಅಷ್ಟೆ. ಬಲ್ಲಂಥ ವಿದ್ವಾಂಸರು ಉಳಿದ ವಿಷಯಗಳನ್ನು – ರೋಗಗಳನ್ನು – ಕುರಿತು ಲೇಖನಗಳನ್ನು ಬರೆಯಬಹುದು. ಈ ಕ್ಷೇತ್ರದಲ್ಲಿ ಇನ್ನೂ ಮಾಡಬೇಕಾದ ಕೆಲಸ ಬಹಳಷ್ಟಿದೆ.

"ಜಾಗತೀಕರಣ, ಮುಕ್ತ ಮಾರುಕಟ್ಟೆ, ಗ್ಯಾಟ್–ಡೆಂಕೆಲ್ ಪ್ರಸ್ತಾವಗಳು, ಡಬ್ಲ್ಯುಟಿಓ ಒಪ್ಪಂದಗಳು, ಪರಿಸರ ಸಮಸ್ಯೆ, ರೈತ–ಕಾರ್ಮಿಕ ಹೋರಾಟ ಇವೇ ಮೊದಲಾದ ವಿದ್ಯಮಾನಗಳು ಈವತ್ತಿನ ಜಾನಪದ ಅಧ್ಯಯನದ ಮೇಲೆ ಗಾಢವಾದ ಪರಿಣಾಮಗಳನ್ನು ಬೀರುತ್ತಿವೆ. ಆರ್ಥಿಕ ಉದಾರೀಕರಣದ ನೆಪದಲ್ಲಿ

ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆಹಾಕುತ್ತಿರುವುದರ ಫಲವಾಗಿ ಗ್ರಾಮ ಸಮಾಜದ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ತೀವ್ರ ಬದಲಾವಣೆಗಳು ನಡೆಯುತ್ತಿವೆ. ತಂತಮ್ಮ ಕಸುಬುಗಳನ್ನೇ ಜೀವನ ಮೌಲ್ಯವೆಂದು ನಂಬಿಕೊಂಡು ನೆಮ್ಮದಿಯಿಂದ ಬದುಕುತ್ತಿದ್ದ ಗ್ರಾಮೀಣ ಬದುಕು ವ್ಯಾಪಾರೀ ಮನೋಭಾವದ ಫಲವಾಗಿ ಅಸ್ತವ್ಯಸ್ತಗೊಂಡಿದೆ.

ಈವತ್ತಿನ ದಿನಗಳಲ್ಲಿ ಜಾನಪದ ಎನ್ನುವುದು ಕೇವಲ ಸಾಂಸ್ಕೃತಿಕ ವಿದ್ಯಮಾನವಷ್ಟೇ ಆಗಿರದೆ ರಾಜಕೀಯ, ಆರ್ಥಿಕ ವಿದ್ಯಮಾನವು ಕೂಡ ಆಗಿದ್ದು ಜಾನಪದವನ್ನು ಬಹುಮುಖಿ ಅಧ್ಯಯನವನ್ನಾಗಿ ರೂಢಿಸಿಕೊಳ್ಳಬೇಕಾಗಿದೆ. ಜಾಗತೀಕರಣ ಪ್ರಕ್ರಿಯೆಗೆ ಎದುರಾಗಿ ಜಾನಪದ ಪರಿಕರಗಳನ್ನು ಹೊಸ ಬೆಳಕಿನಲ್ಲಿ ಅರ್ಥಯಿಸಿಕೊಳ್ಳಬೇಕಾಗಿದೆ. ಜಾನಪದದ ಕ್ಷಿತಿಜವನ್ನು ಮತ್ತಷ್ಟು ವಿಸ್ತರಿಸಬೇಕಾಗಿದೆ.

ಜಾನಪದವು ಸಮಾಜಮುಖಿಯಾದುದು; ಸದಾ ಆರೋಗ್ಯಕಾರಿಯಾದುದು. ಮನುಷ್ಯನ ಬದುಕೇ ಜಾನಪದದ ಮೂಲ ಜೀವದ್ರವ್ಯವಾಗಿರುವದರಿಂದ, ಬದುಕನ್ನು ಕುರೂಪಗೊಳಿಸಲು ಜಾನಪದವು ಎಂದಿಗೂ ಒಪ್ಪದು. ಸಾಮಾಜಿಕ ಘಟಕಗಳು ಸದಾ ಚಲನಶೀಲತೆಯಿಂದ ಕೂಡಿದ್ದರೆ ಆರೋಗ್ಯ; ಜಡವಾದರೆ ಅನಾರೋಗ್ಯ. ವಿದೇಶಿ ಚಿಂತನೆಗಳು ಮತ್ತು ವಸ್ತುಗಳ ಪ್ರವೇಶದಿಂದಾಗಿ ದೇಶಿ ಸಂಸ್ಕೃತಿ ಮತ್ತು ಸಮಾಜಗಳು ಅನಾರೋಗ್ಯಕ್ಕೀಡಾಗಿವೆ. ಅಂತೆಯೇ ದೇಹದೊಳಕ್ಕೆ ಹೊರಗಿನಿಂದ ಪ್ರವೇಶಿಸುವ ರೋಗಾಣುಗಳು ಆರೋಗ್ಯಪೂರ್ಣ ಮನುಷ್ಯನನ್ನು ರೋಗಕ್ಕೀಡುಮಾಡುತ್ತವೆ.

ಜಾನಪದದಲ್ಲಿ ನಾಯಕ-ಪ್ರತಿನಾಯಕ ಕಲ್ಪನೆಗಳೆರಡೂ ಒಟ್ಟಿಗೇ ಇರುವಂತೆ, ಊಟ ಮತ್ತು ಔಷಧಿಗಳೆರಡೂ ಒಟ್ಟಿಗೇ ಇವೆ. ಇವೆರಡೂ ಮುನಿಸಿಕೊಂಡಾಗ ರೋಗ ತಗಲುತ್ತದೆ. ಮನುಷ್ಯನಿಗೆ ಗಾಯ-ನೋವುಗಳು ಕಾಣಿಸಿಕೊಂಡಾಗ ಅವುಗಳಿಗೆ ತಾನು ಬದುಕುವ ಪರಿಸರದಲ್ಲೇ ಪರಿಹಾರಗಳನ್ನು ಕಂಡುಕೊಂಡಿದ್ದಾನೆ. ಯಾವುದರಲ್ಲಿ-ಎಂಥದ್ದರಲ್ಲಿ ವಾಸಿಮಾಡುವ ಗುಣವಿದೆ ಎಂಬ ಔಷಧೀಯ ಜ್ಞಾನವನ್ನು ನಮ್ಮ ಪೂರ್ವಜರು ಪಶು, ಪಕ್ಷಿ, ಪ್ರಾಣಿಗಳ

ವರ್ತನೆಗಳಿಂದ ಅರಿತವರಾಗಿದ್ದರು. ವೈದ್ಯಕೀಯ ಚಿಕಿತ್ಸಾಕ್ರಮವನ್ನು ಅವರಿಗೆ ನಿಸರ್ಗವೇ ಕಲಿಸಿದ್ದಿತು. ರೋಗ ಜಾನಪದದಲ್ಲಿ ಪ್ರಯೋಗಗಳ ಆಧಾರವೂ ಇದೆ : ನಂಬಿಕೆಗಳ ಆಧಾರವೂ ಇದೆ. (ಉದಾ : ಪಾರ್ಶ್ವವಾಯುವಿಗೆ ಈವತ್ತಿಗೂ ಆಧುನಿಕ ವೈದ್ಯವಿಧಾನಕ್ಕಿಂತಲೂ ಜನಪದ ವೈದ್ಯವನ್ನೇ ಜನ ಹೆಚ್ಚಾಗಿ ನಂಬುತ್ತಾರೆ.) ರೋಗಕ್ಕೆ ಕಾರಣ ಯಾವುದೆಂಬುದರ ಮೂಲವನ್ನು ಅನ್ವೇಷಿಸುವುದಕ್ಕಿಂತ ಹೆಚ್ಚಾಗಿ ರೋಗದ ನಿವಾರಣೆಯ ಉಪಾಯಗಳು ಗ್ರಾಮೀಣ ಸಮಾಜದಲ್ಲಿವೆ. ರೋಗಗಳನ್ನು ನಿವಾರಿಸುವ ಮದ್ದುಗಳ ತಿಳುವಳಿಕೆಯು ಕೂಡಾ ಮೌಖಿಕ ಪರಂಪರೆ ಮತ್ತು ಆನುವಂಶಿಕವಾಗಿ ಮುಂದುವರಿದುಕೊಂಡು ಬಂದಿದೆ. **ಗ್ರಾಮೀಣ ಸಮಾಜದ ರೋಗ ಚಿಕಿತ್ಸಾ ಕ್ರಮವು ಕೇವಲ ಮೌಢ್ಯದ ಆಧಾರದ ಮೇಲಿಲ್ಲ. ಪರಂಪರಾಗತ ಪ್ರಯೋಗ-ಪರೀಕ್ಷೆಗಳಿಂದ, ಪರಿಣಾಮಕಾರತ್ವದಿಂದ ಸಿದ್ಧಿಗೊಂಡಿರುವ ಚಿಕಿತ್ಸಾ ವಿಧಾನ. ಇಂತಹ ಪರಂಪರಾಗತ ಚಿಕಿತ್ಸಾಕ್ರಮವನ್ನು ಮೌಢ್ಯವೆಂದು ಸಾರಾಸಗಟಾಗಿ ತಳ್ಳಿಹಾಕುವುದು ಪರಂಪರಾಗತ ಜ್ಞಾನಕ್ಕೆಸಗಿದ ದ್ರೋಹವಾಗುತ್ತದೆ.** ಈ ದಿಸೆಯಲ್ಲಿ ಆಧುನಿಕ ವೈದ್ಯಪದ್ಧತಿ ಜನಪದ ವೈದ್ಯಪದ್ಧತಿಯೊಂದಿಗೆ interact ಮಾಡಬೇಕಾಗಿದೆ".

ರೋಗಜಾನಪದವನ್ನು ಕುರಿತು ಲೇಖನಗಳನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೆ ಕೃತಜ್ಞರಾಗಿದ್ದೇವೆ. ಈ ವಿಶೇಷ ಗ್ರಂಥವನ್ನು ಜಾನಪದ ಆಸಕ್ತರು ಪ್ರೀತಿಯಿಂದ ಸ್ವೀಕರಿಸಿ, ಗುಣದೋಷಗಳನ್ನು ತಿಳಿಸಿ, ಉಪಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಬೆಂಗಳೂರು
15-01-2008

**ಪ್ರೊ. ಡಿ. ಲಿಂಗಯ್ಯ**
**ಡಾ. ಚಕ್ಕೆರೆ ಶಿವಶಂಕರ್**

# ಪರಿವಿಡಿ


ಅಧ್ಯಕ್ಷರ ಮಾತು

ಸಂಪಾದಕರ ಮಾತು

1. ರೋಗ ಜಾನಪದದ ಅಧ್ಯಯನ
   – ಪ್ರೊ. ಡಿ. ಲಿಂಗಯ್ಯ
2. ರೋಗ ಜಾನಪದ
   – ಡಾ. ಸಿ.ಕೆ. ನಾವಲಗಿ
3. ಜಾನಪದದಲ್ಲಿ ರೋಗರುಜಿನಗಳು
   – ಡಾ. ದಸ್ತಗೀರ ಅಲ್ಲೀಭಾಯಿ
4. ಜನಪದ ರೋಗ ದೇವತೆಗಳು
   – ಡಾ. ಚನ್ನಣ್ಣ ವಾಲೀಕಾರ
5. ಪರಿಸರ–ಸಮಾಜ–ರೋಗ ಜಾನಪದ
   – ಡಾ. ರಾಜೇಗೌಡ ಹೊಸಹಳ್ಳಿ
6. ಜಾನಪದ ವೈದ್ಯಜಗತ್ತು
   – ಡಾ. ಟಿ. ಗೋವಿಂದರಾಜು
7. ಕ್ಷಯ ರೋಗ ಮತ್ತು ಜಾನಪದ
   – ಪ್ರೊ. ಡಿ. ಲಿಂಗಯ್ಯ
8. ಹೃದ್ರೋಗ ಮತ್ತು ಜಾನಪದ
   – ರಿಚರ್ಡ್ ಎಂ. ಡಾರ್ಸನ್
9. ಕಾಮಾಲೆ
   – ಡಾ. ಹಿ.ಶಿ. ರಾಮಚಂದ್ರೇಗೌಡ
10. ಸರ್ಪಹುಣ್ಣು ಮತ್ತು ಜಾನಪದ
    – ಹಿ.ಗೂ. ದುಂಡ್ಯಪ್ಪ
11. ಕಾಲರಾ ಮತ್ತು ಜಾನಪದ
    – ವೈ.ಸಿ. ಭಾನುಮತಿ

12. ಮಲೇರಿಯಾ ಮತ್ತು ಜಾನಪದ

– ಪ್ರೊ. ಎಂ.ಎಲ್. ನರಸಿಂಹಮೂರ್ತಿ

13. ನರರೋಗ ಮತ್ತು ಜಾನಪದ

– ಡಾ. ಸಿ. ಆರ್. ಚಂದ್ರಶೇಖರ್

14. ಜನಪದ ವೈದ್ಯ – ಎರಡು ವಿಶಿಷ್ಟ ವಿಧಾನಗಳು

– ಬಿ.ಕೆ. ರೆಡ್ಡಿ

15. ದೃಷ್ಟಿ–ದೂರಾದೀತ

– ಶಕುಂತಲಾ ದಡೇದ

16. ಹಳ್ಳಿವೈದ್ಯ

– ಎಂ.ಜಿ. ಹೆಗ್ಡೆ

17. ಪ್ರಸೂತಿ ಜಾನಪದ : ಮಾಸ ಸಂಸ್ಕಾರ

– ಡಾ.ಎಸ್.ಪಿ. ಪದ್ಮಪ್ರಸಾದ್

18. ಕೈಮದ್ದು ಹಾಕುವುದು : ಎಷ್ಟು ನಿಜ ?

– ಡಾ.ಸಿ.ಆರ್. ಚಂದ್ರಶೇಖರ್

19. ಕೈಮದ್ದಿನ ಕುರಿತು ಇನ್ನಷ್ಟು ಮಾಹಿತಿಗಳು

– ಡಾ. ಎಸ್.ಜಿ. ಹೆಗಡೆ

20. ಕೈಮದ್ದು : ನನ್ನ ಪರಿವೀಕ್ಷಣೆಯಲ್ಲಿ ಕಂಡಂತೆ

– ವಿ.ಎನ್. ಶಿವರಾಮು

21. ಆಮಾಂಶ

– ಎಲ್.ಆರ್. ಹೆಗಡೆ

22. ದನಗಳ ರೋಗಗಳು ಹಾಗೂ ಚಿಕಿತ್ಸೆ

– ಡಾ.ಎಂ.ಎನ್. ವಾಲಿ

23. ಮಕ್ಕಳ ಪೀಡೆಯ ಹಾಡುಗಳು

– ಡಾ. ಎಂ.ಎನ್. ವಾಲಿ

24. ಜಾನಪದದಲ್ಲಿ 'ಎಕ್ಕದ ಗಿಡ'

– ಡಾ.ಜಿ.ಆರ್. ತಿಪ್ಪೇಸ್ವಾಮಿ.

# ೧. ರೋಗ ಜಾನಪದದ ಅಧ್ಯಯನ

ಪ್ರೊ. ಡಿ. ಲಿಂಗಯ್ಯ

**ರೋಗ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ, ಜಗತ್ತಿನ ಜಾನಪದ ಕ್ಷೇತ್ರದಲ್ಲಿ ಪರಿಭಾವಿಸುವಂಥ ಕೆಲಸವೇನೂ ನಡೆದಿಲ್ಲ. ಈ ದಿಸೆಯಲ್ಲಿ ಜಾನಪದ ವಿದ್ವಾಂಸರು ರೋಗ ಜಾನಪದವನ್ನು ಅಧ್ಯಯನದ ಶಿಸ್ತಾಗಿ ಕೈಗೆತ್ತಿಕೊಳ್ಳಲು ಪ್ರೇರಣೆ ನೀಡುವ ಪ್ರಸ್ತುತ ಲೇಖನವು, ಅಧ್ಯಯನಕ್ಕೆ ಅಗತ್ಯವಾದ ಮಾರ್ಗದರ್ಶನ ಸೂತ್ರಗಳನ್ನು ತಿಳಿಸಿಕೊಡುತ್ತದೆ.**

**–ಸಂ.**

ರೋಗ ಜಾನಪದದ ಅಧ್ಯಯನ ಕೇವಲ ಪ್ರಾದೇಶಿಕ ಮಟ್ಟದ್ದಲ್ಲ, ಜಾಗತಿಕ ಮಟ್ಟದ್ದು, ಕೇವಲ ಒಂದು ಜನಾಂಗಕ್ಕೆ ಸಂಬಂಧಿಸಿದ್ದಲ್ಲ, ಸಮಸ್ತ ಜನಾಂಗಕ್ಕೆ ಸಂಬಂಧಿಸಿದ್ದು. ಪ್ರಾದೇಶಿಕ ಮಟ್ಟಕ್ಕೆ ಅನ್ವಯಿಸುವ ಕೆಲವು ವಿಷಯಗಳಿದ್ದರೂ ಜಾಗತಿಕ ಮಟ್ಟಕ್ಕೆ ಅನ್ವಯಿಸುವಂಥವೇ ಹೆಚ್ಚು. ಮನುಕುಲಕ್ಕೆ ಮಾರಕವಾದ ರೋಗಗಳು ತಾರತಮ್ಯ ಮಾಡದೆ ಜಗತ್ತನ್ನೆಲ್ಲ ತಲ್ಲಣಗೊಳಿಸಿವೆ. ವಿಶ್ವದಾದ್ಯಂತ ಕಾಡುವ ಮಹಾಪೀಡೆಗಳಿಗೆ ಕೊಡುವ ವೈಜ್ಞಾನಿಕ ಚಿಕಿತ್ಸೆಯೂ ಜಗತ್ತಿಗೆಲ್ಲಾ ಒಂದೇ ಆಗಿರುತ್ತದೆ. ಆದರೆ ಮಹಾಪೀಡೆಯೊದು ಕಾಣಿಸಿಕೊಂಡಾಗ ಪ್ರತಿಯೊಂದು ಜನಾಂಗವೂ ತನ್ನದೇ ಆದ ಅನ್ವೇಷಣಾಕ್ರಮವನ್ನು, ನಂಬಿಕೆಯನ್ನು, ಚಿಕಿತ್ಸಾ ವಿಧಾನವನ್ನು ಕಲ್ಪಿಸಿಕೊಳ್ಳುತ್ತದೆ. ಅದು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸವಾಗುತ್ತದೆ, ಆಂಶಿಕವಾಗಿ ಸಮಾನತೆಯಿಂದಲೂ ಕೂಡಿರುತ್ತದೆ. ರೋಗ ಜಾನಪದದ ವಿಷಯಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಅಭ್ಯಸಿಸಿ, ಅನಂತರ ತೌಲನಿಕವಾಗಿ ವಿಶ್ವಮಟ್ಟಕ್ಕೆ ವಿಸ್ತರಿಸಬಹುದು.

ಪ್ರಕೃತಿಯಲ್ಲಿ ಸೃಷ್ಟಿಯಾಗಿರುವ ಸಮಸ್ತ ಜೀವಕೋಟಿಯೂ ಸ್ಥಿರ ಅಸ್ಥಿರ ವಸ್ತು ವಿಶೇಷವೂ ಒಂದಲ್ಲ ಒಂದು ಸಂದರ್ಭದಲ್ಲಿ ರೋಗಗ್ರಸ್ತವಾಗುತ್ತದೆ. ಅದರ ನಿವಾರಣೆಯೂ ಪ್ರಾಕೃತಿಕವಾಗಿಯೇ ನಡೆಯುತ್ತಿರುತ್ತದೆ. ಬುದ್ಧಿಯನ್ನು ಬಳಸುವ ಮಾನವ ಹೆಚ್ಚು ಜಾಗೃತನಾಗಿರುತ್ತಾನೆ. ಉಳಿದವು ಅಷ್ಟು ಜಾಗೃತನಾಗಿರುವುದಿಲ್ಲ, ಅಷ್ಟೆ. ರೋಗ ಜಾನಪದದ ಅಧ್ಯಯನದ ವಿಷಯ ಪ್ರಕೃತಿ ಸೃಷ್ಟಿಸಿದ ಮನುಷ್ಯ ಕುಲಕ್ಕೆ ಬರಬಹುದಾದ ಕಾಯಿಲೆಗಷ್ಟೇ ಸೀಮಿತವಲ್ಲ; ಮನುಷ್ಯ ಸೃಷ್ಟಿಸುವ ವಸ್ತು

ವಿಷಯ ವಿಜ್ಞಾನ ಮೊದಲುಗೊಂಡ ಸಮಸ್ತ ಜೀವನ ವಿಧಾನಕ್ಕೂ ಅನ್ವಯಿಸುತ್ತದೆ. ಕಾಲ ದೇಶ ಜನಾಂಗ ಯಾವುದೇ ಆಗಿರಲಿ, ಪ್ರತಿಯೊಂದು ವ್ಯವಸ್ಥೆಯಲ್ಲೂ ಜನಪದ ಅಂಶಗಳು ತಳಕುಹಾಕಿಕೊಂಡಿರುತ್ತವೆ. ಜಾನಪದದ ನೆಲೆಯಲ್ಲೇ ಸಂಪೂರ್ಣವಾಗಿ ಜೀವನ ನಿರ್ವಹಿಸುವ ಭಾರತೀಯರಲ್ಲಿ ಇದು ಉಳಿದ ಜನಾಂಗದವರಿಗಿಂತ ಹೆಚ್ಚಾಗಿ ಕಂಡುಬರುತ್ತದೆ.

ಮನುಕುಲದ ಅನುಭವದ ತೆಕ್ಕೆಗೆ ದಕ್ಕುವ ಸಮಗ್ರ ವ್ಯವಸ್ಥೆಯ ರೋಗಗ್ರಸ್ತ ವಿಶ್ಲೇಷಣೆಯೂ ರೋಗ ಜಾನಪದದ ವ್ಯಾಪ್ತಿಗೆ ಒಳಪಡುತ್ತದೆ. ಪ್ರಾಚೀನ, ಅರ್ವಾಚೀನ, ಪ್ರಸ್ತುತ ಮೌಖಿಕ ಪರಂಪರೆಯ ಅಂಶಗಳೆಲ್ಲವೂ ಪರಿಶೀಲನೆಗೆ ಪಕ್ಕಾಗಬೇಕಾಗುತ್ತದೆ. ಇದಕ್ಕೆ ಇದಿಷ್ಟೇ ಎಂಬ ಗಡಿರೇಖೆಗಳಿಲ್ಲ.

ಅಧ್ಯಯನದ ದೃಷ್ಟಿಯಿಂದ ರೋಗ ಜಾನಪದವನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು. 1. ಮಾನವ ರೋಗ 2. ಪ್ರಾಣಿ ಪಕ್ಷಿ ರೋಗ 3. ಕೃಷಿ ರೋಗ 4. ಸಾಮಾಜಿಕ ರೋಗ 5. ಆರ್ಥಿಕ ರೋಗ 6. ಕೈಗಾರಿಕಾ ರೋಗ 7. ಧಾರ್ಮಿಕ ರೋಗ 8. ಶೈಕ್ಷಣಿಕ ರೋಗ 9. ಸಾಂಸ್ಕೃತಿಕ ರೋಗ 10. ಸಾಹಿತ್ಯಕ ರೋಗ 11. ಕಲಾ ರೋಗ 12. ರಾಜಕೀಯ ರೋಗ 13. ವೈಜ್ಞಾನಿಕ ರೋಗ 14. ಪರಿಸರ ರೋಗ.

ರೋಗ ಜಾನಪದದ ಈ ವಿಭಾಗಗಳಲ್ಲಿ ರೋಗಗ್ರಸ್ತ ಸ್ಥಿತಿಗೆ ಕಾರಣ, ಅದರ ನಿವಾರಣೆಗೆ ಕೈಗೊಳ್ಳುವ ಕ್ರಮ–ಮೊದಲಾದವುಗಳಿಗೆ ಸಂಬಂಧಿಸಿದಂತೆ ಜನಪದ ಮನಸ್ಸು ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಪರಿಭಾವಿಸಬೇಕು, ಜನಪದ ಮನಸ್ಸು ಮತ್ತು ಶಿಷ್ಟಪದ ಮನಸ್ಸು ಹೇಗೆ ಮುಖಾಮುಖಿಯಾಗುತ್ತವೆ ಎಂಬುದನ್ನು ವಿವೇಚಿಸಬೇಕು. ಜನಪದ ನಿದಾನಕ್ರಮ ಸರಿಯೋ ತಪ್ಪೋ ಎಂಬುದನ್ನು ಕೂಲಂಕಷವಾಗಿ ಚರ್ಚಿಸಿ ಅಂತಿಮ ತೀರ್ಮಾನವನ್ನು ಸೈದ್ಧಾಂತಿಕ ನೆಲೆಯಲ್ಲಿ ಮಂಡಿಸಬಹುದು. ಸಾಮಾನ್ಯವಾಗಿ ಅದು ಊಹಾತ್ಮಕವಾದರೂ ಅಂಥದರ ಅಗತ್ಯವಿದೆ.

ಮಾನವರೋಗ, ಪ್ರಾಣಿಪಕ್ಷಿರೋಗ, ಕೃಷಿರೋಗ ಜಾನಪದ ವಿಷಯಗಳು ಸ್ಪಷ್ಟವಾಗಿ ಗೋಚರಿಸುವಂಥವು. ಕಣ್ಣಿಗೆ ಕಾಣುವಂತೆ ಹಿಂದಿನಿಂದ ನಡೆದುಕೊಂಡು ಬಂದಿರುವಂಥವು. ಆದರೆ ಸಾಮಾಜಿಕ ರೋಗ, ಆರ್ಥಿಕ ರೋಗ ಮೊದಲಾದವು

ಮನುಷ್ಯ ವ್ಯವಸ್ಥೆಯಲ್ಲಿ ಸೂಕ್ಷ್ಮವಾಗಿ ಪ್ರವಹಿಸುವಂಥವು. ಅವುಗಳ ಮೌಖಿಕ ಜಾಡುಹಿಡಿದು ಎಚ್ಚರಿಕೆಯಿಂದ ವಿಶ್ಲೇಷಿಸುವುದು ಅಗತ್ಯ.

ರೋಗ ಜಾನಪದದ ವಿವೇಚನೆಯಲ್ಲಿ ಆಧುನಿಕ ವಿಜ್ಞಾನ ಚಿಂತನೆ ಕಂಡುಕೊಂಡ ನಿರ್ದಿಷ್ಟ ರೋಗದ ಲಕ್ಷಣ, ವೈಜ್ಞಾನಿಕ ಚಿಕಿತ್ಸೆ, ಪರಿಣಾಮ ಮೊದಲಾದವು ಅಷ್ಟು ಮುಖ್ಯವಲ್ಲ. ಮನುಕುಲವನ್ನು ಕಾಡಿದ ಮಾರಕ ರೋಗಕ್ಕೆ ಸಂಬಂಧಿಸಿದಂತೆ ಜನಪದ ಮನಸ್ಸು ಮೌಖಿಕ ಪರಂಪರೆಯಲ್ಲಿ ಕಲ್ಪಿಸಿದ ವಿಧಾನ, ನಿದಾನ, ನಂಬಿಕೆ, ಆಚರಣೆ, ಐತಿಹ್ಯ, ಸಾಹಿತ್ಯ, ಚಿತ್ರ, ವಿಗ್ರಹ ಮುಂತಾದ ಮಾಹಿತಿಗಳು ಮುಖ್ಯ. ಆಧುನಿಕ ವೈಜ್ಞಾನಿಕ ಹಿನ್ನೆಲೆ ಇಲ್ಲದಿದ್ದ ಸಂದರ್ಭದಲ್ಲಿ, ಅದಿದ್ದರೂ ಅದನ್ನು ಅಷ್ಟಾಗಿ ಅನುಸರಿಸದ ಸಂದರ್ಭದಲ್ಲಿ, ಮೌಖಿಕ ಪರಂಪರೆಯ ಮನಸ್ಸು ಕಲ್ಪಿಸುವ ವಿಷಯಗಳಿಗೆ ಆದ್ಯತೆ ನೀಡಬೇಕು. ಮಾರಕ ರೋಗವೊಂದಕ್ಕೆ ಜನಪದ ಮನಸ್ಸು ಸ್ಪಂದಿಸಿದ ವಿವರಣೆಗೆ, ನಂಬಿಕೆಯ ಆಚರಣೆಗೆ, ಅದರಿಂದ ಕಂಡುಕೊಳ್ಳುವ ಶಮನಕ್ಕೆ, ಸಮಾಧಾನಕ್ಕೆ ಗಮನ ಕೊಡಬೇಕು. ರೋಗ ಜಾನಪದದ ಪರಿಕಲ್ಪನೆಯಲ್ಲಿ ತುಸು ವೈಜ್ಞಾನಿಕತೆ ಇರಬಹುದು ಹೆಚ್ಚು ಮೂಢನಂಬಿಕೆ ತುಂಬಿರಬಹುದು. ಕ್ಷೇತ್ರಕಾರ್ಯದ ಅನುಭವದಿಂದ, ಇದ್ದುದನ್ನು ಇದ್ದಹಾಗೆ ಸಂಗ್ರಹಿಸಿ ಮಾಹಿತಿಗಳನ್ನು ಒದಗಿಸಬೇಕು. ಅದರ ಮೂಲ ಸಾಂಸ್ಕೃತಿಕ ಹಿನ್ನೆಲೆಯನ್ನು ಕೆದಕಬೇಕು. ಸಾಧ್ಯವಾದಷ್ಟೂ ಅನಾವರಣಗೊಳಿಸಬೇಕು. ಆಮೇಲೆ ಅದರ ಸಾಧಕ ಬಾಧಕಗಳನ್ನು ವಿಮರ್ಶಿಸಬಹುದು, ವಿಚಾರ ಮಾಡಬಹುದು, ಹೊಸ ಆಲೋಚನಾ ಸಿದ್ಧಾಂತಗಳನ್ನು ಮಂಡಿಸಬಹುದು. ಆಧುನಿಕ ವಂಶವಾಹಿ ಚಿಂತನೆಗೆ ಜಾನಪದ ನಂಬಿಕೆಯ ಮೂಲದಲ್ಲಿ ಹೊಳಹು ಸಾಧ್ಯತೆ ಇರುತ್ತದೆ.

ಶುದ್ಧ ಜಾಪದದ ಹಿನ್ನೆಲೆಯಲ್ಲಷ್ಟೇ ಅಲ್ಲ ವೈಜ್ಞಾನಿಕ, ವೈಚಾರಿಕ, ಆಧುನಿಕ ಪರಿಸರದ ಹಿನ್ನೆಲೆಯಲ್ಲೂ ರೋಗ ಜಾನಪದದ ವಿಶ್ಲೇಷಣೆ ನಡೆಯಬೇಕು. ಅಲ್ಲೂ ಜನಪದ ಅಂಶಗಳಿಗೆ ಕೊರತೆಯಿರುವುದಿಲ್ಲ. ವೈಜ್ಞಾನಿಕ ಅರಿವಿನ ಬೆಳಕಿನ ಅಡಿಯಲ್ಲೇ ಅಥವಾ ಜೊತೆಯಲ್ಲೇ ಸಾಂಪ್ರದಾಯಿಕ ಜನಪದ ಮನಸ್ಸು ಕೆಲಸ ಮಾಡುತ್ತಿರುತ್ತದೆ. ಹಾಗಾಗಿ ರೋಗ ಜಾನಪದದ ಅಧ್ಯಯನ ಆಗಿಹೋದ ಒಂದು ಕಾಲದ ಮಾಹಿತಿಯನ್ನಷ್ಟೇ ಒದಗಿಸುವುದಿಲ್ಲ. ಪ್ರಸ್ತುತ ಸಂದರ್ಭದ ಚಿಂತನೆಯೊಡನೆಯೂ ತಳಕುಹಾಕಿಕೊಂಡಿರುತ್ತದೆ. ಇದನ್ನೂ ವಿಶ್ಲೇಷಣೆಗೆ

ಒಳಪಡಿಸಬೇಕಾಗುತ್ತದೆ. ರೋಗ ಜಾನಪದ ಪರಿಕಲ್ಪನೆ ಭೂತ, ವರ್ತಮಾನ, ಭವಿಷ್ಯತ್ ಕಾಲಗಳಿಗೂ ಅನ್ವಯಿಸುತ್ತದೆ.

## ಮಾನವ ರೋಗ

ಭೂಮಿಯಲ್ಲಿ ಜೀವಕೋಟಿ ಹುಟ್ಟಿದಾಗಲೇ ರೋಗಗಳೂ ಹುಟ್ಟಿಕೊಂಡಿವೆ. ಮನುಕುಲವೂ ಇದಕ್ಕೆ ಹೊರತಲ್ಲ. ಜೀವರಾಶಿಯಲ್ಲಿ ರೋಗ ನಿರೋಧಕ ಕ್ರಿಯೆಗಳು ಕಂಡುಬಂದರೂ ಅವು ಗಣನೀಯ ಪ್ರಮಾಣದಲ್ಲಿಲ್ಲ. ಆದರೆ, ಮನುಕುಲದಲ್ಲಿ ರೋಗ ನಿರೋಧಕ ಗುಣ ಅಧಿಕ ಪ್ರಮಾಣದಲ್ಲಿದೆ. ಇತರ ಜೀವ ಸಮೂಹದಲ್ಲಿಲ್ಲದ ಬುದ್ಧಿಮತ್ತೆ ಮನುಷ್ಯನಲ್ಲಿ ವಿಕಾಸವಾದಂತೆ ಅವನ ಅನ್ವೇಷಣಾ ಪ್ರವೃತ್ತಿಯೂ ವೃದ್ಧಿಸಿದೆ. ಆದಿಮಾನವ ತನ್ನ ನಡುವೆ ಕಾಣಿಸಿಕೊಂಡ ರೋಗರುಜಿನಗಳ ಬಗೆಗೆ ಸಾಕಷ್ಟು ಚಿಂತಿಸಿದ್ದಾನೆ; ಪ್ರತಿಬಂಧಕಗಳನ್ನು ಪತ್ತೆ ಹಚ್ಚಿದ್ದಾನೆ. ತನ್ನ, ತನ್ನ ಸಮೂಹದ, ತನ್ನ ವಾಸಸ್ಥಳದ, ತನ್ನನ್ನು ಆಶ್ರಯಿಸಿದ ಪ್ರಾಣಿಪಕ್ಷಿಗಳ ರೋಗ ಪ್ರತಿಬಂಧಕ್ಕೆ ಕಾರಣಗಳನ್ನೂ ನಿವಾರಣೋಪಾಯಗಳನ್ನೂ ಸ್ಥಾಪಿಸಲು ಹೆಣಗಿದ್ದಾನೆ. ನಿರ್ದಿಷ್ಟ ರೋಗಗಳಿಗೆ, ನಿರ್ದಿಷ್ಟ ಮದ್ದುಗಳನ್ನು ಕಂಡುಕೊಂಡಿದ್ದಾನೆ. ಅವುಗಳಿಂದ ಬಚಾವಾಗಿ ದೀರ್ಘಕಾಲ ಬದುಕಲು ದಾರಿಮಾಡಿಕೊಂಡಿದ್ದಾನೆ.

ಆದಿಮಾನವನಿಗೆ ಮನುಷ್ಯನನ್ನು ಕಾಡುವ ರೋಗಕ್ಕೆ ನಿಜವಾದ ಕಾರಣ ತಿಳಿದಿರಲಿಕ್ಕಿಲ್ಲ. ಯಾವುದೋ ನಿಗೂಢಶಕ್ತಿ ಇದಕ್ಕೆ ಕಾರಣವೆಂದು ಊಹಿಸಿದ್ದಾನೆ. ಇದ್ದಕ್ಕಿದ್ದಂತೆ ವಕ್ಕರಿಸಿ, ಇಡೀ ಜನಸಮೂಹವನ್ನು ನರಳಿಸಿ, ಸಾಯಿಸುವ ಸಿಡುಬು, ವಾಂತಿಭೇದಿ (ಕಾಲರಾ), ಪ್ಲೇಗು, ಮಲೇರಿಯ, ಕುಷ್ಠ, ಹುಚ್ಚು ಮುಂತಾದ ಪೀಡೆಗಳಿಗೆ ದುಷ್ಟಶಕ್ತಿಗಳೇ ಮೂಲಕಾರಣವೆಂದು ಭಾವಿಸಿದ. ಅಲೆಮಾರಿಯಾಗಿದ್ದು ಕೃಷಿಯಿಂದಾಗಿ ಒಂದೆಡೆ ನೆಲೆನಿಂತು ವಾಸಿಸಲಾರಂಭಿಸಿದ ಮಾನವನಿಗೆ ದುಷ್ಟ ಪ್ರಾಣಿಗಳಿಂದ, ದುಷ್ಟಮಾರಿಗಳಿಂದ ರಕ್ಷಣೆಪಡೆಯುವುದು ಅಗತ್ಯವಾಗಿತ್ತು. ಪ್ರಾಣಾಪಾಯ ಉಂಟುಮಾಡುತ್ತಿದ್ದ ಕ್ರೂರಮೃಗಗಳನ್ನು ನಾನಾ ಉಪಾಯಗಳಿಂದ ಹೆದರಿಸಿ ಓಡಿಸುವುದರ ಮೂಲಕ (ಉದಾಹರಣೆಗೆ : ಗಲಾಟೆ ಮಾಡಿ ಓಡಿಸುವುದು; ಬೆಂಕಿ ಪ್ರದರ್ಶಿಸಿ ದೂರವಿರಿಸುವುದು); ಅವುಗಳನ್ನು ಆಚರಣೆಗಳ ಮೂಲಕ ಒಲಿಸಿಕೊಂಡು (ಉದಾಹರಣೆಗೆ : ಹುಲಿಪೂಜೆ, ನಾಗಪೂಜೆ) ರಕ್ಷಿಸಿಕೊಳ್ಳಲು ಪ್ರಯತ್ನಿಸಿದ. ವಿವಿಧ ರೋಗಗಳ ಬಗೆಗೂ ಇಂಥದೇ ಆಚರಣಾ ಸೂಚನೆಗಳು ಕಂಡುಬರುತ್ತವೆ.

ಊರಿಗೆ ಅಪ್ಪಳಿಸುವ ಮಾರಿಯ ಹೆಸರಿನಲ್ಲಿ ಮಾರಮ್ಮನ ಕಲ್ಪನೆ ಮೂಡಿದೆ. ಸಾಮಾನ್ಯವಾಗಿ ಊರಿನ ಹೊರಗೆ ಮಾರಮ್ಮನ ಪ್ರತಿಷ್ಠಾಪನೆ ನಡದಿದೆ. (ಊರು ಬೆಳೆದಂತೆ ಮಾರಮ್ಮ ಊರಿನ ಒಳಗೂ ಸೇರಿದಂತಾಗಿರುವುದು ಬೇರೆ ವಿಷಯ). ಮಾರಿ ದೇವತೆಯ ಮುಖ್ಯ ಕೆಲಸ ಊರಿನ ಜನರಿಗೆ, ದನಕರುಗಳಿಗೆ, ಊರಿಗೆ ಬರುವ ಮಾರಿಯನ್ನು ನಿವಾರಿಸುವುದು, ಊರಿಗೆ ಪ್ರವೇಶಿಸುವ ಏನೆಲ್ಲ ಪಿಡುಗುಗಳನ್ನು ತಡೆಯುವುದು. ಇದಕ್ಕಾಗಿ ಜಾನಪದ ಕಲ್ಪನೆಯ ಆಚರಣೆ ರೂಢಿಗೆ ಬಂದಿದೆ. ರೋಗಕ್ಕೆ ಸಂಬಂಧಿಸಿದ ಆಚರಣೆಯಲ್ಲಿ ನಂಬಿಕೆಯಿದೆ, ಮೂಢನಂಬಿಕೆಯಿದೆ; ಪುರಾಣವಿದೆ, ಐತಿಹ್ಯವಿದೆ, ಕಥೆಯಿದೆ, ಮಾಟಮಂತ್ರವಿದೆ; ಆಂಶಿಕವಾಗಿ ವೈಜ್ಞಾನಿಕತೆಯೂ ಇದೆ, ಚಾರಿತ್ರಿಕಾಂಶವೂ ಇದೆ. ಈ ಎಲ್ಲ ಕ್ರಿಯೆಗಳಲ್ಲಿ ರೋಗದ ಜೊತೆಗೆ ಜಾನಪದ ಬೆರೆತುಕೊಂಡಿದೆ. ಯಾವುದೇ ರೋಗದ ಹಿನ್ನೆಲೆಯಲ್ಲಿ ಅಷ್ಟೋ ಇಷ್ಟೋ ಜನಪದ ಅಂಶಗಳು ತಳುಕುಹಾಕಿಕೊಂಡಿವೆ. ಈ ಪ್ರವೃತ್ತಿ ಹಿಂದಷ್ಟೇ ಇತ್ತು ಎಂದಲ್ಲ; ಈಗಲೂ ಮುಂದುವರಿದಿದೆ; ಬಹುಶಃ ಮುಂದೆಯೂ ಇರುತ್ತದೆ.

ಪ್ಲೇಗು, ಕಾಲರ, ಸಿಡಬು, ಮಲೇರಿಯ, ಹುಚ್ಚು, ಕುಷ್ಠ, ಪಾರ್ಶ್ವವಾಯು, ಮೂರ್ಛೆರೋಗ, ಕ್ಷಯ, ಕ್ಯಾನ್ಸರ್, ಏಡ್ಸ್ ಮುಂತಾದ ಮಹಾಮಾರಿಗಳು ಮನುಕುಲವನ್ನು ಸರ್ವನಾಶಮಾಡಲು ಪ್ರಯತ್ನಸಿವೆ. ಅವುಗಳಿಗೆ ಮನುಷ್ಯ ಬಹಳಷ್ಟು ಹೆದರಿದ್ದಾನೆ. ಅವುಗಳ ನಿರಂತರ ಆರಾಧನೆಯೇ ಪ್ರಾರಂಭವಾಗಿದೆ. ಆ ಹೆಸರಿನ ದೇವತೆಗಳೇ ಹುಟ್ಟಿಕೊಂಡಿವೆ. ಮಾರಿಯ ಹೆಸರಿನಲ್ಲಿ ಮಾರಮ್ಮ, ಪ್ಲೇಗಿನ ಹೆಸರಿನಲ್ಲಿ ಪ್ಲೇಗಮ್ಮ, ಸಿಡಬಿನ ಹೆಸರಿನಲ್ಲಿ ಸಿಡಬಮ್ಮ, ಹುಚ್ಚಿನ ಹೆಸರಿನಲ್ಲಿ ಹುಚ್ಚಮ್ಮ, ಈಚೆಗೆ ಏಡ್ಸ್ ಹೆಸರಿನಲ್ಲಿ ಏಡ್ಸಮ್ಮ –ದೇವತೆಗಳು ಸೃಷ್ಟಿಯಾಗಿ, ಅವುಗಳಿಗೆ ಗುಡಿಗೋಪುರ ಕಟ್ಟಿ, ಕ್ರಮಬದ್ಧವಾಗಿ ಪೂಜೆಪುನಸ್ಕಾರಗಳು ನಡೆಯುತ್ತಿವೆ. ಎಲ್ಲಾ ರೋಗದ ದೇವತೆಗಳಿಗೂ ಸ್ತ್ರೀರೂಪವೇ ಸ್ತ್ರೀನಾಮವೇ ರೂಢಿಗೆ ಬಂದಿರುವುದು ವಿಚಿತ್ರವಾಗಿದೆ. ರೋಗವಾದರೂ ದೇವತೆ ರೂಪ ತಾಳಿದ ಮೇಲೆ ಜನಪದ ಅಂಶಗಳು ಸೇರಿಕೊಳ್ಳದೆ ಬಿಡುವುದಿಲ್ಲ. ಪ್ರಾಚೀನ ಕಾಯಿಲೆಗಳ ಪೈಕಿ ಕುಷ್ಠರೋಗ, ರತಿರೋಗಗಳು ಹುಟ್ಟಿಸಿರುವ ಭಯವೂ ಕಡಮೆಯಾಗಿಲ್ಲ. ರತಿಪೂಜೆಯ ಹಿನ್ನೆಲೆಯಲ್ಲಿ ರತಿರೋಗದ ಹೆದರಿಕೆಯೂ ಅಂಟಿಕೊಂಡಿರುವಂತಿದೆ. ಲೈಂಗಿಕ ರೋಗ ನಿವಾರಣೆಗಾಗಿ ಗ್ರಾಮ ದೇವತೆಗಳನ್ನು ಪೂಜಿಸುವುದುಟು. ಇದು

ರಹಸ್ಯಾರಾಧನೆಯಾಗಿರುವುದೇ ಹೆಚ್ಚು. ಹೆಚ್ಚು ಕಡಮೆ ಎಲ್ಲಾ ಗ್ರಾಮದೇವತೆಗಳೂ ರೋಗ ನಿವಾರಣೆಗಾಗಿಯೇ ಹುಟ್ಟಿಕೊಂಡಂಥವು.

ಲೋಕದ ಮಹಾಮಾರಿಗಳು ಕೆಲವು ಕಾಲ ಕಣ್ಮರೆಯಾಗಿರುವುದೂ ಉಂಟು, ಮತ್ತೆ ಕಾಣಿಸಿಕೊಂಡಿರುವುದೂ ಉಂಟು. ಹಿಂದೆ ಜನಸಂಖ್ಯೆ ಕಡಮೆ ಇತ್ತು, ಕಾಯಿಲೆಗಳೂ ಕಡಿಮೆಯಿದ್ದವು. ಈಗ ಜನಸಂಖ್ಯೆಯೂ ಜಾಸ್ತಿ, ಕಾಯಿಲೆಗಳೂ ಜಾಸ್ತಿ. ತುಮಕೂರು ಜಿಲ್ಲೆಯಲ್ಲಿ ಮಲೇರಿಯಾ ಮತ್ತೆ ಮತ್ತೆ ಕಾಣಿಸುತ್ತಿರುತ್ತದೆ. ಕ್ಷಯ ಹಲವು ಕಡೆ ಭೇಟಿಕೊಡುತ್ತಿರುತ್ತದೆ. ಕೆಲವು ರೋಗಗಳಿಗೆ ಸಂಬಂಧಿಸಿದಂತೆ ಶಾಶ್ವತ ಬೈಗಳು ಚಾಲ್ತಿಯಲ್ಲಿವೆ. ಉದಾಹರಣೆಗೆ: 1. ನಿನಗೆ ದೊಡ್ಡರೋಗ (ವಾಂತಿ ಭೇದಿ) ಬರಾ. 2. ನಿನಗೆ ದೊಡ್ಡರೋಗ ಬಂದು ಚಾಪೇಲಿ ಸುತ್ಕಂಡೋಗ. 3. ನಿನಗೆ ಕ್ವಾಷ್ಠ ಹತ್ತ. 4. ನಿನಗೆ ಸಿಡಬು ಬಡಿದು ಸರೊತ್ತಲ್ಲಿ ಹೊತ್ಕಂಡೋಗ. 5. ನಿನಗೆ ಮೊಲ್ಲಾಗರ ಬರಾ. 6. ನಿನಗೆ ಹುಚ್ಚು ಬರಾ. 7. ನಿನಗೆ ಬರಬಾರ್ದು ಬರಾ. 8. ನೀನು ನಡಿನಡೀತಾನೇ ನೆಗೆದು ಬೀಳಾ.

ಜನಪದ ಬೈಗುಳದಲ್ಲಿ ರೋಗದ ತೀವ್ರತೆಯಿದೆ; ಪರಿಣಾಮದ ಉಗ್ರತೆಯಿದೆ; ಅಸಹ್ಯವಿದೆ, ಭಯವೂಯಿದೆ. ಮಾತುಮಾತಿಗೂ ಹೆಜ್ಜೆಹೆಜ್ಜೆಗೂ ಅವು ಬಳಕೆಯಾಗುತ್ತಿರಬೇಕಾದರೆ ಆ ರೋಗಗಳು ಎಷ್ಟು ಭಯಂಕರವಾಗಿ ಕಾಡಿರಬಹುದು ಎಂಬುದನ್ನು ಊಹಿಸಬಹುದು. ಜನಪದ ಬದುಕಿನ ಜೊತೆ ಜೊತೆಗೇ ರೋಗಗಳೂ ಬದುಕಿದ್ದು ಅವುಗಳ ದೀರ್ಘ ಇತಿಹಾಸವನ್ನು ನೆನಪಿಸುತ್ತವೆ. ಉಗ್ರ ರೋಗಗಳಿಗೆ ಉಗ್ರ ಆಚರಣೆ; ಸೌಮ್ಯ ರೋಗಗಳಿಗೆ ಸೌಮ್ಯ ಆಚರಣೆ ಹುಟ್ಟಿಕೊಂಡಿದೆ. ಹೀಗೆ ಬಂದು ಹಾಗೆ ಹೋಗುವ ಸಣ್ಣಪುಟ್ಟ ಕಾಯಿಲೆಗಳು ಅಷ್ಟಾಗಿ ಗಮನ ಸೆಳೆಯುವುದಿಲ್ಲ. ಪ್ರಾಣಾಂತಕವಾಗಿ ನರಳಿಸುವ, ಅಚ್ಚಳಿಯದ ಗುರುತು ಉಳಿಸುವ ಭಯಂಕರ ಕಾಯಿಲೆಗಳು ಬಹಳವಾಗಿ ಕಂಗಾಲಾಗಿಸಿವೆ. ಸಿಡಬಿನಂತಹ ಕಾಯಿಲೆ ಪ್ರಾಣ ಹಾರಿಸಿದೆ ಅಥವಾ ಶಾಶ್ವತವಾದ ಗುರುತನ್ನು ಕೊರೆದಿದೆ. ಲಕ್ವ ಕಾಯಿಲೆಯೂ ಅಷ್ಟೇ. ಕೆಲವು ಕಾಯಿಲೆಗಳು ಸಾಯಿಸದಿದ್ದರೂ ಜೀವನವೆಲ್ಲಾ ರೋಗಿಯಂತೆ ನರಳಿಸುತ್ತವೆ. ಇಂಥವಕ್ಕೆ ತುತ್ತಾದ ನತದೃಷ್ಟರು ಜಾನಪದ ವಿಧಿ ವಿಧಾನಗಳಿಗೆ, ಅಚರಣೆ ನಂಬಿಕೆಗಳಿಗೆ, ಮಾರುಹೋಗದೆ ಇನ್ನೇನು ಮಾಡುತ್ತಾರೆ? ಹಾಗಾಗಿ ರೋಗಕ್ಕೂ ಜಾನಪದಕ್ಕೂ ಅಂಟುನಂಟು ಎರಡೂ ಉಂಟಾಗಿದೆ. ರೋಗ ಜಾನಪದದಲ್ಲಿ ಜನಪದ ಮನಸ್ಸಿನ ಏಳು ಬೀಳುಗಳು

ಮನದಟ್ಟಾಗುತ್ತವೆ.

ಜನಪದ ರೋಗ ದೇವತೆಗಳು ಆಚರಣೆಯ ಹೆಸರಿನಲ್ಲಿ ನಿರ್ಗತಿಕರ ಹೊಟ್ಟೆಪಾಡಿಗೆ ಅಷ್ಟೋ ಇಷ್ಟೋ ನೆರವಾಗಿವೆ. ಆಯಾ ಕಾಲದ ಜನಾಂಗ ತಿಳಿದ ಮಟ್ಟಿಗೆ ನೈರ್ಮಲ್ಯಕ್ಕೆ, ರೋಗ ನಿದಾನಕ್ಕೆ ಸಹಕಾರಿಯಾಗಿವೆ; ಜಾನಪದ ವಿಧಾನದಲ್ಲಿ ರೋಗ ನಿಯಂತ್ರಣಕ್ಕೆ ಬೆಳಕು ಚೆಲ್ಲಿವೆ.- ಅವು ಸಂಪೂರ್ಣವಾಗಿ ವೈಜ್ಞಾನಿಕ ಎನ್ನಲಾಗದಿದ್ದರೂ ಸಂಪೂರ್ಣವಾಗಿ ತಿರಸ್ಕರಿಸುವಂತಹವಲ್ಲ. ಕಾಲಕಾಲಕ್ಕೆ ವೈಜ್ಞಾನಿಕ ಅನ್ವೇಷಣೆಗೆ ತಿದ್ದುಪಡಿಯಿರುವಂತೆ, ಜಾನಪದ ಅನ್ವೇಷಣೆಗೂ ತಿದ್ದುಪಡಿಯುಂಟು.

ರೋಗ ಜಾನಪದದಲ್ಲಿ ಆಯಾಕಾಲದ ಜನರ ಜೀವನ ವಿಧಾನಕ್ಕೆ ಪೂರಕವಾಗುವಂತೆ ರೋಗನಿದಾನ ನಂಬಿಕೆಗಳು ಹುಟ್ಟಿಕೊಂಡಿರುವುದು ಕಂಡುಬರುತ್ತದೆ. ಸಿಡುಬು, ದಡಾರ ಬಂದರೆ ಮಾರಮ್ಮನಿಗೆ ಪೂಜೆ ಸಲ್ಲಿಸುವುದು, ಮಾರಮ್ಮನಿಗೆ ತಂಪು ತೋರುವುದು, ಎಳನೀರಿನ ಅಭಿಷೇಕ ಮಾಡುವುದು, ಮುಟ್ಟುಚಟ್ಟು ಆಚರಿಸುವುದು, ಶುಚಿಗೆ ಆದ್ಯತೆ ನೀಡುವುದು ಎದ್ದುಕಾಣುತ್ತದೆ. ಜನದನ, ಮನೆಮಠ, ಊರುಕೇರಿ ಎಲ್ಲದರಲ್ಲೂ ನೈರ್ಮಲ್ಯ ಪಾಲನೆ ಉಂಟು. ಯಾವುದೇ ಕಾಯಿಲೆಗೂ ನಿವಾರಣೆಗೂ ದೈವಭಕ್ತಿ, ದೈವಾರಾಧನೆ ಪ್ರದರ್ಶನಗೊಂಡಿದೆ. ಗದ್ದಮ್ಮ ಆದರೆ ಗದ್ದಕ್ಕೆ ಗಂಧದ ಲೇಪನ ಮಾಡುವುದು, ದೇವರಿಗೆ ಹರಕೆ ಕಟ್ಟಿಕೊಳ್ಳುವುದು ರೂಢಿಯಲ್ಲಿದೆ. ಮಳೆಗಾಲದ ಕಣ್ಣು ಬೇನೆಗೆ ಎಳ್ಳು ಹೂ ನುಂಗುವುದು, ನಿಂಬೆಹಣ್ಣಿನ ರಸವನ್ನು ಕಣ್ಣಿಗೆ ಬಿಡುವುದು, ಸ್ಫಟಿಕದ ನೀರು ಹಾಕುವುದು, ಲೋಕಸರದ ಲೋಳೆಯನ್ನು ಸವರುವುದು ವಾಡಿಕೆ. ಜೊತೆಗೆ ದೇವರಿಗೆ ಕಣ್ಣು ಮಾಡಿಸಿಕೊಡುವುದಾಗಿ ಹರಕೆ ಮಾಡಿಕೊಳ್ಳುವುದು ಇದೆ. ಹುತ್ತದ ಹುಳು ನುಂಗಿದರೆ ಆಯಸ್ಸು ವೃದ್ಧಿಸುತ್ತದೆ, ಕಾಯಿಲೆಗಳು ಬರುವುದಿಲ್ಲವೆಂದೂ ನಿರ್ದಿಷ್ಟ ಸ್ಥಳದಲ್ಲಿ ಸ್ನಾನಮಾಡಿ ಪೂಜೆಸಲ್ಲಿಸಿದರೆ ಚರ್ಮರೋಗ ವಾಸಿಯಾಗುವುದೆಂದೂ ನಂಬುವವರು ಇದ್ದಾರೆ.

ಇಂಥ ನಂಬಿಕೆಗಳಲ್ಲಿ ಕೆಲವು ಸಹ್ಯ, ಕೆಲವು ಅಸಹ್ಯ ; ಕೆಲವು ವೈಜ್ಞಾನಿಕ, ಕೆಲವು ಅವೈಜ್ಞಾನಿಕ. ಇವೆಲ್ಲಾ ಜನಪದರನ್ನು ಆಳಿವೆ, ಜನಪದರಲ್ಲಿ ಉಳಿದಿವೆ. ರೋಗ ಬರುವುದು ಶಾಪದಿಂದಲ್ಲ; ಜನ್ಮಾಂತರದ ಕರ್ಮದಿಂದಲ್ಲ; ದೇಹದ ಪ್ರಕೃತಿಯಿಂದ, ಪರಿಸರದ ವೈಪರೀತ್ಯದಿಂದ, ನಿಗೂಢ ಕಾರಣದಿಂದ. ಇದರಲ್ಲಿ

ಸ್ವಯಂಕೃತ ಅಪರಾಧವೂ ಇದೆ; ಅರಿವಿನ ಅಭಾವವೂ ಇದೆ. ಬರುವುದನ್ನು ತಪ್ಪಿಸಲು ಆಗದಿರಬಹುದು; ಬಂದಿದ್ದನ್ನು ಎದುರಿಸಲು ಸಿದ್ಧವಾಗಲೇಬೇಕು. ಪಲಾಯನವಾದ ಜಾನಪದದ ಉದ್ದೇಶವಲ್ಲ; ಪರಿಹಾರದ ಹುಡುಕಾಟ ಅದರ ಮುಖ್ಯ ಗುರಿ. ನಿವಾರಣಾ ವಿಧಾನದಲ್ಲಿ ತಪ್ಪು ಒಪ್ಪು ಇರಬಹುದು, ಅಷ್ಟೇ. ಜಾನಪದದ ಕಾಣ್ಕೆಗಳೆಲ್ಲ ಬೆಪ್ಪು ಎಂದು ಹೇಳಲಾಗುವುದಿಲ್ಲ. ಸೂಕ್ಷ್ಮವಾಗಿ ವಿಶ್ಲೇಷಿಸಿದರೆ ಸತ್ಯದರ್ಶನವಾಗುತ್ತದೆ.

ಹಿಂದಿನಿಂದ ಬಂದ ಕಾಯಿಲೆಗಳ ಜೊತೆಜೊತೆಗೆ ಹೊಸ ಹೊಸ ಕಾಯಿಲೆಗಳು ಸೇರಿಕೊಳ್ಳುತ್ತಿವೆ. ಹಿಂದಿಗಿಂತಲೂ ಅಪಾಯದ ರೋಗಗಳು ಈಚೆಗೆ ಪತ್ತೆಯಾಗಿವೆ. ಕ್ಯಾನ್ಸರ್, ಮೂತ್ರಪಿಂಡ ವೈಫಲ್ಯ, ಹೃದ್ರೋಗ, ಮೆದುಳುರೋಗ, ಏಡ್ಸ್ ಮುಂತಾದವು ಜಗತ್ತನ್ನೇ ನಡುಗಿಸುತ್ತಿವೆ. ವೈಜ್ಞಾನಿಕ ಸಂಶೋಧನೆ, ಚಿಕಿತ್ಸೆಗಳು ಇವುಗಳನ್ನು ನಿಯಂತ್ರಿಸಲು ಹೆಣಗುತ್ತಿವೆ. ಹಿಂದಿನವುಗಳಷ್ಟಲ್ಲದಿದ್ದರೂ ಇವುಗಳ ಸುತ್ತಲೂ ಜನಪದ ನಂಬಿಕೆಗಳು ಹೆಣೆದುಕೊಳ್ಳುತ್ತಿವೆ. ಕರ್ನಾಟಕದ ಬನ್ನೂರಿನಲ್ಲಿ ಏಡ್ಸಮ್ಮ ಜನ್ಮ ತಾಳಿದ್ದಾಳೆ. ಹಿಂದಿನ ಕಾಲವಾಗಲೀ ಈಗಿನ ಕಾಲವಾಗಲೀ ಹಳ್ಳಿಗರಾಗಲೀ ಪಟ್ಟಣಿಗರಾಗಲೀ ರೋಗಗಳ ಜೊತೆಗೆ ಜನಪದ ಸಂಪರ್ಕ ಉಂಟಾಗುವುದು ತಪ್ಪುವುದಿಲ್ಲ. ಜಾನಪದ ಜೀವಂತ ಪಳೆಯುಳಿಕೆ ಎಂಬುದಕ್ಕೆ ರೋಗಗಳೂ ಸಾಕ್ಷಿಯಾಗಿವೆ.

ಯಾವ ದೇವರೂ ಯಾವ ಕಾಯಿಲೆಯನ್ನೂ ವಾಸಿಮಾಡಲಾರದು. ಆದರೆ ದೇವರ ನಂಬಿಕೆ ರೋಗಿಯ ಮಾನಸಿಕ ಒತ್ತಡವನ್ನು ಉಪಶಮನ ಮಾಡುವುದು ಸುಳ್ಳಲ್ಲ. ಜಾನಪದ ಶಮನಕಾರಿಯೇ ಹೊರತು, ಉದ್ರೇಕಕಾರಿಯಲ್ಲ. ಜಾನಪದ ಮೌಖಿಕ ಪರಂಪರೆ ಆಂಶಿಕವಾಗಿಯಾದರೂ ನಿರಂತರವಾಗಿ ಮುಂದುವರಿಯುತ್ತಿರುತ್ತದೆ. ಯಾವುದೇ ಕಾಲದಲ್ಲಾಗಲೀ ಯಾವುದೇ ಜನಾಂಗದಲ್ಲಾಗಲೀ ರೋಗಬರುವುದನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕಾಗುವುದಿಲ್ಲ; ರೋಗಬರದಂತೆ ಮುಂಜಾಗ್ರತೆ ವಹಿಸಬಹುದು. ಹಾಗೆಯೇ ರೋಗ ಬಂದ ಮೇಲೆ ಸಂಪೂರ್ಣವಾಗಿ ನಿರ್ಲಕ್ಷಿಸುವುದಕ್ಕಾಗುವುದಿಲ್ಲ; ರೋಗ ನಿವಾರಣೆಗೆ, ಚಿಕಿತ್ಸೆಗೆ ಪ್ರಯತ್ನಿಸಲೇಬೇಕು. ಇಲ್ಲದಿದ್ದರೆ ಮನುಕುಲಕ್ಕೆ ಉಳಿಗಾಲವಿರುವುದಿಲ್ಲ.

ರೋಗ ನಿದಾನಕ್ಕೆ ಆಧುನಿಕ ವೈಜ್ಞಾನಿಕ ಕ್ರಮಗಳಿರುವಂತೆ, ಜಾನಪದ

ಹುಡುಕಾಟದ ಕ್ರಮಗಳೂ ಉಂಟು. ಅಂಥವುಗಳ ಅನುಸರಣೆಯಿಂದ, ಅಭ್ಯಾಸದಿಂದ ನಷ್ಟವಿಲ್ಲ, ಲಾಭವಿದೆ. ಮನುಷ್ಯ ಸುಖವಾಗಿ ಸಂತೋಷವಾಗಿ ದೀರ್ಘಕಾಲ ಬದುಕಬೇಕಾದರೆ ಅವನ ಆಹಾರ ವಿಹಾರ ಶುಚಿಯಾಗಿರಬೇಕು. ರುಚಿಯಾಗಿರಬೇಕು, ಮಿತಿಯಾಗಿರಬೇಕು, ಹಿತವಾಗಿರಬೇಕು. ಮುಖ್ಯವಾಗಿ ಮಾನಸಿಕ ಒತ್ತಡದಿಂದ ಮುಕ್ತವಾಗಿರಬೇಕು. ಇದಕ್ಕಾಗಿ ಜನಪದ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಹಬ್ಬ ಹರಿದಿನಗಳ ಆಚರಣೆಯ ನೆರವು ಪಡೆಯಬಹುದು. ಪ್ರಕೃತಿಗೆ ಹತ್ತಿರವಾಗಿ ಬದುಕಲು ಕಲಿಯಬೇಕು. ಇಂದಾಗಲೀ ಮುಂದಾಗಲೀ ಜಾನಪದ ಬದುಕು ಯಾವುದೇ ರೋಗ ನಿದಾನಕ್ಕೆ ಸಂಜೀವಿನಿಯಾಗಬಹುದು. ವೈಜ್ಞಾನಿಕ ಅನ್ವೇಷಣೆ ಇರಲಿ, ಆದರೆ ಅದಕ್ಕೆ ಜಾನಪದದ ಸ್ಪರ್ಶವಿರಲಿ. ಒಟ್ಟಿನಲ್ಲಿ ಬದುಕು ಹಸನಾಗಿರುವುದು ಮುಖ್ಯ. ಮನುಷ್ಯನ ಬದುಕು ಹಸನಾದರೆ, ಮನುಷ್ಯನ ಪರಿಸರವೂ ಹಸನಾಗುತ್ತದೆ. ರೋಗ ಬಂದ ಮೇಲೆ ಪರಿತಪಿಸುವುದಕ್ಕಿಂತ ರೋಗ ಬರದಂತೆ ನೋಡಿಕೊಳ್ಳುವುದು ಕ್ಷೇಮ ಎಂಬ ಹೇಳಿಕೆ ಶಿಷ್ಟಪದದ ಆಲೋಚನೆಯಷ್ಟೇ ಅಲ್ಲ, ಅದು ಜಾನಪದದ ಆಲೋಚನೆಯೂ ಆಗಿದೆ.

ಹಿಂದೆ ಕಾಯಿಲೆಗಳಿದ್ದವು. ಅದಕ್ಕಿಂತ ಹೆಚ್ಚಾಗಿ ಕಾಯಿಲೆಯಿಲ್ಲದವರಿದ್ದರು. ಒಂದು ಸಾರಿಯೂ ಆಸ್ಪತ್ರೆಯ ಮೆಟ್ಟಿಲು ಹತ್ತದೆ, ಯಾವ ಔಷಧಿಯನ್ನೂ ಸೇವಿಸದೆ, ನೂರಾರು ವರ್ಷ ಗಟ್ಟಿಮುಟ್ಟಾಗಿ, ಆರೋಗ್ಯವಂತರಾಗಿದ್ದವರ ಸಂಖ್ಯೆ ದಂಡಿಯಗಿರುತ್ತಿತ್ತು. ಈಗಲೂ ಕಾಯಿಲೆಗಳಿವೆ. ಅದಕ್ಕಿಂತ ಮಿಗಿಲಾಗಿ ಕಾಯಿಲೆಯವರಿದ್ದಾರೆ. ಈಗ ಒಂದಾದರೂ ಕಾಯಿಲೆಯಿಲ್ಲದ ಜನವೇ ಇಲ್ಲವೇನೋ ಅನ್ನಿಸುತ್ತದೆ! ಇದಕ್ಕೆಲ್ಲಾ ಬದಲಾದ ಜೀವನ ವಿಧಾನವೇ ಕಾರಣವಿರಬಹುದು.

ರೋಗ ಜಾನಪದಕ್ಕೆ ಸಂಬಂಧಿಸಿದಂತೆ ಜನಪದ ನಂಬಿಕೆಗಳು ದಟ್ಟವಾಗಿವೆ. ಅದಕ್ಕಿಂತ ಹೆಚ್ಚಾಗಿ ರೋಗನಿದಾನಕ್ಕೆ ಜಾನಪದ ವೈದ್ಯವಿದೆ. ಅದರಲ್ಲಿ ನುರಿತ ಹಳ್ಳಿಯ ವೈದ್ಯರೂ ಉಂಟು. ಪ್ರಕೃತಿಯಲ್ಲಿ ಸುಲಭವಾಗಿ ಸಿಗುವ ಗಿಡಮೂಲಿಕೆಗಳ ಹಸುರು ಔಷಧಿ ಅದು. ಅದೆಲ್ಲಾ ಮೌಖಿಕ ಪರಂಪರೆಯಲ್ಲೆ ಉಳಿದುಕೊಂಡಿದೆ. ಅದನ್ನು ಇತರರಿಗೆ ಹೇಳುವುದೂ ಕಲಿಸುವುದೂ ಅಪರೂಪ. ಅದೊಂದು ದೊಡ್ಡ ಕೊರತೆ. ಜನಪದ ವೈದ್ಯರಿಂದ ಜನಪದ ವೈದ್ಯದ ಮಾಹಿತಿಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ಪ್ರಯೋಗಕ್ಕೆ ಒಳಪಡಿಸಿ, ಮುಂದುವರಿಸಿದ್ದರೆ

ಅದೊಂದು ಅತ್ಯುತ್ತಮ ವೈದ್ಯಪದ್ಧತಿಯಾಗುತ್ತಿತ್ತು; ಕಡಮೆ ಖರ್ಚಿನಲ್ಲಿ ಹೆಚ್ಚು ಜನರು ಉಪಯೋಗ ಪಡೆಯಬಹುದಾಗಿತ್ತು. ಪ್ರತಿಭಾವಂತರು ಮನಸ್ಸು ಮಾಡಲಿಲ್ಲವಾದ್ದರಿಂದ ಆ ಕೆಲಸ ನಡೆಯಲಿಲ್ಲ. ರೋಗ ಜಾನಪದದ ನಂಬಿಕೆಗೂ ಚಿಕಿತ್ಸೆಗೂ ಪರಸ್ಪರ ಸಂಬಂಧವಿದೆ.

## ಪ್ರಾಣಿಪಕ್ಷಿ ರೋಗ

ರೋಗ ಮನುಷ್ಯನಿಗಷ್ಟೇ ಬರುವುದಿಲ್ಲ; ಮನುಷ್ಯ ಸಾಕುವ ಪ್ರಾಣಿಗಳಿಗೂ ಬರುತ್ತದೆ. ಪ್ರಾಣಿ ರೋಗಗಳನ್ನು ತಡೆಗಟ್ಟಲು ಆಚರಣೆಗಳು ಇಲ್ಲದಿಲ್ಲ. ಮನುಷ್ಯನ ಸಾಕುಪ್ರಾಣಿಗಳಾದ ಎತ್ತು, ಹೋರಿ, ಎಮ್ಮೆ, ಕೋಣ, ಕುರಿ, ಟಗರು, ಆಡು, ಹೋತ, ನಾಯಿ, ಕುದುರೆ, ಕತ್ತೆ, ಹಂದಿ, ಒಂಟೆ; ಪಕ್ಷಿಗಳಾದ ಕೋಳಿ, ಬಾತುಕೋಳಿ, ಗಿಳಿ, ಪಾರಿವಾಳ, ಗೌಜಲಗ ಮುಂತಾದವುಗಳ ರೋಗ ನಿರೋಧಕ್ಕೂ ಮನುಷ್ಯ ಪ್ರತಿಕ್ರಿಯಿಸಿದ್ದಾನೆ. ಇದಕ್ಕಾಗಿ ಪಶುವೈದ್ಯವೇ ಪ್ರಾರಂಭವಾಗಿದೆ. ವಿವಿಧ ಹರಕೆ ಪೂಜೆ ಪುನಸ್ಕಾರಗಳೂ ರೂಢಿಯಾಗಿವೆ. ಚಿಕಿತ್ಸೆಯ ಜೊತೆಜೊತೆಗೇ ಜನಪದ ಪರಿಕರಗಳು ಪಾತ್ರವಹಿಸಿವೆ. ವೈಜ್ಞಾನಿಕ ವೈದ್ಯಕೀಯ ಪದ್ಧತಿಗಳು ಚಲಾವಣೆಗೆ ಬಂದರೂ ಜನಪದ ನಂಬಿಕೆಗಳೂ ರೂಢಿಯಲ್ಲಿ ಉಳಿಯುತ್ತವೆ. ಆಧುನಿಕ ಮನುಷ್ಯನ ಬದುಕು ಹಳತು ಹೊಸತು ನಂಬಿಕೆಗಳ ಮೊತ್ತವಾಗಿವೆ.

ಅಲೆಮಾರಿಯಾಗಿದ್ದ ಆದಿಮಾನವನಿಗೆ ಪಶುಸಮೂಹ ಆಹಾರದ ಮೂಲವಾಗಿತ್ತು; ಕೃಷಿಕನಾದ ಮೇಲೆ ಆಹಾರ ಮತ್ತು ಕೃಷಿಯ ಸಹಾಯಕ ಸಾಧನವಾಯಿತು. ಬಹು ಉಪಯೋಗಿಯಾದ ಮೇಲೆ ಅದರ ಸಂರಕ್ಷಣೆ ಪ್ರರಂಭವಾಯಿತು. ಗೋಪೂಜೆ ಮೊದಲಾಯಿತು. ಪಶು ಸಂಪತ್ತಿನ ಭಾಗವಾಯಿತು. ಈ ಸಂಪತ್ತಿನ ಗ್ರಹಣ ಪ್ರಸಂಗಗಳೂ ನಡೆದವು. ಮಹಾಭಾರತದ ಗೋಗ್ರಹಣ, ಜುಂಜಪ್ಪ ಜನಪದ ಕಾವ್ಯದ ಗೋಗ್ರಹಣ ಸಂದರ್ಭಗಳು ಪ್ರಮುಖವಾಗಿವೆ. ಬಸವ ಪುರಾಣ, ಪೂಜೆ, ಬಸವ ಬಿಡುವುದು ಮೊದಲಾದವುಗಳ ಕಲ್ಪನೆಗಳಿವೆ. ಕುರಿಗಾಹಿಗಳ ಹಿನ್ನೆಲೆಯ ಹಾಲುಮತ ಪುರಾಣ ಹುಟ್ಟಿದೆ. ಗೂಳಿ ಕಾಳಗ, ಟಗರು ಕಾಳಗ, ಕೋಳಿ ಕಾಳಗ, ಎಮ್ಮೆ ಅಂಕಣ, ಕುದುರೆ ಸ್ಪರ್ಧೆ, ಒಂಟೆಗಳ ಸ್ಪರ್ಧೆ, ದನಗಳ ಓಟಗಳು ರೂಢಿಯಲ್ಲಿವೆ.

ಜರಸಲು ರೋಗ, ನಾಗೇರು ರೋಗ, ಚಪ್ಪೆರೋಗ, ಉಚ್ಚುರೋಗ

(ಭೇದಿ ರೋಗ), ಮೇವು ಬಿಡುವ ರೋಗ ಮೊದಲಾದ ಪಶುರೋಗಗಳಿವೆ; ಅವುಗಳ ಚಿಕಿತ್ಸೆಗೆ ಹಸರು ವೈದ್ಯ ಅಥವಾ ಪಶು ವೈದ್ಯ ಹುಟ್ಟಿಕೊಂಡಿದೆ. ವೈಜ್ಞಾನಿಕ ಚಿಕಿತ್ಸೆ ಬೆಳಕಿಗೆ ಬರುವ ಮೊದಲು ಇದರದೇ ಕಾರುಬಾರು. ಈ ಎಲ್ಲದರಲ್ಲೂ ಜನಪದ ಅಂಶಗಳು ಮೆತ್ತಿಕೊಂಡಿವೆ.

ಕರೆಯುವ ಎಮ್ಮೆ, ಹಸು ಸರಿಯಾಗಿ ಹಾಲು ಕೊಡದಿದ್ದರೆ, ಅವುಗಳ ಹೊಟ್ಟೆ ಉಬ್ಬರಿಸಿಕೊಂಡು ಉಸಿರಾಟಕ್ಕೆ ಕಷ್ಟಪಡುತ್ತಿದ್ದರೆ, ದೇವರಿಗೆ ಹರಕೆ ಕಟ್ಟಿಕೊಳ್ಳುವುದುಂಟು. ಮಂತ್ರಿಸಿದ ವಿಭೂತಿಯನ್ನು ಬೆನ್ನಿನ ಮೇಲೆ, ಕೆಚ್ಚಲಿನ ಮೇಲೆ ಸವರುವುದುಂಟು. ಎಮ್ಮೆ ದನಗಳು ಇದ್ದಕ್ಕಿದ್ದಂತೆ ಮೇವುಬಿಟ್ಟು ಮಂಕಾಗಿ ಮಲಗಿದರೆ, ಒಟ್ಟೊಟ್ಟಿಗೆ ಹುಷಾರು ತಪ್ಪಿದರೆ ಯಾವುದೋ ದೇವರ ಕೋಪ ಅಥವಾ ಆಗದವರ ಶಾಪವೆಂದು ಭಯಪಟ್ಟು, ವಾಸಿಮಾಡಿದರೆ ನಿಯಮಿತವಾಗಿ ಪೂಜೆಸಲ್ಲಿಸಿ, ಕಾಣಿಕೆ ಒಪ್ಪಿಸುವುದಾಗಿ ಹರಕೆಮಾಡಿಕೊಳ್ಳುವರು. ಎಮ್ಮೆ, ಹಸು ಕರುಹಾಕಿ ಕೆಚ್ಚಲು ತುಂಬಿಕೊಂಡಿದ್ದರೆ ಕಣ್ಣೆಸರು ಆದೀತೆಂದು ಗೋಣಿ ಚೀಲದಿಂದ ಮರೆಮಾಡಿ ಜೋಪಾನವಾಡುವರು. ಕಣ್ಣೆಸರು ತೀವ್ರವಾಗಿ ಹಾಲು ಇಂಗಿಹೋಗಬಹುದು, ಅದರಿಂದ ತಾಯಿಪ್ರಾಣಿಯು ಆರೋಗ್ಯಕ್ಕೆ ಕೆಡುಕಾಗಬಹುದೆಂದು ಭಾವಿಸುವರು. ಎಮ್ಮೆ ದನಗಳ ಕಾಲಿನ ಗೊರಸಿನ ನಡುವೆ ಹುಣ್ಣಾಗಿ, ಹುಳುತುಂಬಿಕೊಂಡು, ರಾಸು ನಡೆಯಲು ಹಿಂಸೆಪಡುತ್ತಿದ್ದರೆ, ಅದರಿಂದ ಜ್ವರ ಬಂದು ನರಳುತ್ತಿದ್ದರೆ, ಅವುಗಳನ್ನು ಹರಿಯುವ ನೀರಿನಲ್ಲಿ ಕಾಲಾಡಿಸುವರು. ಅದರಿಂದ ಹುಳುಗಳು ಹೊರಬಿದ್ದು ರಾಸುಗಳಿಗೆ ಆರಾಮವಾಗುವುದು. ಅದರ ಜೊತೆಗೆ ನುರಿತ ಪಶುವೈದ್ಯರಿಂದ ಹಸುರು ಔಷಧಿ ಹಾಕಿಸಿ ಕ್ರಿಮಿಗಳು ಸಾಯುವಂತೆ ಮಾಡುವರು. ಸಂಕ್ರಾಂತಿ ಹಬ್ಬದಲ್ಲಿ, ಕಾಟಂರಾಯನ ಹಬ್ಬದಲ್ಲಿ ಕಿಚ್ಚುಹಾಯಿಸಿದರೆ ದನಕರುಗಳಿಗೆ ಕಾಯಿಲೆ ಬರುವುದಿಲ್ಲವೆಂದೂ ಬಂದಿರುವ ಸಣ್ಣ ಪುಟ್ಟ ಕಾಯಿಲೆಗಳು ವಾಸಿಯಾಗುವವೆಂದೂ ಜನಪದರು ನಂಬುವರು. ಪ್ರಾಣಿಗಳಿಗೆ ಸಾಮೂಹಿಕ ಕಾಯಿಲೆಗಳು ಬರುತ್ತಿದ್ದರೆ, ಅವುಗಳ ಕಿವಿಯ ಸ್ವಲ್ಪ ಭಾಗವನ್ನು ಕೊಯ್ದರೆ, ಕಾಯಿಲೆ ಬರುವುದಿಲ್ಲವೆಂದೂ ಕಾಯಿಲೆ ಬಂದಿದ್ದರೆ ಸಾಯದೆ ಉಳಿಯುತ್ತವೆಂದೂ ವಾಡಿಕೆಯಿದೆ. ಕುರಿ ಮೇಕೆಗಳಿಗೆ ಸಾಮೂಹಿಕವಾಗಿ ಕಾಯಿಲೆ ಬಂದು ಸಾಯುತ್ತಿದ್ದರೆ, ಅವುಗಳಲ್ಲಿ ಒಂದನ್ನು ಸೀಳಿ ಮರಕ್ಕೆ ನೇತುಹಾಕಿದರೆ ಬಂದಿರುವ ಕಾಯಿಲೆ ಹೋಗುವುದೆಂಬ

ಕ್ರೂರ ಪದ್ಧತಿ ಅಲ್ಲಲ್ಲಿ ಇದೆ. ಇದು ಅತ್ಯಂತ ಅವೈಜ್ಞಾನಿಕವಾದ. ಅಮಾನವೀಯವಾದ ಮೂಢನಂಬಿಕೆಯಾಗಿದೆ.

ಆಗತಾನೆ ಹುಟ್ಟಿದ ಕೋಳಿಮರಿಗಳಿಗೆ (ಹೂಮರಿಗಳಿಗೆ) ಹುಣಿಸೆಹಣ್ಣು ಕಿವುಚಿದ ತಿಳಿನೀರು ಕುಡಿಸಿದರೆ ಅವು ಸಾಯುವುದಿಲ್ಲವೆಂಬ ಪದ್ಧತಿ ರೂಢಿಯಲ್ಲಿದೆ. ಕೋಳಿಗಳಿಗೆ ಕೊಕ್ಕರೆ ರೋಗ ಬಂದು (ಉಚ್ಚುರೋಗ) ಸಾಮೂಹಿಕವಾಗಿ ಸತ್ತು ಯಾವುದಾದರೂ ಒಂದು ಕೋಳಿ ಬದುಕುಳಿದರೆ, ಅಂತಹ ಕೋಳಿಗೆ ಮತ್ತೆ ರೋಗ ಬರುವುದಿಲ್ಲವೆಂದೂ, ಅದರಿಂದ ಕೋಳಿಯ ವಂಶ ವೃದ್ಧಿಸುವುದೆಂದೂ ಭಾವಿಸುತ್ತಾರೆ. ಹದ್ದು ಹಾರಿಸಿಕೊಂಡು ಹೋದ ಕೋಳಿಮರಿ ಆಕಸ್ಮಿಕವಾಗಿ ತಪ್ಪಿಸಿಕೊಂಡು ಉಳಿದರೆ ಅದಕ್ಕೆ ಮುಂದೆ ಯಾವ ವಿಪತ್ತೂ ಬರುವುದಿಲ್ಲವೆಂದೂ ಅದರ ಸಂತಾನ ಹೆಚ್ಚುವುದೆಂದೂ ಹೇಳುವುದುಂಟು.

ಸಾಕಿದ ಎಮ್ಮೆ ದನ ಕರು ಕುರಿ ಕೋಳಿ ಮೇಕೆ ಮೊದಲಾದವು ಒಂಟಿಯಾಗಿಯೋ ಒಟ್ಟಾಗಿಯೋ ರೋಗದಿಂದ ಸತ್ತರೆ ಸಾಕಿದವರಿಗೆ ಆರ್ಥಿಕವಾಗಿ ನಷ್ಟವಾಗುವುದರಿಂದ ಅವುಗಳ ರಕ್ಷಣೆಗೆ, ರೋಗ ನಿವಾರಣೆಗೆ ಬಹಳ ಎಚ್ಚರ ವಹಿಸುತ್ತಾರೆ. ಪ್ರತಿ ಹಳ್ಳಿಯಲ್ಲೂ ಮೌಖಿಕ ಪರಂಪರೆಯಲ್ಲಿ ಸಾಗಿಬಂದ ಪಶುವೈದ್ಯವನ್ನು ಬಲ್ಲವರು ಇರುವುದರಿಂದ ಸಾಕಷ್ಟು ಉಪಯೋಗವಾಗುತ್ತಿದೆ. ಅವರು ತಾವು ತಿಳಿದ ಹಸುರು ವೈದ್ಯವನ್ನು ಇತರರಿಗೆ ತಿಳಿಸುವುದಿಲ್ಲವಾದ್ದರಿಂದ ಮೂಲಪದ್ಧತಿಯ ಪ್ರಚಾರಕ್ಕೆ, ಅಭಿವೃದ್ಧಿಗೆ ಅಡ್ಡಿಯಾಗಿದೆ.

ಪ್ರಾಣಿಪಕ್ಷಿ ರೋಗಗಳ ಹಿನ್ನೆಲೆಯಲ್ಲಿ ಜನಪದ ಬೈಗುಳಗಳು ಹುಟ್ಟಿಕೊಂಡಿವೆ. ಉದಾಹರಣೆ : 1. ನಿನ್ನ ಹಟ್ಟಿ ರಾಸಿಗೆ ಚಪ್ಪೆ ರೋಗ ಬಡಿಯಾ. 2. ನಿನ್ನ ಹಟ್ಟಿ ರಾಸು ಉಚ್ಚುಕಂಡು ಸಾಯಾ. 3. ನಿನ್ನ ಕುರಿ ರೊಪ್ಪಕ್ಕೆ ಬರಬಾರ್ದು ಬರಾ. 4. ನಿನಗೆ ಕೊಕ್ಕರೆ ರೋಗ ಬರಾ.

ಮನುಷ್ಯನ ಕಾಯಿಲೆಗಳು ಪ್ರಾಣಿಗಳಿಗೆ ರವಾನೆಯಾಗುತ್ತವೋ ಇಲ್ಲವೋ ಗೊತ್ತಿಲ್ಲ. ಆದರೆ ಪ್ರಾಣಿಗಳಿಂದ ಕೆಲವು ಕಾಯಿಲೆಗಳು ಮನುಷ್ಯನಿಗೆ ತಗುಲಿಕೊಳ್ಳುತ್ತವೆ. ಉದಾಹರಣೆಗೆ : ಹಂದಿಗಳಿಂದ ಮೆದುಳು ಜ್ವರ, ಮಂಗನಿಂದ ಮಂಗನ ಕಾಯಿಲೆ, ಹುಚ್ಚುನಾಯಿ ಕಡಿತದಿಂದ ಹುಚ್ಚುರೋಗ, ಇತ್ಯಾದಿ. ಜಲಚರ, ಸಸ್ಯ, ಗಿಡ, ಮರಗಳಿಗೂ ಕಾಯಿಲೆ ಕಸಾಲೆ ಬರುವುದುಂಟು. ಆ ಎಲ್ಲದರ

ಪರಿಣಾಮ ಮನುಷ್ಯನ ಮೇಲೂ ಸೂಕ್ಷ್ಮವಾಗಿಯಾದರೂ ಆಗುತ್ತದೆ. ಅಂಥದ್ದನ್ನು ಎದುರಿಸದೆ ಗತ್ಯಂತರವಿಲ್ಲ.

## ಕೃಷಿ ರೋಗ

ಅಲೆಮಾರಿ ಬೇಟೆಗಾರನಾಗಿದ್ದ ಮನುಷ್ಯ ಒಂದೆಡೆ ನಿಂತು ಕೃಷಿಗೆ ತೊಡಗಿದ್ದು ಮನುಕುಲ ವಿಕಾಸದ ಪ್ರಮುಖ ಘಟ್ಟ. ಭೂಮಿಯಿಂದ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಬೆಳೆದುಕೊಳ್ಳಬಹುದೆಂದು ಕಂಡುಕೊಂಡಿದ್ದೇ ದೊಡ್ಡ ಪವಾಡ. ಅನ್ನ ಕೊಡುವ ಭೂಮಿ ದೇವರಾಯಿತು, ತಾಯಿಯಾಯಿತು, ಸರ್ವಸ್ವವಾಯಿತು. ಕೃಷಿಗೆ ಸಂಬಂಧಿಸಿದಂತೆ ಲೆಕ್ಕವಿಲ್ಲದಷ್ಟು ಆಚರಣೆಗಳು ಚಾಲ್ತಿಗೆ ಬಂದವು. ಪ್ರಾಕೃತಿಕ ವಿಕೋಪ, ಕೀಟಗಳ ಕಾಟ, ನುಸಿಪೀಡೆ, ಹಸುರು ಗೊಬ್ಬರದ ಕೊರತೆ, ಮಿತಿಮೀರಿದ ರಸಾಯನಿಕಗಳ ಬಳಕೆ, ನೀರಿನ ಅಭಾವ, ನಿಗೂಢ ಕಾರಣ ಮುಂತಾದವುಗಳಿಂದ ಕೃಷಿ ರೋಗಗ್ರಸ್ತವಾಗುವುದುಂಟು. ಆಗ ಕೃಷಿಕ ಕಂಗಾಲಾಗುತ್ತಾನೆ. ಕೃಷಿ ಏರುಪೇರಾದಾಗ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗಗಳೂ ಸಂಭವಿಸುತ್ತವೆ. ಹಿಂದಿನಿಂದ ಇಂದಿನವರೆಗೆ ಕೃಷಿರೋಗ ಜಾನಪದ ನೀಡುವ ಹೊಳಹುಗಳು ವಿಸ್ಮಯಹುಟ್ಟಿಸುತ್ತವೆ.

ಕೃಷಿ ಸಮೃದ್ಧವಾದರೆ ಮನುಷ್ಯನ ಬದುಕು ಸಮೃದ್ಧವಾಗುತ್ತದೆ; ಕೃಷಿ ರೋಗಗ್ರಸ್ತವಾದರೆ ಮನುಷ್ಯನ ಬದುಕು ರೋಗಗ್ರಸ್ತವಾಗುತ್ತದೆ. ಪ್ರಕೃತಿಯ ಜಾಡುಹಿಡಿದು ಕೃಷಿಯನ್ನು ಮಾಡಬೇಕು. ಇಲ್ಲದಿದ್ದರೆ ಕಷ್ಟಪಟ್ಟು ದುಡಿದ ಸಂಪೂರ್ಣ ಕೃಷಿಯ ಫಲ ಕೈಹತ್ತುವುದಿಲ್ಲ. ಕೃಷಿರೋಗಕ್ಕೆ ಸಂಬಂಧಿಸಿದ ಜನಪದ ನಂಬಿಕೆಗಳು ಈ ವಿಭಾಗದ ಅಧ್ಯಯನದ ಮುಖ್ಯ ಗುರಿಯಾಗಬೇಕು.

## ಸಾಮಾಜಿಕ ರೋಗ

ಮನುಷ್ಯ ಕಲ್ಪಿಸಿದ ಆದಿಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಪಷ್ಟವಾದ ಕಟ್ಟುಪಾಡುಗಳಿದ್ದವು. ಅವುಗಳನ್ನು ತಪ್ಪದೆ ಆಚರಿಸುತ್ತಿದ್ದರು. ಮದುವೆ ಮುಂಜಿ, ಹಬ್ಬ ಹರಿದಿನ, ಜಾತ್ರೆ ತೇರು, ಊರೊಟ್ಟಿನ ಕೆಲಸಗಳಂತೆ ಸಾಮೂಹಿಕವಾಗಿ, ಸಹಕಾರ ತತ್ವದ ಹಿನ್ನೆಲೆಯಲ್ಲಿ ನಡೆಯುತ್ತಿದ್ದವು. ಜಾತಿ ಮತ ಮೇಲು ಕೀಳು ಸ್ಪೃಶ್ಯ ಅಸ್ಪೃಶ್ಯ ವರ್ಗ ವರ್ಣ ಶ್ರೇಣಿ ಶೋಷಕ ಶೋಷಿತ ಮೊದಲಾದವು ತಲೆಹಾಕಿ ಮನುಷ್ಯ ಸಂಬಂಧದಲ್ಲಿ ಬಿರುಕುಂಟಾಯಿತು. ಅದು ಇಡೀ ಸಮಾಜ

ರೋಗಗ್ರಸ್ತವಾಗಲು ಕಾರಣವಾಯಿತು. ಆ ವಿಘಟನೆಗೆ ತಕ್ಕಂತೆ ಜನಪದ ಮನಸ್ಸು ಕೆಲಸಮಾಡಲು ಪ್ರಾರಂಭಿಸಿತು. ಇಂದು ಸಮಾಜದಲ್ಲಿ ಅಸಮಾನತೆಯ ಪಿಡುಗು ಕಾಣಿಸಿಕೊಂಡಿದೆ.

ಸಮಾಜ ಸುಧಾರಣೆಗಾಗಿಯೇ ಹೋರಾಟ ಮಾಡಿದವರುಂಟು. ಅದಕ್ಕಾಗಿ ಹೊಸ ಹೊಸ ಸಿದ್ಧಾಂತಗಳೆಲ್ಲ ಹುಟ್ಟಿಕೊಂಡವು. ಸಾಮಾಜಿಕ ಅನಿಷ್ಟಗಳಿಂದ ದೂರವಾಗದಿದ್ದರೆ ಮನುಕುಲದ ಏಳಿಗೆ ಸಾಧ್ಯವಾಗುವುದಿಲ್ಲ. ವ್ಯಷ್ಟಿಹಿತಕ್ಕಿಂತ ಸಮಷ್ಟಿಹಿತ ಮುಖ್ಯ. ಸ್ವಾರ್ಥಕ್ಕಿಂತ ಸಾಮೂಹಿಕ ಸ್ವಾಸ್ಥ್ಯ ಅಗತ್ಯ. ಇದಕ್ಕೆ ಸಂಬಂಧಿಸಿದಂತೆ ಜನಪದ ಮನಸ್ಸಿನ ಯೋಚನೆ, ಯೋಜನೆ ಪರಿಶೀಲನೆಗೆ ಅರ್ಹವಾಗಿದೆ.

## ಆರ್ಥಿಕ ರೋಗ

ಜನಪದ ಬದುಕು ಸರಳವಾಗಿದ್ದಾಗ ಆರ್ಥಿಕ ಸ್ಥಿತಿ ಗಂಭೀರವಾಗಿರಲಿಲ್ಲ. ಹಣದ ಅನಿವಾರ್ಯತೆ ಅಗತ್ಯವಾದಾಗ ಅದಕ್ಕೆ ತಕ್ಕಂತೆ ನಂಬಿಕೆ ಕಥೆ ಐತಿಹ್ಯ ಕಣಿ ಹುಟ್ಟಿಕೊಂಡವು. ಸರಳವಾಗಿದ್ದ, ನಿಸ್ವಾರ್ಥವಾಗಿದ್ದ, ಭ್ರಷ್ಟರಹಿತವಾಗಿದ್ದ, ಶ್ರಮಪೂರ್ವಕವಾಗಿದ್ದ ಹಣಗಳಿಕೆಯ ಮಾನದಂಡ ವ್ಯತ್ಯಾಸವಾಯಿತು. ಆಧುನಿಕ ಕಾಲದಲ್ಲಂತೂ ಹಣವೇ ಸರ್ವಸ್ವವಾಗಿದೆ. ಹಣಗಳಿಕೆಗೆ ಯಾವ ಮಾರ್ಗ ಹಿಡಿಯಲೂ ಮನಸ್ಸು ಸಿದ್ಧವಾಗಿದೆ. ಹಣ ಭ್ರಷ್ಟಾಚಾರದ ಮೂಲವಾಗಿದೆ. ಕೆಲವರ ಧನದಾಹದಿಂದ ಹಲವರು ನರಳಬೇಕಾಗಿದೆ. ಶ್ರೀಮಂತಿಕೆ ಬಡತನ, ಆರ್ಥಿಕ ಬಲಿಷ್ಠತೆ ದುರ್ಬಲತೆ, ಆಳ್ವಿಕೆ ಆಳಿಸಿಕೊಳ್ಳುವಿಕೆ, ತಿನ್ನುವಿಕೆ ಹಸಿದಿರುವಿಕೆ ಮೊದಲಾದ ಆರ್ಥಿಕ ಅಸಮಾನತೆ ಕಣ್ಣಿಗೆ ರಾಚುವಂತಿದೆ. ಶ್ರೀಮಂತ ರಾಷ್ಟ್ರಗಳ ಅಟ್ಟಹಾಸ ಬಡರಾಷ್ಟ್ರಗಳ ದೈನ್ಯತೆ ಅತಿಯಾಗಿದೆ. ರೋಗಗ್ರಸ್ತ ಆರ್ಥಿಕ ಏರುಪೇರಿನಲ್ಲಿ ಸಾಮಾನ್ಯ ಜನರು ಉಸಿರಾಡುವುದೇ ಕಷ್ಟವಾಗಿದೆ. ಅಧಿಕ ಜನಸಂಖ್ಯೆಯಿರುವ ದೇಶದಲ್ಲಿ ಜನರ ದುಡಿಮೆಯನ್ನು ಕಿತ್ತುಕೊಳ್ಳುವ ಯೋಜನೆ, ಯೋಚನೆ, ವಿಜ್ಞಾನ ಬಳಕೆಯ ಬಗೆಗೆ ಪುನರ್ ಪರಿಶೀಲನೆ ಅಗತ್ಯವಾಗಿದೆ. ಪ್ರಸ್ತುತದಲ್ಲಿ ರಾಜ್ಯದ, ರಾಷ್ಟ್ರದ ಆರ್ಥಿಕ ಜಿಜ್ಞಾಸೆ ಗಾಬರಿ ಹುಟ್ಟಿಸುತ್ತದೆ. ಒಂದು ಅಂದಾಜಿನ ಪ್ರಕಾರ ಭಾರತ ದೇಶದ ಸಾಲದ ಮೊತ್ತ ಹದಿಮೂರು ಲಕ್ಷ ಕೋಟಿ ರೂಪಾಯಿ ಆಗಿದೆ! ಇದು ದಿನದಿನಕ್ಕೆ ಹೆಚ್ಚುತ್ತಿದೆ. ಇನ್ನೊಂದು ಹೇಳಿಕೆಯ ಪ್ರಕಾರ ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೂ ಇಪ್ಪತ್ತೆರಡು ಸಾವಿರ ರೂಪಾಯಿ ಸಾಲವಿದೆ.

ಆರ್ಥಿಕವಾಗಿ ಮನಸ್ಸು, ಮನೆ, ವೈಯುಕ್ತಿಕವಾಗಿ ಸಾಮೂಹಿಕವಾಗಿ ರೋಗಗ್ರಸ್ತವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಜನಪದ ಮನಸ್ಸಿನ ಚಿಂತನೆ ಅನಾವರಣವಾಗಬೇಕಾಗಿದೆ.

ಜನಪದ ಸಮಾಜದಲ್ಲಿ ಹಣಕಾಸಿನ ವಹಿವಾಟು ಕಡಮೆಯಿದ್ದರೂ ಹೊಟ್ಟೆಬಟ್ಟೆಗೆ ಕೊರತೆಯಿರಲಿಲ್ಲ; ದುಡಿಯುವವರು ಉಪವಾಸವಿರುತ್ತಿರಲಿಲ್ಲ. ಆಧುನಿಕ ಕಾಲದಲ್ಲಿ ಪರಿಸ್ಥಿತಿ ದುರ್ಬರವಾಗಿದೆ, ಬರ್ಬರವಾಗಿದೆ. ನಿರುದ್ಯೋಗ, ವಿದೇಶಿ ಬಂಡವಾಳಗಾರರ ಪ್ರವೇಶ, ಶ್ರೀಮಂತರ ಎಗ್ಗಿಲ್ಲದ ಬೆಳವಣಿಗೆ ಗಾಬರಿ ಹುಟ್ಟಿಸುತ್ತಿದೆ. ಬಡವರಿಗೆ ಪ್ರೋತ್ಸಾಹ, ಸಹಾಯ, ಸಹಕಾರ, ಅತಿ ಶ್ರೀಮಂತಿಕೆಗೆ ಕಡಿವಾಣ ಬೇಕಾಗಿದೆ. ಜಾಗತೀಕರಣ, ಉದಾರೀಕರಣ, ಮೊದಲಾದ ಆಡಳಿತಾತ್ಮಕ ಹೊಸ ಯೋಜನೆಗಳ ಹಿನ್ನೆಲೆಯಲ್ಲಿ ಆರ್ಥಿಕ ರೋಗ ವ್ಯವಸ್ಥೆಯನ್ನು ವಿಚಾರ ಮಾಡಬೇಕಾಗಿದೆ.

## ಕೈಗಾರಿಕಾ ರೋಗ

ಆಧುನಿಕ ಸಮಾಜದ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕೆಯ ಪಾತ್ರ ಮಹತ್ವದ್ದಾಗಿದೆ. ಇದು ಜನಪದರು, ಶಿಷ್ಟಪದರು ಇಬ್ಬರೂ ಕಲೆತು ನಿರ್ವಹಿಸುವ ವ್ಯವಸ್ಥೆ. ಕೈಗಾರಿಕಾ ಆಡಳಿತ ವ್ಯವಸ್ಥೆ ಶಿಷ್ಟಪದ ಎನ್ನುವುದಾದರೆ, ದುಡಿಯುವ ವರ್ಗ ಜನಪದವಾಗುತ್ತದೆ. ಅದಕ್ಷತೆ, ಭ್ರಷ್ಟಾಚಾರ, ಮಿತಿಮೀರಿದ ನೌಕರರ ನೇಮಕ, ದುಡಿಮೆಯ ಕೊರತೆ, ಮಾರುಕಟ್ಟೆಯ ಕುಸಿತ, ವಿದೇಶಿ ಕೈಗಾರಿಕಾ ದಾಳಿ, ಬಹುರಾಷ್ಟ್ರ ಕಂಪನಿಗಳ ಉತ್ಪನ್ನಗಳ ಆಮದು ಮೊದಲಾದವುಗಳಿಂದ ಕೈಗಾರಿಕೆ ರೋಗಗ್ರಸ್ಥವಾಗುತ್ತದೆ. ಅಂಥ ಸಂದರ್ಭದಲ್ಲಿ ಆಡಳಿತ ವ್ಯವಸ್ಥೆ ಅಥವಾ ಸರಕಾರ ಹಿಂದುಮುಂದು ಯೋಚಿಸದೆ ರೋಗಗ್ರಸ್ತ ಕೈಗಾರಿಕೆಯನ್ನು ಮುಚ್ಚುತ್ತದೆ ಅಥವಾ ಖಾಸಗಿಯವರಿಗೆ ಮಾರುತ್ತದೆ. ಆಧುನಿಕ ಅಭಿರುಚಿಯ ಪ್ರಭಾವದಿಂದ, ವಿದೇಶಿ ವಸ್ತುಗಳ ಆಕರ್ಷಣೆಯಿಂದ ಸಾಂಪ್ರದಾಯಿಕ ಗುಡಿ ಕೈಗಾರಿಕೆಗಳೂ ಬೇಡಿಕೆ ಕುಗ್ಗಿ ನಶಿಸುತ್ತವೆ, ನಿರುದ್ಯೋಗಕ್ಕೆ ಕಾರಣವಾಗುತ್ತವೆ. ಆಗ ಅದನ್ನೇ ನಂಬಿಕೊಂಡಿದ್ದ ದುಡಿಮೆಗಾರರ ಮನಸ್ಸು ಹೇಗೆ ವರ್ತಿಸುತ್ತದೆ? ಅವರ ಭವಿಷ್ಯ ಏನಾಗುತ್ತದೆ? ಇಂಥ ಸಂದರ್ಭದಲ್ಲಿ ಸಹಕಾರ ತತ್ವದ ಜನಪದ ವ್ಯವಸ್ಥೆ ಮಾರ್ಗಸೂಚಿಯಾಗಬಹುದಲ್ಲವೆ? ಕೈಗಾರಿಕಾ ಜಾನಪದವಿದ್ದಂತೆ ಕೈಗಾರಿಕಾ ರೋಗ ಜಾನಪದವೂ ಇದೆ.

## ಧಾರ್ಮಿಕ ರೋಗ

ಹಿಂದೆ ಜನಪದ ಮನಸ್ಸಿಗೆ ಧರ್ಮ, ಧಾರ್ಮಿಕ ವಿಷಯ ವಿನಾಶಕಾರಿಯಾಗಿರಲಿಲ್ಲ. ಧರ್ಮಗ್ಲಾನಿಯಾದಾಗ ದೇವರು ಅವತಾರವೆತ್ತಿ ಧರ್ಮಸಂಸ್ಥಾಪನೆ ಮಾಡುವ ಪುರಾಣ ಕಲ್ಪನೆ ಭಾರತದಲ್ಲಿದೆ. ಹಿಂದು ಧರ್ಮದ ಪುನರುಜ್ಜೀವನಕ್ಕೆ ತ್ರಿಮತಾಚಾರ್ಯರು ಹುಟ್ಟಿಬಂದರೆಂದು ಹೇಳುತ್ತಾರೆ. ಇತರ ಧರ್ಮಸ್ಥಾಪಕರೂ ಪ್ರವಾದಿಗಳೂ ಇಂಥದ್ದೇ ಕಾರಣಕ್ಕೆ ಕಾರಣೀಕರಾಗಿ ಅವತರಿಸಿದರೆಂದು ನಂಬಲಾಗಿದೆ. ಹಲವು ಧರ್ಮಗಳಿದ್ದರೂ ಜನಸಾಮಾನ್ಯರು ಧರ್ಮಸಹಿಷ್ಣುಗಳಾಗಿ, ನೆಮ್ಮದಿಯಿಂದ ಬದುಕುತ್ತಿದ್ದರು. ಹಿಂದೆ ಆಗೊಮ್ಮೆ ಈಗೊಮ್ಮೆ ರೋಗಗ್ರಸ್ತವಾಗುತ್ತಿದ್ದ ಧರ್ಮ, ಇಂದು ಸದಾ ರೋಗಗ್ರಸ್ತವಾದ ಹಂತ ತಲುಪಿದೆ. ಧರ್ಮದ ಹೆಸರಿನಲ್ಲಿ ಜನಾಂಗ ಜನಾಂಗಗಳ ನಡುವೆ, ದೇಶ ದೇಶಗಳ ನಡುವೆ ಹೋರಾಟ ನಡೆಯುತ್ತಿದ್ದು, ಭೂಮಿ ರಕ್ತಮಯವಾಗಿ, ಜನಸಮೂಹ ಆತಂಕದಲ್ಲಿ ಬದುಕಬೇಕಾಗಿದೆ. ಈ ರೋಗಗ್ರಸ್ತ ಪರಿಸ್ಥಿತಿಯಿಂದ ಹೊರಬರದಿದ್ದರೆ ಮನುಕುಲ ನಿರ್ನಾಮವಾಗುವುದು ಖಂಡಿತ. ಇದಕ್ಕೆ ಜಾನಪದದ ಮದ್ದು ಅಗತ್ಯವಾಗಿದೆ.

## ಶೈಕ್ಷಣಿಕ ರೋಗ

ಜನಪದರಿಗೆ ಅವರದೇ ಆದ ಶಿಕ್ಷಣ ನೀತಿಯಿತ್ತು. ಕುಲಕಸಬು ವ್ಯವಹಾರಕ್ಕೆ ತಕ್ಕಷ್ಟು ಶಿಕ್ಷಣ ಹಿರಿಯರಿಂದ ಕಿರಿಯರಿಗೆ ಸಿಗುತ್ತಿತ್ತು. ಕ್ರಮೇಣ ಜ್ಞಾನಸಂಪಾದನೆಗಾಗಿ ಅಕ್ಷರ ಕಲಿಕೆಯ ಶಿಕ್ಷಣ ಬಂತು. ಈಗ ಅದು ಹೊಟ್ಟೆ ಪಾಡಿನ ಅಗತ್ಯವಾಗಿದೆ. ಹಿಂದೆ ಅಕ್ಷರ ಶಿಕ್ಷಣ ಕೆಲವರ ಸ್ವತ್ತಾಗಿತ್ತು. ಈಗ ಸಾಮೂಹಿಕ ಶಿಕ್ಷಣ ಪ್ರರಂಭವಾಗಿದೆ. ಇಲ್ಲಿ ಸರ್ವಸಮಾನತೆ, ಸೌಹಾರ್ದತೆ, ಸಮರಸತೆ, ಮನುಷ್ಯ ಸಂಬಂಧದ ತುರ್ತಿಗೆ ಪೂರಕವಾಗಬೇಕಾಗುತ್ತದೆ; ನೈತಿಕತೆ ಬೆನ್ನೆಲುಬಾಗಬೇಕಾಗುತ್ತದೆ. ಸಂಕುಚಿತ ದೃಷ್ಟಿಯ ಶಿಕ್ಷಣ ರೋಗಗ್ರಸ್ತವಾಗುತ್ತದೆ. ಜನಪದ ಮನಸ್ಸು ಇಂಥದ್ದನ್ನು ಬಯಸುವುದಿಲ್ಲ.

ಅಕ್ಷರ ಕಲಿಕೆಗೂ ಆಚರಣೆ ಪ್ರವೇಶಿಸಿತು. ಅಕ್ಷರ ದೇವತೆಯಾಗಿ ಸರಸ್ವತಿ ಸೃಷ್ಟಿಗೊಂಡಳು. ಸರಸ್ವತಿ ಪೂಜೆ ಪ್ರರಂಭವಾಯಿತು. ಪ್ಲೇಟು ಬಳಪ ಪುಸ್ತಕ ಪೂಜಾರ್ಹವಾದವು. ಆ ಮೂಲಭಾವನೆಗೆ ಧಕ್ಕೆಬರುವುದನ್ನು ಜನಪದ ಮನಸ್ಸು ಒಪ್ಪುವುದಿಲ್ಲ. ಯಾವುದೇ ಮತ, ಧರ್ಮ, ತತ್ವ, ಪಕ್ಷಕ್ಕೆ ಸೀಮಿತವಾಗುವ

ಶಿಕ್ಷಣದಿಂದ ಸಮಸ್ತ ಮನುಕುಲಕ್ಕೆ ಉಪಯೋಗವಾಗುವುದಿಲ್ಲ. ಶಿಕ್ಷಣದಲ್ಲಿ ಕೇಸರೀಕರಣವನ್ನು ವಿರೋಧಿಸುವ ಮನಸ್ಸಿನಲ್ಲಿರುವ ನೋವನ್ನು ಅರ್ಥಮಾಡಿಕೊಳ್ಳಬೇಕು. ಶಿಕ್ಷಣ ಕಲಿಕೆಗೆ ಅಡ್ಡಿಯಾಗಿದ್ದ, ಕೆಲವರಿಗೆ ಸೀಮಿತವಾಗಿದ್ದ ಧರ್ಮಾಡಳಿತದ ಒತ್ತಡಕ್ಕೆ ಮಣಿದಿದ್ದ ರೋಗಘಟ್ಟಗಳನ್ನು ಈ ಸಂಬಂಧದಲ್ಲಿ ವಿಶ್ಲೇಷಿಸಬೇಕು. ಮತ್ತೆ ಶಿಕ್ಷಣ ಕೂಪಮಂಡೂಕ ಸ್ಥಿತಿಗೆ ಸಿಕ್ಕಿಕೊಳ್ಳುವುದನ್ನು ತಪ್ಪಿಸಬೇಕು. ಶೈಕ್ಷಣಿಕ ರೋಗಕ್ಕೆ ಸುಶಿಕ್ಷಿತರ, ಪ್ರತಿಷ್ಠರ, ಆಳುವವರ, ಧರ್ಮಾಂಧರ, ಸ್ವಾರ್ಥಪರ ಸ್ವಪ್ರತಿಷ್ಠೆ, ಸಂಕುಚಿತತೆ ಮುಖ್ಯ ಕಾರಣವಾಗಿರುತ್ತದೆ.

## ಸಾಂಸ್ಕೃತಿಕ ರೋಗ

ಜನಪದ ಸಂಸ್ಕೃತಿಗೂ ಆಧುನಿಕ ಶಿಷ್ಟ ಸಂಸ್ಕೃತಿಗೂ ಇರುವ ವೈಪರೀತ್ಯಗಳ ಅರಿವಿನಿಂದ ರೋಗಗ್ರಸ್ಥ ವಿಷಯಗಳನ್ನು ಗ್ರಹಿಸಬಹುದು. ಜಾನಪದ ಸಂಜೀವಿನಿಯ ಸಿಂಚನದಿಂದ ಸಾಂಸ್ಕೃತಿಕ ರೋಗ ನಿದಾನವನ್ನು ಉಪಯೋಗಿಸಬೇಕಾಗುತ್ತದೆ. ಪ್ರಧಾನ ಸಂಸ್ಕೃತಿ, ಉಪಸಂಸ್ಕೃತಿ, ಶಿಷ್ಟ ಸಂಸ್ಕೃತಿ, ಅಶಿಷ್ಟ ಸಂಸ್ಕೃತಿ; ಉಚ್ಚ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ ಮೊದಲಾದ ಹಣೆಪಟ್ಟಿಯಿಂದ ಮೂಲ ಜನಪದ ಸಂಸ್ಕೃತಿಯನ್ನು ನಿರ್ಲಕ್ಷಿಸಿ ಶಿಷ್ಟ ಸಂಸ್ಕೃತಿ ರೋಗಗ್ರಸ್ತವಾದ ಸಂದರ್ಭಗಳು ಸಾಕಷ್ಟಿವೆ. ಸಮಗ್ರ ಸಂಸ್ಕೃತಿಯ ಪರಿಕಲ್ಪನೆಯನ್ನು ಕಡೆಗಣಿಸಿದರೆ ಅಪಾಯ ಅಧಿಕವಾಗುತ್ತದೆ.

ಸನಾತನ ಸಂಸ್ಕೃತಿಯ ಮಾರ್ಗದರ್ಶನದ ಅಭಾವ, ಅರಿವು, ಅನುಸರಣೆಯ ಕೊರತೆ, ಅನ್ಯ ಸಂಸ್ಕೃತಿಯ ದಾಳಿ, ಆಧುನಿಕ ಯೋಚನೆಯ ಮುಖಾಮುಖಿ, ಹುಸಿವೈಚಾರಿಕತೆ ಮೊದಲಾದವುಗಳಿಂದ ಸ್ವದೇಶಿ ಸಂಸ್ಕೃತಿ ರೋಗಗ್ರಸ್ತವಾಗುತ್ತದೆ. ಇದರಿಂದ ಉಳಿದೆಲ್ಲ ಜೀವನವಿಧಾನಗಳು ಅಸ್ತವ್ಯಸ್ತಗೊಳ್ಳುತ್ತವೆ. ಯುವಜನಾಂಗದಲ್ಲಿ ಸ್ವಸಂಸ್ಕೃತಿಯನ್ನು ಸಂವರ್ಧಿಸುವ ಹಿನ್ನೆಲೆಯಲ್ಲಿ ವಿವೇಚನೆ ನಡೆಯಬೇಕು. ವಿದೇಶಿ ಸಂಸ್ಕೃತಿಯ ಪ್ರವೇಶದಿಂದ ಸ್ವದೇಶಿ ಸಂಸ್ಕೃತಿಯ ಮೇಲಾಗುವ ದುಷ್ಪರಿಣಾಮವೂ ಚರ್ಚಿತವಾಗಬೇಕು. ಸ್ವದೇಶ, ಸ್ವಸಂಸ್ಕೃತಿಯ ಅರಿವಿಲ್ಲದ ಜನಸಮೂಹ ಜಾಗತಿಕ ಮಟ್ಟದಲ್ಲಿ ಸೋಪಜ್ಞತೆಯನ್ನು ಸ್ಥಾಪಿಸಲಾರದು.

## ಸಾಹಿತ್ಯಕ ರೋಗ

ಜಾನಪದದ ಸಮಸ್ತವೂ ಜನಪದರ ಮಸ್ತಕದಲ್ಲಿತ್ತು, ಮೌಖಿಕ ರೂಪದಲ್ಲಿತ್ತು. ಅದು ಕ್ರಮೇಣ ಅಕ್ಷರ ರೂಪದ ಸಾಹಿತ್ಯಕ್ಕೆ ಬಂತು. ಸಾಹಿತ್ಯ ಎಲ್ಲರಿಗೂ ಆಗಿಬರಲಿಲ್ಲ. ವರ್ಣ, ವರ್ಗದ ಹಿನ್ನೆಲೆಯಲ್ಲಿ ಸಾಹಿತ್ಯದಲ್ಲೂ ಅಸ್ಪೃಶ್ಯತೆ ಇತ್ತು. ಉತ್ತಮ ಜಾತಿಯವರು ಇತರರ ಸಾಹಿತ್ಯವನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ, ಕಣ್ಣಿಟ್ಟು ಓದುತ್ತಿರಲಿಲ್ಲ, ಕೈಯಿಂದ ಮುಟ್ಟುತ್ತಿರಲಿಲ್ಲ. ಉತ್ತಮರ ಸಾಹಿತ್ಯವನ್ನು ಅನರ್ಹರು ಅಪವಿತ್ರ ಮಾಡಬಹುದೆಂದು ಹಸ್ತಪ್ರತಿಗಳನ್ನು ನೀರಿಗೆ ಅರ್ಪಿಸಿ, ಬೆಂಕಿಗೆ ಹಾಕಿ, ಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಆಗದವರ ಸಾಹಿತ್ಯವನ್ನು ಕೈಯಾರ ಧ್ವಂಸಮಾಡುತ್ತಿದ್ದರು. ಅವೆಲ್ಲಾ ಸಾಹಿತ್ಯದ ರೋಗಗ್ರಸ್ತ ಸಂದರ್ಭಗಳು.

ಸೃಷ್ಟಿಯಾಗುವ ಸಾಹಿತ್ಯ ನಿಂತ ನೀರಾಗಿ ಕೊಳೆತು ನಾರುವುದುಂಟು. ಆಗ ಹೊಸತನಕ್ಕೆ ಹುಡುಕಾಟ ನಡೆಯುತ್ತದೆ. ಕನ್ನಡದಲ್ಲಿ ಅಂಥ ಸ್ಥಿತ್ಯಂತರಗಳು ಧಾರಾಳವಾಗಿ ನಡೆದಿವೆ. ಸಾಹಿತ್ಯ ರೋಗಗ್ರಸ್ತವಾದಾಗಲೆಲ್ಲಾ ಜನಪದ ಸಾಹಿತ್ಯ ಹೊಸ ಶಕ್ತಿ ಸಂಚಯಕ್ಕೆ ಕಾರಣವಾಗಿದೆ. ಚೇತನಶಾಲಿಯಾದ ಸೃಜನಶೀಲತೆಗೆ ಜಡತನ ಮಾರಕವಾಗುತ್ತದೆ. ಸಾಹಿತ್ಯ ರೋಗಗ್ರಸ್ತವಾಗಲು ಕಾಮಾಲೆ ಕಣ್ಣಿನ ಸಾಹಿತಿಗಳೇ ಮುಖ್ಯ ಕಾರಣರಾಗತ್ತಾರೆ.

## ಕಲಾ ರೋಗ

ಬದುಕು ಸಮೃದ್ಧವಾದಾಗ, ಮನಸ್ಸು ನಿರಾಳವಾದಾಗ ಕಲೆ ಹುಟ್ಟುತ್ತದೆ. ರೋಗಗ್ರಸ್ತ ಸ್ಥಿತಿಯಲ್ಲಿ ಕಲೆ ಹೊರಹೊಮ್ಮುವುದಿಲ್ಲ. ಕಲಾಸೃಷ್ಟಿ, ಕಲಾಪರಿಕರಗಳ ಸಂರಕ್ಷಣೆ ಧಾರ್ಮಿಕಾಚರಣೆಗಳೊಡನೆ ನಡೆಯಿತು. ಅದಕ್ಕೂ ವಿಧಿವಿಧಾನಗಳು ರೂಢಿಯಾದವು. ಆಧುನಿಕ ಕಾಲಕ್ಕೂ ಅವು ಮುಂದುವರಿದವು. ವಿವಿಧ ಕಲಾಪ್ರಕಾರಗಳ ಸುತ್ತಲೂ ಜಾನಪದ ಆವರಣ ಕಟ್ಟಿಕೊಂಡಿದೆ. ಕಲೆ ರೋಗಗ್ರಸ್ತವಾದಾಗ ಸರ್ವವಿಧದಲ್ಲೂ ನಿವಾರಣೆಗೆ ಪ್ರಯತ್ನಿಸಿದೆ. ಏಕತಾನತೆಯ ಪರಿಹಾರ ನಿರಂತರವಾಗಿ ನಡೆಯಬೇಕಾಗುತ್ತದೆ.

ಜನಪದ ಜೀವನದ ಏರುಪೇರಿನಿಂದ, ಆರ್ಥಿಕ ಅಸ್ತವ್ಯಸ್ತತೆಯಿಂದ, ವಿದೇಶಿ ಕಲೆಗಳ ಪ್ರವೇಶದಿಂದ, ಸ್ವದೇಶಿ ಜನಪದ ರಂಗಭೂಮಿ ಕಲೆ, ಕರಕುಶಲ ಕಲೆ, ಪ್ರದರ್ಶನ ಕಲೆ, ಒಡವೆ ವಸ್ತ್ರ ವಸ್ತು ವಿನ್ಯಾಸ ಕಲೆ ಮೊದಲಾದವು ಕ್ಷೀಣಿಸಿ,

ರೋಗಗ್ರಸ್ತವಾಗುವುದುಂಟು. ಒಂದು ದೇಶದ ಜನಾಂಗ ಸಂಸ್ಕೃತಿಯ ಬಹುಮುಖ್ಯ ಅಂಗವಾದ ಕಲೆಗಳ ರೋಗಗ್ರಸ್ತ ಸ್ಥಿತಿಯ ನಿವಾರಣೆಯ ಹಿನ್ನೆಲೆಯಲ್ಲಿ ಜನಪದ ಅಂಶಗಳನ್ನು ವಿವರವಾಗಿ ಪರಿಶೀಲಿಸುವುದು ಅಗತ್ಯವಾಗಿದೆ. ಕಲಾಕ್ಷೇತ್ರ ಕುಟ್ಟು ಹಿಡಿಯಲು ಆಂಶಿಕವಾಗಿ ಕಲಾಕಾರರೂ ಬಹುತೇಕವಾಗಿ ಸಾಮಾಜಿಕರೂ ಕಾರಣರಾಗುತ್ತಾರೆ.

## ರಾಜಕೀಯ ರೋಗ

ಒಂದು ಕಾಲಕ್ಕೆ ಜನಸಾಮಾನ್ಯರು ಸರ್ವಸ್ವತಂತ್ರರಾಗಿದ್ದರು. ಯಾವ ಆಡಳಿತಕ್ಕೂ ಅವರು ಒಳಗಾಗಿರಲಿಲ್ಲ. ಅವರದೇ ಆಡಳಿತ, ಅವರದೇ ತೀರ್ಮಾನವಾಗಿತ್ತು. ಕಾಲಕ್ರಮದಲ್ಲಿ ವಿವಿಧ ರೀತಿಯ ಆಡಳಿತ ಪ್ರವೇಶಿಸಿತು. ಈಗ ಎಲ್ಲಾ ಹಂತದಲ್ಲೂ ರಾಜಕೀಯ ಪ್ರವೇಶಿಸಿದೆ. ರಾಜಕೀಯ ಆಡಳಿತ ವಿಧಾನಕ್ಕೆ ಶ್ರೀಸಾಮಾನ್ಯರು ಸ್ಪಂದಿಸಬೇಕಾಗುತ್ತದೆ. ಆದರೆ, ಅಲ್ಲೂ ಮೌಖಿಕ ಪರಂಪರೆಯ ಆಶಯಗಳಿರುತ್ತವೆ. ಆಧುನಿಕ ರಾಜಕೀಯ ರೋಗಗ್ರಸ್ತವಾದಾಗ ಜನಪದ ಮನಸ್ಸು, ಜೀವನ ವಿಧಾನ ಕಲಕುತ್ತದೆ. ಜನಪದ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ರಾಜಕೀಯಕ್ಕೆ ಅಗತ್ಯವಾಗಿದೆ.

ಸರ್ವಾಧಿಕಾರದಲ್ಲಾಗಲೀ ಪ್ರಜಾಪ್ರಭುತ್ವದಲ್ಲಾಗಲೀ ಜನವಿರೋಧಿಯಾದ ವೈಪರಿತ್ಯಗಳು ನಡೆಯುತ್ತಿರುತ್ತವೆ. ಜಗತ್ತಿನ ಸರ್ವಾಧಿಕಾರಿಗಳು ಮನುಕುಲದ ದ್ವೇಷಿಗಳಾಗಿ ವರ್ತಿಸಿರುವುದುಂಟು. ಸಂಪೂರ್ಣ ಬಹುಮತವಿದ್ದ ರಾಜಕೀಯ ಪಕ್ಷ ಪ್ರಜಾಪ್ರಭುತ್ವದಲ್ಲಿ ತುರ್ತುಪರಿಸ್ಥಿತಿ ಹೇರಿರುವುದುಂಟು. ಜನರಿಗೆ ಬೇಡವಾದರೂ ಯುದ್ಧಮಾಡುವುದು, ಮಾಡಿಸುವುದು; ಪ್ರತಿಭಟನೆಯಿದ್ದರೂ ಜನವಿರೋಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು; ಜನರ ಪ್ರಾಣಕ್ಕೆ ಬೆಲೆಯಿಲ್ಲದಂತೆ ಆಡಳಿತ ನಡೆಸುವುದು, ಪಕ್ಷದ ಸ್ವಾರ್ಥಕ್ಕೆ, ವಿದೇಶಗಳ ಬಲವಂತಕ್ಕೆ, ಜನಸಾಮಾನ್ಯರ ಬದುಕನ್ನು ನರಕಮಾಡುವುದು ಇವೆಲ್ಲಾ ರೋಗಗ್ರಸ್ತ ರಾಜಕೀಯ ಲಕ್ಷಣಗಳೇ ಆಗುತ್ತವೆ. ಇಂಥವುಗಳ ವಿಶ್ಲೇಷಣೆ ಈ ವಿಭಾಗದಲ್ಲಿ ನಡೆಯಬೇಕು; ಜಾನಪದ ವಿಧಾನದಲ್ಲಿ ಪರಿಹಾರಗಳನ್ನು ಕಂಡುಹಿಡಿಯಬೇಕು.

## ವೈಜ್ಞಾನಿಕ ರೋಗ

ಜಾನಪದ ದಿಗ್ಭ್ರಮೆಪಡುವಷ್ಟರ ಮಟ್ಟಿಗೆ ಬದುಕಿನ ಎಲ್ಲಾ ಕ್ಷೇತ್ರಕ್ಕೂ

ವಿಜ್ಞಾನ ಪ್ರವೇಶಿಸಿದೆ. ಇದರ ಜೊತೆಯಲ್ಲೇ ಜಾನಪದವೂ ಸಾಗುತ್ತಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಆಗಾಗ ವಿಜ್ಞಾನವೂ ಜಾನಪದಕ್ಕೆ ಋಣಿಯಾಗುತ್ತಿರುತ್ತದೆ. ರೋಗಗ್ರಸ್ತ ವೈಜ್ಞಾನಿಕ ವೈಪರೀತ್ಯಕ್ಕೆ ಜಾನಪದ ಬೆಳಕು ನೀಡುವುದೂ ಉಂಟು. ಒಮ್ಮೊಮ್ಮೆ ವೈಜ್ಞಾನಿಕ ಅನ್ವೇಷಣೆಯಿಂದಾಗುವ ಅನಾಹುತಗಳ ಗಂಭೀರ ಸಂದರ್ಭದಲ್ಲಿ ಜಾನಪದ ಜೀವನ ವಿಧಾನ ನೆನಪಾಗುತ್ತಿರುತ್ತದೆ. ವಿನಾಶಕ್ಕೆ ವಿಮುಖವಾದದ್ದು ಜಾನಪದವಲ್ಲವೆ?

## ಪರಿಸರ ರೋಗ

ಜನಪದವಾಗಲೀ ಶಿಷ್ಟಪದವಾಗಲೀ ಪರಿಸರದ ನಡುವೆಯೇ ಬದುಕಬೇಕಾಗಿದೆ. ಪರಿಸರ ರೋಗಗ್ರಸ್ತವಾದರೆ ಯಾವುದೂ ಉಳಿಯುವುದಿಲ್ಲ. ಆಧುನಿಕ ಪರಿಸರ ರೋಗಕ್ಕೆ ಜಾನಪದ ವಿಚಾರ ಮನನೀಯವಾಗಿದೆ. ಮನುಕುಲದ ದೀರ್ಘ ಇತಿಹಾಸದಲ್ಲಿ ಇದಕ್ಕೆ ಬೇಕಾದಷ್ಟು ಉದಾಹರಣೆಗಳು ದೊರೆಯುತ್ತವೆ. ಪರಿಸರ ರೋಗ ಜಾನಪದದ ಬಗೆಗೆ ಅರಿತಷ್ಟೂ ಉಪಯುಕ್ತವಾದ ಮಾಹಿತಿಗಳು ದೊರೆಯುತ್ತವೆ. ಜೀವಕೋಟಿ ವಾಸಿಸುವ ಈ ಭೂಪ್ರದೇಶ ಅಗ್ನಿಪ್ರಳಯ, ಜಲಪ್ರಳಗಳನ್ನು ಕಂಡಿದೆ. ಪ್ರಕೃತಿ ವಿಕೋಪಗಳಿಂದ, ಮನುಕುಲದ ಸ್ವಾರ್ಥದಿಂದ, ವೈಜ್ಞಾನಿಕ ಪ್ರಯೋಗಗಳಿಂದ, ಯುದ್ಧವಿನಾಶದಿಂದ ಪರಿಸರ ಕೆಡುತ್ತಿದೆ. ಮಲಿನವಾಗುತ್ತಿದೆ, ಉಸಿರಾಡಿ ಬದುಕುವುದು ಕಷ್ಟವಾಗುತ್ತಿದೆ. ಪರಿಸರ ರೋಗಗ್ರಸ್ತವಾದರೆ ಜೀವಕೋಟಿ ತಂತಾನೆ ರೋಗ ಪೀಡಿತವಾಗುತ್ತದೆ. ಇದನ್ನು ತಪ್ಪಿಸಬೇಕು. ಇದಕ್ಕಾಗಿ ಚಿಂತಿಸಬೇಕು.

ಬದುಕಿನ ಏನೆಲ್ಲ ವ್ಯವಸ್ಥೆಗಳ ರೋಗಗ್ರಸ್ತ ಸ್ಥಿತಿಗೆ ಜಾನಪದ ವಿಧಾನದಿಂದ ಪರಿಹಾರ ಕಂಡುಕೊಳ್ಳುವುದು ಸಾಧ್ಯವಿದೆ; ಅದರ ಅಗತ್ಯವೂ ಇದೆ. ಜಾನಪದದ ಆಚರಣೆಯಲ್ಲಿ, ನಂಬಿಕೆಯಲ್ಲಿ ಒಳ್ಳೆಯ ರೋಗನಿದಾನಗಳನ್ನು ಮುಂದುವರಿಸಬಹುದು; ಕೆಟ್ಟದ್ದನ್ನು ಕೈಬಿಡಬಹುದು.

ಕನ್ನಡ ಜಾನಪದದಲ್ಲಿ ಭರ್ಜರಿಯಾಗಿ ಕೆಲಸ ನಡೆದಿದೆ ; ನಡೆಯುತ್ತಿದೆ. ಭೌತಿಕ ಜಾನಪದ, ಅಭೌತಿಕ ಜಾನಪದ ಪರಿಕಲ್ಪನೆಯ ಹಿನ್ನೆಲೆಯಲ್ಲೂ ವೈಜ್ಞಾನಿಕವಾದ ಚಿಂತನ ಮಂಥನ ನಡೆಯುತ್ತಿದೆ. ಜನಪದ ವೈದ್ಯದಲ್ಲೂ ಅಷ್ಟೋ ಇಷ್ಟೋ ಕೆಲಸವಾಗಿದೆ. ಆದರೆ ರೋಗ ಜಾನಪದದ ಬಗೆಗೆ ಏನೇನೂ

ಕೆಲಸವಾಗಿಲ್ಲ. ಈ ಬಗೆಗೆ ಕ್ಷೇತ್ರಕಾರ್ಯ ನಡೆಸಿ, ಮಾಹಿತಿ ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಬಹುದೆಂಬ ಕಲ್ಪನೆಯೇ ಬಂದಂತಿಲ್ಲ. ನಮ್ಮಲ್ಲಿ ಜಗತ್ತಿನಲ್ಲಿರುವ ಎಲ್ಲಾ ಕಾಯಿಲೆಗಳೂ ಇವೆ; ನಮ್ಮದೇ ಆದ ರೋಗ ನಂಬಿಕೆಗಳಿವೆ. ರೋಗ ಜಾನಪದಕ್ಕೆ ಸಂಬಂಧಿಸಿದ ಮೌಖಿಕ ಪುರಾಣ, ಐತಿಹ್ಯ, ಆಚರಣೆ, ಗಾದೆ, ಒಗಟು, ಗೋಡೆ ಬರಹ, ಗುಪ್ತ ನಿರೂಪಣೆ, ಸಮವಯಸ್ಕರ ಸಂಭಾಷಣೆ, ಸಮಾನ ವ್ಯಸನಿಗಳ ಸಲ್ಲಾಪ, ಸಾಂಕೇತಿಕ ಚಿತ್ರ, ಸಂಜ್ಞೆ, ಬೈಗುಳ, ಕಥೆ, ವೈಜ್ಞಾನಿಕ ಅವೈಜ್ಞಾನಿಕ ಅನುಸರಣೆ, ಒಳಿತು ಕೆಡಕುಗಳ ಪ್ರಯೋಗ ಮೊದಲಾದವು ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿವೆ. ಜಾನಪದದ ಇತರ ಪ್ರಕಾರಗಳಂತೆ ರೋಗ ಜಾನಪದವೂ ಅಧ್ಯಯನಕ್ಕೆ ಅರ್ಹವಾಗಿದೆ.

ರೋಗ ಜಾನಪದಕ್ಕೆ ನಿರ್ದಿಷ್ಟ ಪ್ರದೇಶದ ಹವಾಮಾನ, ನೀರು, ನೆಲದ ಗುಣ, ಪ್ರಕೃತಿ ಪರಿಸರ, ಆ ಪ್ರದೇಶದ ಜನರ ಜೀವನ ವಿಧಾನ, ಆಚಾರ ವಿಚಾರ, ಆಚರಣೆ, ನಂಬಿಕೆ ಮುಂತಾದವುಗಳೆಲ್ಲ ಪೂರಕ ಸಾಮಗ್ರಿಗಳಾಗುತ್ತವೆ. ಆ ಎಲ್ಲದರ ಪರಿಜ್ಞಾನದಿಂದ ರೋಗ ಜಾನಪದದ ಹಿನ್ನೆಲೆ ಮುನ್ನೆಲೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಜಗತ್ತಿನ ಇತರ ಜನಾಂಗಗಳ ಭಾಷಾ ಸಾಹಿತ್ಯದಲ್ಲೂ ರೋಗ ಜಾನಪದ ಸಾಹಿತ್ಯ ಹೇಳಿಕೊಳ್ಳುವಷ್ಟಿಲ್ಲ. ಅಲ್ಲಿ ಒಂದೆರಡು ಕಾಯಿಲೆಗಳನ್ನು ಕುರಿತು ಜನಪದದ ಹಿನ್ನೆಲೆಯಲ್ಲಿ ಆಲೋಚಿಸಿರುವುದುಂಟು. ಉದಾಹರಣೆಗೆ : ಇಂಗ್ಲೀಷ್ ಭಾಷೆಯಲ್ಲಿ ರಿಚರ್ಡ್ ಎಂ. ಡಾರ್ಸನ್‌ರ 'ಹೃದ್ರೋಗ ಮತ್ತು ಜಾನಪದ' ಲೇಖನ. ಆದರೆ ಕನ್ನಡದಲ್ಲಿ ಸ್ಪಷ್ಟವಾಗಿ ಸೂಚಿಸುವಂತಹ ಲೇಖನಗಳಾಗಲೀ ಗ್ರಂಥಗಳಾಗಲೀ ಪ್ರಕಟವಾಗಿಲ್ಲ. ಕನ್ನಡ ಕಥಾ ಸಾಹಿತ್ಯದಲ್ಲಿ ಅಲ್ಲಲ್ಲಿ ರೋಗ ಜಾನಪದದ ಎಳೆಗಳು ತಲೆಹಾಕಿರುವುದುಂಟು. ಆದರೆ, ಅವು ಆಕಸ್ಮಿಕವಾಗಿ ಸುಳಿದಿರುವವೇ ಹೊರತು ರೋಗ ಜಾನಪದದ ಅಧ್ಯಯನದ ಹಿನ್ನೆಲೆಯಲ್ಲಿ ಪರಿಭಾಷಿಸಿದಂಥವಲ್ಲ. ಆದ್ದರಿಂದ ಇನ್ನು ಮುಂದಾದರೂ ಜಾನಪದ ವಿದ್ವಾಂಸರು ರೋಗ ಜಾನಪದವನ್ನು ಅಧ್ಯಯನದ ಶಿಸ್ತಾಗಿ ಕೈಗೆತ್ತಿಕೊಳ್ಳುವುದು ಅಗತ್ಯವಾಗಿದೆ. ಅಂಥ ಪ್ರಯತ್ನಕ್ಕೆ ಈ ಲೇಖನ ಸ್ವಲ್ಪವಾದರೂ ಪ್ರೇರಣೆ ನೀಡಬಹುದೆಂದು ಭಾವಿಸಲಾಗಿದೆ.

* * *

# ೨. ರೋಗ ಜಾನಪದ

ಡಾ। ಪಿ.ಕೆ. ನಾವಲಗಿ

**ರೋಗದ ಸ್ವರೂಪವನ್ನು ತಮ್ಮ ಪರಂಪರೆಯ ಜ್ಞಾನದಿಂದ ಅರಿತು ಸ್ಥಳೀಯ ಮೂಲಿಕಾ ಔಷಧಿಗಳಿಂದಲೇ ಗುಣಪಡಿಸಿಕೊಳ್ಳುತ್ತಾ ಬಂದಿರುವ ಜನಪದರ ಬದುಕು ಅಲಕ್ಷಿಸುವಂಥದ್ದಲ್ಲ ಎಂಬುದನ್ನು ಪ್ರಸ್ತುತ ಲೇಖನವು ಸಮರ್ಥಿಸುತ್ತದೆ.**

**–ಸಂ.**

ಜಾನಪದ ತುಂಬ ವ್ಯಾಪಕವಾದುದು; ಇಡೀ ಬ್ರಹ್ಮಾಂಡವನ್ನೇ ವ್ಯಾಪಿಸಿದುದು. ಇದು ಏನೆಲ್ಲವನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿದೆ. ಇದರ ಬಹುಮುಖ ತಲಸ್ಪರ್ಶ ಅಧ್ಯಯನ ಶಾಸ್ತ್ರೀಯ ನೆಲೆಯಲ್ಲಿ ತೀವ್ರವಾಗಿ ನಡೆಯಬೇಕಿದೆ. ಈಗ, ಕರ್ನಾಟಕದಲ್ಲಿ ಜಾನಪದದ ಶಾಸ್ತ್ರೀಯ ಅಧ್ಯಯನ ಅಲ್ಲಲ್ಲಿ ನಡೆದಿದೆ. ಆಕಾಶ ಜಾನಪದ, ಕಡಲು ಜಾನಪದ, ಖನಿಜ ಜಾನಪದ, ಕಛೇರಿ ಜಾನಪದ, ಮಹಿಳಾ ಜಾನಪದ, ಸಸ್ಯ ಜಾನಪದ, ಪ್ರಾಣಿ ಜಾನಪದ, ದೈವ ಜಾನಪದ, ಬುಡಕಟ್ಟು ಜಾನಪದಗಳ ಅಧ್ಯಯನ ನಡೆದಿರುವುದರಿಂದ ಜಾನಪದದ ಹೊಸ ಹೊಸ ಮುಖಗಳು ತೆರೆದುಕೊಳ್ಳುತ್ತಿವೆ. ಇದೀಗ 'ಕರ್ನಾಟಕ ಜಾನಪದ ಪರಿಷತ್ತು' ತನ್ನ ' ಜಾನಪದ ಜಗತ್ತು' ಪತ್ರಿಕೆಯ ಮೂಲಕ 'ರೋಗ ಜಾನಪದ' ವನ್ನು ಅಧ್ಯಯನಕ್ಕೆತ್ತಿಕೊಂಡಿರುವುದು, ಜಾನಪದದ ಇನ್ನೊಂದು ಮುಖವನ್ನು ಪರಿಚಯಿಸಿಕೊಟ್ಟಂತಾಗಿದೆ.

ದೈಹಿಕ ಮತ್ತು ಮಾನಸಿಕ ಅಸ್ವಸ್ಥತೆಯಿಂದ ನರಳುವವರಿಗೆ 'ರೋಗ' ಬಂದಿದೆಯೆಂದು ಸಾಮಾನ್ಯವಾಗಿ ಹೇಳಬಹುದು. ಈ ರೋಗ ಅಥವಾ ವ್ಯಾಧಿಯನ್ನು ಗ್ರಾಮೀಣರು ಕಾಯ್ಲಿ (ಕಾಯಿಲೆ) ಕಸಾರೆ, ಅಜಾರಿ, ಬ್ಯಾನಿ, ಜಡ್ಡು, ಆರಾಮಯಿಲ್ಲ ಇತ್ಯಾದಿ ಪರ್ಯಾಯ ಪದಗಳಿಂದ ಕರೆಯುತ್ತಾರೆ.

ರೋಗ, ಜೀವವಿರುವ ಯಾವುದೇ ವ್ಯಕ್ತಿ, ಪ್ರಾಣಿ, ಪಕ್ಷಿಗಳಿಗೆ – ಅವುಗಳ ದೇಹದಲ್ಲಿ ಯಾವುದೇ ರೋಗಕಾರಕ ವಸ್ತು ಅವಿತುಕೊಂಡಿದ್ದರೆ ರೋಗ ಬಂದೇ ಬರುತ್ತದೆ. ಅಥವಾ ಕಾಲಮಾನದ ವೈಪರೀತ್ಯದಿಂದಾಗಿ ಭೂಮಿಯ ಮೇಲಿನ ಜೀವರಾಶಿಗಳಿಗೆ ನಾನಾ ಬಗೆಯ ರೋಗಗಳು ತಗಲಬಹುದು –ಇದು ವೈಜ್ಞಾನಿಕ ತಿಳಿವಳಿಕೆ. 'ಉಗುಳಿ ಉಗುಳಿ ರೋಗ ಬಂತು' ಎನ್ನುವ ಗಾದೆ ಮಾತಿನಲ್ಲಿ

ಮನುಷ್ಯ ಉಗುಳುವಾಗ, ಬಾಯಿಯಲ್ಲಿ ರೋಗಾಣುಗಳು ಸೇರಿಕೊಂಡು ರೋಗ ಬರುತ್ತದೆಂದು ಸೂಚಿತವಾಗಿದೆ. ಅಂತೆಯೇ 'ಕೂಳ ಕುತ್ತ ನೀರ ಪಿತ್ತ' ಎಂಬ ಗಾದೆಯಿಂದ, ಅತಿಯಾದ ಆಹಾರ ಸೇವನೆಯಿಂದಲೂ ರೋಗ ಕಾಣಿಸಿಕೊಳ್ಳಬಹುದೆಂದು ನಂಬಲಾಗಿದೆ. ಹೀಗೆ ನಾನಾ ಕಾರಣಗಳಿಂದ ಅಂಟಿಕೊಳ್ಳುವ ರೋಗವನ್ನು 'ದೈಹಿಕ ರೋಗ' ವೆಂದು ಗುರುತಿಸಲಾಗಿದೆ. ಕೆಲವು ಸಲ ಮನುಷ್ಯನಿಗೆ ಚಿತ್ತವಿಕಾರದಿಂದ ಖಾಯಿಲೆ ಬರುವ ಸಾಧ್ಯತೆಯಿದೆ. ಇದು 'ಮಾನಸಿಕ ರೋಗ'. ಹುಚ್ಚು ಮುಂತಾದವು ಈ ವರ್ಗಕ್ಕೆ ಸೇರುತ್ತವೆ. 'ಮಾಟ' ದಿಂದ ಮಾನಸಿಕ ಖಾಯಿಲೆಗಳುಂಟಾಗುತ್ತವೆಂಬ ನಂಬಿಕೆ ಜನಪದರಲ್ಲಿದೆ. ನಾಯಿಗೂ ಹುಚ್ಚು ಹಿಡಿಯುತ್ತದೆ. ಅದಕ್ಕೆ ಬೇರೆ ಬೇರೆ ಕಾರಣಗಳನ್ನು ಹೇಳುತ್ತಾರೆ. ಈ ಹುಚ್ಚು ಹಿಡಿಯುವ ರೋಗಕ್ಕೆ 'ತಲೆ ಕೆಡುವುದು' ಎಂತಲೂ ಹಳ್ಳಿಗರಲ್ಲಿ ಕರೆವ ರೂಢಿ.

ದೈಹಿಕ ರೋಗಗಳಲ್ಲಿ ಕೆಲವು ಸಾಂಕ್ರಾಮಿಕ ರೋಗಗಳಿರುತ್ತವೆ. ಅಂದರೆ ಅವು ಒಬ್ಬರಿಂದ ಇನ್ನೊಬ್ಬರಿಗೆ ಬಹುಬೇಗನೆ ಹರಡಿಕೊಳ್ಳುತ್ತವೆ. ರೋಗಗ್ರಸ್ತ ಮನುಷ್ಯ ಮಾತನಾಡಿದಾಗ, ಕೆಮ್ಮಿದಾಗ, ಸೀನಿದಾಗ, ಉಗುಳಿದಾಗ, ಮಲಮೂತ್ರ ವಿಸರ್ಜನೆ ಮಾಡಿದಾಗ ಹೊರಬೀಳುವ ರೋಗಾಣುಗಳಿಂದ ರೋಗ ಒಬ್ಬರಿಂದೊಬ್ಬರಿಗೆ ಹರಡುವ ಸಂಭವ ಬಹಳಷ್ಟಿರುತ್ತದೆ. ರೋಗಿಯ ಮಲಿನವಾದ ಬಟ್ಟೆಬರೆಗಳನ್ನು ಧರಿಸುವುದರಿಂದ, ಮುಟ್ಟುವುದರಿಂದ, ರೋಗಿಯನ್ನು ಸ್ಪರ್ಶಿಸುವುದರಿಂದಲೂ ಅಂಟುರೋಗಗಳು ಹರಡುತ್ತವೆಂಬ ತಿಳಿವಳಿಕೆ ಜಾನಪದರಲ್ಲಿಯೂ ಇದೆ.

ಜೀವಿಯ ಸೃಷ್ಟಿಯೊಂದಿಗೆ ರೋಗವೂ ಕಾಣಿಸಿಕೊಂಡಿರಬೇಕು. ಅದರ ಬೆಳವಣಿಗೆಯೊಂದಿಗೆ ಅದೂ ಬೆಳೆದುಬಂದಿರಬೇಕು. ಮನುಷ್ಯನಿಗೆ ರೋಗದ ಕಲ್ಪನೆಯೇ ಇಲ್ಲದ ಸಂದರ್ಭದಲ್ಲಿ ರೋಗ ಕಾಣಿಸಿಕೊಂಡಿರುವ ಸಂಭವವಿದೆ. ಕಾಲಿಗೆ ಕಲ್ಲು ತಾಕಿದಾಗ, ಕುಡುಗೋಲು ಬಡಿದಾಗ, ಕಾಡುಪ್ರಾಣಿಗಳಿಂದ ಗಾಯವಾದಾಗ, ಮನುಷ್ಯ ಅಲ್ಲಿಯೇ ಇರುವ ಪುಂಡಿಗಿಡದ ಎಲೆ ಅಥವಾ ಹೂವನ್ನು ತಿಕ್ಕಿ ತನಗರಿವಿಲ್ಲದೆಯೇ ಗಾಯದ ಮೇಲೆ ಇಟ್ಟುಕೊಂಡಿರಬೇಕು. ಗುಣಮುಖನಾಗಿರಲೂ ಬೇಕು. ಹೀಗೆಯೇ, ಗಾಯಗಳಾದಾಗಲೆಲ್ಲ, ಗಿಡದ ಎಲೆ, ಹೂ, ಬಳ್ಳಿ, ಬೀಜ, ನಾರು, ಬೇರು, ಕಾಯಿ, ಹಣ್ಣು, ಹೀಚುಗಳನ್ನು

ಬಳಸಿಕೊಂಡು ಗುಣಮುಖನಾಗುತ್ತ ನಡೆದಿರಬೇಕು. ಕಾಲಾನಂತರದಲ್ಲಿ ಇದುವೇ ಕಾಡ ಮದ್ದಾಯಿತು. ಬರಬರುತ್ತ ತಲೆನೋವು, ಹೊಟ್ಟೆನೋವು ಮುಂತಾದವುಗಳಿಂದ ಬಳಲುತ್ತಿರುವಾಗ ಅರಿತೋ ಅರಿಯದೆಯೋ ಉಪ್ಪು, ಅಜವಾನ, ಎಣ್ಣೆ ಒಳ್ಳೆಣ್ಣೆ, ಬೆಳ್ಳುಳ್ಳಿ, ವಿಭೂತಿಗಳ ಸಹಾಯದಿಂದ ಗುಣ ಹೊಂದಿರಬೇಕು. ಇದನ್ನೇ 'ಮನೆಮದ್ದು' ಎಂದಂತೆ ತೋರುತ್ತದೆ. ಹೀಗೆಯೇ, ಜಾನಪದರು ತಮ್ಮ ನಿತ್ಯದ ಕ್ರಿಯೆಯಲ್ಲಿ ಅನುಭವದ ಮೂಲಕ ಮನುಷ್ಯನಿಗೆ, ಹಾಗೆಯೇ ಪ್ರಾಣಿಗಳಿಗೆ, ಸಸ್ಯಗಳಿಗೆ ತಗಲುವ ಅನೇಕ ರೋಗಗಳನ್ನು ಕಂಡುಕೊಂಡಿದ್ದಾರೆ. ರೋಗ ನಿರೋಧಕ ಶಕ್ತಿಯುಳ್ಳ ಅನೇಕ ಗಿಡಮೂಲಿಕೆ, ನಾರು ಬೇರು, ತೊಪ್ಪಲುಗಳನ್ನು ಗುರುತಿಸಿಕೊಂಡಿದ್ದಾರೆ. ಇವುಗಳ ಬಗೆಗೆ ಪೂಜ್ಯಭಾವನೆ ತಾಳಿ, ಪೂಜಿಸಿದ್ದಾರೆ ಕೂಡ. ಇದೇ ಸಂದರ್ಭದಲ್ಲಿ ಹಲವು ರೋಗಗಳಿಗೆ ಅದರಲ್ಲಿಯೂ ಹುಚ್ಚು ಮುಂತಾದ ಮಾನಸಿಕ ಕಾಯಿಲೆಗಳಿಗೆ ದೈವ-ದೆವ್ವಗಳ ಮುನಿಸೇ ಕಾರಣವೆಂದು, ಅವುಗಳನ್ನು ತೃಪ್ತಿಪಡಿಸಿದರೆ ರೋಗನಿವಾರಣೆಯಾಗುವದೆಂಬ ಕುರುಡು ನಂಬುಗೆಯಿಂದ ಅನೇಕ ಆಚರಣೆ-ರೂಢಿ ಸಂಪ್ರದಾಯಗಳನ್ನು ಪರಿಪಾಲಿಸಿಕೊಂಡು ಬಂದರು. ದೈಹಿಕ-ಮಾನಸಿಕ ಕಾಯಿಲೆಗಳೆರಡಕ್ಕೂ ಬೇವಿನ ಮರ, ಅರಳೀಮರ ಸುತ್ತತೊಡಗಿದರು; ತುಳಸಿ ಗಿಡ ಪೂಜಿಸತೊಡಗಿದರು; ಎಕ್ಕೆಯ ಗಿಡಕ್ಕೆ ಹಾಲೆರೆಯತೊಡಗಿದರು; ಸರ್ಪಹುಣ್ಣು, ತೊನ್ನು ರೋಗಗಳಂಥ ಚರ್ಮರೋಗಕ್ಕೆ ಹುತ್ತ ಪೂಜಿಸಿ ಹಾಲೆರೆಯತೊಡಗಿದರು. ಅಷ್ಟೇ ಏಕೆ; ಮಾಟ-ಮಂತ್ರ, ಯಂತ್ರ-ತಂತ್ರಗಳಿಗೂ ಮಾರುಹೋದರು. ತಮ್ಮ ದನಕರುಗಳಿಗೆ ಬರುವ ರೋಗರುಜಿನಗಳಿಗೂ ಇದೇ ಕ್ರಮವನ್ನು ತಪ್ಪದೇ ಅನುಸರಿಸಿದರು. ಜನ-ದನಗಳಿಗೆ ಬರುವ ರೋಗಗಳನ್ನು ಗುಣಪಡಿಸುವ ಸೇವೆ ದೇವರ ಸೇವೆಯೆಂದು ತಿಳಿದ ಹಳ್ಳಿಯ ಪಂಡಿತರು, ಉಚಿತ ಸೇವೆ ನೀಡುತ್ತ ಬಂದವರು. ಇಂಥ ಸೇವೆಯಿಂದ ಪುಣ್ಯ ಲಭಿಸುತ್ತದೆಂದು ನಂಬಿದ್ದರು. ಒಟ್ಟಿನಲ್ಲಿ ಮನುಷ್ಯ, ಪ್ರಾಣಿ ಇತ್ಯಾದಿಗಳಿಗೆ ಬರುವ ಎಲ್ಲ ಬಗೆಯ ರೋಗಗಳಿಗೆ ತಮ್ಮ ಅನುಭವದ ನೆಲೆಯಲ್ಲಿ ನಾನಾ ಬಗೆಯ ಔಷಧೋಪಚಾರ, ಮಾಟ-ಮಂತ್ರ ತಿಳಿದವರು ಜಾನಪದರು.

ಆದರೆ, ಇಂದು ವೈದ್ಯವಿಜ್ಞಾನ ಸಾಕಷ್ಟು ಬೆಳೆದಿರುವುದರಿಂದ, ರೋಗವನ್ನು ತಕ್ಷಣ ಗುರುತಿಸಿ, ಕಂಪನಿ ಔಷಧಿ-ಚಿಕಿತ್ಸೆಯ ಮೂಲಕ ಬೇಗನೆ ಗುಣಪಡಿಸುವ

ಎಲ್ಲ ಸಾಧ್ಯತೆಗಳಿರುವಾಗ, ಹಳೆಯ ಪದ್ಧತಿಯಿಂದ ರೋಗ ಕಂಡುಹಿಡಿದು, ಗಿಡಮೂಲಿಕೆಗಳ ಔಷಧೋಪಚಾರ, ಹಳೆಯ ಚಿಕಿತ್ಸಾವಿಧಾನದ ಮೂಲಕ ನಿಧಾನವಾಗಿ ರೋಗ ಗುಣಪಡಿಸುವುದು ಅಗತ್ಯವೆ? ಯಾರಾದರೂ ಕೇಳುವ ಪ್ರಶ್ನೆಯಿದು. ಅಲ್ಲದೆ ಬಹುಜನ ಈ ಪ್ರಾಚೀನ ವೈದ್ಯಪದ್ಧತಿಯನ್ನು ನಂಬುವುದಿಲ್ಲ. ಹೀಗಿದ್ದರೂ ಈ ರೋಗಗಳಿಗೆ ಈಗಲೂ ಪರಿಹಾರ ಗಿಡಮೂಲಿಕೆಗಳೇ, ದೇವರು ದಿಂಡಿರುಗಳೇ, ಮಂತ್ರತಂತ್ರಗಳೇ ಎಂದರೆ ನಂಬಲಾಗದ ಸತ್ಯ. ಇಂದಿನವರಿಗೆ, ಮುಂದಿನವರಿಗೆ, ಹಿಂದಿನವರು ಕಂಡುಕೊಂಡ ರೋಗಗಳು–ಅವುಗಳ ಗುಣಲಕ್ಷಣಗಳು – ರೋಗಗಳ ನಿವಾರಣೆಗೆ ಅವರು ಅರಿತ ಮದ್ದು, ಆಚರಿಸಿದ ರೀತಿ–ರಿವಾಜುಗಳನ್ನು ತಿಳಿಯಬೇಕು. ಅದು ಕಾರಣ, ಹಿಂದಿನದಿಲ್ಲದೆ ಮುಂದಿನದು ಹುಟ್ಟಲಾರದು. 'ಹಳೆ ಬೇರು ಹೊಸ ಚಿಗುರು' ಅಲ್ಲವೆ! ಇದಲ್ಲದೆ, ನಮ್ಮ ಪ್ರಾಚೀನ ಅಥವಾ ಜಾನಪದ ಸಂಸ್ಕೃತಿಯ ತಿಳಿವಳಿಕೆಯ ದೃಷ್ಟಿಯಿಂದಲೂ ಈ ಬಗೆಯ 'ರೋಗ ಜಾನಪದ' ಅಧ್ಯಯನ ತುಂಬ ಉಪಯುಕ್ತವಾದುದು. ಗ್ರಾಮೀಣ ನಿರಕ್ಷರಿಗಳು ತಮ್ಮ ನಿತ್ಯದ ಕ್ರಿಯೆಯಲ್ಲಿ ಆಗಾಗ್ಗೆ ರೋಗಗಳಿಂದ ನರಳಿದ ಅನುಭವವನ್ನು ಆ ರೋಗಗಳಿಗೆ ಪರಿಹಾರವನ್ನು ತಮ್ಮ ಬದುಕಿನ ಅನುಭವದ ನೆಲೆಯಿಂದಲೇ ಕಂಡುಕೊಂಡಿದ್ದುದು ಸುಳ್ಳಾಗುವುದಿಲ್ಲ; ಜತೆಗೆ ವ್ಯವಸಾಯದ ಮೂಲಕ ಬೆಳೆಯುವ ತಮ್ಮ ಬೆಳೆಗಳಿಗೆ ತಗಲುವ ರೋಗಗಳು– ಅವುಗಳ ನಿವಾರಣೆ; ಹಾಗೆಯೇ ವ್ಯವಸಾಯಕ್ಕೆ ಸಹಾಯಕವಾದ ತಮ್ಮ ಸಾಕುಪ್ರಾಣಿಗಳಿಗೆ ತಗಲುವ ರೋಗಗಳು–ಪರಿಹಾರ ಮುಂತಾದುವನ್ನೆಲ್ಲ ತಮ್ಮ ತಮ್ಮ ಅನುಭವ–ಪರಸ್ಪರರ ಅನುಭವಗಳ ವಿನಿಮಯದ ಮೂಲಕ ಅರಿತುಕೊಂಡಿದ್ದಾರೆ. ಅವರಲ್ಲಿಯೇ ಒಂದಿಷ್ಟು ಚುರುಕುಬುದ್ಧಿಯುಳ್ಳವರು, ಅನೇಕ ರೋಗಗಳು–ಅವುಗಳ ಪರಿಹಾರೋಪಾಯ ಎಲ್ಲವನ್ನೂ ನೆನಪಿನಲ್ಲಿಟ್ಟುಕೊಂಡು ರೋಗದ ಚಿಕಿತ್ಸೆಗೆ ತೊಡಗಿದರು. ಅವರೇ 'ನಾಟಿವೈದ್ಯರು'. ಒಟ್ಟಾರೆ, ಜಾನಪದರಿಗೆ ಅಂಟಿಕೊಂಡ ರೋಗರುಜಿನಗಳು – ಅವುಗಳ ಪರಿಹಾರ ಅವರೇ ಕಂಡುಕೊಂಡುದು, ಅವರೇ ನೀಡಿದ ಚಿಕಿತ್ಸಾ ಪದ್ಧತಿ ಮೊದಲಾದವನ್ನು 'ರೋಗ ಜಾನಪದ' ವೆಂದು ಸಾಮಾನ್ಯವಾಗಿ ಹೇಳಬಹುದು.

**ರೋಗದ ಮುನ್ನೆಚ್ಚರಿಕೆ** : ಯಾವ ಕಾಲದ ಮನುಷ್ಯನಾದರೂ ಆರೋಗ್ಯದಿಂದಿರಬೇಕಾಗುತ್ತದೆ. ಆದ್ದರಿಂದ ಆತ ಯಾವಾಗಲೂ ತನ್ನ ಆರೋಗ್ಯದ

ಕಡೆಗೆ ಗಮನ ಹರಿಸುತ್ತಿರುತ್ತಾನೆ. ಆದರೂ ಯಾವ ಯಾವುದೋ ಕಾರಣದಿಂದ ಆತನ ಆರೋಗ್ಯ ಹದಗೆಡುತ್ತದೆ, ನರಳಲಾರಂಭಿಸುತ್ತಾನೆ. ಒಡಲು ರೋಗದ ಆಗರವಾಗುತ್ತದೆ. ಆದರೂ ತನ್ನ ಆರೋಗ್ಯದ ಕಾಳಜಿಯನ್ನು ಮುಂದುವರಿಸುತ್ತಾನೆ; ರೋಗದಿಂದ ದೂರ ಇರಬಯಸುತ್ತಾನೆ. ಈ ಕಾರಣಕ್ಕಾಗಿ, ಅನುಭವಿಕರು ಹೇಳುವ ರೋಗದ ಕೆಲವು ಸಾಮಾನ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಲು ಮುಂದಾಗುತ್ತಾನೆ. ಕೆಲವನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು: ಉಗುರು ಕಡಿಯಬಾರದು; ಮನೆಯಲ್ಲಿ ಉಗುರು ಕತ್ತರಿಸಬಾರದು, ಕತ್ತಲಿನಲ್ಲಿ ಅಥವಾ ಸಂಜೆ ಹೊತ್ತಿಗೆ ಉಗುರು ಕತ್ತರಿಸಬಾರದು, ಉಗುರು ನೀರು ಚೆಲ್ಲಬಾರದು... ಇಂಥ ಅನೇಕ ನಂಬಿಕೆಗಳನ್ನು ಜಾನಪದರು ಹೇಳುತ್ತಾರೆ. ಏಕೆ ಎಂದು ಪ್ರಶ್ನಿಸಿದರೆ ಉತ್ತರ ಅವರು ಹೇಳಲಾರರು. ಪ್ರಾಯಶಃ ಗೊತ್ತಿರಲಿಕ್ಕಿಲ್ಲ. ಉಗುರಿನಲ್ಲಿ ವಿಷದ ಅಂಶ ಇರುತ್ತದೆ, ಅದು ಯಾವುದಾದರೂ ರೋಗಕ್ಕೆ ಕಾರಣವಾಗಬಹುದು; ಆದುದರಿಂದ ಉಗುರನ್ನು ಹಲ್ಲಿನಿಂದ ಕಡಿಯಬಾರದು. 'ಉಂಡ ಕೂಡಲೇ ಮಲಗಬಾರದು' (ಅಜೀರ್ಣವಾಗುತ್ತದೆ). ಸೆಗಣಿ-ಗಂಜಳದಿಂದ ಮನೆ ಸಾರಿಸಬೇಕು (ಸೊಳ್ಳೆ ನಾಶವಾಗಿ, ರೋಗ ಬರುವುದಿಲ್ಲ). 'ಕಳ್ಳಿ ಗಿಡವನ್ನು ಮನೆಯಲ್ಲಿ ತೂಗು ಹಾಕಬೇಕು' (ನೊರಜು ನಾಶವಾಗಿ ರೋಗ ಬರುವುದಿಲ್ಲ). ಹೊತ್ತು ಮುಳುಗಿದ ಕೂಡಲೇ ಶ್ರೀಗಂಧದ ಧೂಪಹಾಕಬೇಕು' (ರೋಗಾಣುಗಳು ನಾಶವಾಗುತ್ತವೆ). 'ಧೂಮಪಾನ ಮಾಡಬೇಕು', 'ಒಲೆಬೂದಿ ಅಥವಾ ಇದ್ದಿಲುವಿನಿಂದ ಹಲ್ಲು ಉಜ್ಜಬೇಕು' (ಕ್ರಿಮಿಗಳು ನಾಶವಾಗುತ್ತವೆ) ಮಂತ್ರ-ತಂತ್ರ ಯಂತ್ರ ಮಾಡಿಸಿಕೊಂಡಿರಬೇಕು (ರೋಗಿಗೆ ಮಾನಸಿಕ ನೆಮ್ಮದಿ). ದೇವರ ಅಂಗಾರ (ಬೂದಿ) ಹಣೆಗೆ ಹಚ್ಚಿಕೊಳ್ಳಬೇಕು, ದೇವರ ತೀರ್ಥ ಕುಡಿಯಬೇಕು (ಇದೂ ರೋಗಿಯ ಮಾನಸಿಕ ನೆಮ್ಮದಿಗಾಗಿ). 'ಹುಟ್ಟಿದ ದಿನ ತಲೆ ಬೋಳಿಸಿಕೊಳ್ಳಬಾರದು'. 'ಹುಟ್ಟಿದ ದಿನ ಹೊಸ ಬಟ್ಟೆ ಧರಿಸಬಾರದು'. ಧರಿಸುವುದೇ ಆದರೆ, ದನಗಳ ಮೈಮೇಲೆ ಹಾಕಿ ಧರಿಸಬೇಕು (ನಮಗೆ ಬರುವ ರೋಗ-ರುಜಿನ ಅವುಗಳಿಗೆ ಬರಲಿ ಎಂಬ ಭಾವನೆ). ಹೇಸಿಗೆಯ ಮೇಲೆ ಉಗುಳಬಾರದು (ಬೊಕ್ಕೆ ಏಳುತ್ತವೆಂಬ ನಂಬಿಕೆ). 'ದಾಟು ಮಾಡಬಾರದು' (ರೋಗ ಬರುತ್ತದೆ ಎಂಬ ನಂಬಿಕೆ), ಕಸಬರಿಗೆಯಿಂದ ಹೊಡೆಯಬಾರದು (ಸೊರಗುತ್ತಾರೆಂಬ ನಂಬಿಕೆ), ಕಸಬರಿಗೆ ತುಳಿಯಬಾರದು. 'ಹಲ್ಲಿ ಮೈಮೇಲೆ ಬಿದ್ದರೆ ಹಸಿರು ಗಿಡ ನೋಡಬೇಕು' (ಇಲ್ಲವಾದರೆ ಸಾಯುತ್ತಾರೆಂಬ ನಂಬಿಕೆ). 'ಊದು ಬತ್ತಿ

ಹೊತ್ತಿಸಿಕೊಂಡು ಕೈಯಲ್ಲಿ ಹಿಡಿದುಕೊಂಡು ತಿರುಗಾಡಬಾರದು' (ಮೂತ್ರ ಬಾಧೆ ಉಂಟಾಗುತ್ತದೆಂಬ ನಂಬಿಕೆ) ಇತ್ಯಾದಿ ....ಹಲವಾರು ನಂಬಿಕೆಗಳನ್ನು ರೋಗ ಬಾರದಿರಲೆಂದು ಮುನ್ನೆಚ್ಚರಿಕೆ ಕ್ರಮವಾಗಿ ಜನಪದರು ಆಚರಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಕೆಲವು ವೈಜ್ಞಾನಿಕ ನಂಬಿಕೆಗಳಿವೆ; ಬಹಳಷ್ಟು ಮೂಢನಂಬಿಕೆಗಳಿವೆ. ಆದರೂ ಜಾನಪದ ಜನಾಂಗ ಶ್ರದ್ಧೆಯಿಂದ ಆಚರಿಸುತ್ತ ಬಂದಿದೆ.

**ರೋಗರುಜಿನ : ನಂಬಿಕೆ : ಸಂಪ್ರದಾಯ ಆಚರಣೆ**

ಎಷ್ಟೇ ಎಚ್ಚರಿಕೆಯಿಂದಿದ್ದರೂ ಬೇರೆ ಬೇರೆ ಕಾರಣಗಳಿಂದ ರೋಗರುಜಿನಗಳು ಬರುತ್ತಲೇ ಇರುತ್ತವೆ. ಇಂಥ ಸಂದರ್ಭದಲ್ಲಿ ಜನಪದರು, ರೋಗರುಜಿನಗಳು ದೇವರ ಕೋಪದಿಂದ, ದೇವರು ಕೊಟ್ಟ ಶಾಪದಿಂದ ಬರುತ್ತವೆಂದು ಬಲವಾಗಿ ನಂಬಿದರು. ಇದು ಪಾರಂಪರಿಕವಾದ ಸಾಮಾನ್ಯ ನಂಬಿಕೆ. ಹಿಂದಿನ ಜನ್ಮದಲ್ಲಿ ಪಾಪಮಾಡಿದವ ಈ ಜನ್ಮದಲ್ಲಿ ಪ್ರಾಯಶ್ಚಿತ್ತವಾಗಿ ರೋಗದಿಂದ ನರಳುವನು. ತಂದೆ ತಾಯಿ ತಪ್ಪು ಮಾಡಿದ್ದರೆ, ಮಕ್ಕಳಿಗೆ ರೋಗ ಬರುತ್ತದೆ ಎಂದೆಲ್ಲ ನಂಬಿಕೆ. ಒಂದೊಂದು ರೋಗಕ್ಕೆ ಒಂದೊಂದು ದೇವರು. ಆಯಾ ರೋಗಗಳಿಂದಲೇ ಆಯಾ ದೇವತೆಗಳನ್ನು ಜಾನಪದರು ಕರೆದುದು ಗಮನಾರ್ಹ. ಪ್ಲೇಗಿಗೆ ಪ್ಲೇಗಮ್ಮ, ಕಾಲರಾ ಕಾಲರಮ್ಮ, ದಡಾರ ದಡಾರಮ್ಮ, ಸಿಡುಬಿಗೆ ಸಿಡುಬಮ್ಮ, ಮಾರಿಬೇನೆಗೆ ಮಾರಮ್ಮ ಅಥವಾ ಮರುಗಮ್ಮ, ಹೀಗೆ ರೋಗಗಳಿಗೆ ದೇವತೆಗಳೇ ಕಾರಣ. ಅಷ್ಟೇ ಅಲ್ಲ, ದೆವ್ವ, ಭೂತ, ಪಿಶಾಚಿಗಳೂ ರೋಗಗಳಿಗೆ ಕಾರಣವೆಂದು ಪ್ರಾಚೀನ ಮಾನವ ನಂಬಿದ್ದ. ವೈದ್ಯಕೀಯ ವಿಜ್ಞಾನ ಬೆಳೆಯುವ ಪೂರ್ವದಲ್ಲಿಯಂತೂ ಎಲ್ಲರೂ ಇದನ್ನು ನಂಬಿದ್ದರು. ಈಗಲೂ ನಂಬುವವರು ಇಲ್ಲವೇ ಇಲ್ಲ ಎನ್ನುವಂತಿಲ್ಲ. 'ಸಂಕಟ ಬಂದಾಗ ವೆಂಕಟರಮಣ'; 'ಕಷ್ಟಬಂದಾಗ ಹುಲ್ಲು ಕಡ್ಡಿಯೂ ದೇವರಾಗುತ್ತದೆ' – ಎನ್ನುವ ಗಾದೆಗಳಲ್ಲಿ ಆ ನಂಬಿಕೆಯೇ ಸೂಚಿತವಾಗಿದೆ. ಸತ್ತವನ ಆತ್ಮ ದೆವ್ವ-ಭೂತವಾಗಿ ಕಾಡುವುದಲ್ಲದೆ, ರೋಗಪೀಡೆಗಳನ್ನು ಹರಡುವುದೆಂಬ ನಂಬಿಕೆ ಈಗಲೂ ಇದೆ. ರೋಗರುಜಿನಗಳಿಗೆ ದೈವಶಕ್ತಿ ಮತ್ತು ಭೂತಶಕ್ತಿಯೇ ಕಾರಣವೆಂದು ಅಂದು ಜನಪದರು ಬಲವಾಗಿ ನಂಬಿದ್ದರಲ್ಲಿ ಆಶ್ಚರ್ಯವೇ ಇಲ್ಲ. ಈ ದೈವ-ದೆವ್ವಗಳ ಕೋಪ ನಿವಾರಿಸಲು, ಅವನ್ನು ಸಂತೃಪ್ತಿಪಡಿಸಲು, ಅವುಗಳ ಮೂರ್ತಿಮಾಡಿ ಪ್ರತಿಷ್ಠಾಪಿಸಿದ, ಅನೇಕ ಆಚರಣೆಗಳ ಮೂಲಕ ಆರಾಧಿಸತೊಡಗಿದ. ರೋಗನಿವಾರಣೆಗೆ ಹರಕೆ

ಹೊರಲಾರಂಭಿಸಿದ. ಹರಕೆ ಈಡೇರಿದರೆ, ಬೇಡಿಕೊಂಡಂತೆ ದೇವರಮೂರ್ತಿ, ಹಣ, ಧನ, ಕಾಳುಕಡಿ, ನೀಡತೊಡಗಿದ, ಪೂಜಾರಿ ಸ್ವೀಕರಿಸತೊಡಗಿದ. ಮಾಟ-ತಂತ್ರ-ಮಂತ್ರಗಳೂ ಸುರುವಾದವು. ಮಕ್ಕಳಿಗೆ ಗೊಬ್ಬರ, ಗಣಜಲಿ, ಮೈಲಿ ಎದ್ದರೆ ಈ ಗ್ರಾಮದೇವತೆಗಳಿಗೆ ದೀಪಹಚ್ಚಿ, ಅನ್ನಮೊಸರು, ಅಕ್ಕಿಬೇಳೆಯ ಎಡೆಕೊಡುವ ಸಂಪ್ರದಾಯಾಚರಣೆ ಪ್ರಾರಂಭವಾಯಿತು. ಸಾಂಕ್ರಾಮಿಕ ಜಾಡ್ಯಗಳು ಅಂಟಿಕೊಂಡರೆ, ದೇವಿಗೆ ಅಥವಾ ಅಮ್ಮನಿಗೆ 'ಮರಿ-ಹರಿ' (ಕುರಿಮರಿಯನ್ನು ಹಲ್ಲಿನಿಂದ ಹರಿಯುವುದು), ಹೋತದ ಬಲಿ, ಕೋಣಬಲಿಯಂಥ ಕ್ರೂರ ಆಚರಣೆಗಳನ್ನು ಅವಳ ಜಾತ್ರೆಯಲ್ಲಿ ಆಚರಿಸುವುದು ಒಂದು ಪರಂಪರೆಯಾಗಿಯೇ ಬೆಳೆದುಬಂದಿತು. ಗ್ರಾಮದೇವತೆ 'ದ್ಯಾಮವ್ವ'ನಿಗೆ ಪೂಜೆ ಸಲ್ಲಿಸಿ, ಮೊಸರನ್ನ, ಬಿಸಿನೀರು ನೈವೇದ್ಯ ಮಾಡಿದರೆ, ಮಾರಿ ರೋಗದಿಂದ ಕಾಪಾಡುವಳೆಂದು ಗೋಕಾಕ ಪರಿಸರದ ಜನಗಳ ನಂಬಿಕೆ; ದೇವಿಯ ಮುಂದೆ ಉರುಳು ಸೇವೆ, ದೀಡ ನಮಸ್ಕಾರ ಹಾಕಿದರೆ ರೋಗನಿವಾರಣೆಯಾಗುತ್ತದೆಂಬ ಪಾರಂಪರಿಕ ನಂಬಿಕೆಯೂ ಇದೆ. ಈ ವಿಚಿತ್ರ ನಂಬಿಕೆ-ಸಂಪ್ರದಾಯ - ಆಚರಣೆಗಳನ್ನು ಮಾಡುವ ಸಂದರ್ಭದಲ್ಲಿಯೇ ಗಿಡಮೂಲಿಕೆಗಳ ಮೂಲಕ ರೋಗ ಗುಣಪಡಿಸಿಕೊಳ್ಳಲು, ಹಳ್ಳಿಯ ವೈದ್ಯರಲ್ಲಿಗೆ ಜನ ಹೋಗುತ್ತಿದ್ದುದು ಗಮನಾರ್ಹ. ರೋಗ ವಾಸಿಯಾದರೆ ಸಾಕೆಂಬ ಕಾರಣದಿಂದ ಜನಪದ ಜನ ದೈವ-ದೆವ್ವ; ಮಂತ್ರ-ಮಾಟ ಮತ್ತು ಗಿಡಮೂಲಿಕೆಯ ಔಷಧಿಯನ್ನು ನಂಬಿದರು. ಎಲ್ಲವನ್ನೂ ಶ್ರದ್ಧೆಯಿಂದ; ಭಯ-ಭಕ್ತಿಯಿಂದ ಮಾಡಿ, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಹೆಣಗುತ್ತಿದ್ದುದು ಗಮನೀಯ ವಿಚಾರವೇ.

## ಜನರ ರೋಗಗಳು - ರೋಗ ನಿವಾರಣೆ

ಮನುಷ್ಯ ಬದುಕುವುದಕ್ಕಾಗಿ ಎಷ್ಟು ಬೇಕು ಅಷ್ಟನ್ನೇ ತಿನ್ನಬೇಕು. ಊಟದ ಅರ್ಥ (ಊಟ ಬಲ್ಲವನಿಗೆ ರೋಗವಿಲ್ಲ) ತಿಳಿಯದೆ, 'ತಿನ್ನುವುದಕ್ಕಾಗಿ ಬದುಕು' ಎಂದು ತಿಂದೇ ತಿಂದರೆ ಒಡಲು ರೋಗದ ಆಗರವಾಗದೆ ಇನ್ನೇನಾದೀತು! ರೋಗದ ಬಾಧೆಯಿಂಡ ನರಳುತ್ತಾನೆ ; ಜ್ವರದ ತಾಪದಿಂದ ಪರಿತಪಿಸುತ್ತಾನೆ; ಬಾಯಿ ಕಹಿಯಾಗುತ್ತದೆ; ಸಕ್ಕರೆ ಕೂಡ ರುಚಿಸದು ; ಏನನ್ನೂ ತಿನ್ನಲಾಗದು, ಸೇವಿಸಲಾಗದು. ಇದರಿಂದ ನಿಶ್ಯಕ್ತಿಯಾಗುವುದು. ನಿಶ್ಯಕ್ತಿ ಇನ್ನೊಂದು ರೋಗಕ್ಕೆ ಅವಕಾಶ ಕೊಡುತ್ತದೆ. ಹಾಗೆಯೇ ನೂರೆಂಟು ರೋಗಗಳು ಕಾಡಲು

ಸುರುವಾಗುತ್ತವೆ. ಶೀತ, ಪಿತ್ಥ, ವಾತ, ವಾಂತಿ, ಭೇದಿ, ಜ್ವರ, ಕುರು, ಕಣ್ಬೇನೆ, ತದ್ದು, ತುರಿ, ಕೆಮ್ಮು, ತಲೆಬೇನೆ ಮುಂತಾದ ಸಾಮಾನ್ಯ ರೋಗಗಳು; ಕ್ಷಯ, ತೊನ್ನು, ಅರ್ಧಾಂಗವಾಯು, ಕಾಮಾಲೆ, ಕಾಲರಾ, ಪ್ಲೇಗು, ಸಿಡುಬು, ಗಂಡಮಾಲೆ, ಸಕ್ಕರೆ ರೋಗ ಮುಂತಾದ ಭಯಂಕರ ರೋಗಗಳು ವಿವಿಧ ಕಾರಣಗಳಿಂದ ಮನುಷ್ಯನ ದೇಹಕ್ಕೆ ಅಂಟಿಕೊಂಡು, ಅವನನ್ನು ನಾಶಪಡಿಸಲು ಹವಣಿಸುತ್ತಿರುತ್ತವೆ. ಇವುಗಳ ಉಪಶಮನಕ್ಕಾಗಿ ತನ್ನ ಪರಿಸರದಲ್ಲಿಯ ಗಿಡಮೂಲಿಕೌಷಧಿಗಳಿಗೆ, ಮಂತ್ರ–ತಂತ್ರಗಳಿಗೆ, ದೇವರು–ದಿಂಡಿರು, ಭೂತ–ಪಿಶಾಚಿಗಳಿಗೆ ಜನಪದರು ಮೊರೆಹೊಕ್ಕುದು ಚಾರಿತ್ರಿಕ ಸತ್ಯ.

ಮನುಷ್ಯನಿಗೆ ಬರುವ ರೋಗಗಳು, ಅವುಗಳ ನಿವಾರಣೆಗೆ ಜನಪದರು ಬಳಸುವ ಮದ್ದು, ಕೈಗೊಂಡ ಸಂಪ್ರದಾಯಾಚರಣೆಗಳು – ಇತ್ಯಾದಿ ಕುರಿತು ವಿಷಯ ಸಂಗ್ರಹಿಸಿ, ವಿಶ್ಲೇಷಿಸಲಾಗಿದೆ.

**ಕೆಮ್ಮು** : ಗಂಟಲಿನ ತೊಂದರೆಯಿಂದ ಕೆಮ್ಮು ಉಂಟಾಗುತ್ತದೆ. ಕೆಮ್ಮಿನಲ್ಲಿ ಗುಸುಗುಸು ಕೆಮ್ಮು (ಸಾಮಾನ್ಯ ಕೆಮ್ಮು), ಗೂರಲು ಕೆಮ್ಮು (ನಾಯಿ ಕೆಮ್ಮು) ಮತ್ತು ಕಾಡಿಗೆಮ್ಮು (ಕಫ ತುಂಬಿದ ಕೆಮ್ಮು) ಎಂಬ ಮೂರು ವಿಧಗಳು. ನಾಯಿಕೆಮ್ಮು ನಾಯಿಯ ಉಚ್ಚೆ ಕುಡಿದರೆ ವಾಸಿಯಾಗುವದೆಂಬ ನಂಬಿಕೆ. ಕಿರುನಾಲಿಗೆಯಾಗಿ ಗುಸುಗುಸು ಕೆಮ್ಮು ಸುರುವಾದರೆ ಕಟಕರೊಟ್ಟಿ, ಬೆಳ್ಳುಳ್ಳಿ ತಿನ್ನಬೇಕು. ಮಕ್ಕಳು ಕಫದಿಂದ ಹೆಚ್ಚಾಗಿ ಕೆಮ್ಮುತ್ತಾರೆ. ಒಣ ಕೆಮ್ಮು ಇದ್ದರೆ ಚುರಮುರಿ, ಬೆಳ್ಳುಳ್ಳಿ ತಿಂದು ನೀರು ಕುಡಿಯದೆ ಮಲಗಿಕೊಳ್ಳಬೇಕು. ಜೇನುತುಪ್ಪ ಚೀಪಬೇಕು. ಒಣಶುಂಠಿ ಬಾಯಿಯಲ್ಲಿ ಹಿಡಿದುಕೊಂಡು ಮಲಗಬೇಕು. ಅಳಲಿಕಾಯಿಯನ್ನು ಬಾಯಿಯಲ್ಲಿಟ್ಟುಕೊಂಡು ಮಲಗಿಕೊಳ್ಳಬೇಕು. ವೀಳ್ಯದೆಲೆ ಮತ್ತು ಲವಂಗ ತಿನ್ನಬೇಕು. ತುಳಸಿ ಎಲೆ ತಿನ್ನಬೇಕು ಅಥವಾ ತುಳಸಿ ಕಷಾಯ ಕುಡಿಯಬೇಕು. ಯಾವುದೇ ಕೆಮ್ಮು ಗುಣವಾಗುತ್ತದೆ.

**ಗಂಟಲು ಬೇನೆ** : ಇದನ್ನು 'ಗಂಟಲು ಮಾರಿ' ಎಂತಲೂ ಕರೆಯುವರು. ಏನಾದರೂ ತಿನ್ನುವಾಗ, ಉಗುಳು ನುಂಗುವಾಗ ಕೂಡ ಗಂಟಲು ನೋಯಿಸುವುದು. ಈ ಬೇನೆಯಲ್ಲಿ ಗಂಟಲು ಚರ್ಮದ ಕೆಳಗೆ ಬಾವು ಬರಬಹುದು; ಸಣ್ಣ ಕರುಳಿಗೆ ನೋವು ಆಗಬಹುದು. ಬಿಸಿನೀರಿನಲ್ಲಿ ಉಪ್ಪುಹಾಕಿ ಕರಗಿಸಿ, ಗುಳುಗುಳು ಮುಕ್ಕಳಿಸಬೇಕು. ಹೊಲಸಿನ ಮೇಲೆ ಮೂರು ಬಾರಿ ಉಗುಳಬೇಕೆಂಬ

ನಂಬಿಕೆಯೂ ಇದೆ. ನಿಂಬೆರಸವನ್ನು ಕುಡಿಯಬೇಕು. ಗಂಟಲು ಬೇನೆ ನಿವಾರಣೆಯಾಗುತ್ತದೆ.

**ಹಲ್ಲು ಬೇನೆ :** ಹಲ್ಲು ಹುಳುಕಾಗಿದ್ದರೆ, ಇನ್ನೊಂದು ಹಲ್ಲು ಹುಟ್ಟುತ್ತಿದ್ದರೆ (ಅಕಲದ ಹಲ್ಲು), ಹಲ್ಲುನೋವು ಕಾಣಿಸಿಕೊಳ್ಳುತ್ತದೆ; ತುಸು ತುಸು ಹೊಡೆಸುತ್ತದೆ; ಬಾವೂ ಕೂಡ ಬರಬಹುದು. ಹೊಡೆತ ಹೆಚ್ಚಾದರೆ ಜ್ವರವೂ ಬರಬಹುದು. ಹಲ್ಲಿನಲ್ಲಿ ಉಪ್ಪಿನ ಹರಳು ಹಿಡಿಯಬೇಕು. ನೋಯಿಸುವ ಹಲ್ಲಿನ ಮೇಲೆ ಲವಂಗ ಹಿಡಿಯಬೇಕು.

**ಕಣ್ಣು ಬೇನೆ :** ಕಾಪಿನಿಂದ ಬರುತ್ತದೆ. ಮುತ್ತುಗದ ಕೆಂಪು ಹೂವನ್ನು ಒಂದೇ ಸಮನೆ ನೋಡಿದರೆ ಕಣ್ಣುಬೇನೆ ಬರುತ್ತದೆಂಬ ನಂಬಿಕೆ. ಸರಿಯಾಗಿ ನಿದ್ರೆ ಮಾಡದೇ ಇದ್ದರೆ ಕಣ್ಣಿನಲ್ಲಿ ಪಿಸರೆ ತುಂಬಿಕೊಳ್ಳುತ್ತದೆ. ಇದನ್ನು 'ಕಣ್ಣಮೆತ್ತು' ಎಂತಲೂ ಕರೆಯುವರು. ಕಣ್ಣಮೆತ್ತಿನಿಂದ ಕಣ್ಣು ಸರಿಯಾಗಿ ತೆರೆಯಲು ತೊಂದರೆಯಾಗುತ್ತದೆ. ಪಿಸರೆಯಿಂದಲೂ ಕಣ್ಣುಬೇನೆ ಬರುತ್ತದೆ. ಈ ಬೇನೆಯಿಂದ ಕಣ್ಣು ಕೆಂಪಾಗುತ್ತದೆ. ಬಿಸಿಲಿಗೆ ಕುಕ್ಕುತ್ತವೆ, ತೆರೆಯಲಾರದಷ್ಟು ಕಣ್ಣು ನೋಯಿಸುತ್ತವೆ. ಕಣ್ಣಿನಲ್ಲಿ ಹರಳು ಓಡಾಡಿದಂತಾಗಿ, ಧಾರಾಕಾರವಾಗಿ ನೀರು ಬರುತ್ತದೆ. ಗೊಳಗೊಳಕಿಯ ಹಾಲನ್ನು ಕಣ್ಣಿಗೆ ಮುಂಜಾನೆ-ಸಂಜೆ ನಾಲ್ಕಾರು ದಿನ ಹಾಕಬೇಕು. ತಾಯಿಯ ಮೊಲೆಹಾಲನ್ನು ಕಣ್ಣುಗಳಿಗೆ ಅರಳಿಯ ಮೂಲಕ ಹಾಕಬೇಕು. ಕಣ್ಣಿನ ಬೇನೆ ಗುಣವಾಗುತ್ತದೆ.

**ಕಣ್ಣುಚಿಟ್ಲೆ :** ಕಣ್ಣಿನ ಕೆಳರೆಪ್ಪೆ (ಹೆಚ್ಚಾಗಿ) ಗೆ ಚಿಕ್ಕ ಚಿಕ್ಕ ಗುಳ್ಳೆಗಳಾಗುವುದಕ್ಕೆ 'ಕಣ್ಣಚಿಟ್ಲೆ' ಎನ್ನುವರು. ಇದು ತುರಿಸುತ್ತದೆ. ಹಾಳುಹೆಂಚು ತೇಯ್ದು ನೀರಿನಲ್ಲಿ ಕಲಸಿ ಹಚ್ಚಬೇಕು. ಎದ್ದಕೂಡಲೇ ಮಾತನಾಡದೆ ಉಗುಳು ಹಚ್ಚಿಕೊಳ್ಳಬೇಕು. 'ಕಣ್ಣಚಟ್ಲೆ' ಕರಗುತ್ತದೆ.

**ಉಗುರುಸುತ್ತು :** ಉಗುರಿನ ಸುತ್ತ ಉಂಟಾದ ನೋವನ್ನು 'ಉಗುರುಸುತ್ತು' ಎನ್ನುವರು. ಲಿಂಬೆಹಣ್ಣಿಗೆ ತೂತುಮಾಡಿ ಉಗುರುಸುತ್ತಾದ ಬೆರಳಿಗೆ ಸಿಕ್ಕಿಸಬೇಕು, ಉಗುರುಸುತ್ತು ಕಡಿಮೆಯಾಗುತ್ತದೆ.

**ತೇಗಣಿ :** ತೇಗಣಿ ಹತ್ತಿದರೆ ತಲೆಗೂದಲು ಉದುರತ್ತವೆ. ತೇಗಣಿ ಹುಳುವಿನಿಂದಾದ ಈ ತೊಂದರೆಗೆ 'ತೇಗಣಿ' ಎಂದೇ ಕರೆಯುವರು. ತೇಗಣಿ-

ಇದೊಂದು ಹುಳು, ತಲೆಯಲ್ಲಿನ ಕೂದಲನ್ನು ತಿನ್ನುವುದೆಂಬ ನಂಬಿಕೆ. ಅದು ತಿಂದಲ್ಲೆಲ್ಲ ಕೂದಲಿಲ್ಲದೆ ತಲೆ ನೋಡುವುದಕ್ಕೂ ಅಸಹ್ಯ. ಬೆಂಡಿ ಕಾಯಿಯೊಳಗಿನ ಹುಳವನ್ನು ತಲೆಗೆಹಾಕಿ ತಿಕ್ಕಿದರೆ ತೇಗಣಿ ಸತ್ತು ಕೂದಲು ಉದುರುವುದು ನಿಲ್ಲುತ್ತದೆಂಬುದು ಜನಪದರ ನಂಬಿಕೆ.

**ತಲೆಬೇನೆ** : ಅತಿಯಾದ ಚಳಿಯಿಂದ, ಅತಿಯಾದ ಬಿಸಿಲಿನ ಬೇಗೆಯಿಂದ ಮತ್ತು ತಲೆಗೆ ತುಂಬ ಕೆಲಸ ಕೊಡುವುದರಿಂದ ತಲೆಬೇನೆ ಏಳುತ್ತದೆ. ಇದನ್ನು 'ತಲೆಶೂಲೆ' ಎಂತಲೂ ಕರೆಯುವರು. ತಲೆಬೇನೆ ಎಂದರೆ – ಹಣೆ ಪೂರ್ತಿಯಾಗಿ ಒಂದೇ ಸಮನೆ ಹೊಡಿಸುವುದು. ಆಗ ಹಣೆಯ ನರಗಳು ಚಿಣಿಚಿಣಿ ಹಾರುವುವು. ಸೂಜಿಯಿಂದ ಚುಚ್ಚಿದಷ್ಟು ಹಣೆ ನೋಯುವುದು. ಅರ್ಧ ಹಣೆ ನೋಯಿಸಿದರೆ 'ಅರ್ದೇಲಿ' ಅಥವಾ 'ಅರ್ಧ ತಲೆಶೂಲಿ' ಎನ್ನುವರು. ಅರ್ದೇಲಿಗೆ ಬೆಳಿಗ್ಗೆ, ಹಳಸಲೆ ಬೆಲ್ಲ ತಿಂದು ನೀರು ಕುಡಿಯಬೇಕು. ಬೆಳ್ಳುಳ್ಳಿ ರಸವನ್ನು ಹಣೆಗೆ ಹಚ್ಚಿ, ಬೆಂಕಿಯ ಕಾವು ಕೊಡಬೇಕು. ದವನದ ಎಲೆ ಅಥವಾ ದವನದ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ತಲೆಶೂಲೆ ನಿಲ್ಲುವುದು. ನೀಲಗಿರಿ ತೊಪ್ಪಲು ಅಥವಾ ನೀಲಗಿರಿ ಎಣ್ಣೆಯಿಂದಲೂ ತಲೆಶೂಲೆ ಉಪಶಮನವಾಗುತ್ತದೆ.

**ಮೂಗು ಕಟ್ಟುವುದು** : ಬೇಸಿಗೆಯ ಕಾವಿನಿಂದ ಮೂಗು ಕಟ್ಟುವುದು ; ಉಸಿರಾಟಕ್ಕೆ ತುಂಬ ತೊಂದರೆಯಾಗುವುದು ; ಮೂಗಿನ ಹೊಳ್ಳೆಗಳಲ್ಲಿ ನೋವು ಕಾಣಿಸಿಕೊಳ್ಳಬಹುದು. ಆಕಳತುಪ್ಪ ಮೂಗಿನಲ್ಲಿ ಹಾಕಿದರೆ ಉಸಿರಾಟ ಸರಳವಾಗುವುದು.

**ನೆಗಡಿ** : ಇದು ವಿಪರೀತ ಶೀತದಿಂದ ಉಂಟಾಗುತ್ತದೆ. ಮಳೆಗಾಲದಲ್ಲಿ, ಚಳಿಗಾಲದಲ್ಲಿ ನೆಗಡಿ ಜಾಸ್ತಿ. ಇದು ಒಬ್ಬರಿಂದ ಇನ್ನೊಬ್ಬರಿಗೆ ಬೇಗನೆ ಹರಡುವಂಥದ್ದು. ಹಾಗೆ ನೋಡಿದರೆ 'ನೆಗಡಿ ರೋಗವಲ್ಲ'. ಇದಕ್ಕೆ ಔಷಧವೂ ಇಲ್ಲ ಎನ್ನುತ್ತಾರೆ. ಒಂದು ವಾರದವರೆಗೆ, ಎಷ್ಟೇ ಉಪಚರಿಸಿದರೂ ನೆಗಡಿ ಇದ್ದೇ ಹೋಗುತ್ತದೆನ್ನುತ್ತಾರೆ. ಇಂಥ 'ನೆಗಡಿ'ಗೂ ಪರಿಹಾರ ಹೇಳುತ್ತಾರೆ. ಬೆಳ್ಳುಳ್ಳಿ ಬೆಲ್ಲ ತಿಂದು ನೀರು ಕುಡಿಯದೆ ಮಲಗಬೇಕು. ನಾಶಿಪುಡಿ ಏರಿಸಿದರೂ ಸೀನು ಬಂದು ನೆಗಡಿ ಕಡಿಮೆಯಾಗುವುದು. ಕೆಂಡದ ಮೇಲೆ ಜೋಳದ ಹಿಟ್ಟು ಹಾಕಿ ಅದರ ಹೊಗೆಯ ವಾಸನೆ ಮುಖಕ್ಕೆ ತೆಗೆದುಕೊಳ್ಳಬೇಕು. ಬೆಲ್ಲ–ಮೆಣಸಿನ ಕಡಬು ತಿನ್ನಬೇಕು. ಮೆಣಸಿನ ನೀರು ಕುಡಿಯಬೇಕು. ಹುರುಳಿ ಸಂಕಟೆ

ಹುರುಳಿ ಕಟ್ಟ ಕುಡಿಯಬೇಕು. ಹಸಿ ಚಹಾ ಕುಡಿಯಬೇಕು. ಬಿಸಿನೀರಿನಲ್ಲಿ ಅರಿಷಿನಪುಡಿ ಹಾಕಿಕೊಂಡು ಕುಡಿಯಬೇಕು. ಬಿಸಿಅನ್ನ ಬೆಳ್ಳುಳ್ಳಿ ಊಟ ಮಾಡಬೇಕು.

**ಎದೆ ನೋವು-ಎದೆ ಉರಿತ** : ಭಾರ ಎತ್ತಿದರೆ, ಬಾಗಿ ಶ್ರಮದ ಕೆಲಸ ಮಾಡಿದರೆ ಎದೆನೋವು ಕಾಣಿಸಿಕೊಳ್ಳುವುದು, ರೋಗಿಯ ಎದೆಗೆ ಬಿಸಿನೀರಿನ ಕಾವು ಕೊಡಬೇಕು. ವಾಸಿಯಾಗುತ್ತದೆ. ನಿದ್ರೆ ಕಾಯುವುದರಿಂದ ಸರಿಯಾದ ಊಟವಾಡಲಾಗುವುದಿಲ್ಲ. ವಾಾಡಿದ ಊಟ ಕೂಡ ಸರಿಯಾಗಿ ಜೀರ್ಣವಾಗುವುದಿಲ್ಲ. ಇದರಿಂದ ಎದೆಉರಿತ ಸುರುವಾಗುತ್ತದೆ. ಎದೆನೋವು-ಎದೆಉರಿತಗಳು ಮುಂದುವರಿದರೆ, ಬೇರೆ ರೋಗಗಳಿಗೆ ಕಾರಣವಾಗುತ್ತದೆ. ಮಜ್ಜಿಗೆಗೆ ಸ್ವಲ್ಪ ಉಪ್ಪು ಹಾಕಿ ಕರಗಿಸಿ ಕುಡಿಯಬೇಕು. ತಣ್ಣೀರನ್ನು ಹೆಚ್ಚು ಕುಡಿಯಬೇಕು. ಕರಿಬೇವಿನ ಎಲೆ ತಿಂದರೂ ಎದೆ ಉರಿತ ಕಡಿಮೆಯಾಗುತ್ತದೆ.

**ಹೊಟ್ಟೆ ನೋವು** : ಇದನ್ನು ಹೊಟ್ಟೆ ಕಡಿತವೆಂತಲೂ ಕರೆಯುವರು. ಆಹಾರದಲ್ಲಿ ಹೆಚ್ಚು ಕಡಿಮೆಯಾಗಿ ಅಜೀರ್ಣವಾದರೆ ಹೊಟ್ಟೆನೋವು ಬರಬಹುದು; ಬಿರುಸು ಪದಾರ್ಥ ಸೇವಿಸಿದರೂ ಹೀಗಾಗುತ್ತದೆ. ಹೊಟ್ಟೆನೋವಿಗೆ ಅಜಿವಾನ, ಉಪ್ಪು ತಿನ್ನಬೇಕು. ಅಜಿವಾನ, ಉಪ್ಪು ತೆಗೆದುಕೊಂಡು ಮಂತ್ರವಾದಿಯ ಹತ್ತಿರ ಹೋಗಿ ಮಂತ್ರಿಸಿ, ಅವನ್ನು ತಿನ್ನಬೇಕು; ರೋಗ ಕಡಿಮೆಯಾಗುತ್ತದೆ. ಹೊಟ್ಟೆಬೇನೆಗೆ 'ಕಾಲ್ದೊಳಿ' ತೆಗೆಯುವ ಪದ್ಧತಿಯೂ ಜನಪದರಲ್ಲಿದೆ. 'ಕಾಲ್ದೊಳಿ' ಎಂದರೆ, ಮೂರು ದಾರಿಯೊಳಗಿನ ಮಣ್ಣು ತಂದು, ಪೊರಕೆಯ ಕಡ್ಡಿಯೊಂದಿಗೆ ಅದನ್ನು ಗಡಿಗೆ/ತಂಬಿಗೆಯಲ್ಲಿ ಹಾಕಿ ಅದರೊಳಗಡೆ ಉರಿ ಹಚ್ಚಬೇಕು. ಉರಿಯುವ ಆ ಗಡಿಗೆಯನ್ನು ಕಾಲ್ದೊಳಿಯಾದ ವ್ಯಕ್ತಿಗೆ ಮೂರು ಸಲ ಇಳಿಸಿ, ನೀರಿರುವ ಪಾತ್ರೆಯಲ್ಲಿ ಬೋರಲಾಗಿಡಬೇಕು. ಗಡಿಗೆ ನೀರು ಎಳೆದುಕೊಳ್ಳುತ್ತದೆ; ಆಗ ಕಾಲ್ದೊಳಿ ಆಗಿದೆ ಎನ್ನುವರು. ಕೆಲಸಮಯದ ನಂತರ ನೀರು ಬಿಡುವುದು. ಆಗ ಅದನ್ನು ಹೊರಕ್ಕೆ ಚೆಲ್ಲುವರು. ಹೊಟ್ಟೆ ಕೆಟ್ಟಾಗಲೂ, ದೃಷ್ಟಿಯಾದಾಗಲೂ ಜನಪದರು ಹೀಗೆಯೇ ಮಾಡುತ್ತಾರೆ. ಕಾಲ್ದೊಳಿ ತೆಗೆಯುವುದರಿಂದ ಹೊಟ್ಟೆನೋವು ಗುಣವಾಗುತ್ತದೆಂಬ ಬಲವಾದ ನಂಬಿಕೆ - ಇವರಲ್ಲಿದೆ.

**ಹೊಟ್ಟೆ ಜಾಡಿಸುವಿಕೆ** : ಬಿಟ್ಟೂ ಬಿಡದೆ ಮಲವಿಸರ್ಜನೆಯಾಗುವುದಕ್ಕೆ ಹೊಟ್ಟೆಜಾಡಿವುದು ಅಥವಾ 'ಭೇದಿ' ಎನ್ನುವರು. ತಿಂದುದು ಸರಿಯಾಗಿ

ಪಚನವಾಗದೆ, ಹೊಟ್ಟೆ ಕೆಟ್ಟು ಜಾಡಿಸಲು ಸುರುವಾಗುತ್ತದೆ. ಬಟ್ಟೆ ಸರಿದಾಗಲೂ ಹೊಟ್ಟೆ ಕೆಡುತ್ತದೆ. ಇದರಿಂದ ನಿಶ್ಶಕ್ತಿಯುಂಟಾಗುತ್ತದೆ. ಈ ಅತಿಭೇದಿಗೆ ಬಿಲ್ವಪತ್ರೆಯ ಹಣ್ಣಿನ ತಿರುಳು ತಿನ್ನಬೇಕು. ನಿಂಬೆ ಹಣ್ಣಿನ ರಸ ತೆಗೆದುಕೊಳ್ಳಬೇಕು. ಸಾಸಿವೆ ಅಥವಾ ಮೆಂತೆ ನುಂಗಬೇಕು. ತುಪ್ಪ ಸಕ್ಕರೆ ಹಳಸಲು ತಿನ್ನಬೇಕು. ಚುರಮರಿ ನೀರಿನಲ್ಲಿ ತೋಯಿಸಿ ತಿನ್ನಬೇಕು. ಭೇದಿ ನಿಲ್ಲುತ್ತದೆ. ಬಿಸಿನೀರಿನ ತುಂಬಿದ ತಂಬಿಗೆ ಹೊಕ್ಕುಳದ ಮೇಲೆ ಇಟ್ಟುಕೊಳ್ಳಬೇಕು. ಬಟ್ಟೆ ಸರಿದಿದ್ದರೆ ಗುಣವಾಗುವುದು.

**ಮಲಬದ್ಧತೆ** : ಆಹಾರ ಸೇವನೆಯಲ್ಲಿ ವ್ಯತ್ಯಾಸವಾಗಿ ಮತ್ತು ಇತರ ಕಾರಣಗಳಿಂದಲೂ ಮಲವಿಸರ್ಜನೆಯಾಗದೆ ತುಂಬ ತೊಂದರೆಯಾಗುತ್ತದೆ. ಇದನ್ನು ಮಲಬದ್ಧತೆ ಎನ್ನುವರು. ಅಪಚನದಿಂದ ಮಲಬದ್ಧತೆಯಾದರೆ ಲಿಂಬಿರಸ, ನೀರು, ಉಪ್ಪು ಕೊಡಬೇಕು. ಬಾಳೆಹಣ್ಣು, ಏಲಕ್ಕಿ ಸೇರಿಸಿ ಸೇವಿಸಬೇಕು. ಸುಟ್ಟ ಬೆಳ್ಳುಳ್ಳಿ ತಿನ್ನಬೇಕು. ಸೋನಾಮುಖಿ ಎಲಿಯನ್ನು ಕುದಿಸಿ, ಅದರ ನೀರು ಕುಡಿಯಬೇಕು. ಅಜೀರ್ಣ ನಿವಾರಣೆಯಾಗಿ ಮಲಬದ್ಧತೆ ಕಡಿಮೆಯಾಗುವುದು. ಚಿಕ್ಕಮಕ್ಕಳಿಗೆ ಮಲಬದ್ಧತೆಯುಂಟಾದರೆ ಹುಣಸೀಹಣ್ಣಿನ ಕಡ್ಡಿ (ನಾರು) ಗುದದ್ವಾರದಲ್ಲಿ ಇಡಬೇಕು. ಅಥವಾ ಹಾಳಿಗೆ ಸಾಬೂನು ಹಚ್ಚಿ ಅದನ್ನು ಗುದದ್ವಾರದಲ್ಲಿ ಇಡಬೇಕು.

**ರಕ್ತಭೇದಿ** : ಇದನ್ನು 'ಆಮಶಂಕೆ' ಎನ್ನುವರು. ಜನಪದರು ಇದಕ್ಕೆ 'ಆಂವಬಯಲಕಡೆ' ಎಂದಿದ್ದಾರೆ. ಮೇಲಿಂದ ಮೇಲೆ ಆಗುವ ಮಲವಿಸರ್ಜನೆಯ ಜತೆಯಲ್ಲಿ ರಕ್ತವೂ ಹೊರಬೀಳುವುದು ರಕ್ತಭೇದಿ. ಇದರಿಂದ ರೋಗಿ ತುಂಬ ಅಶಕ್ತನಾಗುತ್ತಾನೆ. ಇದರ ನಿವಾರಣೆಗೆ ಬಿಲ್ವಪತ್ರೆಯ ಹಣ್ಣಿನ ತಿರುಳು ದಿವ್ಯ ಔಷಧಿ. ಈ ಆವುಶೌಚಕ್ಕೆ ಜಾಜಿಕಾಯಿ ತೇಯ್ದು ಅದರಲ್ಲಿ ತುಪ್ಪ ಸಕ್ಕರೆ ಸೇರಿಸಿ ಸೇವಿಸಬೇಕು. ಕರಿಚಹಾದಲ್ಲಿ ಲಿಂಬಿಹಣ್ಣಿನ ರಸ ಸೇರಿಸಿ ಕುಡಿಯಬೇಕು. ಕರಿಚಹಾ ತುಪ್ಪ ಸೇವಿಸಬೇಕು. ಇಂಗು, ಮಜ್ಜಿಗೆ ಸೇವಿಸಬೇಕು; ರಕ್ತಭೇದಿ ಕಡಿಮೆಯಾಗುವುದು.

**ಈರಿಲು** : ಮಗು ಹಸಿರು ಹಸಿರಾಗಿ ಭೇದಿ ಮಾಡಿಕೊಂಡರೆ ಅದನ್ನು ಈರಲಾಗಿದೆ ಎನ್ನುವರು. ಬಹಿಷ್ಠೆಯಾಗಿರುವವಳು ಮಗುವನ್ನು ನೋಡಿದರೆ, ಮುಟ್ಟಿದರೆ ಹೀಗಾಗುವುದೆಂಬ ನಂಬಿಕೆ. ಆದರೆ ಇದು ಒಂದು ಬಗೆಯ ಕಾಯಿಲೆ.

ಯಕೃತ್ತಿನ ಕೆಲಸ ಸಮರ್ಪಕವಾಗಿಲ್ಲದಿದ್ದರೆ ಹೀಗಾಗುತ್ತದೆ.

**ಮೂಲವ್ಯಾಧಿ** : ಗುದದ್ವಾರದಲ್ಲಿ ಗುಳ್ಳೆ / ಮೊಳಕೆಯೊಡೆದು ತುಂಬ ನೋಯಿಸುವುದು. ರಕ್ತವೂ ಸ್ರವಿಸುವುದು. ರೋಗಿಗೆ ಕುಳಿತುಕೊಳ್ಳಲು ಆಗುವುದೇ ಇಲ್ಲ. ತಣ್ಣೀರಿನಲ್ಲಿ ಕೂಡ್ರಬೇಕಾಗುತ್ತದೆ. ಇದೇ ಮೂಲವ್ಯಾಧಿ. ಇದರಲ್ಲಿ ಮುಳ್ಳ ಮೂಲವ್ಯಾಧಿ, ರಕ್ತಮೂಲವ್ಯಾಧಿ, ಗ್ರಂಥಮೂಲವ್ಯಾಧಿ, ತಿಮಿರ ಮೂಲವ್ಯಾಧಿ ಮತ್ತು ಸಿಂಬಿ ಮೂಲವ್ಯಾಧಿಗಳೆಂಬ ಕೆಲವು ಪ್ರಕಾರಗಳಿವೆ. ಮೂಲವ್ಯಾಧಿಯ ನಿವಾರಣೆಗೆ ದಿನಾಲೂ ತಣ್ಣೀರು ಗುದದ್ವಾರಕ್ಕೆ ಬಡಿಯಬೇಕು.

**ಉರಚ** : ಮೂತ್ರ ಮಾಡುವ ಸಂದರ್ಭದಲ್ಲಿ ಜನನೇಂದ್ರಿಯದಲ್ಲಿ ತಡೆಯಲಾರದಷ್ಟು ಉರಿಯುವುದಕ್ಕೆ ಉರಚ ಅಥವಾ ಉರಿಮೂತ್ರ ಎನ್ನುವರು. ಕಾವಿನಿಂದ ಈ ಬಾಧೆ ಉಂಟಾಗುತ್ತದೆ. ಮೂತ್ರದ ಮೂಲಕ ಸ್ವಲ್ಪ ರಕ್ತ, ಧಾತುವೂ ಹೊರಬೀಳುವ ಸಾಧ್ಯತೆಯಿರುತ್ತದೆ. ಇದರ ನಿವಾರಣೆಗೆ ತಣ್ಣೀರು ಸಾಕಷ್ಟು ಕುಡಿಯಬೇಕು. ಬಾಳೆಹಣ್ಣು ತಿನ್ನಬೇಕು. ಕಲ್ಲಂಗಡಿ ಹಣ್ಣು ತಿನ್ನಬೇಕು. ಮೊಳಕಾಲಿಗೆ ಸಾಕಷ್ಟು ತಣ್ಣೀರು ಹಾಕಿಕೊಳ್ಳಬೇಕು.

**ಹದಗಡ್ಲಿ** : ಕೈ ಮತ್ತು ಕಾಲುಗಳ ಸಂದುಗಳಲ್ಲಿ ಸಣ್ಣ ಗಂಟಾಗುವುದಕ್ಕೆ 'ಹದಗಡ್ಲಿ' ಎನ್ನುವರು. ಹದಗಡ್ಲಿ ಚುಟುಚುಟು ಹೊಡೆಸುವುದು. 'ಮುರಗಿಕಾವು' ಕೊಟ್ಟರೆ ಹದಗಡ್ಲಿ ಕರಗುವುದು. ಅಂದರೆ, ತೊಯ್ದ ಬಟ್ಟೆಯ ತುಂಡನ್ನು ಕಾಯ್ದ ಹೆಂಚಿನ ಮೇಲಿಟ್ಟು ಬೆಚ್ಚಗಾದ ಕೂಡಲೇ ಅದನ್ನು ಹದಗಡ್ಲಿ ಜಾಗದ ಮೇಲೆ ಇಡಬೇಕು. ಹೀಗೆಯೇ ನಾಲ್ಕಾರು ದಿನ ಮಾಡಿದರೆ ರೋಗ ವಾಸಿಯಾಗುವುದು.

**ಕುರುವು** : ಕುರು ಮನುಷ್ಯದೇಹದ ಮೃದುಭಾಗವಿರುವ ಯಾವುದೇ ಕಡೆ ಕಾಣಿಸಿಕೊಳ್ಳಬಹುದು. ಕಾವು ಹೆಚ್ಚಿದಾಗ ಚಿಕ್ಕ ಗಡ್ಡೆಯಾಕಾರ ಕುರುಗಳೇಳುತ್ತವೆ, ತುಂಬ ತೊಂದರೆ ಕೊಡುತ್ತವೆ. ಕುರುವಿನ ಬಾಧೆಯಿಂದ ಜ್ವರ ಕೂಡ ಬರಬಹುದು. ಕುರುವಿನಲ್ಲಿ ಮುಳ್ಳಕುರು, ಕೀವುಕುರು, ರಕ್ತಕುರು ಇತ್ಯಾದಿ ಪ್ರಕಾರಗಳಿವೆ. ಆಲದಮರದ ಹಾಲು ಹಾಕಿದರೆ ಮುಳ್ಳುಕುರು ಕರಗುವುದು. ವೀಳ್ಯದೆಲೆ, ತೊಂಡಿ ಎಲೆಗೆ ಕೊಬ್ರಿ ಎಣ್ಣೆ ಸವರಿ ಅದನ್ನು ಬೆಂಕಿಯಲ್ಲಿ ಕಾಯಿಸಿ ಕುರುವಿಗೆ ಹಚ್ಚಿ ತಟ್ಟಬೇಕು. ರೇವು ಕುರು ಒಡೆದು ಕೆಟ್ಟ ರಕ್ತ ಸೋರಿ ಗುಣವಾಗುವುದು. ರಕ್ತ

ಕೆಟ್ಟು ಕುರುಗಳೇಳುತ್ತವೆಂಬುದು ಜನಪದರ ನಂಬಿಕೆ.

**ಮೈಲಿಬೇನೆ** : ದೇಹದ ತುಂಬ ಗುಳ್ಳೆಗಳೇಳುತ್ತವೆ; ತುರಿಸುತ್ತವೆ. ನೋಯಿಸುತ್ತವೆ. ಜ್ವರವೂ ಬರಬಹುದು. ದೇವಿಯ ಕೋಪದಿಂದ/ಶಾಪದಿಂದ ಈ ಬೇನೆ ಕಾಣಿಸಿಕೊಳ್ಳುತ್ತದೆಂದು ಜನಪದರ ನಂಬಿಕೆ. ಇದರ ನಿವಾರಣೆಗೆ ಏಳು ದಿನಗಳವರೆಗೆ ಬೇವಿನ ಎಲೆಯನ್ನು ನೀರಿನಲ್ಲಿ ಹಾಕಿ ನಿತ್ಯ ಸ್ನಾನಮಾಡಬೇಕು. ಆಮೇಲೆ ಗ್ರಾಮದೇವತೆಗೆ ನೈವೇದ್ಯ ಕೊಡಬೇಕೆಂಬ ಸಂಪ್ರದಾಯವಿದೆ.

**ಮಾರಿಬ್ಯಾನಿ** : ಈ ರೋಗದಿಂದ ದೇಹ ಕ್ಷೀಣಿಸುತ್ತದೆ; ಕೊನೆಗೆ ಸಾಯಲೂಬಹುದು. ಹೊಟ್ಟೆ ತೊಳಸಿದಂತಾಗಿ ವಾಂತಿಯಾಗುವುದು. ಮಾರಿದೇವಿಯ ಕೋಪವೇ ಈ ರೋಗಕ್ಕೆ ಕಾರಣ ಎನ್ನಲಾಗಿದೆ. ಅದಕ್ಕಾಗಿ ಇದನ್ನು 'ಮಾರಿಬ್ಯಾನಿ' ಎನ್ನುವರು. 'ಕಾಲರಾ' ಎಂಬ ಪರ್ಯಾಯ ಹೆಸರೂ ಇದಕ್ಕಿದೆ. ಕುರಿ, ಕೋಳಿ, ಕೋಣ ಬಲಿಕೊಡುವುದರ ಮೂಲಕ ದುರ್ಗಮ್ಮನ ಶಾಂತಿ ಮಾಡಿದರೆ ಈ ರೋಗ ನಿವಾರಣೆಯಾಗುವುದೆಂಬ ಬಲವಾದ ನಂಬಿಕೆ ಜನಪದರದು. ತೆಂಗಿನ ನೀರು ಕುಡಿದರೆ ಈ ರೋಗದಿಂದ ಗುಣಮುಖರಾಗಲೂಬಹುದು.

**ಗೊಬ್ಬರ** : ಮೈಯಲ್ಲಿ ಸಣ್ಣ ಸಣ್ಣ ಗಾದರಿಗಳೇಳುತ್ತವೆ; ಮೈ ತುರಿಸಲು ಆರಂಭಿಸುತ್ತದೆ. ಈ ರೋಗ ಕೂಡ ಮಾರಿಯ ಕೋಪದಿಂದಲೇ ಉಂಟಾಗುವುದೆಂಬ ನಂಬಿಕೆಯಿದೆ. ದಿನಕ್ಕೆ ಎರಡು ವೇಳೆ ಬೇವಿನ ಎಲೆಯನ್ನು ಬಿಸಿನೀರಿನಲ್ಲಿ ಹಾಕಿ ಸ್ನಾನಮಾಡಬೇಕು. ಒಂದು ವಾರದ ಬಳಿಕ ಮಾರಿದೇವಿಗೆ ಎಡೆ ಕೊಡಬೇಕು. ಗೊಬ್ಬರ ನಿಧಾನವಾಗಿ ಕಡಿಮೆಯಾಗುತ್ತದೆ. ಇದು ಚಿಕ್ಕಮಕ್ಕಳಿಗೆ ಹೆಚ್ಚಾಗಿ ಬರುತ್ತದೆ.

**ಗಣಜಲಿ** : ಮೈಯಲ್ಲಿ ತುರಿಕೆಯುಂಟಾಗಿ ಸಣ್ಣ ಸಣ್ಣ ಗುಳ್ಳೆಗಳೇಳುತ್ತವೆ. ಈ ರೋಗಕ್ಕೂ ಮಾರಿಯ ಕೋಪವೇ ಕಾರಣವೆನ್ನುತ್ತಾರೆ ಗ್ರಾಮೀಣರು. ಇದೂ ಹೆಚ್ಚಾಗಿ ಸಣ್ಣಮಕ್ಕಳಿಗೇ ಅಂಟಿಕೊಳ್ಳುವ ರೋಗ. ನಾಲ್ಕಾರು ದಿನ ಉಳ್ಳೇಗಡ್ಡಿಯ ರಸವನ್ನು ಗಣಜಲಿಯಾದ ಭಾಗಕ್ಕೆಲ್ಲ ಹಚ್ಚಬೇಕು. ಕೊನೆಗೆ ಮಾರಿಗೆ ಧೂಪ ಕೊಡಬೇಕು. ನಿಧಾನವಾಗಿ ಗಣಜಲಿ ಕಡಿಮೆಯಾಗುತ್ತದೆ.

ಗೊಬ್ಬರ-ಗಣಜಲಿ ಎದ್ದಾಗ, ಶಾಂಡಿಗಿ, ಪುಠಾಣಿ ತಿನ್ನಲು ಕೊಡಬೇಕು;

ಅತ್ಯಂತ ಚಿಕ್ಕಮಕ್ಕಳಿದ್ದರೆ ತಾಯಂದಿರು ತಿನ್ನಬೇಕು. ಶೇಂಗಾ ಎಣ್ಣೆ/ಔಡಲ ಎಣ್ಣೆ ಮೈಗೆ ಉಣಿಸಿ, ಏಳು ದಿನ ತಲೆ ಸ್ನಾನ ಮಾಡಬೇಕು. ಒಂದು ವಾರದ ನಂತರ ಬಾಳೆಹಣ್ಣು, ಮಜ್ಜಿಗೆ, ಎಳನೀರು, ಅನ್ನಮೊಸರು ಮುಂತಾದ ತಂಪಾದ ಆಹಾರ ಕೊಡಬೇಕು. ಹಾಗು ಸುತ್ತಲಿನ ಕರೆವ್ವ, ದ್ಯಾಮವ್ವ, ದುರಗವ್ವ, ಲಕ್ಕವ್ವ ದೇವತೆಗಳಿಗೆ ಅನ್ನಮೊಸರು, ನೆಲಗಡಲೆ, ಬಾಳಿಹಣ್ಣು, ಎಲೆ, ಅಡಿಕೆ, ಎಣ್ಣೆ, ಬತ್ತಿ ಕೊಡಬೇಕು. ಇದನ್ನು ದೇವರಿಗೆ 'ದೀಪ ಕೊಡುವುದು' ಎನ್ನುತ್ತಾರೆ.

**ಹುರುಕು (ಕಜ್ಜಿ)** : ದೇಹದ ರಕ್ತ ಕೆಟ್ಟು ಸಂದು ಸಂದುಗಳಲ್ಲಿ ಗುಳ್ಳೆಗಳೇಳುವುದು ಮತ್ತು ಬಹಳ ಕೆರಸುತ್ತವೆ. ಇದನ್ನು ಹರಕು ಅಥವಾ ಕಜ್ಜಿ ಎನ್ನುವರು. 'ಕಜ್ಜಿ ಇದ್ದರೆ, ಕೆರೆತ....' ಎಂಬ ಗಾದೆಯೇ ಇದೆ. ಸವದತ್ತಿ ಎಲ್ಲಮ್ಮನ ಕಾಟವೇ ಹುರುಕಿಗೆ ಕಾರಣವೆಂದು ಜನಪದರು ನಂಬಿದ್ದಾರೆ. ಆದುದರಿಂದ ಸೌಂದತ್ತಿ ಗುಡ್ಡದ ಎಲ್ಲವ್ವನ ಗುಡಿಯ ಹೊರಭಾಗದಲ್ಲಿ, ಗುಡಿಗೆ ಅಂಟಿಕೊಂಡೇ ಇರುವ 'ಹುರುಕು ಎಲ್ಲವ್ವ'ನ ಚಿಕ್ಕ ಮೂರ್ತಿಗೆ ಉಪ್ಪು ಹಾಕಬೇಕೆನ್ನುವ ಸಂಪ್ರದಾಯವಿದೆ. ಈ ಮೂರ್ತಿಯ ಮೇಲೆ ಉಪ್ಪು ಸುರುವಿ ತಿರುಗಿ ನೋಡಿದರೆ ಹುರುಕು ಮರಳಿ ಬರುತ್ತದೆಂತಲೂ ನಂಬಿದ್ದಾರೆ. ಇದು ಈಗಲೂ ಚಾಲ್ತಿಯಲ್ಲಿದೆ. ಹುರುಕು ನಿವಾರಣೆಗೆ ನೀರಿನಲ್ಲಿ ಜೇನುತುಪ್ಪ ಬೆರೆಸಿ ಕುಡಿಯಬೇಕೆಂತಲೂ ಹೇಳುತ್ತಾರೆ.

**ಚಿಬ್ಬು** : ದೇಹದ ಮೇಲೆ ಚಿಕ್ಕ ಚಿಕ್ಕ ಚುಕ್ಕೆಯಾಕಾರದ ಕಲೆಗಳಾಗುವುದನ್ನು 'ಚಿಬ್ಬು' ಎನ್ನುವರು. ಇದು ಚರ್ಮರೋಗ. ಬಿಳಿಕಲೆಗಳಾದರೆ 'ಬಿಳಿಚಿಬ್ಬು', ಕಪ್ಪು ಕಲೆಗಳಾದರೆ 'ಕಪ್ಪು ಚಿಬ್ಬು' ಎನ್ನುವರು. ಇದರ ನಿವಾರಣೆಗೆ, ತಾಮ್ರದ ಉಂಗುರ ಬೆರಳಲ್ಲಿಟ್ಟುಕೊಳ್ಳಬೇಕು. ಮತ್ತು ನಿತ್ಯ ಸ್ವಚ್ಛವಾಗಿ ಸ್ನಾನ ಮಾಡಬೇಕು. ಸುಮಾರು ಐದು ಶನಿವಾರ ಹನುಮಂತ ದೇವರಿಗೆ ದೀಪ ಕೊಡಬೇಕು. ಇದೆಲ್ಲ ಜನಪದರ ನಂಬಿಕೆ, ಈಗಲೂ ಅವರು ಪಾಲಿಸುತ್ತಾರೆ.

**ತದ್ದು** : ಮುಖ, ಬೆನ್ನು, ಎದೆ, ಕೊರಳು ಮುಂತಾದ ಕಡೆ ಬಿಳಿ ಕಲೆಗಳಾಗುವುದಕ್ಕೆ 'ತದ್ದು' ಎನ್ನುವರು. ಅತ್ಯಂತ ಎಳೆಯ ಹುಣಸಿನಕಾಯಿ (ಮಿಡಿಗಾಯಿ)ಗಳನ್ನು ತಿಂದರೆ 'ತದ್ದಾ' ಗುವುದೆಂಬುದು ಜನಪದರ ನಂಬಿಕೆ. ಇದರ ಉಪಶಮನಕ್ಕೆ ಹನುಮಂತ ದೇವರಿಗೆ ನಡೆದುಕೊಳ್ಳಬೇಕೆನ್ನುತ್ತಾರೆ ಜನಪದರು.

**ಗಂಡಮಾಲೆ** : ಗಂಟಲು, ಕಿವಿ ಮುಂತಾದ ಭಾಗಗಳಲ್ಲಿ ಗಂಟಾಗಿ ಕೀವು ಸೋರುವ ರೋಗವಿದು ; ಇದು ಗುಣಕಾರಿಯಾಗುವಂಥದ್ದಲ್ಲ. ಇದನ್ನು 'ಕ್ಯಾನ್ಸರ್' ಎಂದೂ ಕರೆಯುವರು. ಈ ರೋಗಕ್ಕೆ ಬಹಳ ಪಥ್ಯ ಮಾಡಬೇಕು. ಗಂಟಲು ಕ್ಯಾನ್ಸರ್‌ಗೆ ಬಿಳಿಬಟ್ಟಲು/ಬಾರಾಮಸಿನ್ ಹೂವಿನ ರಸ ಕುಡಿಯಬೇಕು. ಕಿವಿಯಲ್ಲಿ ತಾಮ್ರದ ಮುರುವನ್ನು ರವಿವಾರದಂದು ಚುಚ್ಚಿಸಿಕೊಳ್ಳಬೇಕು.

**ಕಾಮಾಲೆ** : ಇದನ್ನು 'ಕಾಮಣಿ', 'ಜಾಂಡೀಸ್' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಕಾಮಾಲೆಯಲ್ಲಿ ಹಳದಿ ಅಥವಾ ಹಸಿರು ಕಾಮಾಲೆ ಮತ್ತು ಬಿಳಿ ಕಾಮಾಲೆಗಳೆಂಬ ಎರಡು ವಿಧ. ಈ ರೋಗಪೀಡಿತರ ಕಣ್ಣುಗಳು ಹಳದಿಯಾಗುತ್ತವೆ; ನೋಡಿದ್ದೆಲ್ಲವೂ ಹಳದಿಯಾಗಿಯೇ ತೋರುತ್ತದೆ. 'ಕಾಮಾಲೆ ಕಣ್ಣಿಗೆ ಕಂಡಿದ್ದೆಲ್ಲವೂ ಹಳದಿ' ಎಂಬ ಗಾದೆ ಇದನ್ನೇ ಸೂಚಿಸುತ್ತದೆ. ಕಾಮಾಲೆ ರೋಗದವರಿಗೆ ಹಸಿವೆಯೂ ಆಗುವುದಿಲ್ಲ. ಇಂಥವರು ಹಾಗಲರಸ ಕುಡಿಯಬೇಕು. ಕಬ್ಬಿನ ಹಾಲನ್ನು ಕುಡಿಯಬೇಕು.

**ಗಂಟಲು ಬೀಳುವಿಕೆ** : ಇದ್ದಕ್ಕಿದ್ದಂತೆ ಮಾತುಬಾರದಂತೆ ಗಂಟಲು ಕಟ್ಟಿಕೊಳ್ಳುತ್ತದೆ. ಇದನ್ನು ಗಂಟಲು ಕಟ್ಟುವಿಕೆ ಅಥವಾ ಗಂಟಲು ಬೀಳುವಿಕೆ ಎನ್ನುವರು. ಬಹಳಷ್ಟು ಮಾತನಾಡುವುದರಿಂದಲೂ ಗಂಟಲಿಗೆ ಶ್ರಮವಾಗಿ, ಬಾಧೆಯಿಂದ ಹೀಗಾಗುತ್ತದೆನ್ನುತ್ತಾರೆ. ಒಣಶುಂಠಿ, ಮೆಣಸಿನ ಕಾಯಿ ಮತ್ತು ಬೆಲ್ಲ ಸೇರಿಸಿ ಜಜ್ಜಿ, ಮಿಶ್ರಣಮಾಡಿ ಕುದಿಸಿ, ಅದಕ್ಕೆ ಹಾಲು ಬೆರಸಿ ರಾತ್ರಿ ಮಲಗುವಾಗ ಕುಡಿಯಬೇಕು. ಗಂಟಲು ಸರಳವಾಗುತ್ತದೆ.

**ಪಿತ್ಥ** : ಅಪಚನವೇ ಪಿತ್ಥದ ಕಾಯಿಲೆಗೆ ಪ್ರಮುಖ ಕಾರಣ. ಇದರಿಂದ ತಲೆತಿರುಗುವುದು, ವಾಂತಿಯಾಗುವುದು, ಜ್ವರವೂ ಬರಬಹುದು. ಪಿತ್ತದ ನಿವಾರಣೆಗೆ ಹಸಿಶುಂಠಿ, ಕಲ್ಲುಸಕ್ಕರೆ ಕೂಡಿಸಿ ತಿನ್ನಬೇಕು, ಕರಿಚಹಾದಲ್ಲಿ ತುಪ್ಪ ಬೆರಸಿ ಕುಡಿಯಬೇಕು.

**ಜ್ವರ** : ಹವಾಮಾನದ ವೈಪರೀತ್ಯದಿಂದ, ದೇಹದ ಅಸ್ವಸ್ಥತೆಯುಂಟಾಗಿ ಜ್ವರ ಕಾಣಿಸಿಕೊಳ್ಳುತ್ತದೆ. ಜ್ವರದಿಂದ ಮೈಬಿಸಿಯಾಗುವುದು, ನಡುಕ ಬರುವುದು, ಬೆವರುಂಟಾಗುವುದು, ಬಾಯಿ ಪಿಷವಾಗುವುದು. ಸಾಮಾನ್ಯವಾಗಿ ಎಲ್ಲ ರೋಗಗಳ ಜೊತೆಗೆ ಜ್ವರ ಕಾಣಿಸಿಕೊಳ್ಳುತ್ತದೆ. ಇದು ದೊಡ್ಡ ದೊಡ್ಡ ರೋಗಗಳಿಗೂ

ಕಾರಣವಾಗುವುದುಂಟು. ಜ್ವರ ನಿವಾರಣೆಗೆ ಗೋಮೂತ್ರಪಾನ, ಸ್ವಮೂತ್ರಪಾನ ಕೂಡ ಮಾಡಿಸುತ್ತಾರೆ. ತಣ್ಣೀರು ಪಟ್ಟಿ ಹಣೆಯ ಮೇಲಿಡುವರು. ಕೊತ್ತಂಬರಿ ಕಾಳು, ತುಳಸಿ, ಜೀರಿಗಿ, ಕರಿಬೇವುಗಳ ಕಷಾಯ ಕುಡಿಯಬೇಕು. ಕಳ್ಳಿನೊಳಗಿನ ಜ್ವರ ಆರುತ್ತವೆ. ಜ್ವರದಿಂದ ನರಳುವ ಮಕ್ಕಳಿಗೆ, ಜ್ವರದ ಬಳ್ಳಿಯನ್ನು ಅವುಗಳ ಕೊರಳಿಗೆ ಕಟ್ಟಬೇಕು.

**ಸೆಟಬ್ಯಾನಿ :** ಇದು ಚಿಕ್ಕಮಕ್ಕಳಿಗೆ ಬರುವ ರೋಗ. ಇದ್ದಕ್ಕಿದ್ದಂತೆ ಮೈ ಸೆಟೆದುಕೊಳ್ಳುವುದು. ಯೋಗ್ಯ ಚಿಕಿತ್ಸೆ ನೀಡದಿದ್ದಲ್ಲಿ ಮಗು ಕೈ–ಕಾಲು ಸೆಟೆಸಿ, ಸೆಟೆದೇ ಹೋಗಬಹುದು. ಭಯಂಕರ ರೋಗವಿದು. ಈ ಬ್ಯಾನಿಗೆ ಕಾರಣವಾದ ನರವನ್ನು ಪತ್ತೆ ಹಚ್ಚಿ ಅದನ್ನು ಬೇವಿನ ಕಡ್ಡಿಯಿಂದ ಗುರುವಾರ ಅಥವಾ ರವಿವಾರ ಸುಟ್ಟರೆ ಸೆಟೆಬ್ಯಾನಿ ವಾಸಿಯಾಗುವುದೆಂಬ ನಂಬಿಕೆಯಿದೆ.

**ಮಲ್ರೋಗ :** ಒಮ್ಮೆಲೆ ತಲೆಸುತ್ತು ಬಂದು ಪ್ರಜ್ಞಾಹೀನ ಸ್ಥಿತಿಯುಂಟಾಗುವುದು; ಬಾಯಿಂದ ಬುರುಗೂ ಬರುವುದು. ಉಸಿರಾಟ ತೀವ್ರವಾಗಿ, ಒಮ್ಮೆಲೆ ನಿಂತುಹೋಗಿ ಮತ್ತೆ ಬರುವುದು. ಇದನ್ನು 'ಮಲ್ರೋಗ' ಅಥವಾ 'ಮೂರ್ಛೆರೋಗ' ಎನ್ನುವರು. ಈ ರೋಗ ಕಾಣಿಸಿಕೊಂಡ ಕೂಡಲೇ ಕೈ–ಕಾಲು ಬೆರಳುಗಳನ್ನು ಗಟ್ಟಿಯಾಗಿ ಹಿಸುಕಿ ಹಿಡಿಯಬೇಕು. ಹಾಗೂ ಮೂಗಿಗೆ ಉಳ್ಳೀಗಡ್ಡಿ ವಾಸನೆಯನ್ನು ಕೊಡಬೇಕು. ಮೂರ್ಛೆಯಿಂದ ರೋಗಿ ಎಚ್ಚೆತ್ತುಕೊಳ್ಳುವನು.

**ಸಕ್ಕರೆ ರೋಗ :** ಮೂತ್ರದಲ್ಲಿ ಸಕ್ಕರೆಯ ಅಂಶ ಹೋಗುವುದು ಈ ರೋಗದ ಪ್ರಮುಖ ಲಕ್ಷಣ. ವಯಸ್ಸಾದವರಲ್ಲಿ ಈ ರೋಗ ಕಾಣಿಸಿಕೊಳ್ಳುವುದು ಸಾಮಾನ್ಯ. ಸಕ್ಕರೆ ರೋಗ ಅನೇಕ ರೋಗಗಳಿಗೂ ಕಾರಣವಾಗುವ ಭಯಂಕರ ರೋಗ. ಇದರಿಂದ ಬಳಲುವವರು ಬಹುಜನ. ಈ ರೋಗವನ್ನು ಶಾಶ್ವತವಾಗಿ ಗುಣಪಡಿಸುವ ಯಾವ ಮದ್ದೂ ಇಲ್ಲ. ಆದರೆ ಕೆಲವು ಮದ್ದುಗಳನ್ನು ಉಪಯೋಗಿಸುವುದರಿಂದ ಇದರ ನಿಯಂತ್ರಣ ಮತ್ತು ಈ ರೋಗದಿಂದಾಗುವ ಅಪಾಯವನ್ನು ತಪ್ಪಿಸಬಹುದಷ್ಟೇ. ಹಾಗಲಕಾಯಿಯ ರಸ ಕುಡಿಯಬೇಕು. ನೀರಲಹಣ್ಣು ಸೇವಿಸಬೇಕು. ಪತ್ರಿ ತೊಪ್ಪಲು ತಿನ್ನಬೇಕು. ಕ್ಯಾಬೀಸ್, ಕರಿಬೇವಿನ ರಸ ಮಿಶ್ರಣ ಕುಡಿಯಬೇಕು; ರೋಗ ನಿಯಂತ್ರಣದಲ್ಲಿರುತ್ತದೆ.

**ತೊನ್ನು ರೋಗ** : ಇದು ಒಂದು ಬಗೆಯ ಚರ್ಮರೋಗ. ದೇಹದ ಚರ್ಮವು ಬಿಳುಪಾಗುವುದು. ಇದನ್ನು 'ಬಿಳುಪು' ಎಂದೂ ಕರೆಯುವರು. ಈ ರೋಗ ಪಾಪದ ಫಲವೆಂಬ ಬಲವಾದ ನಂಬಿಕೆ ಜನಪದರಲ್ಲಿದೆ. ಒಮ್ಮೆ ತಗುಲಿದ ತೊನ್ನು, ಎಷ್ಟೇ ಔಷಧೋಪಚಾರ ಮಾಡಿದರೂ ವಾಸಿಯಾಗಲಾರದು. ತೊನ್ನು ರೋಗಿಗಳು ಸತ್ತರೆ ಅವರನ್ನು ಸುಡಬೇಕು. ಇಲ್ಲವಾದರೆ ಆ ಪ್ರದೇಶದಲ್ಲಿ ಮಳೆ ಬರುವುದಿಲ್ಲವೆಂಬ ನಂಬಿಕೆ. ಹೂಳುವುದಾದರೆ ಉಪ್ಪು ಹಾಕಿ ಹೂಳಬೇಕು. ಜಮದಗ್ನಿ ಶಾಪದಿಂದ ಎಲ್ಲಮ್ಮನಿಗೆ ತೊನ್ನು ಅಂಟಿಕೊಳ್ಳುತ್ತದೆ. ಆಗ ಎಲ್ಲಮ್ಮ ಎಲ್ಲಮ್ಮನ ಗುಡ್ಡದ ಹತ್ತಿರವಿರುವ 'ಜೋಗುಳಬಾವಿ' ಯಲ್ಲಿ ಮಿಂದು, ಅರಿಶಿಣವನ್ನು ಮೈಗೆ ಹಚ್ಚಿಕೊಂಡುದರಿಂದ ಆಕೆಯ ತೊನ್ನು ನಿವಾರಣೆಯಾಯಿತೆಂಬ ಐತಿಹ್ಯವಿದೆ. ಎಲ್ಲಮ್ಮ ತನ್ನ ತೊನ್ನು ತೊಲಗಿದ ಕೂಡಲೇ 'ಜೋಗುಳಬಾವಿಯಲ್ಲಿ ಸ್ನಾನ ಮಾಡಿದವರೆಲ್ಲರ ಚರ್ಮರೋಗ ವಾಸಿಯಾಗಲಿ' ಎಂದು ವರ ನೀಡಿದಳಂತೆ. ಇದನ್ನು ನಂಬಿದ ಜನ ಈಗಲೂ ಜೋಗುಳಬಾವಿಯಲ್ಲಿ ಸ್ನಾನ ಮಾಡುತ್ತಾರೆ.

**ಸರ್ಪಹುಣ್ಣು** : ಇದನ್ನು 'ಸರ್ಪಸುತ್ತು' ಎಂದೂ ಕರೆಯುವರು. ಇದೊಂದು ಮನುಷ್ಯನಿಗೆ ಕಾಡುವ ವಿಚಿತ್ರ ಚರ್ಮರೋಗ. ಸರ್ಪದ ಹುರಬರಕು ಮೈಯಂತೆ. ಮನುಷ್ಯ ದೇಹದ ಯಾವುದೇ ಭಾಗದಲ್ಲಿ (ವಿಶೇಷವಾಗಿ ಬೆನ್ನಮೇಲೆ) ಗೆರೆಯಾಕಾರದಲ್ಲಿ ಕಾಣಿಸಿಕೊಳ್ಳುವ ಇದನ್ನು 'ಸರ್ಪಹುಣ್ಣು' ಎಂದೇ ಕರೆಯುವರು. ಸರ್ಪದ ಆಕಾರ ಪೂರ್ತಿಯಾಗಿ, ಸರ್ಪದ ಬಾಲ ಅದರ ತಲೆಯನ್ನು ಮುಟ್ಟಿದರೆ ರೋಗಿ ಖಂಡಿತ ಸಾಯುವನೆಂಬ ನಂಬಿಕೆ. ಸರ್ಪಹುಣ್ಣು ಕಾಣಿಸಿಕೊಂಡ ಜಾಗದಲ್ಲಿ ಗರುಡ ಚಿತ್ರ ಬರೆಯಿಸುತ್ತಾರೆ. ತುಳಸಿಯನ್ನು ಕೆಮ್ಮಣ್ಣಿನಲ್ಲಿ ಬರೆಸಿ, ಕಲಸಿ, ಅದರಿಂದ ಜನಗಾರರು, ಕಂಬಾರರು, ಕುಂಬಾರರು, ಪೂಜಾರಿಗಳು ಗರುಡ ಚಿತ್ರವನ್ನು ಬಿಡಿಸುತ್ತಾರೆ. ಕೆಮ್ಮಣ್ಣು, ತುಳಸಿಯಲ್ಲಿಯ ಔಷಧೀ ಗುಣದಿಂದ ಸರ್ಪಹುಣ್ಣು ಖಂಡಿತ ವಾಸಿಯಾಗುತ್ತದೆ. ಸುಮಾರು ಒಂದು ವಾರದವರೆಗೆ 'ಗರುಡ ಚಿತ್ರ' ವನ್ನು ಪ್ರತಿದಿನ ಬರೆಯಿಸಬೇಕು. ಸರ್ಪಹುಣ್ಣು ಗುಣವಾಗುವವರೆಗೂ ಕೆರೆತ, ನೋವು ಇದ್ದೇ ಇರುತ್ತದೆ.

**ಅಡ್ಡ ದಾಟು** : ಯಾವುದೋ ತೊಂದರೆಯಿಂದ ಕೈ, ಕಾಲು, ತೊಡೆ ನೋಯುತ್ತಿದ್ದರೆ, ಊದಿಕೊಂಡಿದ್ದರೆ ಅಥವಾ ಅವುಗಳಿಗೆ ಗುಳ್ಳೆಗಳೇನಾದರೂ ಉಂಟಾಗಿದ್ದರೆ (ದಾಟು ಪಕ್ಕ) ಅದನ್ನು 'ದಾಟು' ಎನ್ನುವರು. ಬಾಣಂತಿಯರು

ಸ್ನಾನಮಾಡಿದ ನೀರನ್ನು ಅಡ್ಡ ದಾಟಿದರೆ, ಕೈಕಾಲು ಹರಿಯುತ್ತವೆ ಎಂಬ ನಂಬಿಕೆಯಿದೆ. ಇದನ್ನು 'ದಾಟು' ಎನ್ನುವರು. ಮೂರು ದಾರಿ ಕೂಡಿದಲ್ಲಿ ಉಪ್ಪು, ಮೆಣಸಿನಕಾಯಿ, ನಿಂಬೆಹಣ್ಣುಗಳನ್ನು ಯಾರಾದರೂ ತಮ್ಮ ಕಾಯಿಲೆಯ ನಿವಾರಣೆಗೆ ಮಂತ್ರಿಸಿಟ್ಟಿದ್ದರೆ, ಅದನ್ನು ಅಡ್ಡದಾಟಿದರೆ, ಕೈಕಾಲು ಹರಿಯಲಾರಂಭಿಸುತ್ತವೆ. ಇದೂ 'ದಾಟು'. ಇದರ ನಿವಾರಣೆಗೆ ಬಾಳೆಹಣ್ಣು, ನಿಂಬೆಹಣ್ಣು, ಉಪ್ಪು, ಮೆಣಸಿನಕಾಯಿ, ಹೂ ಇತ್ಯಾದಿ ಮೂರು ದಾರಿ ಸಂಧಿಸಿದಲ್ಲಿ ಇಟ್ಟು ಹಿಂತಿರುಗಿ ನೋಡದೆ ಬರಬೇಕು. ಇದು 'ದಾಟು' ತೆಗೆಯುವುದು. ಕೈಕಾಲು ಹರಿಯುತ್ತಿದ್ದರೆ ಬಿಸಿನೀರು ಸುರಿದುಕೊಳ್ಳಬೇಕು. ಕಾಲುಗಳು ಹರಿಯುವಾಗ ಕೇರಬೀಜ ಸುಟ್ಟು ಅದರ ಮೇಲೆ ಹಿಂಬಡ ಊರಿ ನಿಲ್ಲಬೇಕು.

**ದೃಷ್ಟಿದೋಷ** : ಕಣ್ಣಿನಲ್ಲಿ ದೃಷ್ಟಿದೋಷ ಅಥವಾ ದುಷ್ಟಶಕ್ತಿಯುಳ್ಳವರು ಮಗು ಉಣ್ಣುವುದನ್ನು ನೋಡಿದರೆ, ದೃಷ್ಟಿದೋಷದಿಂದ ಮಗು ಅಳುವುದು, ಜ್ವರದಿಂದ ಬಳಲುವುದು ಮತ್ತು ತಿಂದುದನ್ನು ಕಕ್ಕಿಕೊಳ್ಳುವುದು. ಇದು ಈಗಲೂ ಜೀವಂತವಿರುವ ನಂಬಿಕೆ. ಅಳುವ ಮಗುವಿಗೆ ಕ್ಯಾರಬೀಜವನ್ನು ಅದರ ಮುಖದ ಮೇಲೆ ಮೂರು ಸಾರಿ ಇಳಿಸಿ, ನಂತರ ಆ ಕ್ಯಾರನ್ನು ಸೂಜಿಗೆ ಚುಚ್ಚಿ, ದೀಪಕ್ಕೆ ಹಿಡಿಯಬೇಕು. ಆಗ ಕ್ಯಾರ ಸುಟ್ಟು ಚಟ್ ಚಟ್ ಶಬ್ದ ಬಂದರೆ ದುಷ್ಟನಿವಾರಣೆಯಾಯಿತೆಂದರ್ಥ. ಮೆಣಸಿನಕಾಯಿ, ಉಪ್ಪು ಮಗುವಿನ ಮೇಲೆ ಮೂರು ಸಲ ನಿವಾಳಿಸಿ ಒಲೆಯಲ್ಲಿ ಹಾಕಬೇಕು. ಆಗ ಅದು ಚಟ್, ಚಟ್, ಸುಟ್ಟು ಹೋದರೆ ದೃಷ್ಟಿ ಹೋಯಿತೆನ್ನುತ್ತಾರೆ. ಕಸಪೊರಕೆ, ಅರಳಿ, ಒನಕೆಗಳಿಂದಲೂ ದೃಷ್ಟಿದೋಷ ನಿವಾರಿಸುತ್ತಾರೆ. ದೃಷ್ಟಿ ತಗುಲಬಾರದೆಂದರೆ ಮಗುವಿನ ಕೊರಳು, ಮುಂಗೈಗಳಲ್ಲಿ ಕರಿದಾರ ಕಟ್ಟುತ್ತಾರೆ. ಹಣೆಗೆ, ಗಲ್ಲಕ್ಕೆ 'ದೃಷ್ಟಿಬೊಟ್ಟು' ಇಡುತ್ತಾರೆ. ದೃಷ್ಟಿಮಣಿ ಕೂಡ ಕಟ್ಟುತ್ತಾರೆ.

**ಮುಟ್ಟು ದೋಷ** : ಮುಟ್ಟಾದವರು ಮಗುವನ್ನು ಮುಟ್ಟಿದರೆ ಮಗು ಸೊರಗುವುದು; ಅಶಕ್ತಗೊಳ್ಳುತ್ತ ನಡೆಯುವುದು. ಇದನ್ನು 'ಮುಟ್ಟ ದೋಷ', 'ಮುಟ್ಟಚೆಟ್ಟು' ಎನ್ನುವರು. ಮಂತ್ರವಾದಿಯಿಂದ ಮಂತ್ರ ಹಾಕಿಸಿ, ಮಗುವಿಗೆ ತಾಯಿತ ಕಟ್ಟಿಸಬೇಕು, ಮುಟ್ಟು ದೋಷ ನಿವಾರಣೆಯಾಗುತ್ತದೆಂಬ ನಂಬಿಕೆ. ಅಲ್ಲದೆ, ಗೋಮೂತ್ರದಿಂದ ಮಗುವನ್ನು ಎರೆಯಬೇಕು ಹಾಗು ದಾಬಡಿ ಬಳ್ಳಿಯನ್ನು (ಜ್ವರದ ಬಳ್ಳಿ) ಕೊರಳಲ್ಲಿ ಕಟ್ಟಬೇಕು. ಮುಟ್ಟದೋಷ ನಿವಾರಣೆಯಾಗುತ್ತದೆ

ಎನ್ನುತ್ತಾರೆ.

**ಬಿಳಿ ಹೊಲಿ** : ಹೆಣ್ಣು ಮಕ್ಕಳಿಗೆ ಮೂತ್ರದ ಮೂಲಕ ಬಿಳಿಧಾತು ಹೋಗುತ್ತಿದ್ದರೆ ಅದನ್ನು 'ಬಿಳಿಹೊಲಿ' ಅಥವಾ 'ಬಿಳಿಸೆರಗು' ಎನ್ನುವರು. ಇದರಿಂದ ಹೆಣ್ಣು ಮಕ್ಕಳು ನಿಶ್ಯಕ್ತರಾಗುವರು. ಆಕಳ ಹಸಿ ಹಾಲಿನಲ್ಲಿ ಕುಂಕುಮ ಬೆರಸಿ ಸೇವಿಸಿದರೆ ಇದರಿಂದ ಗುಣಮುಖರಾಗಬಹುದು. ಅತಿಮುಟ್ಟ ಸ್ರಾವವಾಗಿ ತೊಂದರೆಯಾದರೆ, ಬಿಸಿ ಅನ್ನ, ಮೊಸರು, ಅರಿಸಿನ ಪುಡಿ, ಸುಟ್ಟ ಉಳ್ಳೇಗಡ್ಡಿ ಎಲ್ಲ ಸೇರಿಸಿ ಊಟ ಮಾಡಬೇಕು.

**ಹುಚ್ಚುನಾಯಿ ರೋಗ** : ಇದು ಹುಚ್ಚುನಾಯಿ ಕಡಿತದಿಂದ ಮನುಷ್ಯನಿಗೆ ತಗುಲುವ ರೋಗ. ತಲೆನೋವು, ಬೆವರುವಿಕೆ, ಹೆದರಿಕೆ, ಬರೀ ಮಾತನಾಡುವುದು, ಕಿರಿಚುವುದು, ನಾಯಿಯಂತೆ ಬೊಗಳುವುದು, ಪಕ್ಕದವರನ್ನು ನಾಯಿಯಂತೆ ಕಚ್ಚಲು ಓಡಾಡುವುದು ಈ ರೋಗದ ಲಕ್ಷಣಗಳು. ಕಾಯ್ದ ಕಬ್ಬಿಣ ಸಲಾಖೆಯಿಂದ ನಾಯಿ ಕಚ್ಚಿದ ದೇಹದ ಭಾಗವನ್ನು ಸುಡುವರು. ನೆಲಗುಳಕದ ಕಾಯಿಯನ್ನು ಒಡೆದ ಆ ಜಾಗಕ್ಕೆ ಹಚ್ಚಿ ಕಟ್ಟುವರು. ಒಳ್ಳೆಣ್ಣೆಯಲ್ಲಿ ಸುಣ್ಣ ಕಲಸಿ ಹಚ್ಚಬೇಕು. ಮಂತ್ರಿಸಿದ ನೀರು ಹಾಕಿಸಬೇಕು. ಪಥ್ಯ ಕೂಡ ಮಾಡಬೇಕು. ತಾಮ್ರದ ದುಡ್ಡನ್ನು ಮಂತ್ರಿಸಿ ಕಟ್ಟಬೇಕು. ರೋಗ ವಾಸಿಯಾಗುವವರೆಗೆ ಗಡ್ಡಮೀಸೆ, ತಲೆ ಬೋಳಿಸಬಾರದೆಂಬ ನಂಬಿಕೆ.

**ಕಾಲುಬೆರಳು ಕೊಳೆಯುವುದು** : ಮಳೆಗಾಲದ ಕೆಸರು ಮತ್ತು ಚಳಿಯಿಂದ ಕಾಲ್ಬೆರಳು ಸಂದಿಯಲ್ಲಿ ಜರಿಯುತ್ತವೆ. ರಕ್ತವೂ ಬರುವುದು. ಬೆಚ್ಚನೆಯ ಬೂದಿಯನ್ನು ಸೆಲೆತ ಜಾಗದಲ್ಲಿ ಹಚ್ಚಬೇಕು. ಕಂಬಳಿಕರಿಯನ್ನು ಎಣ್ಣೆಯಲ್ಲಿ ಅದ್ದಿ ಬೆಚ್ಚಗೆಮಾಡಿ ಬೆರಳಿಗೆ ಕಟ್ಟಬೇಕು.

**ಅಂಗೈ ಅಂಗಾಲು ಉರಿ** : ಬಿಸಿಲಿನ ಕಾವು ಅಂಗೈ-ಅಂಗಾಲುಗಳ ತುರಿಕೆಗೆ ಕಾರಣ. ಅತಿಯಾದ ಕಾವಿನಿಂದ ತೊಗಲು ಸುಲಿಯುತ್ತದೆ. ಲೋಳಿಸರದ ರಸ ಹಚ್ಚಬೇಕು. ತುರಿಕೆ ವಾಸಿಯಾಗುತ್ತದೆ. ಲಿಂಬಿರಸದಲ್ಲಿ ಏಲಕ್ಕಿ ಸೇರಿಸಿ ಕುಡಿಯಬೇಕು. ತಂಪಾಗಿ ಉರಿತ ಕಡಿಮೆಯಾಗುತ್ತದೆ.

**ಆಲಿ** : ಕಾಲಿಗೆ ಮುಳ್ಳು ನಟ್ಟು, ಒಳಗೆ ಉಳಿದಿದ್ದರೆ ಗಾಯವಾಗುತ್ತದೆ. ಕೀವೂ ಆಗುತ್ತದೆ. ಕೊನೆಗೆ 'ಆಲಿ'ಯೂ ಆಗುತ್ತದೆ. ಆಲಿಯಿಂದ ನಡೆಯುವುದು

ಕಷ್ಟ. ಗೋದಿಹಿಟ್ಟಿನಿಂದ ಅಥವಾ ಕಡ್ಲಿ ಹಿಟ್ಟಿನಿಂದ ಪೋಟ್ಲೀಸ್ ಮಾಡಬೇಕು. ಗಾಯವನ್ನು ಹಡ್ಡಿ, ಅದರಲ್ಲಿ ತೋಯಿಸಿದ ಗೋದಿಹಿಟ್ಟು ಹಾಕಿ ಕಟ್ಟಿದರೆ, ಬೆಗಾಗುವುದರೊಳಗೆ, ನಟ್ಟ ಮುಳ್ಳು ಹೊರಬಂದಿರುತ್ತದೆ. ಇದೇ ಪೋಟ್ಲೀಸ್. ಎಕ್ಕೆಯ ಹಾಲಿನಿಂದಲೂ ಮುಳ್ಳು ಹೊರಬಂದು ಬೇನೆ ಕಡಿಮೆಯಾಗುತ್ತದೆ.

ಇವುಗಳಲ್ಲದೆ, ಇನ್ನೂ ಅನೇಕ ಸಣ್ಣ ದೊಡ್ಡ ನರರೋಗಗಳು – ಅವುಗಳ ಪರಿಹಾರೋಪಾಯಗಳನ್ನು ಜನಪದರು ಬಲ್ಲವರಾಗಿದ್ದಾರೆ. ಅಡ್ರಂಗಿ (ಅರ್ಧಾಂಗವಾಯು), ಪಾಂಡು ರೋಗ (ಮೈ ಕೈ ಊದಿಕೊಳ್ಳುವುದು), ರಕ್ತದ ಒತ್ತಡ, ಬೆವರಸಾಲಿ, ತಲೆಗೂದಲುದುರುವುದು, ಮೂಗಿನ ಸೊಳ್ಳೆ ಒಡೆಯುವುದು, ಸುಟ್ಟ ಗಾಯ, ಬಾಯಿನೋವು, ಕಿವಿನೋವು, ದಮ್ಮು, ಅಸ್ತಮ, ಇಸಬು, ಕಿರ್ನಾಲಿಗೆ, ತುಟಿಬಿರಿಯುವಿಕೆ, ವಿಷಮಶೀತಜ್ವರ (ಟೈಫಾಯಿಡ್), ಹಿಂಬಡ ಸೀಳುವಿಕೆ, ಚೇಳು ಕಡಿದರೆ, ಹಾವು ಕಡಿದರೆ, ದೆವ್ವ, ಭೂತ, ಪಿಶಾಚಿ ರೋಗ... ಇವೇ ಮುಂತಾದ ರೋಗಗಳ ಸ್ವರೂಪವನ್ನು ತಮ್ಮ ಪರಂಪರೆಯ ಜ್ಞಾನದಿಂದ ಅರಿತು, ಸ್ಥಳೀಯ ಮೂಲಿಕೌಷಧಿ ಮತ್ತು ಮಂತ್ರ–ತಂತ್ರಗಳ ಮೂಲಕ, ತುಂಬ ಸಹಜವೆಂಬಂತೆ ಗುಣಪಡಿಸಿಕೊಳ್ಳುತ್ತ ಬಂದ ಜನಪದರ ಜೀವನ ಅಲಕ್ಷಿಸುವಂಥದ್ದಲ್ಲ.

ತಮಗೂ, ತಮ್ಮ ವ್ಯವಸಾಯದ ದನಕರುಗಳಿಗೂ ಬರುವ ರೋಗರುಜಿನ – ಪರಿಹಾರೋಪಾಯಗಳನ್ನು ಜನಪದರು ಅರಿತವರು. ಹೆಗಲಬಾವು, ಬಾಯಿಬೇನೆ, ಕಾಲುಬೇನೆ, ಕುಂದ, ಅಡಮು ಅರೇನ–ಉಣ್ಣೆ, ದೃಷ್ಟಿದೋಷ, ಹೊಟ್ಟೆ ಉಬ್ಬುವುದು, ಉಚಗೊಳ್ಳುವುದು (ಭೇದಿ), ಚಪ್ಪೆರೋಗ, ಸಿಡಿಗಾಲುರೋಗ, ಗಂಟಲಬಾವು... ಇವೇ ಮುಂತಾದ ರೋಗಗಳನ್ನು ಅನುಭವದಿಂದ ಕಂಡುಕೊಂಡವರು, ಗಿಡಮೂಲಿಕೆ ಮತ್ತು ಮಂತ್ರ ತಂತ್ರಾದಿಗಳಿಂದ ಗುಣಪಡಿಸಿಕೊಂಡವರು. ಅಂತೆಯೇ ತಾವು ಬೆಳೆದ ಬೆಳೆಗಳಿಗೆ ಬರುವ ವಿವಿಧ ರೋಗಗಳು, ಉಪಚಾರಗಳು ಮುಂತಾದುವನ್ನೂ ಪಾರಂಪರಿಕವಾಗಿ ತಿಳಿದುಕೊಂಡಿದ್ದಾರೆ. ಈ ನೆಲೆಯಲ್ಲಿಯೇ ಅನಾದಿಕಾಲದಿಂದಲೂ ಜನಪದ ಜೀವನ ನಿರಂತರವಾಗಿ ಸಾಗಿಬಂದಿದೆ. ಆದರೆ, 'ಹಿತ್ತಲಗಿಡ ಮದ್ದಲ್ಲ' ಎನ್ನುವಂತೆ ಮುಂದುವರಿದ ಬಹಳಷ್ಟು ಜನ ಈ ಸಾಂಪ್ರದಾಯಿಕ ರೋಗವಿಧಾನ, ಮದ್ದು, ಉಪಚಾರ ನಂಬುವುದಿಲ್ಲ. ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ವಿವಿಧ ರೋಗಗಳಿಗೆ,

ವಿವಿಧ ಮದ್ದುಗಳನ್ನು ಜನಪದರು ತಮ್ಮ ಬದುಕಿನ ಅನುಭವದ ಜೊತೆಯಲ್ಲಿಯೇ ಕಂಡುಕೊಂಡು ಆರೋಗ್ಯದಿಂದ ಬದುಕಲು ಹೆಣಗಿದುದು ಮೆಚ್ಚತಕ್ಕುದೇ.

ಬರುವ ರೋಗಗಳ ಹೆಸರು, ದೊರೆಯುವ ಗಿಡಮೂಲಿಕೆಗಳ ಹೆಸರು ಪ್ರಾದೇಶಿಕವಾಗಿ ಭಿನ್ನವಾಗಿರುತ್ತವೆ ಎಂಬುದನ್ನು ಅಧ್ಯಯನದ ಸಂದರ್ಭದಲ್ಲಿ ಲಕ್ಷಿಸಬೇಕು. ಹಾಗೆಯೇ ಸ್ಥಳೀಯ ದೇವರು, ಸಂಪ್ರದಾಯ, ಮಾಟ-ಮಂತ್ರ, ರೀತಿ ನೀತಿಗಳೂ ಪ್ರಾದೇಶಿಕ ವೈಶಿಷ್ಟ್ಯವನ್ನು ಹೊಂದಿರುತ್ತವೆ.

ತಮ್ಮ ಜನ, ತಮ್ಮ ದನಕರುಗಳಂತೆ ಬೆಳೆಗಳಿಗೂ ದೆವ್ವ ಭೂತದ ಕಾಟವಿರುತ್ತದೆಂದು ನಂಬಿದವರು ಜನಪದರು. ಮದ್ದಿನಿಂದ ಗುಣವಾಗದ ರೋಗಗಳಿಗೆ ಯಾರಾದರೂ ಮಾಟಮಾಡಿಸಿರಬೇಕು ಇಲ್ಲವೆ ದೈವ-ದೆವ್ವದ ಕೋಪವೇ ಕಾರಣವೆಂದು ನಂಬಿ, ಅವುಗಳ ಸಂಪ್ರೀತಿಗಾಗಿ ನಾನಾ ಅಚರಣೆಗಳಲ್ಲಿ ತೊಡಗುವರು. ಇದು ಜನಪದರ ಜೀವನ, ಸಂಸ್ಕೃತಿ, ಬದುಕು. ಇದರಿಂದ ಅವರು ಬೇಗ ಹೊರಬರಲಾರರು. ಹೊಸ ಜಗತ್ತಿನ ವಿಚಾರಗಳನ್ನು ಒಪ್ಪಿಕೊಳ್ಳಲಾರರು. ಇಂದು ಆಧುನಿಕ ವೈದ್ಯಪದ್ಧತಿಯ ಜ್ಞಾನ ಹಳ್ಳಿಗಳಿಗೆ ತಲುಪಿದ್ದರೂ ಗ್ರಾಮೀಣರು ತಮ್ಮ ಸಾಂಪ್ರದಾಯಿಕ ರೀತಿಯಲ್ಲಿಯೇ ವಿವಿಧ ರೋಗಗಳಿಗೆ ಔಷಧೋಪಚಾರ ಮಾಡಿಕೊಳ್ಳುತ್ತಿರುವುದು, ಸಾಂಪ್ರದಾಯಿಕ ಪದ್ಧತಿಯಲ್ಲಿ ಅವರಿಗಿರುವ ನಂಬಿಕೆ, ಶ್ರದ್ಧೆಯ ಪ್ರತೀಕ.

* * *

# ೩. ಜಾನಪದದಲ್ಲಿ ರೋಗರುಜಿನಗಳು

ಡಾ। ದಸ್ತಗೀರ ಅಲ್ಲೀಭಾಯಿ

**ರೋಗರುಜಿನಗಳ ಬಗೆಗೆ ಸಮಾಜದಲ್ಲಿ ಬೇರೂರಿದ ನಂಬಿಕೆ, ಶ್ರದ್ಧೆ, ಆಚರಣೆಗಳನ್ನು ಜಾನಪದದಲ್ಲಿ ಗುರುತಿಸುವ ಪ್ರಯತ್ನವು ಲೇಖನದಲ್ಲಿ ನಡೆದಿದೆ.**

**–ಸಂ.**

ಪ್ರಕೃತಿಯ ಮಗುವಾದ ಮಾನವ ಆದಿಕಾಲದಿಂದಲೂ – ಪ್ರಕೃತಿಯೊಡನೆ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತ ಬಂದಿದ್ದಾನೆ. ಪ್ರಕೃತಿಯಿಂದ ಪಾಠ ಕಲಿತಿದ್ದಾನೆ; ಲಾಭ ಪಡೆದಿದ್ದಾನೆ. ಪ್ರಕೃತಿಯ ಪ್ರಾಂಗಣದಲ್ಲಿ ಬೆಳೆದ ಮಾನವ ಅವುಗಳೊಂದಿಗೆ ಸ್ಪಂದಿಸಿ ಅರಿತು ಬೆರೆತು ಬಾಳಿ ಬದುಕತೊಡಗಿದ. ಮರದ ತೊಗಟೆಗಳಿಂದ ದೇಹವನ್ನು ರಕ್ಷಿಸಿಕೊಂಡು, ಪ್ರಾಣಿಗಳ ಬೇಟೆಯಾಡಿ ಹಸಿವನ್ನು ಹಿಂಗಿಸಿಕೊಳ್ಳತೊಡಗಿದ. ಬರಬರುತ್ತ ಬುವಿಯೊಳಗೆ ಬೆಳೆವ ಗಡ್ಡೆ ಗೆಣಸುಗಳು ಹಸಿವನ್ನು ಹಿಂಗಿಸಬಲ್ಲವು ಎಂಬುದನ್ನು ಅರಿತು ಮಾಂಸಾಹಾರಿಯಿಂದ ಸಸ್ಯಾಹಾರಿಯಾದ. ಮುಂದೆ ಗುಂಪುಕಟ್ಟಿಕೊಂಡು ಜೀವಿಸುತ್ತಾ ದವಸ ಧಾನ್ಯಗಳನ್ನು ಬೇಯಿಸಿ ತಿನ್ನತೊಡಗಿದ. ದೈಹಿಕ ರೋಗ ರುಜಿನಗಳು ಬಂದಾಗ ನಿವಾರಣೆಗಾಗಿ ಸಸ್ಯಗಳ ಮೊರೆಹೊಕ್ಕ. ಸಸ್ಯಗಳಲ್ಲಿ ರೋಗನಿವಾರಕ ಗುಣ ಇರುವುದೆಂದು ತಿಳಿದು ಔಷಧಿ ರೂಪದಲ್ಲಿ ಬಳಸತೊಡಗಿದೆ. ಕಾಲ ಕಳೆದಂತೆ, ಬುದ್ಧಿ ಬೆಳೆದಂತೆ ಅನುಭವ ಕ್ಷೇತ್ರ ವಿಸ್ತಾರವಾದಂತೆ, ಅವನ ವೈದ್ಯದ ಸಾಮಗ್ರಿಗಳು ಹೆಚ್ಚಾದವು. ತನ್ನ ನಿತ್ಯದ ಆಹಾರ ಪದಾರ್ಥಗಳೂ ಕೂಡ ಔಷಧಿ ಎಂಬುದನ್ನು ಮನಗಂಡನು. ರೋಗಕ್ಕೆ ಮದ್ದು ಹುಡುಕಿಕೊಂಡನು. ಒಟ್ಟಾರೆ ಪ್ರಕೃತಿಯೊಂದಿಗೆ ಹೋರಾಟ ನಡೆಸಿದ ಮಾನವನ ಜೀವನೇತಿಹಾಸದಲ್ಲಿ ಜನಪದ ವೈದ್ಯವೇ ಅವನನ್ನು ರಕ್ಷಿಸುವ ಸಂಜೀವಿನಿಯಾಯಿತು.

ಜನಪದ ವೈದ್ಯವು ಮಾನವನ ಬದುಕಿನೊಂದಿಗೆ ನೇರ ಸಂಬಂಧಪಟ್ಟದ್ದು. ಅನೂಚಾನವಾಗಿ ಬಂದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬೆಳೆದು ಬಂದದ್ದು. ಒಟ್ಟಿನಲ್ಲಿ ಜನಪದರ ಕಾಯಿಲೆಗಳು ಮತ್ತು ಅವುಗಳನ್ನು ಗುಣಪಡಿಸುವ ವಿಧಾನಗಳನ್ನು ಕುರಿತ ಪರಂಪರಾಗತ ದೃಷ್ಟಿಕೋನಗಳ ಸಾರಸರ್ವಸ್ವವನ್ನೇ ಜನಪದ ವೈದ್ಯ ಎಂದು ಕರೆಯಬಹುದು.

**ರೋಗದ ಕಾರಣಗಳು** : ಭೂಮಿಯ ಮೇಲೆ ಎಂದು ಹುಟ್ಟು ಆರಂಭವಾಯಿತೋ ಅಂದೇ ರೋಗಗಳ ಹುಟ್ಟು ಪ್ರಾರಂಭವಾಗಿ ರೋಗಗಳು ಮಾನವರಿಗಿಂತ ಪುರಾತನವಾದವು ಎಂಬುದು ತಿಳಿಯುತ್ತದೆ. ಇಜಿಪ್ತ ಮತ್ತು ಇತರ ಸಂಸ್ಕೃತಿಗಳಲ್ಲಿ ಕಂಡುಬಂದ ಪ್ರಾಚೀನ ಅವಶೇಷಗಳು ಮಾರಿಹುಣ್ಣು ಮುಂತಾದ ಮಾರಕ ರೋಗಗಳು ಮಾನವರನ್ನು ಕಾಡಿರಬೇಕೆಂದು ಸೂಚಿಸುತ್ತವೆ. ಹೀಗೆ ಯಾವುದೇ ಸಮಾಜ ಅಥವಾ ವರ್ಗವಾಗಲಿ ಒಂದಲ್ಲ ಒಂದು ರೀತಿಯ ರೋಗದಿಂದ ನರಳುತ್ತಿತ್ತು. ಆ ರೋಗಗಳಿಗೆ ಮಾನವ ಕೊಡುವ ಕಾರಣಗಳು ಹಾಗು ಅವುಗಳ ನಿರ್ಮೂಲನ ಕೂಡ ಒಂದು ಸ್ವಭಾವಿಕವೂ ಸಹಜವೂ ಆದ ಕ್ರಿಯೆಯಾಗಿತ್ತು ಎನ್ನುವುದು ಸ್ಪಷ್ಟ.[1]

ಪ್ರಾಚೀನ ಮಾನವನ ಕಲ್ಪನೆಯಲ್ಲಿ ರೋಗ-ರುಜಿನಗಳು ಒಂದು ದೃಷ್ಟಿಯಲ್ಲಿ ಸಹಜ ಕ್ರಿಯೆಗಳಾದರೆ, ಮತ್ತೊಂದೆಡೆ ಅವು ಸಹಜ ಕ್ರಿಯೆಗಳಾಗದೆ ತನ್ನ ಅಥವಾ ತನ್ನ ಗುಂಪಿನ ಯಾವುದೋ ವಿಚಿತ್ರ ನಡವಳಿಕೆಯಿಂದಾದುದು ಎಂದು ತಿಳಿದಿದ್ದಾನೆ. ಸಹಜ ಕ್ರಿಯೆಯಲ್ಲಿ ಪ್ರಕೃತಿಯಲ್ಲಿನ ಸಂಕ್ರಮಣ ಸ್ಥಿತಿಯಲ್ಲಿನ ಬದಲಾವಣೆ ಸಹಜವಾಗಿ ಮಾನಸಿಕ ಮತ್ತು ದೈಹಿಕ ನ್ಯೂನತೆಗಳನ್ನು ಒಡ್ಡುವುದು. ದಿನನಿತ್ಯ ಆಹಾರಗಳಲ್ಲಿನ ಭೇದ, ಋತುಮಾನಗಳಲ್ಲಿನ ವ್ಯತ್ಯಾಸದಿಂದ – ಜ್ವರ, ಕೆಮ್ಮು, ನೆಗಡಿ, ತಲೆಶೂಲೆ, ಮೂಲವ್ಯಾಧಿ, ಕಾಮಾಲೆ, ಸಿಹಿಮೂತ್ರರೋಗ, ಹುಣ್ಣುಗಳು, ಉರಿಮೂತ್ರ, ಮಲಬದ್ಧತೆ, ಹೆಣ್ಣು ಮಕ್ಕಳಲ್ಲಿನ ರಕ್ತಸ್ರಾವ, ಬಿಳಿಮುಟ್ಟು, ಲೈಂಗಿಕ ಕಾಯಿಲೆಗಳು, ಆಲಸ್ಯ, ಮಂಕು, ಪಿತ್ತ, ತಲೆಸುತ್ತುವುದು, ಮಕ್ಕಳಿಗೆ ದೃಷ್ಟಿಯಾಗುವುದು, ಅಜೀರ್ಣ – ಮುಂತಾದವು ಬರುವುದುಂಟು.

ಪ್ರಕೃತಿಯಲ್ಲಿನ ಸಂಕ್ರಮಣ ಸ್ಥಿತಿಯ ವಿರುದ್ಧದ ಮಾನವನ ಪ್ರಯತ್ನವೆಲ್ಲವೂ ವ್ಯರ್ಥವಾದಾಗ ಅಪ್ರಕೃತ ವಿಧಾನಗಳ ಮೂಲಕ ಮನಸ್ಸು ಮತ್ತು ದೇಹದ ಮೇಲಿನ ರೋಗಗಳನ್ನು ಹಿಡಿತದಲ್ಲಿಟ್ಟುಕೊಂಡು ಅವುಗಳನ್ನು ನಿವಾರಿಸುವ ಪ್ರಯತ್ನ ಮಾಡುವ ಸಾಧ್ಯತೆಯಿದೆ.

ಮಾನವನ ದೃಷ್ಟಿಯಲ್ಲಿ ಹುಟ್ಟು ಮತ್ತು ಸಾವು ಅಶ್ಚರ್ಯದ ಸಂಗತಿಗಳಾಗಿ, ಮಧ್ಯಂತರದ ಬದುಕಿನಲ್ಲಿ ತಾನು ಅನುಭವಿಸಿದ ರೋಗಗಳಿಗೆ ತನ್ನದೇ ಆದ ಅಲೌಕಿಕ ಕಾರಣಗಳನ್ನು ಹುಡುಕಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ.

ರೋಗಗಳು ಸಹಜ ಕ್ರಿಯೆಯಲ್ಲ. ಇವು ಯಾವುದೋ ಅಗೋಚರ ಶಕ್ತಿಯ ಪವಾಡವಿರಬಹುದು. ಇದಕ್ಕೆ ಸಂಬಂಧಪಟ್ಟ ನಿಷೇಧಗಳನ್ನು ಉಲ್ಲಂಘಿಸಿರುವುದಕ್ಕೆ ತಾನು ಈ ರೀತಿಯ ದುಷ್ಪರಿಣಾಮಗಳನ್ನು ರೋಗಗಳ ರೀತಿಯಲ್ಲಿ ಅನುಭವಿಸುತ್ತಿರುವುದು ಎಂಬ ನಿಲುವು ತಾಳಿದ್ದಾನೆ. ಹೀಗೆ ಹೇಳಿದ ಸಂಗತಿಗಳು ಮಾನವನನ್ನು ನಿಷ್ಕ್ರಿಯಗೊಳಿಸುವ ಬದಲು ನಿಗೂಢತೆಯನ್ನು ಭೇದಿಸಲು, ಚಿಕಿತ್ಸಾ ವಿಧಾನಗಳನ್ನು ರೂಢಿಸಿಕೊಂಡು ಬರಲು, ಪ್ರಕೃತಿಯ ವಿರುದ್ಧ ಹೋರಾಡುವ ಪ್ರವೃತ್ತಿಯನ್ನು ತಂದುಕೊಟ್ಟಿವೆ. ಈ ಕಾರಣದಿಂದ ಪ್ರಕೃತಿಯಲ್ಲಿನ ಗಿಡ, ಮರ, ಬಳ್ಳಿಗಳು ಅವನಿಗೆ ವೈದ್ಯಕೀಯ ಸಂಗಾತಿಗಳಾದವು.

ಆದಿವಾಸಿಗಳಲ್ಲಿ ರೋಗವು ಒಂದು ಅತಿಮಾನುಷ ಶಕ್ತಿಯ ಕೈವಾಡವೆಂದು ನಂಬುತ್ತಾರೆ. ಕುಲದೇವತೆ ಅಥವಾ ಗ್ರಾಮದೇವತೆಯ ಆಚರಣೆಯನ್ನು ಮಾಡದಿದ್ದರೆ, ದೈವಶಕ್ತಿಯು ಮುನಿದು ರೋಗದ ರೂಪದಲ್ಲಿ ಕಾಡಿ, ಒಮ್ಮೊಮ್ಮೆ ದನಕರುಗಳಿಗೆ ಸಾವು ಬರಬಹುದು; ವಂಶದ ಕುಡಿಯನ್ನು ನಾಶಪಡಿಸಬಹುದು ಎಂದು ನಂಬುತ್ತಾರೆ. ಅಂತೆಯೇ ದೇವರಿಗೆ ಹರಕೆ ಹೊರುವುದು, ಹರಕೆ ತೀರಿಸುವುದು, ಪೂಜೆ ಕಟ್ಟಿಸುವುದು, ಮೂರು ದಾರಿ ಕೂಡಿದಲ್ಲಿ ಅನ್ನ ಮಂತ್ರಿಸಿದ ಲಿಂಬೆಹಣ್ಣು ಇಟ್ಟು ಮಾತನಾಡದೆ, ತಿರುಗಿ ನೋಡದೇ ಬರುವುದು, ಅಮಾವಾಸ್ಯೆಯ ರಾತ್ರಿ ಮಣ್ಣಿನ ಪರಿಯಾಣದಲ್ಲಿ ಎಲೆ ಅಡಿಕೆ ಬಾಳೆಹಣ್ಣು ಇಡುವುದು; ರವಿವಾರ ರಾತ್ರಿ ದಾರಿ ಮಧ್ಯದಲ್ಲಿ ಐದು ಗುಂಪು ಉಪ್ಪು ಹಾಕಿ ಅವುಗಳ ಮೇಲೆ ಒಣ ಮೆಣಸಿನಕಾಯಿ ಇಡುವುದು ಕಂಡುಬರುತ್ತದೆ.

ಇದಲ್ಲದೆ ದೃಷ್ಟಿ ನಿವಾಳಿಸುವುದು, ತಾಯಿತ ಕಟ್ಟಿಸುವುದು ಮಂತ್ರಮಾಟ ಮಾಡಿಸುವುದು, ಬಲಿ ಕೊಡುವುದು ಮುಂತಾದ ನಂಬಿಕೆಗಳು ಜನಪದರಲ್ಲಿ ಆಚರಣೆಯಲ್ಲಿವೆ. ರೋಗಿಗೆ ಔಷಧಿಯು ಮಾಡುವ ಪರಿಣಾಮ ದೇಹದ ಮೇಲಾದರೆ, ದೇವ-ದೇವತೆಗೆ ಮಾಡುವ ವಿಧಿ ನಿಯಮಗಳು – ಮಾನಸಿಕ ನೆಮ್ಮದಿಗೆ ಸಹಕಾರಿಯಾಗಿವೆ. ಯಾವ ಔಷಧಿ ತೆಗೆದುಕೊಳ್ಳದೇ ದೇವರ ದಯೆಯಿಂದಲೇ ಗುಣಮುಖರಾದೆವೆಂದು ಸಂತೃಪ್ತಿ ಪಡೆಯುವವರು ದೇವರಿಗಾಗಿ ನಡೆಸುವ ವಿಧಿವತ್ತಾದ ಅದ್ಧೂರಿ ಸೇವೆ ಪೂಜೆ ಪುನಸ್ಕಾರ, ದಾನಾದಿಗಳನ್ನು ನಾವಿಂದು ನೋಡುತ್ತೇವೆ.

**ರೋಗ ನಿರ್ಮೂಲನಾ ವಿಧಾನಗಳು :**

ಪ್ರಾಚೀನ ಕಾಲದಿಂದಲೂ ಮಾನವ ತನ್ನ ದೈಹಿಕ ರೋಗ-ರುಜಿನಗಳಿಗೆ ಸಸ್ಯಗಳ ಮೊರೆ ಹೊಕ್ಕಿದ್ದಾನೆ. ಎಲ್ಲ ಸಸ್ಯಗಳಿಗೂ ಸಾಮಾನ್ಯವಾಗಿ ಒಂದಿಲ್ಲೊಂದು ರೀತಿಯ ರೋಗ ನಿವಾರಕ ಗುಣ ಇದ್ದೇ ಇರುತ್ತದೆಂದು ನಂಬಿದ ಮಾನವ ಅವುಗಳನ್ನು ಔಷಧಿರೂಪದಲ್ಲಿ ಬಳಸುವುದುಂಟು. ಇವುಗಳಲ್ಲಿ ತುಳಸಿ, ಅರಿಷಿಣ, ಮೆಂತ್ಯ, ದಾಸವಾಳ ಹೂ, ನಾಗದಾಳಿ ಸೊಪ್ಪು, ವೀಳ್ಯೆದೆಲೆ, ಮೆಣಸು, ಈರುಳ್ಳಿ, ಬೆಳ್ಳುಳ್ಳಿ, ಬಾಳೆ, ಹಾಗಲಕಾಯಿ ಮುಂತಾದವುಗಳನ್ನು ಹೆಸರಿಸಬಹುದು.

ಶೀತ ನೆಗಡಿ ಕೆಮ್ಮು ಜ್ವರ ಇತ್ಯಾದಿಗಳಿಗೆ ತುಳಸಿ ಎಲೆಯ ರಸವನ್ನು ಸೇವಿಸುವರು. ಇಲ್ಲವೆ ಅರಿಷಿಣವನ್ನು ರೋಗ ನಿವಾರಕವಾಗಿ ಮೈಗೆ ಹಚ್ಚಿಕೊಂಡು ಸ್ನಾನಮಾಡುವರು. ಗಾಯವಾದಾಗ ಅರಿಷಿಣ ಮತ್ತು ಸುಣ್ಣ ಕೂಡಿಸಿ ಲೇಪಿಸುವುದುಂಟು. ಮೆಂತ್ಯವನ್ನು ಪುಡಿಮಾಡಿ ಮಜ್ಜಿಗೆ ಮತ್ತು ಮೊಸರಿನಲ್ಲಿ ಭೇದಿಗೆ ಕುಡಿಯುವರು. ಬಿಳಿ ದಾಸವಾಳದ ಹೂಗಳನ್ನು ಸ್ತ್ರೀಯರ ಬಿಳುಪುಸ್ರಾವವನ್ನು ನಿಯಂತ್ರಿಸುವುದಕ್ಕಾಗಿ ಬಳಸುವರು. ನಾಗದಾಳಿ ಸೊಪ್ಪು ವೀಳ್ಯೆದೆಲೆ, ಮೆಣಸು, ಬೆಳ್ಳುಳ್ಳಿ - ಮುಂತಾದವುಗಳನ್ನು ಶೀತವನ್ನು ಹೋಗಲಾಡಿಸಲು ಬಳಸುವುದು. ಮೈನೀರು ಹೋಗಲು ಎಳೆನೀರು ಸೇವಿಸುವುದು - ಹೀಗೆ ಇನ್ನೂ ಅನೇಕ ಸೊಪ್ಪುಗಳು ಬಳಕೆಯಲ್ಲಿವೆ.[2]

ಕುರುಗಳೆದ್ದರೆ ಬಿಸಿ ಮುದ್ದೆಯಲ್ಲಿ ಜಜ್ಜಿದ ಬೆಳ್ಳುಳ್ಳಿ ಈರುಳ್ಳಿಯನ್ನು ಬೆಚ್ಚಗೆ ಕಟ್ಟಿದರೆ ಕಟ್ಟಿದ ಕೀವು ಹೊರಗೆ ಬರುವಂತೆ ಮಾಡುತ್ತದೆ. ಉಗುರು ಸುತ್ತಾದರೆ ಲಿಂಬೆಹಣ್ಣು ಕೊಯ್ದು ಸಿಗಿಸುವರು. ರಸಬಾಳೆ ಹಣ್ಣಿಗೆ ಸಕ್ಕರೆ ತುಪ್ಪವನ್ನು ಸೇರಿಸಿ ತಿನ್ನುವುದರಿಂದ ಎದೆಯ ಉರಿ, ಗಂಟಲುರಿ, ಮಲಬದ್ಧತೆಯನ್ನು ನಿವಾರಿಸುತ್ತದೆ. ಹಾಗಲಕಾಯಿ ರಸವನ್ನು ಸಿಹಿಮೂತ್ರವನ್ನು ಹತೋಟಿಗೆ ತರಲು ಬಳಸುತ್ತಾರೆ. ಗದ್ದಾರಮ್ಮವಾದರೆ ಶ್ರೀಗಂಧ ತೇಯ್ದು ಕೆನ್ನೆಯ ತಳಭಾಗದಲ್ಲಿ ಎರಡೂ ಕಡೆ ಹಚ್ಚುತ್ತಾರೆ. ಮಕ್ಕಳಿಗೆ ಹಾಲು ಬಿಡಿಸಲು ಮೊಲೆಯ ತೊಟ್ಟಿಗೆ ಬೇವಿನ ಸೊಪ್ಪು ಅರೆದು ಹಚ್ಚುವರು. ಒಟ್ಟಿನಲ್ಲಿ ಜನಪದರಲ್ಲಿ ಕಂಡುಬರುವ ಮಕ್ಕಳ, ವಯಸ್ಕರ, ವೃದ್ಧರನ್ನು ಕಾಡುವ ಕಾಯಿಲೆಗಳನ್ನು ಗುಣಪಡಿಸುವಲ್ಲಿ ಸಸ್ಯ ಜನಪದ ವೈದ್ಯವು ಪ್ರಯೋಜನಕಾರಿ.[3]

ಮೂರ್ಛೆರೋಗ, ಮೂಲವ್ಯಾಧಿ, ವಾತ, ಪಿತ್ತ, ಆಮಶಂಕೆ, ಕ್ಷಯ ಮುಂತಾದ ರೋಗಗಳಿಗೆ ಲೋಹದ ಬಳೆ ಧರಿಸುವುದು, ಪಂಚಲೋಹದ ಉಂಗುರ ಕೈಕಾಲಲ್ಲಿ ಧರಿಸುವುದು, ರಟ್ಟೆ ವಂಕಿ ಹಾಕಿಸಿಕೊಳ್ಳುವುದು, ಲೋಹ ಜನಪದ ವೈದ್ಯಕ್ಕೆ ಉದಾಹರಣೆಯಾಗಿವೆ.

ಜಾನಪದದ ಒಂದು ಅಂಗವಾದ ಜನಪದ ನಂಬಿಕೆಗಳಲ್ಲಿ ಮತ್ತು ಜನಪದ ಚಿತ್ರಕಲೆಗಳಲ್ಲಿ ರೋಗ-ರುಜಿನಗಳ ಕಾರಣ, ಉಪಾಯಗಳು ನಮಗೆ ಕಾಣುತ್ತವೆ. ಇದಲ್ಲದೆ ಜನಪದ ತ್ರಿಪದಿಗಳಲ್ಲಿ, ಮೊಹರಂ ಪದಗಳಲ್ಲಿ, ಜನಪದ ಗಾದೆಗಳಲ್ಲಿ ಉತ್ತರ ಕರ್ನಾಟಕದ ಬೈಗುಳಗಳಲ್ಲಿ, ಗೋಡೆ ಬರಹಗಳಲ್ಲಿ ರೋಗಗಳ ವಿವರಣೆ ದೊರೆಯುತ್ತದೆ.[4]

ಪ್ಲೇಗ್ ಸಾಂಕ್ರಾಮಿಕಗಳು ಬೈಬಲ್ಲಿನಲ್ಲಿ ಉಲ್ಲೇಖಿತವಾಗಿವೆ. ಇಲಿ ಮತ್ತು ಪ್ಲೇಗ್ ಸಂಬಂಧ ನಮ್ಮ ಪೂರ್ವಜನರಿಗೂ ಗೊತ್ತಿತ್ತು. ಸತ್ತ ಇಲಿಗಳು ಮನೆಯಲ್ಲಿ ಬೀಳಲು ಪ್ರಾರಂಭಿಸಿದರೆ ತುರ್ತಾಗಿ ಮನೆ ಖಾಲಿಮಾಡಬೇಕು - ಎಂಬುದು ಕ್ರಿ.ಶ.ಪೂರ್ವ 8000 ರಲ್ಲಿ ವಿರಚಿತ ಭಾಗವತ ಪುರಾಣದಲ್ಲಿ ಬರೆಯಲಾಗಿದೆ. ಪ್ಲೇಗ ಮಹಾಮಾರಿ ಎಂದೇ ಪ್ರಚಲಿತವಾಗಿತ್ತು. 3, 5, 8 ವರ್ಷಗಳಿಗೊಮ್ಮೆ ಬರುವ ಈ ರೋಗದ ಬಗೆಗೆ ಜನಪದರಲ್ಲಿ ಬಹುಭೀತಿ. ಈ ರೋಗ ಕಾಣಿಸಿಕೊಂಡಾಗ ಗ್ರಾಮದೇವತೆಗಳ ಜಾತ್ರೆ ಮಾಡುವುದುಂಟು.

ಮಕ್ಕಳಿಗೆ ಗಣಜಲಿ, ಗೊಬ್ಬರು, ತಟ್ಟು ಎದ್ದರೆ ಗ್ರಾಮದೇವತೆಗಳ ಅವಕೃಪೆಯಿಂದ ಬಂದಿವೆಯೆಂದು ತಿಳಿದು ವಾರಮಾಡಿ ಊರಿನಲ್ಲಿರುವ ದೇವ-ದೇವತೆಗಳಿಗೆ ಎಣ್ಣೆನೀರು ಕೊಡುವುದು, ದೀಪಹಚ್ಚುವುದು, ತೆಂಗಿನಕಾಯಿ ಒಡೆಸುವುದು, ಕೊನೆಯದಿನ ಜಾತ್ರೆ ಮಾಡುವುದು ಕಂಡುಬರುತ್ತದೆ.[5]

ದೆವ್ವ ಗಾಳಿ ಪಿಶಾಚಿ ಬಡಿದುಕೊಂಡಿದ್ದರೆ ಅಮಾವಾಸ್ಯೆಯ ಮಧ್ಯರಾತ್ರಿ ಮಣ್ಣಿನ ಪರಿಯಾಣದಲ್ಲಿ, ಎಲೆ, ಅಡಿಕೆ, ತಂಬಾಕು, ಬಾಳೆಹಣ್ಣು, ಲಿಂಬೆಹಣ್ಣು ಮೂರು ದಾರಿ ಕೂಡುವಲ್ಲಿ ಹಾರ (ಆಹಾರ) ವೆಂದು ಇಡುವುದು ಧಾರವಾಡ ಜಿಲ್ಲೆಯಲ್ಲಿ ರೂಢಿ. ಶಿರಹಟ್ಟಿ ತಾಲೂಕು ಲಕ್ಷ್ಮೇಶ್ವರದ ದೂಧಪೀರಾರ ದರಗಾಕ್ಕೆ ಮತ್ತು ನವಲಗುಂದ ತಾಲೂಕಿನ ಅಡ್ನೂರಿನ ಹುಶೇನಶ್ಯಾವಲಿ ದರಗಾಕ್ಕೆ ಗಾಳಿ, ದೆವ್ವ ಪಿಶಾಚಿ ಬಡಿದುಕೊಂಡವರು ಅಮಾವಾಸ್ಯೆಗೊಮ್ಮೆ ನಡೆದುಕೊಂಡರೆ

ಮುಕ್ತರಾಗುವರೆಂದು ಧಾರವಾಡ, ಗದಗ, ಹಾವೇರಿ ಜಿಲ್ಲೆಯ ಜನರ ನಂಬಿಕೆ.

ಚಿಕ್ಕಮಕ್ಕಳು ಕೃಶವಾಗಿ ಕಿರಿಕಿರಿ ಮಾಡುತ್ತಿದ್ದರೆ ಮುಟ್ಟಿನ ದೋಷವೆಂದು ತಿಳಿದು ಆದಿತ್ಯವಾರ ಅಕ್ಕಸಾಲಿಗರಲ್ಲಿ 'ಪಂಚ ಫಳಾರ' ತೆಗೆದುಕೊಂಡು ಹೋಗಿ ಕಿವಿಯಲ್ಲಿ ಮುರುವು ಹಾಕಿಸುವರು. ಹೀಗೆ ಮೂರು ವಾರ ಮಾಡಿದರೆ ಮಕ್ಕಳು ಗುಣಮುಖರಾಗುವರೆಂದು ನಂಬುವರು.

ಹುರುಕು ಕಜ್ಜಿ ದಾಟಬಕ್ಕಿ, ನೀರಗುಳ್ಳಿ, ಕೈಕಾಲುಗಳಿಗೆ ಆದರೆ, ಅಮಾವಾಸ್ಯೆಯ ರಾತ್ರಿ ಮೂರು ದಾರಿ ಸಂಧಿಸುವ ಸ್ಥಳದಲ್ಲಿ ಐದು ಗುಂಪು ಉಪ್ಪು ಹಾಕಿ ಅದರ ಮೇಲೆ ಒಣಗಿದ ಮೆಣಸಿನಕಾಯಿ ಇಟ್ಟು ಮಾತನಾಡದೆ ತಿರುಗಿನೋಡದೆ ಬಂದರೆ ಪರಿಹಾರವಾಗುವವು ; ಬಳ್ಳಾರಿ ಜಿಲ್ಲಾ ಹೊಸಪೇಟೆಯ ಮೊಹರಂ ಆಚರಣೆಯಲ್ಲಿ ಹುರುಕು ಕಜ್ಜಿಯಾದವರು ಅಗ್ನಿ ಹೊತ್ತಿಸಿದ ಅಲಾವಿ ಕುಂಡದಲ್ಲಿ ಉಪ್ಪು ಹಾಕಿ ದೀನ್ ಜಗಾಯಿಸಿ ರೋಗ ಪರಿಹಾರ ಮಾಡಿಕೊಳ್ಳುವರು. ಹುರುಕು ಕಜ್ಜಿ, ಹುಣ್ಣು, ಕುಷ್ಟರೋಗ ಪೀಡಿತರಾದವರು ನವಲಗುಂದ ತಾಲ್ಲೂಕು ಯಮನೂರಿನ ರಾಜಭಾಗ ಸವಾರ ದರಗಾದ ಸಮೀಪದಲ್ಲಿ ಹರಿವ ಬೆಣ್ಣೆಹಳ್ಳದಲ್ಲಿ ಸ್ನಾನ ಮಾಡಿದರೆ ಚರ್ಮರೋಗಗಳು ನಿವಾರಣೆಯಾಗುವವೆಂದು ಭಕ್ತರ ನಂಬಿಕೆ.

ಮೂರ್ಛೆರೋಗ (ಅಪಸ್ಮಾರ) ಪೀಡಿತ ವ್ಯಕ್ತಿಗೆ ಈ ರೋಗ ಕಾಣಿಸಿಕೊಂಡಾಗ ಕಬ್ಬಿಣದ ಕೀಲಿಕೈ ಅಥವಾ ಮೊಳೆ ಕೈಯಲ್ಲಿ ಕೊಡುವುದುಂಟು. ಈರುಳ್ಳಿ ಚಪ್ಪಲಿ ವಾಸನೆ ತೋರಿಸುವುದು ವಾಡಿಕೆ. 19ನೆಯ ಶತಮಾನದವರೆಗೂ ಅಪಸ್ಮಾರದ ವಿಕಾರ ತಿಳಿದುಕೊಳ್ಳಲು ಸೂಕ್ಷ್ಮ ವ್ಯವಸ್ಥೆಯ ಪರೀಕ್ಷೆಗಳಿರಲಿಲ್ಲ.[6] ಮೂರ್ಛೆರೋಗ ಅಥವಾ ಮಲರೋಗ ಬರುತ್ತಿದ್ದ ವ್ಯಕ್ತಿ ಅಮಾವಾಸ್ಯೆಗೊಮ್ಮೆ ಶಿರಹಟ್ಟಿ ಫಕೀರಸ್ವಾಮಿ ಅಥವಾ ಮಾಬುಸುಬಾನಿಯವರ ದರಗಾಕ್ಕೆ ಹೋಗಿ ಮೂರು ಸಾರೆ ಬಲಗೈಯಲ್ಲಿ 'ವಂಕಿ' ಹಾಕಿಸಿಕೊಂಡರೆ ಮಲರೋಗ ವಾಸಿಯಾಗುವದೆಂದು ನಂಬಿಕೆ.

ರಾಯಚೂರು ಜಿಲ್ಲಾ ಲಿಂಗಸುಗೂರ ತಾಲ್ಲೂಕಿನ ಮುದಗಲ್ ಹುಸೇನ ಅಲಂ ಪಂಜಾಗೆ ಮೊಹರಂ ಆಚರಣೆಯಲ್ಲಿ ರೋಗ ಪರಿಹಾರ ಬಯಸಿ ಹರಕೆ ಹೊತ್ತವರು ಹುಲಿವೇಷ ಧರಿಸಿ, ದೀಡ ನಮಸ್ಕಾರ ಹಾಕಿ, ಉರುಳು ಸೇವೆ ಸಲ್ಲಿಸಿ, ಕಂದೂರಿ ಮಾಡಿ, ಎಡೆ ಉಡಿ ನೀಡಿ ಹರಕೆ ತೀರಿಸುವರು.[7]

ಮೊಹರಂ ಆಚರಣೆಯ ದಿನ ಪಂಜಾ ಅಥವಾ ಡೋಲಿ (ತಾಜಿಯಾ) ಹೊತ್ತವರ ಪಾದಗಳಿಗೆ ಗುಪ್ತರೋಗ ಪೀಡಿತರಾದವರು - ಸ್ಪರ್ಶಿಸಿದರೆ ರೋಗ ಮುಕ್ತರಾಗುವರೆಂದು ಧಾರವಾಡ ಜಿಲ್ಲೆಯ ಜನಪದರ ನಂಬಿಕೆ.

ಸೌಂದತ್ತಿ ತಾಲ್ಲೂಕಿನ ತೊರಗಲ್ ದುರಗಮ್ಮನ ಗುಡಿಯಲ್ಲಿ ಅಮಾವಾಸ್ಯೆಗೊಮ್ಮೆ ಹೇಳಿಕೆಯಾಗುವುದುಂಟು. ಈ ಹೇಳಿಕೆ ಕೇಳುವವರು ಬಹುಪಾಲು ಗ್ರಾಮೀಣ ಹಿಂದೂ-ಮುಸ್ಲೀಮರು. ರೋಗ ಪರಿಹಾರ, ಮಕ್ಕಳ ಫಲ, ಮನೆಯ ಅಭಿವೃದ್ಧಿ ಬಯಸಿ ಲಿಂಬೆಯ ಹಣ್ಣು, ಅಂಗಾರ (ಬೂದಿ) ಪಡೆಯುವವರೇ ಅಧಿಕ ಆಗಿರುತ್ತಾರೆ.

ಇವಲ್ಲದೆ ರೋಗ ಪರಿಹಾರಾರ್ಥವಾಗಿ ಗ್ರಾಮೀಣ ದೇವ-ದೇವತೆಯರಿಗೆ, ಸೂಫಿ ಸಂತರ ದರಗಾಗಳಿಗೆ ಹರಕೆ ಹೊರುವುದು. ಹೊತ್ತ ಹರಕೆಯನ್ನು ಹಣ, ಧಾನ್ಯ, ಬಟ್ಟೆ, ದೈಹಿಕ ಸೇವೆಯ ಮೂಲಕ ತೀರಿಸುವುದು, ಕರ್ನಾಟಕದ ಬಹುತೇಕ ಕಡೆ ಕಂಡುಬರುತ್ತದೆ.

ನವಲಗುಂದ ತಾಲ್ಲೂಕಿನ ಅಮರಗೋಳ ಗ್ರಾಮದ ನಾಗಲಿಂಗ ಸ್ವಾಮಿ ದೇವಸ್ಥಾನಕ್ಕೆ ಹಾವು ಕಚ್ಚಿದವರನ್ನು ತೆಗೆದುಕೊಂಡು ಹೋಗಿ ನಾಗಲಿಂಗಸ್ವಾಮಿ ತೀರ್ಥ ಪ್ರಸಾದವನ್ನು ಬಾಯಲ್ಲಿ ಹಾಕಿ ಮೈಗೆ ಲೇಪಿಸಿದರೆ ಬದುಕುವರೆಂದು ಮತ್ತು ನಾಗಲಿಂಗಸ್ವಾಮಿ ಪ್ರಸಾದ (ಬೂದಿ ಮತ್ತು ನೀರು) ವನ್ನು ಮನೆಯಲ್ಲಿ ಸಿಂಪಡಿಸಿದರೆ ಹಾವು ಚೇಳು ಬರುವುದಿಲ್ಲವೆಂದು ನಂಬಿಕೆ. ಪ್ರತಿವರ್ಷ ನಾಗಪಂಚಮಿ ಹಬ್ಬದಂದು ಅಮರಗೋಳದಲ್ಲಿ ಜಾತ್ರೆ ನಡೆಯುವುದು. ಜಾತ್ರೆ ಸುತ್ತ ಹತ್ತು ಹಳ್ಳಿಗಳಲ್ಲಿ ಪ್ರಸಿದ್ಧಿಯಾಗಿದೆ.

ಬಾಯಾರಿಕೆ, ಹಲ್ಲುನೋವು, ಕಫ, ಕೆಮ್ಮು ನಿವಾರಣೆಗೆ ವಯೋಮಾನಕ್ಕೆ ಅನುಗುಣವಾಗಿ 'ಭಜೆ' ಯನ್ನು ಉಪಯೋಗಿಸುವರು. ಕೆಮ್ಮು ರೋಗ ನಿರೋಧಕವಾಗಿ ಬಂಗಾರದ ಜೊತೆ ಭಜೆಯ ಬೇರನ್ನು ನಮ್ಮ ಪೂರ್ವಿಕರು ತೇಯ್ದು ಕೊಡುತ್ತಿದ್ದರು.[8]

ರೋಗಗಳಿಗೆ ರೋಗನಿರೋಧಕವಾಗಿ ಸಹಜವಾಗಿ ಉಪಯೋಗಿಸುವ ಪದಾರ್ಥಗಳನ್ನೇ ಪ್ರತ್ಯೇಕವಾಗಿ ಪ್ರಮಾಣಬದ್ಧವಾಗಿ ಔಷಧಿಯಾಗಿ ಸೇವಿಸುವುದುಂಟು. ಇದರಿಂದ ಖರ್ಚು ಕಡಿಮೆ. ಕಾಯಿಲೆ ಗುಣಮುಖವಾಗುವ

ಭರವಸೆಯೂ ಅಧಿಕ. ಮನೆಯಲ್ಲಿಯೇ ಇರುವ ಅರಿಷಿಣ, ಶುಂಠಿ, ಅಜಿವಾನ, ಇಂಗು, ಮೆಣಸು, ಯಾಲಕ್ಕಿ, ಲವಂಗ, ಕೊಬ್ಬರಿ ಎಣ್ಣೆ, ಒಳ್ಳೆಯ ಎಣ್ಣೆ, ಔಡಲ ಎಣ್ಣೆಯನ್ನು ಔಷಧಿಯಾಗಿ ಬಳಸುವರು. ಇದಲ್ಲದೆ ಬೇವಿನ ತಪ್ಪಲು, ಉತ್ರಾಣಿ ಕಡ್ಡಿ, ಔಡಲ ಎಲೆ, ಎಕ್ಕಿ ಎಲೆ, ತೊಂಡಿ ಎಲೆ, ಜಾಲಿ ತಪ್ಪಲು, ಟೀಕಿ ತಪ್ಪಲು, ಪತ್ರಿ, ಬನ್ನಿಕರಿಕೆ ಮುಂತಾದವುಗಳನ್ನು ರೋಗಗಳ ಉಪಶಮನಕ್ಕಾಗಿ ಉಪಯೋಗಿಸುವರು. ಹಾಗೂ ಸುಲಭವಾಗಿ ದೊರೆಯುವ ರೊಟ್ಟಿ ಹಂಚಿನ ಕರಕು, ಬೂದಿ, ಸೆಗಣಿ, ಕಾಕುಳ್ಳು, ಜೇಡ, ಸುಣ್ಣ, ಕ್ಯಾಮಿ ಮೊದಲಾದವುಗಳನ್ನು ರೋಗ ನಿವಾರಣೆಗೆ ಪ್ರಾಥಮಿಕ ಔಷಧಿಯೆಂದು ಪರಿಗಣಿಸುವರು.[9]

**ರೋಗ-ರುಜಿನಗಳ ನಿವಾರಣೆಗೆ ಜನಪದ ಚಿತ್ರಕಲೆ :** ಜನಪದರು ತಮ್ಮ ಸುತ್ತು ದೊರೆಯುವ ಗಿಡ, ಮರ, ಎಲೆಬಳ್ಳಿ, ಹೂವು, ಹಣ್ಣು, ಕಾಯಿ, ಬೇರುಗಳನ್ನು ಬಳಸಿ ರೋಗ ಗುಣಪಡಿಸಿಕೊಳ್ಳುವಂತೆ ಹಚ್ಚೆ ಹಾಕಿಸಿಕೊಂಡು, ಮದರಂಗಿಯ ಚಿತ್ರ ಬಿಡಿಸಿಕೊಂಡು ಚರ್ಮರೋಗಗಳಿಂದ ಬಿಡುಗಡೆ ಪಡೆಯುವರು. ರಂಗೋಲಿಯನ್ನು ರೋಗ ಪರಿಹಾರಾರ್ಥವಾಗಿಯೂ ಸಹ ಹಾಕುವರು.

ಸಣ್ಣಪುಟ್ಟ ರೋಗ-ರುಜಿನಗಳು ಬಂದಾಗ ದೆವ್ವ ಭೂತದ ಬಾಧೆ ಉಂಟಾದಾಗ ಮಂತ್ರ ಬರೆಸುವುದು, ಚೀಟಿ ಬರೆಸುವುದು ಕಂಡುಬರುತ್ತದೆ. ಸಾಮಾನ್ಯವಾಗಿ ತಾಮ್ರದ ತಗಡಿನ ಮೇಲೆ ಚೌಕ, ಕತ್ತರಿ ವಿನ್ಯಾಸದಲ್ಲಿ ಮಂತ್ರಾಕ್ಷರಗಳಿಂದ ಬರೆಯುತ್ತಾರೆ. ಇವುಗಳನ್ನು ಮಂತ್ರಿಸಿ ಮಡಿಚಿ ತಾಮ್ರದ ತಾಯಿತದಲ್ಲಿ ಹಾಕಿ ಕೊಡುತ್ತಾರೆ. ತಾಯಿತಗಳ ಮೇಲೆ ಹನುಮಂತ, ಶನಿದೇವ, ಸೂರ್ಯ, ಚಂದ್ರ, ನಕ್ಷತ್ರ, ದೇವಿ ಮುಂತಾದವರ ಚಿತ್ರಗಳಿರುತ್ತವೆ.[10]

ಸರ್ಪಹುಣ್ಣಾದ ವ್ಯಕ್ತಿಗೆ ಸಣ್ಣಕ್ಯಾಮಿ ಲಿಂಬೆಹಣ್ಣಿನ ರಸದಿಂದ ಸರ್ಪಹುಣ್ಣಾದ ಸ್ಥಳದ ಸುತ್ತಲು ಪಂಚಾಳರಿಂದ ಚಿತ್ರ ಬರೆಸುವುದು ವಾಡಿಕೆ. ಮೂರು ವಾರ ತಪ್ಪದೆ ಬಂದು ಚಿತ್ರ ಬರೆಯಿಸಿಕೊಂಡು ಹೋದರೆ ಕಾಯಿಲೆ ಗುಣವಾಗುವುದೆಂಬ ನಂಬಿಕೆ.

ಮೊಣಕಾಲಿನ ನರ ಸೆಳೆಯುತ್ತಿದ್ದರೆ, ಸರ್ಪಹುಣ್ಣಾಗಿದ್ದರೆ, ಮದುವೆಯಾಗದ ಹುಡುಗಿಯರಿಗೆ ತೊನ್ನು ರೋಗವಿದ್ದರೆ, ಮಾಟಮಂತ್ರ ನಿವಾರಣೆ ಮಾಡಬೇಕಿದ್ದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಹಚ್ಚೆಹಾಕಿಸಿಕೊಳ್ಳುತ್ತಾರೆ. ಇವಲ್ಲದೆ

ಸ್ತ್ರೀಯರಿಗೆ ಗರ್ಭಪಾತವಾಗುತ್ತಿದ್ದರೆ, ಹೆಣ್ಣು ಮಕ್ಕಳಿಗೆ ಮಕ್ಕಳಾಗದಿದ್ದರೆ, ವಾತವಿದ್ದರೆ, ಅರ್ಧ ತಲೆಶೂಲೆಯಿದ್ದರೆ ಹಚ್ಚೆಹಾಕಿಸಿಕೊಂಡು ರೋಗಗಳನ್ನು ಉಪಶಮನ ಗೊಳಿಸಲಾಗುತ್ತಿದೆ.[11]

ರಂಗೋಲಿ ಚಿತ್ರ ಬರೆಯುವುದರಿಂದ ವ್ಯಾಧಿ ನಿವಾರಣೆಯಾಗುವುದೆಂಬ ನಂಬಿಕೆ ಕೆಲವು ಕಡೆಗಿದೆ. ಹಾವು ಕಡಿದರೆ ಹಾವಿನ ರಂಗೋಲಿ ಹಾಕಿ, ಆ ರಂಗೋಲಿಯನ್ನು ಹಾವು ಕಡಿದವನ ಮೇಲೆ ಮಂತ್ರಿಸುತ್ತ ಮೂರು ಸಾರೆ ಇಳುಹಿ ಎಡಗೈಯಿಂದ ಹಾವು ಕಡಿದ ಅಥವಾ ಹಾವು ಹೋದ ದಿಕ್ಕಿಗೆ ಒಗೆಯುತ್ತಾರೆ. ಇದರಿಂದ ಹಾವಿನ ವಿಷ ಇಳಿಯುವುದೆಂಬ ಭಾವನೆಯಿದೆ. (ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಾಣಶಿವ ಗ್ರಾಮದಲ್ಲಿ ಹೀಗೆ ಮಾಡುವುದುಂಟು). ರಂಗೋಲಿ ಹಿಟ್ಟಿನಿಂದ ಅಥವಾ ಸುಣ್ಣದಿಂದ 'ಆಸ್ತಿಕ ಕಾಳ ಭೈರವ' ಎಂದು ಮನೆ ಮುಂದೆ ಬರೆದರೆ ಹಾವು ಮನೆಯೊಳಗೆ ಬರುವುದಿಲ್ಲವೆಂಬ ನಂಬಿಕೆಯಿದೆ.[12]

ಕಾಲಿನ ಹುಣ್ಣುಗಳ ನಿವಾರಣೆಗೆ, ಸುಟ್ಟ ಗಾಯಗಳಿಗೆ, ಮದರಂಗಿಯನ್ನು ಬಳಸುವರು. ಆಫ್ರಿಕಾದಲ್ಲಿ ಮದರಂಗಿ ಎಲೆಯ ಪುಡಿಯನ್ನು ಕರುಳುಬೇನೆ ಗುಣಪಡಿಸಲು ಉಪಯೋಗಿಸುವರು. ಪಾದಗಳಿಗೆ ಇದನ್ನು ಲೇಪಿಸುವುದರಿಂದ ಹಿಮ್ಮಡಿಯಲ್ಲಾದ ಬಿರುಕುಗಳು ಮಾಯವಾಗುವವು. ಕುಷ್ಟರೋಗದ ಆರಂಭದಲ್ಲಿ ಇದನ್ನು ಬಳಸಿದರೆ ಕಾಯಿಲೆ ಗುಣವಾಗುವುದು.[13]

**ಮೊಹರಂ ಪದಗಳಲ್ಲಿ ರೋಗ – ರುಜಿನಗಳು :**

ಗೀತಸಾಹಿತ್ಯದ ಒಂದು ಭಾಗವಾದ ಮೊಹರಂ ಪದಗಳನ್ನು ಶೋಕಸ್ಥಾಯಿಯ ಹಿನ್ನೆಲೆಯಲ್ಲಿ ಅತ್ಯಂತ ಗಂಭೀರವಾದ ಧಾಟಿಯಲ್ಲಿ ಹಾಡಲಾಗುತ್ತದೆ. ಮೊಹರಂ ಪದಗಳಲ್ಲಿ ಹ. ಮುಹ್ಮದ ಪೈಗಂಬರರಿಗೆ ಸಂಬಂಧಿಸಿದ ಪದಗಳಷ್ಟೇ ಮಹತ್ವಪೂರ್ಣ ಪದಗಳೆಂದರೆ ಅವರಿಗಿಂತಲೂ ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳು. ಪೂರ್ವದ ಪೈಗಂಬರರಿಗೆ ಸಂಬಂಧಿಸಿದ ಪದಗಳಲ್ಲಿ ಹ. ಅಯ್ಯೂಬರಿಗೆ ಇಬ್ ಲೀಷ ಕಾಡಿದ ಪದಾ ಮುಖ್ಯವಾದುದು. ಇದನ್ನು ನವಲಗುಂದ ತಾಲ್ಲೂಕು ಸೊಟಕನಹಾಳ ಗ್ರಾಮದಲ್ಲಿ ಹಾಡುತ್ತಾರೆ.[14]

ಮಹಾಪುಣ್ಯವಂತರಾದ ಹ। ಅಯ್ಯೂಬ ಪೈಗಂಬರರಿಗೆ ಇಬ್ಲೀಷ ಕಾಡತೊಡಗಿದನು. ಆಕಸ್ಮಿಕವಾಗಿ ಬೆಂಕಿ ಹತ್ತಿ ಅವರ ಮನೆ ಸುಟ್ಟುಹೋಯಿತು.

ಆನೆ ಕುದುರೆಗಳು ಭಸ್ಮವಾದವು. ಹೆಂಡತಿ ಮಕ್ಕಳು ಸ್ವರ್ಗ ಸೇರಿದರು. ಇಷ್ಟೆಲ್ಲ ಕಷ್ಟ–ನಷ್ಟವಾದರೂ 'ಹ್ಯಾಂಗ ಇಡತಾನ ಶಿವಾ ಹಾಂಗ ನಡಿಯಬೇಕು' ಎನ್ನುವ ಅಚಲನಿಷ್ಠೆ ಅಯ್ಯೂಬ ಶರಣರದು. ಆದರೂ ಇಬ್ ಲೀಷನ ಕಾಟ ನಿಲ್ಲಲಿಲ್ಲ.

*ಶರಣರ ಕಾಲಿಗೆ ಹುಣ್ಣಾಗಿ ಬಹುಬ್ಯಾನಿ ಮಾಡೀತು ಜೀವಕ*
*ಏನು ಹಚ್ಚಿದರೂ ಮಾಯಲಿಲ್ಲ ಹೆಚ್ಚಾದೀತು ದಿನದಿನಕ*
*ಸುರುವಾತು ಮೈತುಂಬ ಹಬ್ಬುದಕ*
*ಸುಲದೀತೋ ಎಲ್ಲ ಮೈಯಾನ ತೊಗಲು ಉಳಿಯಲಿಲ್ಲ ತಟಕ*
*ಕೀಂವ ರಕ್ತ ಸೋರಿ ಹುಳಬಿದ್ದಾವು ಮೈಹತ್ತಿ ನಾರುದಕ*
*ಅವನ ಹೆಂಡತಿ ಮಹಾಗುಣವತಿ ಹೇಸಲಿಲ್ಲೋ ಅದಕ*
*ಹಗಲಿ ರಾತರಿ ಬೆಳತನಕ ಗಂಡನ್ನ*
*ಜೀವಂದಕ್ಕಿಂತ ಹೆಚ್ಚು ಮಾಡ್ಯಾಳೋ ಜೋಪಾನ*
*ಊರಮಂದಿ ಬೇಜಾರು ಮಾಡ್ಯೋರೋ ಮೈ ನಾರುದಕ*
*ಹೊರಗ ಹಾಕಿದರೋ ಊರಿಂದ ಐಯ್ಯೂಬನ ನಸೀಬಕ*[15]

ಶರಣರು ಮಾತ್ರ ಐದುಹೊತ್ತು ನಮಾಜು ಮಾಡುವುದನ್ನು ಬಿಡಲಿಲ್ಲ. ಜಿಬರಾಯಿಲರು ಭೂಮಿಗೆ ಬಂದಿಳಿದು ಬೀಬಿ ರಹಿಮಾರವರಿಗೆ ಸ್ವರ್ಗದಿಂದ ತಂದಿದ್ದ ನೀರು ಕೊಟ್ಟರು. ಅಯ್ಯೂಬ ಶರಣರು ಜಳಕ ಮಾಡಿದರು. ಹುಣ್ಣು ಮಾಯವಾದವು.

ಈ ಪದದಲ್ಲಿ 'ಕಾಲಿಗೆ ಹುಣ್ಣಾಗಿ ಬಹುಬ್ಯಾನಿ ಮಾಡಿತು ಜೀವಕ' ಹಾಗೂ 'ಕೀಂವ ರಕ್ತ ಸೋರಿ ಹುಳಬಿದ್ದಾವ ಮೈಹತ್ತಿ ನಾರುದಕ' ಎಂದು ಕಾಲಿಗೆ ಉಂಟಾದ ಹುಣ್ಣಿನ ಬಗೆಗೆ, ಅದರಿಂದಾದ ಹಿಂಸೆಯ ಬಗೆಗೆ ವಿವರಿಸಲಾಗಿದೆ. ಹುಣ್ಣು ಮೊದಲಾದ ಗುಹ್ಯರೋಗಗಳು ಅಲೌಕಿಕ ಶಕ್ತಿಯ ಪ್ರಭಾವದಿಂದ ನಿವಾರಣೆಯಾಗುವವೆಂದು ಸೂಚ್ಯವಾಗಿ ತಿಳಿಸಲಾಗಿದೆ.

ಸೂಫಿ ಸಿದ್ಧಾಂತವನ್ನು ವಿಶ್ವದ ಮೂಲೆ ಮೂಲೆಗಳಿಗೂ ಮುಟ್ಟಿಸಿದ ಸಂತರಲ್ಲಿ ಮಾಬುಸುಬಾನಿ, ಜಲಾಲುದ್ದೀನ್ ರೂಮಿ, ಖ್ವಾಜಾ ಮೈನುದ್ದೀನ್ ಚಿಸ್ತಿ, ಹಸನಬಸರಿ, ರಾಬಿಯಾ ಬಸರಿ ಹಾಗು ಇವರು ಬರೆದ ಪವಾಡಗಳ ಬಗೆಗೆ ಕೆಲವು ವಿವರಗಳು ಮೊಹರಂ ಪದಗಳಲ್ಲಿ ಬರುತ್ತಿವೆಯಾದರೂ

ಹ। ಮಾಬುಸುಬಾನಿಯವರಿಗೆ ಸಂಬಂಧಿಸಿದ ಪದಗಳು ಹೆಚ್ಚು ದೊರೆಯುತ್ತವೆ. ಕಾಮುಕ ಹೆಣ್ಣಿಗೆ ಕ್ಷಮಿಸಿದ ಮಾಬುಸುಬಾನಿ ಪದಾ ಮಾಬುಸುಬಾನಿಗೆ ಮರುಳಾದ ಹೆಣ್ಣಿನ ಪದಾ ಮುಂತಾದವು ಪ್ರಮುಖ ಪದಗಳಾಗಿವೆ.

'ಕಾಮುಕ ಹೆಣ್ಣಿಗೆ ಕ್ಷಮಿಸಿದ ಮಾಬುಸುಬಾನಿ' ಪದದಲ್ಲಿ ರೋಗ-ರುಜಿನಗಳು ಅಲೌಕಿಕ ಶಕ್ತಿಯಿಂದ ಬರುವವೆಂಬ ಅಂಶವನ್ನು ನಿರೂಪಿಸಲಾಗಿದೆ. 'ಮಾಬುಸುಬಾನಿಗೆ ಮರುಳಾದ ಹೆಣ್ಣಿನ ಪದಾ' ಇಂಥದ್ದೇ ಉಪದೇಶವನ್ನು ಹೇಳುವ ಮತ್ತೊಂದು ಪದವಾಗಿದೆ. ಮಾಬುಸುಬಾನಿಯವರಿಗೆ ಊಟಕ್ಕೆ ಆಮಂತ್ರಿಸಿದ ಹೆಣ್ಣೊಬ್ಬಳು ಕಾಮಿನಿ ಕೈ ಹಿಡಿದು ಎಳೆದಳು. ಮೈಬೂಬರು ಹೆಣ್ಣಿನ ಆಸೆಗೆ ಓಗೊಡಲಿಲ್ಲ. ನಿರಾಶಳಾದ ಹೆಣ್ಣು ಗಂಡನಿಗೆ ಚಾಡಿ ಹೇಳಿದಳು. ಮೈಬೂಬರ ಮಹಿಮೆ ಅರಿತಿದ್ದ ಅವಳ ಗಂಡ ಹೆಂಡತಿಯನ್ನು ತವರಿಗೆ ಅಟ್ಟಿದನು.

*ತವರ ಮನಿಗೆ ಹೋದಾಳೋ ತತ್ಕಾಲಾ ನೋಡರಿ ಮೊದಲಾ*
*ಬಾಲಿ ತಲೆಯೊಳಗ ಹುಣ್ಣ ಹುಟ್ಟಿತೋ ಆಗ*
*ಹುಳಬಿದ್ದು ಬಳಲುವಳಲ್ಲಾ ರಾತರಿ ಹಗಲಾ*
*ಹೋಗಿ ಕೇಳುವಳೋ ಜೋಷಿಸರೊಳು*
*ಪ್ರಶ್ನೆ ಹೇಳುವರೋ ಮಾಬೂಬರ ಕಾಟ.*[16]

ತನ್ನ ತಪ್ಪಿನ ಅರಿವಾಗಿ ಮಾಬುಸುಬಾನಿಯವರ ಕಾಲುಹಿಡಿದು ಕ್ಷಮೆ ಯಾಚಿಸಿದಳು. ರೋಗ ಪರಿಹಾರವಾಯಿತು.

ಇಲ್ಲಿಯೂ ಸಹ ತಲೆಯೊಳಗೆ ಹುಣ್ಣು ಹುಟ್ಟುವುದು ಮತ್ತು ಹುಣ್ಣು ಮಾಯುವುದು ಶಿವಶರಣರ ಕೃಪೆಯಿಂದ, ಅಲೌಕಿಕ ಶಕ್ತಿಯಿಂದ ಎಂದು ನಿರೂಪಿಸಲಾಗಿದೆ. ಹೀಗೆ ರೋಗ ರುಜಿನಗಳ ಬಗೆಗೆ ಸಮಾಜದಲ್ಲಿ ಬೇರೂರಿನ ನಂಬಿಕೆ, ಶ್ರದ್ಧೆ ಆಚರಣೆಗಳನ್ನು ಪರೋಕ್ಷವಾಗಿ ಮೊಹರಂ ಪದಗಳಲ್ಲಿ ಕಾಣಬಹುದು.

**ಜನಪದ ಗಾದೆಗಳಲ್ಲಿ ರೋಗ-ರುಜಿನಗಳು :**

ಜನಪದದ ಮುಖ್ಯ ಪ್ರಕಾರಗಳಲ್ಲಿ ಒಂದಾದ ಗಾದೆಗಳು ಅರ್ಥ, ರುಚಿಯಲ್ಲಿ ಒಗರಾದವುಗಳು. ಗುಣವನ್ನು ಗುರುತಿಸಿ ಹೌದೆಂದು ಕೊಂಡಾಡುವುದಕ್ಕಿಂತ ದೋಷವನ್ನು ಎತ್ತಿ ಕಟ್ಟಿ ಅಲ್ಲಗಳೆಯುವುದೇ ಗಾದೆಗಳಿಗೆ

ಹೆಚ್ಚು ಇಷ್ಟವಾದುದು. ಗಾದೆಗಳಲ್ಲಿ ಪರ್ಯಾಯವಾಗಿ ರೋಗಗಳ ಕಾರಣ, ಗುಣ ಪರಿಹಾರವನ್ನು ಸೂಚಿಸಲಾಗಿದೆ.

*1. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.*

*2. ಉಗುಳಿ ಉಗುಳಿ ರೋಗ ಬಂತಂತ, ಬೊಗಳಿ ಬೊಗಳಿ ರಾಗ ಬಂತಂತ.*

*3. ಕುಂತ ಕುಂಡಿ ತುರಿಸಿಕೊಂಡ ಹುಣ್ಣ ಮಾಡಿಕೊಂಡ್ರಂತ.*

ಮಾನವನ ಹುಟ್ಟಿನೊಂದಿಗೆ ಹುಟ್ಟಬಂದ ರೋಗಗಳು, ಒಂದಿಲ್ಲೊಂದು ಕಾರಣದಿಂದ ಮಾನವನಿಗೆ ಅಂಟಿಕೊಂಡಂಥವುಗಳು. ರೋಗಗಳಿಂದ ಉಂಟಾಗುವ ದೈಹಿಕ, ಮಾನಸಿಕ ಹಿಂಸೆ ವರ್ಣಿಸಲಸದಳ.

*1. ಹುರುಕಿನಾಕಿ ಕೈಯ ನೋಡಬಾರದು ಸುಂಬಳಬುರುಕಿ ಮೈಯ ನೋಡಬಾರದು.*

*2. ಇಸಮುಳ್ಳವನ ಹೆಂಡತಿ ಕುಸುಬಿ ಪಲ್ಲೆ ಕಳವು ಮಾಡಿದ್ದಂತ*

*3. ಕಜ್ಜಿಯಿದ್ದವನಿಗೆ ಲಜ್ಜೆಯಿಲ್ಲ ತುರುಕಿಯಿದ್ದವನಿಗೆ ನಾಚಿಕೆಯಿಲ್ಲಾ.*

*4. ಕಾಮಾಲೆ ರೋಗದವನಿಗೆ ಜಗತ್ತೆಲ್ಲಾ ಹಳದಿ.*

*5. ಕ್ಷಯರೋಗ ವಾಸಿಯಾಗೂದು ಕಷ್ಟ, ಬರದಲ್ಲಿ ಅನ್ನ ದೊರೆಯುವುದು ಕಷ್ಟ.*

ಜನಪದದಲ್ಲಿ ಜ್ವರ, ಕೆಮ್ಮು, ನೆಗಡಿಗೆ ವಿಶಿಷ್ಟ ಸ್ಥಾನವಿದೆ. ಇವು ಎಂಥ ಆರೋಗ್ಯವಂತರನ್ನೂ ಕಾಡದೇ ಬಿಡವು. ಜನಪದ ಗಾದೆಗಳಲ್ಲೂ ಈ ಸಿದ್ಧಾಂತ ನಿರೂಪಿತವಾಗಿದೆ.

*1. ಮೂಗು ಇರುವವರೆಗೆ ನೆಗಡಿ ತಪ್ಪಿದ್ದಲ್ಲಾ.*

*2. ನೆಗಡಿಯಂತಾ ರೋಗವಿಲ್ಲಾ ಬುಗುಡಿಯಂತಾ ಒಡವೆಯಿಲ್ಲಾ.*

*3. ಅಮ್ಮನಿಗೆ ಮೊಮ್ಮಗಳು ಕೆಮ್ಮು ಕಲಿಸಿದ್ದಂತ.*

ಬಂಜೆತನ ಹೆಣ್ಣಿನ ಜೀವನಕ್ಕೆ ಅಂಟಿದ ಒಂದು ಮಹಾರೋಗ. ಈ ರೋಗಪೀಡಿತರಾದವರು ಸಮಾಜದಲ್ಲಿ ಬಿರುನುಡಿಗಳಿಂದ ಬಚಾವಾಗಿ ಬದುಕುವುದು ಕಷ್ಟಸಾಧ್ಯ.

*ಬಂಜೆ ಬ್ಯಾನಿ ಅರಿಯಳು ಮಿಂಡಿ ದುಃಖ ಅರಿಯಳು*

*ಬಂಜೆಗೆ ಬ್ಯಾನಿ ಗೊತ್ತಿಲ್ಲ, ಮಲತಾಯಿಗೆ ಮುದ್ದ ಗೊತ್ತಿಲ್ಲ*

ಹೀಗೆ ಜನಪದ ಗಾದೆಗಳಲ್ಲಿ ರೋಗ ರುಜಿನಗಳ ಬಗೆಗೆ ಪ್ರಾಥಮಿಕ ಮಾಹಿತಿಯ ಉಲ್ಲೇಖವನ್ನು ನಾವು ಕಾಣಬಹುದು.

**ಜನಪದ ಬೈಗುಳಗಳಲ್ಲಿ ರೋಗ-ರುಜಿನಗಳು :**

ಮಾನವ ಸಮಾಜ ಜೀವಿ. ತನ್ನ ಸುಖೋತ್ಕರ್ಷೆಗೆ ಕುಂದು ನಿಂದೆಗಳು ಬಂದಾಗ ಕೋಪಗೊಳ್ಳುವನು. ವ್ಯಕ್ತಿಯ ಗುಣಾವಗುಣ ಕುರಿತು ಮಾತನಾಡಿ ತನ್ನ ಕೋಪ ಶಾಂತಮಾಡಿಕೊಳ್ಳುವನು. ಇಂಥ ಸಂಕೀರ್ಣ ಸ್ಥಿತಿಯಲ್ಲಿ ತನಗಾಗದವರಿಗೆ ಬಯ್ಯುವುದು, ಶಾಪಹಾಕುವುದು ಸಹಜ. ಆಗ ವ್ಯಕ್ತಿಗತವಾಗಿ ಸಾರ್ವಜನಿಕವಾಗಿ ಬಯ್ಗುಳಗಳು ಹೊರಹೊಮ್ಮುವವು. ಇಂಥ ಬಯ್ಗುಳಗಳಲ್ಲಿ ರೋಗಗಳು ಬಳಕೆಯಾಗಿರುವುದನ್ನು ನಾವು ಕಾಣಬಹುದು.

ಪಿಡಗ ಬ್ಯಾನಿ ಬರಲಿ, ದುರಗವ್ವನ ಬ್ಯಾನಿ ಬರಲಿ, ಕೆಟಬ್ಯಾನಿ ಬರಲಿ, ಶೆಟಬ್ಯಾನಿ ಬಂದ ಶೆಟೆದು ಶಕ್ಕಿ ಆಗಲಿ, ಉಳ್ಳಿಬ್ಯಾನಿ ಬಂದ ನಿನ್ನ ಉಳ್ಳಿಸಗೊಂಡ ಹೋಗಲಿ, ಮಾರಿಬ್ಯಾನಿ ಬಂದ ಮುರದ ಮುಟಗಿ ಆಗಲಿ ಮುಂತಾದ ಬೈಯ್ಗುಳಗಳು ವೈರಿಗೆ ರೋಗ ಬಂದು ಸಾವು ಸಂಭವಿಸಲಿ ಎಂಬ ಆಶಯದಲ್ಲಿ ಮೂಡಿಬಂದವುಗಳಾಗಿವೆ.

ಹೊಟ್ಯಾಗ ಹುಣ್ಣ ಹುಟ್ಟಲಿ, ಬಾಯಾಗ ಹುಳಾ ಬೀಳಲಿ, ಕಾಲಾಗ ಹುಳಾ ಬೀಳಲಿ, ಹೊಟ್ಯಾಗ ಗಂಟ ಏಳಲಿ, ಕಣ್ಣ ಇಂಗಲಿ, ಕೈಯ ಸೇದಲಿ ಮುಂತಾದ ಬೈಯ್ಗುಳಗಳು ರೋಗಗಳಿಂದ ವೈರಿಯಾದವನು ಸಹಿಸಲಸಾಧ್ಯವಾದ ನೋವು ಅನುಭವಿಸಲಿ ಎಂಬುದಾಗಿದೆ.

ಹೀಗೆ ಆದಿಮಕಾಲದಿಂದಲೂ ಜನಸಮುದಾಯವನ್ನು ನಾನಾ ವಿಧದ ರೋಗಗಳು ಬಾಧಿಸುತ್ತಲೇ ಬಂದಿವೆ. ಪ್ಲೇಗು, ಮಲೇರಿಯಾ, ಜ್ವರ, ದಘಾರ, ನರರೋಗ, ಹುಣ್ಣು ಮುಂತಾದವುಗಳ ಬಗೆಗೆ ಸಮ್ಮ ಜನಪದರಲ್ಲಿ ನಂಬಿಕೆ, ಆಚರಣೆ, ಸಂಪ್ರದಾಯ, ಗಾದೆ, ಬೈಗುಳಗಳು ರೂಢಿಯಲ್ಲಿವೆ.

* * *

**ಗ್ರಂಥ ಋಣ :**

1. ಉತ್ತರ ಕರ್ನಾಟಕ ಗಾದೆಗಳು – ಸಂ : ಬಿ.ಬಿ. ಹೆಂಡಿ (ಸ.ಪು. ಧಾರವಾಡ– 1990)

2. ಉತ್ತರ ಕರ್ನಾಟಕದ ಬೈಗುಳಗಳು-ಸಂ : ಮ್ಯ. ಹೊರಕೇರಿ (ಕ.ಸಾ.ಪ. ಬೆಂಗಳೂರು - 1981)

3. ಕರ್ನಾಟಕ ಜನಪದ ಚಿತ್ರಕಲೆ -ಡಾ. ಎಸ್.ಸಿ. ಪಾಟೀಲ (ವಿ.ಆ.ಸಂ. ಗದಗ-1993)

4. ಗಾದೆಗಳಲ್ಲಿ ಆರೋಗ್ಯ - ಡಾ. ಪಿ.ಎಚ್. ಶಂಕರ (ಕ.ವಿ.ವಿ. ಧಾರವಾಡ-1980)

5. ಜನಪದ ಗೀತೆಗಳು-ಸಂ. : ಎಂ. ಜೀವನ (ಸಿಟಿ ಬುಕ್ ಸ್ಟಾಲ್, ಹುಬ್ಬಳ್ಳಿ-1955)

6. ಜನಪದ ವೈದ್ಯ - ಸಂ : ಶಾಂತಕುಮಾರಿ ಪಾಟೀಲ (ಚೇತನಾ ಪ್ರ. ಧಾರವಾಡ-1980)

7. ಜಾನಪದ ವಿಶ್ವಕೋಶ (ಸಂ:1) - ಸಂ : ಚಂದ್ರಶೇಖರ ಕಂಬಾರ (ಕ.ಸಾ.ಪ. ಬೆಂ-1985)

8. ಜಾನಪದ ಸಾಹಿತ್ಯ ದರ್ಶನ, ಭಾಗ-18 - ಸಂ: ಎಸ್.ಜಿ. ಇಮ್ರಾಪುರ (ಕ.ವಿ.ವಿ. ಧಾ-1993)

9. ಪ್ಲೇಗ ಮಹಾಮಾರಿ - ಡಾ. ಕ. ಕ್ಯಾಲಕೊಂಡ (ಕ.ವಿ.ವಿ. ಧಾರವಾಡ-1996)

10. ಮೊಹರಂ ಪದಗಳು - ಸಂ : ಡಾ. ದಸ್ತಗೀರ ಅಲ್ಲೀಬಾಯಿ (ಕ.ಪು. ಪ್ರಾಧಿಕಾರ ಬೆಂ-1999)

* ಸುಧಾ, ಯುಗಾದಿ ವಿಶೇಷಾಂಕ 1999.

* ಸಂಯುಕ್ತ ಕರ್ನಾಟಕ : 17-11-2001.
ವಿಜಯ ಕರ್ನಾಟಕ : 5-12-2001.

* * *

**ಅಡಿಟಿಪ್ಪಣಿಗಳು :**

1. ಎ.ಸಿ. ಲಲಿತ - ಸಸ್ಯ ಜನಪದ ವೈದ್ಯ (ಜಾ.ಸಾ. ದರ್ಶನ, ಭಾಗ-18 ಕ.ವಿ.ವಿ. ಧಾ-1993) ಪುಟ : 51

2. 3. ಅದೇ ಪುಟ : 64

4. ಕ. ಕಲ್ಯಾಕೊಂಡ – ಪ್ಲೇಗ ಮಹಾಮಾರಿ (ಕ.ವಿ.ವಿ.ಧಾ–1996) ಪುಟ :5

5. ಡಾ. ಚಂದ್ರಶೇಖರ ಕಂಬಾರ – ಜಾ.ವಿ. ಕೋಶ (ಕ.ಸಾ.ಪ. ಬೆಂಗಳೂರು – 1985) ಸಂ : 1 ಪುಟ : 2

6. ಸಂಯುಕ್ತ ಕರ್ನಾಟಕ 17–11–2001 ಪುಟ : 8

7. ಡಾ. ದಸ್ತಗೀರ ಅಲ್ಲೀಭಾಯಿ–ಮೊಹರಂ ಪದಗಳು (ಕ.ಪು. ಪ್ರಾ ಬೆಂ–1999) ಪುಟ : 14

8. ವಿಜಯ ಕರ್ನಾಟಕ ದಿನಪತ್ರಿಕೆ 5–12–2001

9. ಶಾಂತಕುಮಾರಿ ಪಾಟೀಲ : ಜನಪದ ವೈದ್ಯ (ಚೇತನಾ ಪ್ರಕಾಶನ, ಧಾರವಾಡ–1980) ಪ್ರಸ್ತಾವನೆ ಪುಟ : 9

10. ಡಾ.ಎಸ್.ಸಿ. ಪಾಟೀಲ : ಜನಪದ ಚಿತ್ರಕಲೆ (ಅ. ಸಂಸ್ಥೆ, ಗದಗ –1993) ಪುಟ : 252

11. ಅದೇ ಪುಟ : 111

12. ಅದೇ ಪುಟ : 246

13. ಡಾ. ದಸ್ತಗೀರ ಅಲ್ಲೀಭಾಯಿ – ಜನಪದ ಚಿತ್ರಕಲೆ ಮದರಂಗಿ (ಸುಧಾ, ಯುಗಾದಿ ವಿಶೇಷಾಂಕ – 1999) ಪುಟ : 82

14. ಡಾ. ದಸ್ತಗೀರ ಅಲ್ಲೀಭಾಯಿ – ಮೊಹರಂ ಪದಗಳು (ಕ.ಪು.ಪ್ರಾ. ಬೆಂಗಳೂರು – 1999) ಪ್ರಸ್ತಾವನೆ ಪುಟ : 25

15. ಅದೇ ಪುಟ : 25

16. ಅದೇ ಪುಟ : 142.

* * *

# ೪. ಜಾನಪದ ರೋಗದೇವತೆಗಳು

ಡಾ। ಚೆನ್ನಣ್ಣ ವಾಲೀಕಾರ

**ಕರ್ನಾಟಕದ ಉತ್ತರ ಭಾಗದಲ್ಲಿ ಸಮುದಾಯದ ನಂಬಿಕೆಯಲ್ಲಿ ಮನೆಮಾಡಿರುವ ರೋಗಸಂಬಂಧಿ ದೇವತೆಗಳ ವಿವರಣೆಯನ್ನು ಲೇಖನವು ಒದಗಿಸುತ್ತದೆ.**

**–ಸಂ.**

ಗ್ರಾಮದೇವತೆಗಳ ಅಧ್ಯಯನದ ಹಿನ್ನೆಲೆಯಲ್ಲಿ ಜನಪದ ರೋಗಗಳು ಯಾವುವು ಎಂಬುದನ್ನು ತಿಳಿಯಬಹುದಾಗಿದೆ.

**I ಲಾಭದ ಹಿನ್ನೆಲೆಯಲ್ಲಿ**

i. ಆರ್ಥಿಕ ಸಂವರ್ಧನೆಗಾಗಿ : ಮಳೆಬೆಳೆಯ ದೇವತೆ – ದ್ಯಾವಮ್ಮ.

ii. ಆರೋಗ್ಯ ಸಂವರ್ಧನೆಗಾಗಿ : ರೋಗರುಜಿನ ದೂರಮಾಡುವ ದೇವತೆ – ಮಾರಮ್ಮ.

iii. ರಾಜಕೀಯ ರಕ್ಷಣೆಗಾಗಿ : ಕೋಟೆಕೊತ್ತಳ ರಕ್ಷಿಸುವ ದೇವತೆ – ದುರ್ಗಮ್ಮ.

iv. ಫಲಸಂತಾನದೇಳಿಗೆಗಾಗಿ : ಮಕ್ಕಳನ್ನು ನೀಡುವ ದೇವತೆ – ಎಲ್ಲಮ್ಮ.

v. ಮಕ್ಕಳನ್ನು ಪಾಲಿಸುವುದಕ್ಕಾಗಿ : ಮಕ್ಕಳನ್ನು ಪಾಲಿಸುವ ದೇವತೆ – ಪಾಲಕಮ್ಮ.

vi. ಕೆಟ್ಟದ್ದನ್ನು ನಿವಾರಣೆ ಮಾಡುವವಳು – ಕಾಳಮ್ಮ.

vii. ಉಡುಚು ಬೇನೆ ಕಳೆಯುವವಳು : ಉಡಚಮ್ಮ.

viii. ಬಂದ ರೋಗದ ಸುಂಕ ಕಳೆಯುವವಳು : ಸುಂಕಲಮ್ಮ.

ix. ಬಂದ ರೋಗದ ಗಾಳಿ ನಾಶಮಾಡುವವಳು : ಗಾಳೆಮ್ಮ.

x. ಊರ ಚಾವಡಿ ರಕ್ಷಿಸುವವಳು : ಚೌಡಮ್ಮ.

**II ಕಾಲದ ಹಿನ್ನೆಲೆಯಲ್ಲಿ**

(ಅ) ಬುಡಕಟ್ಟಿನ ಕಾಲದಲ್ಲಿ : ಶಕ್ತಿದೇವತೆಗಳು.

i. ಮರದಮ್ಮ : ನೆರಳು, ಹಣ್ಣು ಹಂಪಲು ನೀಡುವವಳು.

ii. ಪಾಲಕಮ್ಮ : ಪೋಚಮ್ಮ : ಮಕ್ಕಳನ್ನು ನಾನಾ ರೋಗಗಳಿಂದ ಪಾಲಿಸುವವಳು, ಪೋಷಿಸುವವಳು.

iii. ಗುಡ್ಡದಮ್ಮ : ಅಪಾಯಗಳಿಂದ ಉಳಿಸುವವಳು.

iv. ಬನದಮ್ಮ : ಬೇಟೆ ನೀಡುವವಳು.

(ಬ) ಪಶುಪಾಲನಾ ಕಾಲದಲ್ಲಿ ನಂದಿನಿಯಮ್ಮ : ರೋಗ ದೂರ ಮಾಡುವ ದೇವತೆ.

(ಕ) ಗ್ರಾಮೀಣ ಕಾಲದಲ್ಲಿ

ಮರಗಮ್ಮ : ಸಾವು ನೋವು ರೋಗರುಜಿನಗಳಿಂದ ಉಳಿಸುವ ದೇವತೆ.

(ಡ) ಐತಿಹಾಸಿಕ ಕಾಲದಲ್ಲಿ

ದುರ್ಗಮ್ಮ : ಕೋಟೆಯಿಂದ ಜನರ ಬದುಕು ರಕ್ಷಿಸುವವಳು.

ಎಲ್ಲಮ್ಮ : ರೋಗಗಳಿಂದ ರಕ್ಷಿಸಿ ಆರೋಗ್ಯಭಾಗ್ಯ ನೀಡಿ ಮಕ್ಕಳನ್ನು ನೀಡುವವಳು.

(ಪ) ಆಧುನಿಕ ಕಾಲದಲ್ಲಿ

ಮಾನಾಗುಂದಿ ಮಾಣಿಕಮ್ಮ : ಸಸ್ಯಾಹಾರಗಳನ್ನು ನೀಡಿ ಆರೋಗ್ಯ ಕಾಪಾಡುವವಳು.

**III ತಾಂತ್ರಿಕದ ಹಿನ್ನಲೆಯಲ್ಲಿ**

i. ಕುಂಡಿಗೆ ಪೂಜಿಸಿಕೊಳ್ಳುವ ದೇವತೆಗಳು : ಗುಲಬರ್ಗಾ ಜಿಲ್ಲೆಯ ಸೇಟ್ ಚೆಂದಮ್ಮ, ಗೋಲ್ಯಾ ಲಕ್ಕಮ್ಮ, ಬೀದರ್ ಜಿಲ್ಲೆಯ ಬಗದೂರಿ ಎಲ್ಲಮ್ಮ.

ii. ಯೋನಿಗೆ ಪೂಜಿಸಿಕೊಳ್ಳುವ ದೇವತೆಗಳು : ಕೊಪ್ಪಳ ಜಿಲ್ಲೆಯ ತಳಕಲ್ಲು ಉಡಚಮ್ಮ, ಬಿಜಾಪುರ ಜಿಲ್ಲೆಯ ಲಜ್ಜಾಗೌರಿ.

**IV ಗುಣದ ಹಿನ್ನೆಲೆಯಲ್ಲಿ**

i. ಸಾತ್ವಿಕ : ಮಳೆಬೆಳೆಗಾಗಿ.
ಯೋಗಿ : ದ್ಯಾವಮ್ಮ.

ii. ರಾಜಸ : ಸಂಸಾರ ಸುಖವಾಗಲು.
ಭೋಗಿ – ಎಲ್ಲಮ್ಮ.

iii. ತಾಮಸ : ಅನಾರೋಗ್ಯ ತೆಗೆದು ಆರೋಗ್ಯಭಾಗ್ಯ ನೀಡಲು.
ಮಾರಮ್ಮ : ಮೃತ್ಯುವಿನಿಂದ ಉಳಿಸುವವಳು – ಹೆಣ್ಣು ಗಂಡುಗಳನ್ನು.
ಪಾಲಕಮ್ಮ ಪೋಚಮ್ಮ : ರೋಗಗಳಿಂದ ಕಾಪಾಡುವವಳು.

**V ಸಪ್ತ ಮಾತೃಕೆಯರ ಹಿನ್ನೆಲೆಯಲ್ಲಿ :**

ಮಾತೃಪ್ರಧಾನ ಕುಟುಂಬ ಪದ್ಧತಿ ಹೊಂದಿದ್ದ ದ್ರಾವಿಡರ ಕಾಲದಲ್ಲಿ

ಮನೆಯನ್ನು ನೋಡಿಕೊಳ್ಳಲು ಒಬ್ಬ ತಾಯಿಯಿರುವಂತೆ, ಊರನ್ನು ನೋಡಿಕೊಳ್ಳಲು ಒಬ್ಬ ತಾಯಿಯನ್ನು ಊರ ಮಧ್ಯದಲ್ಲಿ ಸ್ಥಾಪಿಸಿದರು. ಈಕೆಯೇ ಗ್ರಾಮದೇವತೆಯಾದಳು. ಆರ್ಯರ ಕಾಲದಲ್ಲಿ ಬಂದ ಪುರುಷಪ್ರಧಾನ ದೇವತೆಗಳು ಗ್ರಾಮದೇವತೆಗಳಾದರೆ ದ್ರಾವಿಡರ ಕಾಲದಲ್ಲಿ ಬಂದ ಈ ಸಪ್ತಮಾತೃಕೆಯರು ಗ್ರಾಮದೇವತೆಗಳಾದರು.

**(ಅ) ದ್ಯಾವಮ್ಮ ಇಲ್ಲವೆ ದ್ಯಾಮವ್ವ** (Goddess of Fertility and prosperity):

ಈಕೆ ರೋಗರುಜಿನ, ಸಾವು ನೋವು ಬರದಂತೆ ನೋಡಿಕೊಳ್ಳುವ ಫಲವತ್ತತೆ ಮತ್ತು ಸಮೃದ್ಧಿ ಮಾಡುವಂಥ ದೇವತೆ. ಮಳೆಬೆಳೆಯಿಂದ ದನಕರು ಕುರಿಮರಿ ಪಶುಪಕ್ಷಿ ಸಕಲ ಜೀವಜಂತು ಮನುಷ್ಯ ವರ್ಗಕ್ಕೆ ಸುಖ ಸಂತೋಷ ಶಾಂತಿ ಸಮಾಧಾನ ಸಮೃದ್ಧಿಯನ್ನು ತರುವವಳು. ದೈವಮ್ಮ>ದ್ಯಾವಮ್ಮ>ದ್ಯಾಮವ್ವ ಆದದ್ದು ನೋಡಿದರೆ ಈಕೆ ಎಲ್ಲಾ ದೇವತೆಗಳಿಗೂ ದೊಡ್ಡದೇವತೆ, ಹೆಚ್ಚಿನ ದೇವತೆ ಎಂದು ತಿಳಿದುಬರುವುದು. ಈ ದೇವಿಯ ಉತ್ಸವದಲ್ಲಿ ಕುರಿಕೋಣಗಳ ಬಲಿ ಕೊಡುವರು.

**(ಬ) ಮರಗಮ್ಮ ಇಲ್ಲವೆ ಮಾರಮ್ಮ** (Goddess of plague, cholera and death):

ಮರ+ಅಮ್ಮ= ಮರದಮ್ಮ>ಮರಗಮ್ಮ>ಮಾರೆಮ್ಮ ಎಂದಾಗಿರುವುದು. ಅಂದರೆ ಈಕೆ ಮೃತ್ಯುವನ್ನು ನಿವಾರಿಸುವ ದೇವತೆ. ದ್ಯಾವಮ್ಮ ಜನನವನ್ನು ನೀಡುವ ದೇವತೆಯಾದರೆ, ಮಾರಮ್ಮ ಮೃತ್ಯುವಿನಿಂದ ಕಾಪಾಡುವ ದೇವತೆಯಾಗಿದ್ದಾಳೆ. ಮೃತ್ಯು ಕಾರಣವಾದ ಇತರ ರೋಗಗಳನ್ನು ಆಕೆ ದೂರ ಮಾಡುವಳು.

1. ಕೆಮ್ಮು, ದಮ್ಮು 2. ಗಂಡಮಾಲೆ, 3. ಒಳಪೆಟ್ಟು, 4. ಹೊಟ್ಟೆ ಬೇನೆ, 5.ಉಬ್ಬಸ, 6. ಗಾಯ, 7. ಚೇಳು ಕಡಿತ, 8. ಹಾವು ಕಡಿತ, 9. ಹುಣ್ಣು, 10. ಒಣಗುವಿಕೆ, 11. ರಕ್ತ ಸೋರುವಿಕೆ, 12. ಕಜ್ಜಿ ಹುರುಕು, 13. ತದ್ದು, 14. ಕುಷ್ಠರೋಗ, 15.ಕಿವಿಕಣ್ಣು ಸೋರುವಿಕೆ – ಮುಂತಾದ ರೋಗಗು ಗುಣವಾಗಲು ಜಾನಪದ ವೈದ್ಯರು ಗಿಡದ ಬೀಜದಿಂದ, ತಪ್ಪಲದಿಂದ ಮಾಡಿದ ಔಷಧಿ ಕೊಡುವರು. ರಸ ಮಾಡಿ ಕುಡಿಸುವರು. ಗಾಯಕ್ಕೆ ಹಚ್ಚುವರು. ಈ ದೇವತೆಗಳ ಉತ್ಸವದಲ್ಲಿ ಕುರಿ, ಕೋಣಗಳ ಬಲಿ ಕೊಡುವರು.

(ಕ) ಫಾಲಕಮ್ಮ, ಪೋಚಮ್ಮ (Goddess of children) :

ಈಕೆ ಕೇವಲ ಮಕ್ಕಳ ದೇವತೆ. ಮಕ್ಕಳನ್ನು ಪಾಲಿಸುವ ಪೋಷಿಸುವ ದೇವತೆ. ಮಕ್ಕಳಿಗೆ ಬರುವ ರೋಗರುಜಿನ ಬೇನೆಗಳನ್ನು ದೂರಮಾಡುವ ದೇವತೆ. ಪಾಲಿಸುವ+ಅಮ್ಮ=ಪಾಲಕಮ್ಮ. ಪೋಷಿಸುವ+ಅಮ್ಮ=ಪೋಚಮ್ಮ.

1. ಉರಿ ಚಳಿ 2. ಕೆಮ್ಮು ದಮ್ಮು 3. ದೇವಿ ಬಿಡುವುದು 4. ಗೊಬ್ಬರ 5.ಗಣಜಲು.

ಏಳು ದಿವಸ ಬೇವಿನ ತಪ್ಪಲು ಕಾಸಿದ ನೀರಿನಲ್ಲಿ ಹಾಕಿ ಅದರಿಂದ ಜಳಕ ಮಾಡಿಸಿದರೆ ಈ ದೇವಿ, ಗೊಬ್ಬರ, ಗಣಜಲು ದೂರಮಾಡುವಳು. ಮಕ್ಕಳ ಮೈಗೆ, ಮುಖಕ್ಕೆ ಹುಣ್ಣುಗಳಾದರೆ ದೇವತೆಯ ಮೈಗೆ ಹಚ್ಚಿದ ಎಣ್ಣೆಯನ್ನು ಮಕ್ಕಳ ಕಜ್ಜಿಗೆ, ಹುಣ್ಣಿಗೆ ಹಚ್ಚಿ ಗುಣಪಡಿಸುವವರು. ಹಾಗೆ ಅರಿಸಿಣದ ಭಂಡಾರ ಹಚ್ಚುವರು. ಕೆಲವೊಮ್ಮೆ ಚಂದ್ರ ಕುಂಕುಮವೂ ಹಚ್ಚುವರು. ಕೋಳಿ ಬಲಿ ಕೊಡುವರು.

(ಡ) ಎಲ್ಲಮ್ಮ (Goddess of border) :

ಬೇಂದ್ರೆಯವರು ಹೇಳುವಂತೆ ಎಲ್ಲೆಯ+ಅಮ್ಮ=ಎಲ್ಲಮ್ಮನಾಗಿರುವಳು. ಆದರೆ ಈಗ ಎಲ್ಲರ+ಅಮ್ಮ=ಎಲ್ಲಮ್ಮನೆಂದೂ ಹೇಳುವರು. ಎಲ್ಲಮ್ಮನನ್ನು ಆಕೆಯ ಭಕ್ತರು, ಅನುಯಾಯಿಗಳು ಈ ಕಾರಣಕ್ಕಾಗಿ ಪೂಜಿಸುವರು :

1. ಫಲಸಂತಾನಕ್ಕೆ.
2. ರೋಗ-ರುಜಿನ ನಿವಾರಣೆಗೆ.
3. ಸಾವು ನೋವು ಹೋಗುವುದಕ್ಕೆ.
4. ಹಸುಗಳ ಹಾಲು ಹೆಚ್ಚುವುದಕ್ಕೆ.
5. ದಾಂಪತ್ಯ ಜೀವನ ಸುಖವಾಗಿರುವುದಕ್ಕೆ.
6. ಸುಖಶಾಂತಿ, ಸಮೃದ್ಧಿ ಹೆಚ್ಚುವುದಕ್ಕೆ.

ಈ ಕಾರಣದಿಂದ ಈಕೆಯ ಪೂಜೆ, ಜಾತ್ರೆ, ಉತ್ಸವದಲ್ಲಿ ರೋಗನಿವಾರಕ ಗುಣವುಳ್ಳ ಎಣ್ಣೆ, ಅರಿಸಿಣ, ಕುಂಕುಮ ಬಳಸುವರು. ಬತ್ತಲೆಯಾಗಿ ಬೇವಿನ ತಪ್ಪಲು, ಲಕ್ಕಿತಪ್ಪಲು ಕಟ್ಟಿಕೊಂಡು ದೇವಿ ಸೇವೆಮಾಡುವರು. ಇದಕ್ಕೆ ಉಟಿಗೆಸೇವೆ ಎನ್ನುವರು.

(ಢ) ದುರಗಮ್ಮ (Goddess of Fort) :

ಈಕೆ ಕೋಟೆಯ ರಕ್ಷಕಳಾಗಿದ್ದರೂ ಗ್ರಾಮೀಣ ಜನ ತಮ್ಮ ಆಯುರಾರೋಗ್ಯ ಸಂಸಾರ ಸುಖಶಾಂತಿ ಸಮೃದ್ಧಿಯಿಂದ ಇರಲು, ಮಳೆ ಬೆಳೆ ಬರಲು ಪೂಜಿಸುವರು. ಕುರಿ ಕೋಣಗಳ ಬಲಿ ಕೊಡುವರು.

(ಣ) ಕಾಳಮ್ಮ (Goddess of war) :

ಈಕೆ ಪಂಚಾಳದವರ ದೇವತೆಯಾದರೂ ಜನ ಈಕೆಗೆ ಯುದ್ಧದ ದೇವತೆಯೆಂದು ಪೂಜಿಸುವರು. ತಮಗೆ ಬರುವ ಸಾವು; ನೋವು, ರೋಗರುಜಿನ ನಿವಾರಿಸುವ ಶಕ್ತಿದೇವತೆ ಎಂದು ಆರಾಧಿಸುವರು. ಆದರೆ ಇಲ್ಲಿ ಯಾವ ಬಲಿಕರ್ಮ ನಡೆಯುವುದಿಲ್ಲ. ಕಾರಣ ಪಂಚಾಳದವರು ಸಸ್ಯಾಹಾರಿಗಳಾಗಿರುವರು.

(ತ) ಚೌಡಮ್ಮ (Goddess of war) :

ಈಕೆ ದೇವಾಂಗದವರ ದೇವತೆಯಾದರೂ ಜನ ಈಕೆಗೆ ಯುದ್ಧದ ದೇವತೆ ಎಂದು ಪೂಜಿಸುವರು. ಮಕ್ಕಳಿಗೆ ಬರುವ ಸಾವು ನೋವು, ರೋಗರುಜಿನವನ್ನು ಬೇಗ ಗುಣಪಡಿಸುವ ಶಕ್ತಿಯುಳ್ಳವಳು ಎಂದು ಜನ ನಡೆದುಕೊಳ್ಳುವರು. ಈಕೆಗೂ ಯಾವ ಬಲಿ ನಡೆಯುವುದಿಲ್ಲ. ದೇವಾಂಗದವರು ಸಸ್ಯಾಹಾರಿಗಳಾಗಿರುವರು.

(ಥ) ಇನ್ನಿತರ ದೇವತೆಗಳು

1. ಕುಂಡಿಗೆ, ಯೋನಿಗೆ ಪೂಜಿಸಿಕೊಳ್ಳುವ ದೇವತೆಗಳು

ಕುಂಡಿಗೆ, ಯೋನಿಗೆ ಪೂಜಿಸಿಕೊಳ್ಳುವ ದೇವತೆಗಳು ಗುಹ್ಯ ರೋಗಗಳನ್ನು ದೂರ ಮಾಡುವ ದೇವತೆಗಳಾಗಿವೆ.

ಉದಾ : ಗುಲಬರ್ಗಾ ಜಿಲ್ಲೆಯ ಗೋಳ್ಯಾ ಲಕ್ಕಮ್ಮ, ಬಿಜಾಪುರ ಜಿಲ್ಲೆಯ ಲಜ್ಜಾಗೌರಿ, ಬೀದರ್ ಜಿಲ್ಲೆಯ ಬದಗೂರಿ ಎಲ್ಲಮ್ಮ.

2. ತಿಳಕಲ್ಲ ಉಡುಚಮ್ಮ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮನಾಳದ ಉಡುಚಮ್ಮ ಹೆಸರಿಗೆ ಉಡುಚಿನ ದೇವತೆಯಾಗಿದ್ದರೂ ಈಕೆ ಮೂಲತಃ ರೋಗದ ದೇವತೆಯಾಗಿದ್ದಾಳೆ. ಹೆಣ್ಣಾಗಲಿ, ಗಂಡಾಗಲಿ ತಮ್ಮ ಲಿಂಗಕ್ಕೆ (ಜನನೇಂದ್ರಿಯಕ್ಕೆ) ಯಾವುದೇ ರೋಗ

ಬಂದರೂ ಈ ದೇವಿಯ ಗುಡಿಗೆ ಹೋಗಿ, ಬಾಗಿಲು ಹಾಕಿ, ತಮ್ಮ ಲಿಂಗವನ್ನು ಈ ದೇವಿಯ ಮೂರ್ತಿಗೆ ತಿಕ್ಕುವರು. ಇದರಿಂದ ಬಂದಂಥ ರೋಗ ಗುಣವಾಗುವುದೆಂದು ಜನರ ನಂಬಿಕೆ.

**3. ಶಂಕರವಾಡಿ ಹನುಮದೇವರು :**

ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿ ಗ್ರಾಮದ ಹನುಮದೇವರ ಗುಡಿಯ ಭಕ್ತ ಗೋಳ್ಯಾ ಸಾಬಣ್ಣ ತಾನು ಜೀವಂತನಿದ್ದಾಗ ಈ ದೇವರ ಹೆಸರಿನಲ್ಲಿ ಚೇಳು ಹಾವು ಕಚ್ಚಿದರೆ, ಹೊಟ್ಟೆಬೇನೆಗೆ, ಹುಚ್ಚು ಹಿಡಿದರೆ, ಭಯ ಭ್ರಾಂತಿಗೆ ಬೇರೆ ಬೇರೆ ಗಿಡದೌಷಧಿ ಕುಡಿಸುತ್ತಿದ್ದರು.

**4. ಲಕ್ಷ್ಮಿ (Goddess of wealth) :**

ಬೀದರ್ ಜಿಲ್ಲೆಯಲ್ಲಿ ಈ ದೇವತೆಗೆ ಬಹಳಷ್ಟು ಜನ ಆರಾಧಿಸುವರು. ಜಾತ್ರೆ, ಉತ್ಸವ ನಡೆಸುವರು. ಫಲಸಂತಾನಕ್ಕಾಗಿ, ಮಳೆಬೆಳೆಗಾಗಿ, ಆರೋಗ್ಯ ಭಾಗ್ಯಕ್ಕಾಗಿ ತಮ್ಮ ಇಷ್ಟಾರ್ಥಗಳು ಈಡೇರಲು ನಿತ್ಯ ಪೂಜಿಸುವರು.

5. ಅಂಬಾಭವಾನಿ **(Goddess of Earth) :**

ಬೀದರ್ ಜಿಲ್ಲೆಯಲ್ಲಿ ಲಕ್ಷ್ಮಿಯಂತೆ ಈಕೆಗೂ ಜನ ಅಧಿಕವಾಗಿ ಪೂಜಿಸುವರು; ಆರಾಧಿಸುವರು. ಜಾತ್ರೆ, ಉತ್ಸವ ನಡೆಸುವರು. ಫಲಸಂತಾನಕ್ಕಾಗಿ, ಮಳೆಬೆಳೆಗಾಗಿ, ಆರೋಗ್ಯಕ್ಕಾಗಿ, ಸುಖಶಾಂತಿ ಸಮೃದ್ಧಿ ಜೀವನದಲ್ಲಿ ಹೆಚ್ಚಲಿಕ್ಕಾಗಿ ಪ್ರತಿವರ್ಷ ಮಹಾರಾಷ್ಟ್ರದ ತುಳಜಾಪುರಕ್ಕೆ ಹೋಗಿ ಬರುವರು.

ಎಲ್ಲಮ್ಮನ ಈ ಕೆಳಗಿನ ಹಾಡಿನಿಂದ ಜನರ ರೋಗ ರುಜಿನ ಹೋಗಲು, ಆರೋಗ್ಯಭಾಗ್ಯ ಹೆಚ್ಚಾಗಲು, ಈ ಗಿಡಗಳ ಹೂವುಗಳನ್ನು ಔಷಧಿ ಮಾಡಿ ಸೇವಿಸುತ್ತಿದ್ದರೆಂದು ಪರೋಕ್ಷವಾಗಿ ತಿಳಿದುಬರುವುದು.

## ಎಲ್ಲಮ್ಮನ ಹಾಡು

*ಬಾರ ಬಾರ ಎಲ್ಲಮ್ಮ ನೀ ಪರಶುರಾಮನ ತಾಯಮ್ಮ /ಪಲ್ಲವಿ/*
*ಕುರುಬರ ಮನೆಯ ಎಲ್ಲಮ್ಮ ಕುಬಾಸಿ-ಹೂವ ನಿನಗಮ್ಮ*
*ಕುಬಾಸಿ ಹೂವ ಕೊಡಲಿಕ್ಕೋದರ ಕುರುಬರಿಗೆಲ್ಲಾ ಬಯ್ಯಮ್ಮ / ೧ /*
*ಗೌಡರ ಮನೆಯ ಎಲ್ಲಮ್ಮ ಔಡಲ ಹೂವ ನಿನಗಮ್ಮ*

*ಔಡಲ ಹೂವ ಕೊಡಲಿಕ್ಕೋದರ ಗೌಡರಿಗೆಲ್ಲಾ ಬಯ್ಯಮ್ಮ । ೨ ।*
*ಅಯ್ಯಗೋಳ ಮನೆಯ ಎಲ್ಲಮ್ಮ ಅವರೆ ಹೂವ ನಿನಗಮ್ಮ*
*ಅವರೆ ಹೂವ ಕೊಡಲಿಕ್ಕೋದರ ಅಯ್ಯಗೋಳಿಗೆಲ್ಲಾ ಬಯ್ಯಮ್ಮ । ೩ ।*
*ಕುಂಬಾರ ಮನೆಯ ಎಲ್ಲಮ್ಮ ಕುಂಬಳ ಹೂವ ನಿನಗಮ್ಮ*
*ಕುಂಬಳ ಹೂವ ಕೊಡಲಿಕ್ಕೋದರ ಕುಂಬಾರರಲ್ಲಿ ಬಯ್ಯಮ್ಮ । ೪ ।*
*ಬ್ಯಾಡರ ಮನೆಯ ಎಲ್ಲಮ್ಮ ಬೇವಿನ ಹೂವ ನಿನಗಮ್ಮ*
*ಬೇವಿನ ಹೂವ ಕೊಡಲಿಕ್ಕೋದರ ಬ್ಯಾಡರಿಗೆಲ್ಲ ಬಯ್ಯಮ್ಮ । ೫ ।*
*ಮಾದರ ಮನೆಯ ಎಲ್ಲಮ್ಮ ಮಾವಿನ ಹೂವ ನಿನಗಮ್ಮ*
*ಮಾವಿನ ಹೂವ ಕೊಡಲಿಕ್ಕೋದರ ಮಾದರಿಗೆಲ್ಲ ಬಯ್ಯಮ್ಮ । ೬ ।*
*ಜಾಡರ ಮನೆಯ ಎಲ್ಲಮ್ಮ ಜಾಲಿ ಹೂವ ನಿನಗಮ್ಮ*
*ಜಾಲಿ ಹೂವ ಕೊಡಲಿಕ್ಕೋದರ ಜಾಡರಿಗೆಲ್ಲ ಬಯ್ಯಮ್ಮ । ೭ ।*
*ಹಾರೂರ ಮನೆಯ ಎಲ್ಲಮ್ಮ ತುಳಸಿ ಹೂವ ನಿನಗಮ್ಮ*
*ತುಳಸಿ ಹೂವ ಕೊಡಲಿಕ್ಕೋದರ ಹಾರುರಿಗೆಲ್ಲ ಬಯ್ಯಮ್ಮ । ೮ ।*

ಆದಿಮಾನವನ ಕಾಲದಿಂದ ಆರಂಭವಾದ ಜಾನಪದ ವೈದ್ಯಪದ್ಧತಿ ಆಧುನಿಕ ಮಾನವನ ಕಾಲಕ್ಕೂ ಬೆಳೆದು ಉಳಿದು ಬಂದಿದ್ದು ಈ ಕೆಳಗಿನಿಂದ ತಿಳಿಯುವುದು.

**1. ಬುಡಕಟ್ಟಿನ ಕಾಲದಲ್ಲಿ :**

ತಾನು ಬೇಟೆಯಾಡಿದ ಪಶುಪಕ್ಷಿ ಪ್ರಾಣಿಗಳ ರಕ್ತವನ್ನು ತಮಗೆ ಬಂದ ರೋಗ ನಿವಾರಣೆಗೆ ಹಚ್ಚಿಕೊಳ್ಳುತ್ತಿದ್ದರು. ಇಂದಿಗೂ ಪಾರ್ಶ್ವವಾಯು ಬಂದರೆ ಪಾರಿವಾಳಗಳ ರಕ್ತವನ್ನು ಮುಖ, ಕೈಮೈಗೆಲ್ಲಾ ಹಚ್ಚುವರು.

**2. ಪಶುಪಾಲನಾ ಕಾಲದಲ್ಲಿ :**

ತಮಗೆ, ತಮ್ಮ ಮಕ್ಕಳಿಗೆ ಬಂದ ರೋಗ ಹೋಗಲು ಪಶುಪ್ರಾಣಿಗಳ ಹಾಲು ಕೊಡಲಾಗುತ್ತಿತ್ತು. ಈಗಲೂ ಮಕ್ಕಳಿಗೆ ಹತ್ತುವ ನಾಯಿ ಕೆಮ್ಮು ಹೋಗಲು ಕತ್ತೆಯ ಹಾಲು ಕುಡಿಸುವರು.

ಆಧುನಿಕ ಔಷಧಿಗಳಿಂದ ರೋಗಗಳು ಬೇಗ ಗುಣವಾಗಲಾರವು ಎಂಬ ನಂಬಿಕೆ ಈವತ್ತಿಗೂ ಜನರಲ್ಲಿದ್ದು ಜಾನಪದ ಔಷಧಿಗಳನ್ನು ತಪ್ಪದೆ ಬಳಸುತ್ತಾ ಬಂದಿದ್ದಾರೆ.

* * *

# ೫. ಪರಿಸರ–ಸಮಾಜ–ರೋಗ ಜಾನಪದ

ಡಾ| ರಾಜೇಗೌಡ ಹೊಸಹಳ್ಳಿ

**ಮನುಷ್ಯ ಬದುಕುವ ಪರಿಸರ–ಸಮಾಜಗಳೆರಡೂ ರೋಗವಿಮುಕ್ತವಾಗಿದ್ದು, ಅಭಿವೃದ್ಧಿಯ ಕಡೆಗೆ ಕೊಂಡೊಯ್ಯಬೇಕೆನ್ನುವ ಆರೋಗ್ಯಪೂರ್ಣ ಜಾನಪದೀಯ ಚಿಂತನೆಯನ್ನು ಲೇಖನವು ಆಶಿಸುತ್ತದೆ.**

**–ಸಂ.**

ಜಾನಪದವು ಜನಪದ ಒಳಹೊರಗುಗಳ ವಿಚಾರ. ಜನಪದರೆಂದರೆ ಜನ. ಅದರಲ್ಲಿ ಗ್ರಾಮ್ಯ ಮತ್ತು ನಗರ ಎಂಬ ವಿಭಜನೆಯು ಅಧ್ಯಯನಕ್ಕೆ ಬಳಸಿಕೊಳ್ಳಬಹುದಾದ ಚಕ್ರಾಕಾರ ವಿಧಾನ. ಇಲ್ಲಿ ಜನ ಎಂದಾಗ ಜೀವವಿರುವ ಪ್ರಾಣಿಪಕ್ಷಿ ಮರಗಿಡ ಸಸ್ಯಸಂಕುಲವನ್ನೊಳಗೊಂಡಂತೆ ಜೀವ ಅಜೀವ ಸಂಪತ್ತನ್ನು ಚಕ್ರಾಕಾರವಾಗಿ ಸುತ್ತಿಕೊಂಡಿರುವ ಮಿದುಳುಳ್ಳ ಪ್ರಾಣಿ ಎಂದರ್ಥ. ಮಿದುಳು ಬಲವು ಮನುಷ್ಯನಿಗೊದಗಿದ ಒಂದು ನಿಸರ್ಗಫಲ.

ಇಲ್ಲಿ ರೋಗದ ವಿಚಾರಕ್ಕೆ ಬರೋಣ : ಇದು ಜನಪದ ಸಮಾಜಕ್ಕೆ ತಗುಲಿದ ಖಾಯಿಲೆ ಎಂದರ್ಥ. ಪ್ರಾಕೃತಿಕ ಬದುಕನ್ನು ಆವರಿಸಿಕೊಂಡಂತೆ ಮನುಷ್ಯನಿಗೆ ತಗುಲಿದ ಖಾಯಿಲೆ. ಇದು ಸೃಷ್ಟಿಮೂಲವನ್ನು ಕ್ಷೀಣಿಸುವ ವಿಧಾನ. ಈ ಖಾಯಿಲೆಗೆ ಎರಡು ಮುಖಗಳಿವೆ. ಒಂದು ದೇಹಕ್ಕೆ ಸಂಬಂಧಿಸಿದ್ದು. ಮತ್ತೊಂದು ಮನಸ್ಸಿಗೆ ಸಂಬಂಧಿಸಿದ್ದು. ಆರೋಗ್ಯವಂತ ಮನಸ್ಸು ಒಳ್ಳೆಯ ಬೀಜ ನೀಡಬಲ್ಲದು ಎಂದು ದಾರ್ಶನಿಕರು ಹೇಳುತ್ತಾರೆ. ಹಾಗಾಗಿ ದೇಹಕ್ಕೂ ಮನಸ್ಸಿಗೂ, ಸಮಾಜಕ್ಕೂ ಪ್ರಾಕೃತಿಕ ಬದುಕಿಗೂ ಅವಿನಾಭಾವ ಸಂಬಂಧವುಂಟು.

ಪ್ರಸ್ತುತ ಸಂದರ್ಭಕ್ಕೆ ಬರೋಣ : ಮನುಷ್ಯನಿಗೆ ಏಡ್ಸ್ ಖಾಯಿಲೆ ಬಂದಿದೆ. ತೆಂಗು ಬೆಳೆಗೆ ನುಸಿಪೀಡೆ ಬಂದಿದೆ. ಎರಡಕ್ಕೂ ಔಷಧಿ ಇಲ್ಲ. ನಿಯಂತ್ರಿಸುತ್ತಾ ಹೋದಂತೆಲ್ಲಾ ಬೇನೆಗಳು ಹೊರಳು ದಾರಿಯಲ್ಲಿರುತ್ತವೆ. ಅಂಥಾ ಹೊರಳುವಿಕೆಯಲ್ಲಿ ಖಾಯಿಲೆಗಳು ರಾರಾಜಿಸುತ್ತವೆ. ಇದು ಪ್ರಕೃತಿ ನಿಯಮವೆಂದು ಅರಿತುಕೊಂಡರೆ ಇನ್ನು ಮುಂದೆ ಯುದ್ಧಗಳಾಗುವುದು ಕೇವಲ ದೇಶ ದೇಶಗಳಿಗೆ ಮಾತ್ರವಲ್ಲ; ಮನುಷ್ಯನ ಮಿದುಳಿಗೂ ಪ್ರಕೃತಿ ವಿಕೋಪಕ್ಕೂ ಎಂಬುದನ್ನು ಅರಿಯಬೇಕು. ಆರೋಗ್ಯವಂತ ಮಗುವನ್ನು ಆಕಾಶದಿಂದ ಪಡೆಯುವಂತೆ, ಕ್ಲೋನಿಂಗ್ ನಿಂದ ನಿರೋಗಿಗಳನ್ನು ಪಡೆಯುವ ವಿಧಾನದ ಬಗ್ಗೆ ಪ್ರಯೋಗಗಳಾಗುತ್ತಲಿವೆ. ಇದು

ಬೇವನ್ನು ಇಲ್ಲವಾಗಿಸಿ ಬೆಲ್ಲವನ್ನು ಇಟ್ಟುಕೊಳ್ಳುವ ಮಾದರಿ. ಮಾನವನ ಮನಸ್ಸು ಮಾತ್ರ ಬೆಲ್ಲವನ್ನು ಹೆಂಡವಾಗಿ ಕರಗಿಸುವಂತಹದು.

ತೆಂಗಿಗೆ ನುಸಿಪೀಡೆ ಬಂದಿದೆ. ಕಾಗೆಗುಬ್ಬಿಗಳು ಇಲ್ಲವಾಗುತ್ತಿವೆ. ಹುಲಿ ಕರಡಿ ಆನೆಗಳಿರಬೇಕಾದ ಜಾಗದಲ್ಲಿ ಮನುಷ್ಯ ನಿಂತಿದ್ದಾನೆ. ಕಾಡು ಹಂದಿಗಳು ಊರಿಗೆ ಬಂದಿವೆ. ಊರ ತೋಟಗಳಿಗೆ ಅಡವಿಕುಲದ ಕಪಿಸೈನ್ಯ ನುಗ್ಗಿದೆ. ಏಡ್ಸ್‌ನಂತಹ ಮಾರಿಬೇನೆಗಳು ರಾರಾಜಿಸುತ್ತಿವೆ. ಇಂಥಾ ಉಲ್ಬಣ ರೋಗ ಕ್ರಿಯೆಗಳಿಗೆ ಸ್ಥಳೀಯ ನಿಯಂತ್ರಣಗಳು ನಮ್ಮ ಸಮಾಜದಲ್ಲಿದ್ದವು. ಲೈಂಗಿಕ ಖಾಯಿಲೆಗಳು ಕಾಣಿಸುಕೊಂಡರೆ ಹೇಳುವವರಿದ್ದರು. ಅಲ್ಲೇ ಔಷಧಿ ಬಲ್ಲವರಿದ್ದರು. ಇವೆಲ್ಲವೂ ಬಂಧು ಸಮಾಜದಲ್ಲಿ ದೈಹಿಕವಾಗಿ ಮಾನಸಿಕವಾಗಿ ತೊಡಗಿಕೊಂಡದ್ದ ಮನುಷ್ಯನನ್ನು ಅರಿತುಕೊಳ್ಳಬಹುದಾಗಿದ್ದ ಪಾರಂಪರಿಕ ವಿಧಾನಗಳಾಗಿದ್ದವು. ಮನುಷ್ಯನ ನಗರೀಕರಣಗೊಂಡ ಸ್ವಾರ್ಥ ಮನಸ್ಸು ಇಂಥವನ್ನು ತುಳಿದುಹಾಕಿತು.

ನಾನು ಕಂಡಂತೆ ದೊಡ್ಡ ರಾಗಿಯಲ್ಲಿ ಮುದ್ದೆ, ಅಂಬಲಿ ಮಾಡುತ್ತಿದ್ದರು. ದಪ್ಪಕ್ಕಿಯಲ್ಲಿ ಸೋಡಾಪುಡಿ ಇಲ್ಲವೆ ಗರಿಗರಿಯಾದ ದೋಸೆ ಇಡ್ಲಿಗಳಾಗುತ್ತಿದ್ದವು. ಈ ಜಾಗದಲ್ಲಿ ಸೋನಾಮಸೂರಿ ಅಕ್ಕಿ ಬಂತು. ರಾಯಚೂರು, ಹೊಸಪೇಟೆ ಅಥವಾ ಯಾವುದೇ ನಾಲಾಬಯಲಲ್ಲಿ ಇಂದು ಭತ್ತ ಬೆಳೆಯುವಾಗ ನಾಟಿಗೆ ಮೊದಲು ಟಿಮೆಟ್ ಅಥವಾ ಫ್ಯುರಡಾನ್ ಎಂಬ ವಿಷವನ್ನು ಸಸ್ಯ ಔಷಧಿಯಾಗಿ ಎರಚುತ್ತಾರೆ. ಇಡೀ ಸಸ್ಯಕುಲವೇ ವಿಷವಾಗಿ ಪರಿವರ್ತನೆಗೊಂಡು ಅಲ್ಲಿ ಕುಳಿತ ಕ್ರಿಮಿಕೀಟಗಳೆಲ್ಲಾ ಸತ್ತುಹೋಗುತ್ತವೆ. ಹಕ್ಕಿಪಕ್ಷಿಗಳು ಏಡಿಮೀನುಗಳು ಉರುಳಿಬೀಳುತ್ತವೆ. ಹಾಗೆಯೇ ಅಂಥ ಅಕ್ಕಿಯನ್ನು, ಹಾಗೆ ಸಾಯುವ ಮೀನು ಮಿಡಚೆಯನ್ನು ಮನುಷ್ಯ ತಿನ್ನುತ್ತಾನೆ. ನಿಧಾನಕ್ಕೆ ಸಾಯುತ್ತಾನೆ.

ಶಿವಮೊಗ್ಗದ ಕಡೆ ಇತ್ತೀಚೆಗೊಂದು ಸುದ್ದಿ ಹೊರಟಿದೆ. ಕಳ್ಳುಪಚ್ಚಿಯಿಂದ ಆಹಾರ ತಯಾರುಮಾಡಿ, ಅದರೊಳಗೆ ಟಿಮೆಟ್ ಫ್ಯುರಡಾನ್ ಬೆರೆಸಿ ಹಂದಿಗಳನ್ನು ಕೊಂದು ಮಾರುತ್ತಾರಂತೆ. ಹಂದಿ ಮಾಂಸಕ್ಕೆ ಬಾಯಿನೀರು ಸುರಿಸಿ ತಿಂದವರು ನಿಶೆ ಏರಿದಂತೆ, ಖಾಯಿಲೆ ಹಿಡಿದವರಂತೆ, ಒಂದೆರಡು ದಿನ ಇರುವುದನ್ನು ಗಮನಿಸಿದ್ದಾರೆ. ಇದು ಹಳ್ಳಿಯ ಹೆಂಡ ಬ್ರಾಂದಿ ಅಂಗಡಿಗಳಲ್ಲಿ ವಿಷಯುಕ್ತ ಮಾಲನ್ನು ಕುಡಿದು ಓಲಾಡುವ ಪರಿ. ಬೇಟೆಯ ಸಡಗರದಲ್ಲಿ ಓಡಾಡಿ ಹಂದಿಕೊಂದು ತಿನ್ನುತ್ತಿದ್ದ, ಸಸ್ಯಸಮೃದ್ಧಿಯಲ್ಲಿ ಹೆಂಡ ತಯಾರಿಸಿ ಕುಡಿಯುತ್ತಿದ್ದ ಕುವೆಂಪು ಕಾಲದ ಸಡಗರದ ವಿರುದ್ಧ ಸ್ವರೂಪವಿದು.

ಇಂದು ಹಳ್ಳಿಗಳಲ್ಲಿ ಹಾಲಿಗೆ ವಿಷ ಬೆರೆಸುವ ಮತ್ತೊಂದು ವಿಧಾನವಿದೆ. ಡೇರಿಗಳಲ್ಲಿ ಲ್ಯಾಕ್ಟೋಮೀಟರನ್ನು ಅಣಕಿಸುವಂತೆ ಹಾಲಿಗೆ ಉಪ್ಪು ಬೆರೆಸಿ, ಯೂರಿಯಾ ಬೆರೆಸಿ, ಇದು ಗಟ್ಟಿ ಹಾಲೆಂದು ಹಾಕುತ್ತಾರೆ. ಅದೇ ಹಾಲಿಗೆ ಡೈರಿಗಳಲ್ಲಿ ಮತ್ತಷ್ಟು ಪ್ರಿಸರ್ವೇಟಿವ್ ಆಗಿ ಕಾಸ್ಟಿಕ್ ಸೋಡಾ ಬೆರೆಸಿ ಅದು ಕೆಡದಂತೆ ನಗರದ ಮನೆಮನೆಗೆ ತಲುಪಿಸುತ್ತಾರೆ. ಹೀಗೆ ಸ್ವಚ್ಛ ಮಾಂಸ, ಹೆಂಡ, ಹಾಲುಗಳೆಲ್ಲ ರೋಗಗ್ರಸ್ಥವಾದ ಮೇಲೆ ನಿರೋಗಿಯಾಗಿ ಮಾನವ ಬಾಳುವುದೆಂತು! ಇದು ಮನುಷ್ಯನ ಮಿದುಳಿಗೆ ತಗುಲಿದ ಖಾಯಿಲೆ. ಅಕ್ಕಿ ಹಾಲು ಮಾಂಸ ಮಡ್ಡಿ ಕೋಳಿ ಮೀನು ಕಾಳು ಕಡ್ಡಿ ತರಕಾರಿಗಳನ್ನೆಲ್ಲಾ ನೂರು ಕೋಟಿಯಿರುವ ಭಾರತಕ್ಕೆ ಸಾಕುಮಾಡುತ್ತೇವೆಂದು ಹೊರಟ ಜನಸಮೂಹವು, ಹೊಟ್ಟೆ ತುಂಬಿಸುವ ಅರ್ಥಾತ್ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಆತುರದಲ್ಲಿ, ವಿಷವರ್ತುಲದಲ್ಲಿ ಸುಳಿಗಾಳಿಯನ್ನು ನಿರೀಕ್ಷಿಸುತ್ತಲಿದೆ. ಒಂದು ಕಡೆ ವಿಷವರ್ತುಲ; ಮತ್ತೊಂದು ಕಡೆ ವಿಷವರ್ತುಲದಿಂದ ಆಗಮಿಸುತ್ತಿರುವ ನವೀನ ರೋಗಿಗಳನ್ನು ನಿಯಂತ್ರಿಸಲು ವೈದ್ಯಕೀಯ ಯುದ್ಧ. ಈ ವೈದ್ಯಕೀಯ ಮೂಲಗಳು ಸಹಾ ಗ್ರಾಮೀಣ ಮೂಲದ ನಾರು ಬೇರುಗಳಲ್ಲಿನ ಅಸ್ತಿತ್ವ ಕಳೆದುಕೊಂಡು, ಪಶ್ಚಿಮ ದಿಕ್ಕಿನ ಸುಡುಬಿಸಿಲಿಗೆ ಮೈಯೊಡ್ಡಿವೆ. ಇದು ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ಅಭಿವೃದ್ಧಿ ಹೊಂದಿದ ದೇಶಗಳತ್ತ ನೋಡುತ್ತಲೇ ಇಬ್ಭಾಗವಾದ ವೈಪರೀತ್ಯ. ಇದು ಎಳೆನೀರು ಬಿಟ್ಟು ಪೆಪ್ಸಿಗೆ ಅಂಗಲಾಚುವ, ನಾಟಿ ಕೋಳಿಗೆ ಬದಲು ಕೆಂಟುಕಿಗೆ ಆಸೆಪಡುವ, ಹುಣಸೆ ಹಣ್ಣಿನ ಹುಳಿ ಬದಲು ವಿನೇಗರ್ ಕೇಳುವ, ಕೊಬ್ಬಿಲ್ಲದ ಹುಚ್ಚೆಳ್ಳು, ಕುಸುಬೆಗೆ ಬದಲು ಕಲಬೆರಕೆ ಎಣ್ಣೆ ಬೇಡುವ ನಾಲಿಗೆ ಚಪಲದ ಚೌಕಟ್ಟು.

ಇಂಥದ್ದನ್ನೆಲ್ಲಾ ಕಳಚಿ ಬದುಕಲು ಆಗುತ್ತಿಲ್ಲ. ಒಳ್ಳೆಯದು ಸಿಕ್ಕುತ್ತಿಲ್ಲ. ಸಿಕ್ಕಿದರೂ ಅದರ ಗೋಜಲು ಬೇಕಿಲ್ಲ. ಬದುಕು ವೇಗವಾಗಿ ಸಾಗುತ್ತಿದೆ. ವೇಗ ಹೆಚ್ಚಿದಂತೆಲ್ಲಾ ಅಪಘಾತ ಖಂಡಿತ. ಇಂಥಾ ಅಪಘಾತಗಳಿಂದ ಎಚ್ಚೆತ್ತ ಮನಸ್ಸುಗಳು ನಿಸರ್ಗದತ್ತ ಕೈಚಾಚುತ್ತಿರುವುದು ಕಾಣುತ್ತಿದೆ. ರೈತರು ತಮ್ಮರಿವಿನಿಂದ ರಸಗೊಬ್ಬರಗಳನ್ನು, ಔಷಧಿಗಳನ್ನು ಕೈಬಿಟ್ಟು ಸಹಜ ಕೃಷಿ ಮೂಲದ ಕಡೆ ನೋಡುತ್ತಲಿದ್ದಾರೆ. ಬದುಕೊಂದು ಚಕ್ರ, ಏರಿದವರು ಇಳಿಯಲೇಬೇಕು. ಇಂದು, ಅಪಾರ ಬೆಳೆದೂ ಬೆಳೆದೂ ಅಗ್ಗವಾಗಿ ಕೃಷಿ ಜಗತ್ತು ಬಿದ್ದುಹೋಗಿದೆ. ಯಾವುದಕ್ಕೂ ಬೆಲೆಯಿಲ್ಲ. ನಗರಕ್ಕೆ ಬಂದವರಿಗೂ ನೆಮ್ಮದಿಯಿಲ್ಲ. ಪ್ರಕೃತಿ ಮನುಷ್ಯನ ಹಾರಾಟವನ್ನು ನಿಯಂತ್ರಿಸುವ ಶಕ್ತಿ ಪಡೆದುಕೊಂಡೇ ಇರುತ್ತದೆ.

ಒಮ್ಮೆ ಎಚ್.ನರಸಿಂಹಯ್ಯನವರು ಹೇಳುತ್ತಾರೆ : "ಲಾಲಬಾಗಿನಲ್ಲಿ ಸೂರ್ಯ ಹುಟ್ಟುವ ಮೊದಲು ಚಿಕ್ಕಪೇಟೆಯ ಜನ ಇರುವೆಗೆ ಸಕ್ಕರೆ ಅಕ್ಕಿನುಚ್ಚು ಹಾಕುತ್ತಾರೆ. ಅದೇ ಜನ ಸೂರ್ಯ ಏರಿದಂತೆಲ್ಲಾ ಅಂಗಡಿಯೊಳಗೆ ಕುಳಿತು ಜನಕ್ಕೆ ವಿಷ ಬೆರೆಸುತ್ತಾರೆ". ಇದು ಮನುಷ್ಯನ ಇಬ್ಬಗೆಯ ಸ್ವರೂಪ ಹೇಳುತ್ತದೆ. ಹೀಗೆ ದುಡ್ಡು ಮನುಷ್ಯನ ಮನಸ್ಸಿಗೆ ಖಾಯಿಲೆ ತಂದೊಡ್ಡುತ್ತದೆ. ಮೊನ್ನೆ ವಾರಪತ್ರಿಕೆಯೊಂದರಲ್ಲಿ ಡಾ.ಚಂದ್ರಪ್ಪಗೌಡರು 'ಹಂದಿಗೋಡು ಖಾಯಿಲೆ' ಬಗ್ಗೆ ವೈಚಾರಿಕ ಲೇಖನ ಬರೆದಿದ್ದಾರೆ. ಅದು ಜಪಾನಿನಲ್ಲಿ ಗಣಿ ತೆಗೆದ ಪರಿಸರದಲ್ಲಿ ಕಾಣಿಸಿಕೊಂಡ 'ಇಟಾಯಿ' ರೀತಿಯದಿರಬಹುದೇ? ಎಂದು ಸಕಾರಣವಾಗಿ ಚಿಂತಿಸಿದ್ದಾರೆ. ಲಿಂಗನಮಕ್ಕಿ ಕುದುರೆಮುಖ ಪರಿಸರವನ್ನು ಮನುಷ್ಯನ ಏಳಿಗೆಗಾಗಿ ಉಪಯೋಗಿಸುತ್ತೇವೆಂದುಕೊಳ್ಳುತ್ತಲೇ ಮರ ಕಡಿದು ಮೈಮೇಲೆ ಎಳೆದುಕೊಳ್ಳುತ್ತಲಿದ್ದೇವೆ. ಇದೇ ಪ್ರಕೃತಿಗೂ ಮನುಷ್ಯನಿಗೂ ಇರುವ ತಾಕಲಾಟ. ಈಗ ನೋಡಿ; ಕರ್ನಾಟಕದಲ್ಲಿ ಬನವಿಲ್ಲ. ಬನದೊಳಗಿದ್ದ ಲಿಂಗನಮಕ್ಕಿ ಅಣಕಿಸುತ್ತ ಖಾಲಿಯಾಗಿದೆ. ಬರ ಬರಲು ತುದಿಗಾಲಿನಲ್ಲಿ ಹಾತೊರೆಯುತ್ತಲಿದೆ. ಯಾವಾಗಲೋ ಮಳೆ, ಯಾವಾಗಲೋ ಬೆಳೆ !

ಗ್ರಾಮೀಣ ಸಮಾಜದಲ್ಲಿ ರೋಗಗಳ ಬಗ್ಗೆ ಒಂದು ಸಾಮೂಹಿಕ ಹೋರಾಟವಿತ್ತು. ಅದು ನಂಬಿಕೆಯಿರಲಿ ಮೂಢನಂಬಿಕೆಯಿರಲಿ ಮನಸ್ಸಿಗೆ ತರುವ ನೆಮ್ಮದಿಯಾಗಿತ್ತು. ನಮ್ಮೂರಲ್ಲಿ ಒಂದು ಕಾಡುಬಸವಣ್ಣನ ಗುಡಿಯಿದೆ. ದನಗಳಿಗೆ ಖಾಯಿಲೆ ಬಂದಾಗ ಹರಕೆಯು ಪ್ರತಿಫಲ ಕೊಡುತ್ತದೆಂಬುದು ನಂಬಿಕೆ. ಅಲ್ಲಿನ ತೋಪು, ಭೂಮಿಗೆ ಆಸೆಪಡುವ ಮನುಷ್ಯನನ್ನು ಕೆಣಕಿತು. ನಮ್ಮೂರವರು ಹೋಗಿ ಉತ್ತರು. ಸ್ವಲ್ಪ ದಿನಗಳಲ್ಲೆ ಊರಲ್ಲಿ ದೊಡ್ಡರೋಗ ರಾಸುಗಳಿಗೆ ಕಾಣಿಸಿ ಉತ್ತವರ ಮನೆಯೂ ಸೇರಿದಂತೆ ಸತ್ತುಹೋದವು. ಉಳುವುದನ್ನು ಕೈಬಿಟ್ಟರು. ಕಾಡುಬಸವಣ್ಣನ ತೋಪನ್ನು ಕಡಿಯಬಾರದು ಉಳಬಾರದು ಎಂಬ ನಂಬಿಕೆ ಪರಿಸರವನ್ನು ಉಳಿಸಿತು. ಇದು ಸಾಮೂಹಿಕ ಸನ್ನಿಗೆ ತಾಗಿದ ಇದಿರೇಟು. ಇಂಥ ನಂಬಿಕೆ ಪರಿಸರವನ್ನು ಉಳಿಸಿತು. ಇಂಥ ನಂಬಿಕೆಗಳಲ್ಲಿ ಬದುಕುವ ಗ್ರಾಮಗಳಲ್ಲಿ ಪರೇವು ಮಾಡುವ ವಿಧಾನಗಳು ಪರಿಸರವನ್ನು ಕಾಕತಾಳೀಯವಾಗಿಯಾದರೂ ಉಳಿಸಿಯಾವು. ಅದಿರಲಿ. ದೊಡ್ಡರೋಗಕ್ಕೆ ಮಿಡುಕಲು ಎಂಬ ಆಚರಣೆ ಮಾಡುವುದುಂಟು. ಹಂದಿ ಕಡಿದು ರಾಸುಗಳ ಮೇಲೆ ರಕ್ತ ಎರಚುವುದುಂಟು. ಇದು ದೊಡ್ಡರೋಗವನ್ನು ನಿಲ್ಲಿಸುವುದಿಲ್ಲ. ಇದೆಲ್ಲದರ ತಿಳಿವಳಿಕೆ ಗ್ರಾಮೀಣರಿಗೆ ಆಗಬೇಕಿದೆ.

ಗ್ರಾಮೀಣ ಮೂಲದಲ್ಲಿ ಕಾಲರದಮ್ಮ, ಪ್ಲೇಗಮ್ಮ ಎಂಬ ರೋಗ ನಿರೋಧಕ ನಂಬಿಕೆಗಳಿದ್ದವು. ಇಂದೂ ಅಲಸೂರು ಮುಖ್ಯರಸ್ತೆಯಲ್ಲಿ ಇಂಥ ದೇವಾಲಯವಿದೆ. ಮದ್ದೂರು ಕಡೆ ಏಡ್ಸಮ್ಮ ಪ್ರಾರಂಭವಾಗಿದೆ. ಇವು ರೋಗದ ಬಗ್ಗೆ ಭಯಮೂಡುವ ಮನಸ್ಸಿಗೆ ನೆಮ್ಮದಿ ತರುವ ವಿಧಾನಗಳು. ಇಂಥಾ ವಿಧಾನಗಳಲ್ಲಿ ಗ್ರಾಮೀಣ ಮನಸ್ಸಾಗಲಿ ನಗರದ ಮನಸ್ಸಾಗಲಿ ಸ್ಥಾಯಿಗೊಂಡಾಗ ಕೆಡುಕಾಗುವ ಸಂಭವ ಹೆಚ್ಚು. ಖಾಯಿಲೆಗಳು ಬಂದಾಗ ಚಿಕಿತ್ಸೆಗಳು ಅತ್ಯವಶ್ಯಕ. ಮಾನಸಿಕ ಚಿಕಿತ್ಸೆಗಾಗಿ ಇಂಥ ವಿಧಾನಗಳಿಗೆ ಜೋಲುವ ಮನಸ್ಸು ದಾರಿತಪ್ಪುವುದುಂಟು. ಅದಕ್ಕಾಗಿ ಮಾನಸಿಕ ಚಿಕಿತ್ಸೆ ಮತ್ತು ನರಬಲದ ಔಷಧಿಗಳು ಗ್ರಾಮೀಣ ಮೂಲದಲ್ಲಾಗಲೀ ನಗರ ಮೂಲದಲ್ಲಾಗಲೀ ಬೇಕೆಂಬುದರಲ್ಲಿ ಭಿನ್ನಮಾತಿಲ್ಲ.

ನಮ್ಮ ಊರಿನಲ್ಲಿ ಒಬ್ಬ ಕೂಲಿಕಾರ ನಿಯತ್ತಿನ ಹೆಂಗಸಿದ್ದಳು. ಅಲ್ಲಿಗೊಬ್ಬ ಮೇಸ್ತ್ರಿ ಬಂದು ಸೇರಿಕೊಂಡ. ಅವನ ಕಳ್ಳತನವನ್ನೆಲ್ಲಾ ಸ್ವಾಭಾವಿಕವಾಗಿ ಗೌಡರಿಗೆ ಹೇಳಿದ ಅವಳಿಗೆ ಪ್ರಾಕೃತಿಕ ಭಯ ಹುಟ್ಟಿಸಿದ. ರಾತ್ರಿ ದೆವ್ವದಂತೆ ಕೂಗಿದ. ದೆವ್ವ ರಾತ್ರಿ ಬಂದಿತ್ತೆಂದು ಹೆದರಿಕೆ ಹುಟ್ಟಿಸಿದ. ಮನಸ್ಸು ಅಸ್ಥಿರವಾಯಿತು. ಹುಚ್ಚು ಹಿಡಿಯಿತು. ಆಸ್ಪತ್ರೆಗೆ ಹೋಗುವ ಬದಲು ದೇವರಿಗೆ ಕರೆದುಕೊಂಡು ಹೋದರು. ದೇವರು, ನಾನಿದ್ದೇನೆಂದು ಹೇಳುತ್ತಲೇ ಆಕೆಯು ಬಾವಿಗೆ ಬೀಳಲು ಕಾರಣವಾಯಿತು. ಹುಚ್ಚು ಹೆಚ್ಚಾದರೆ ಮನಸ್ಸು ಆತ್ಮಹತ್ಯೆಗೆ ಹವಣಿಸುತ್ತದೆ. ಹೀಗೆ ಆದಿಕಾಲದ ನಂಬಿಕೆಗಳು ಪ್ರಾಣಕಳೆಯುತ್ತವೆ. ನಂಬಿಕೆಗಳಿರಬೇಕು ನಿಜ! ಅವು ಮೂಢನಂಬಿಕೆಗಳಾದಾಗ ಪ್ರಾಣಕ್ಕೆ ಅಪಾಯ.

ಜಾನಪದವು ಈಗ ಕೇವಲ ಸಂಗ್ರಹದ ವಿಶ್ಲೇಷಣೆಯ ತಳಹದಿಯಾಗಿ ಉಳಿದಿಲ್ಲ. ಅದೊಂದು ಸಾಂಸ್ಕೃತಿಕ ಚಿಂತನೆಯಾಗುತ್ತಲೇ ಸಮಾಜಕ್ಕೆ ನೆರವಾಗಬೇಕು. ಒಬ್ಬ ಪೂಜಾರಿ, ಒಂದು ದೇವತೆ, ಒಂದು ಖಾಯಿಲೆ, ಒಂದು ನಂಬಿಕೆ, ಒಂದು ಆಚರಣೆ ಇವೆಲ್ಲವೂ ಅಭಿವೃದ್ಧಿ ಹೊಂದುವ ಸಮಾಜಕ್ಕೆ ನೆರವಾಗುವಂತಿರಬೇಕು. ಪರಿಸರ ಪ್ರಕೃತಿಯ ಆಸರೆಯಲ್ಲಿ ಬದುಕಲು ಹವಣಿಸುವ ಜನಪದರು ಗ್ರಾಮೀಣರಿರಲಿ ನಗರದವರಾಗಿರಲಿ ಪರಿಸರ-ಸಮಾಜ ಇವು ರೋಗದಿಂದ ವಿಮುಕ್ತವಾಗಿರಬೇಕೆಂಬುದು ಬಯಕೆ. ಇಂಥಾ ಚಿಂತನೆಯತ್ತ ಜಾನಪದತಜ್ಞರ ಚಿಂತನೆಗಳು ನೆರವಾಗಬೇಕಾಗುವುದು ಅವಶ್ಯಕ.

* * *

# ೬. ಜನಪದ ವೈದ್ಯಜಗತ್ತು

ಡಾ| ಟಿ. ಗೋವಿಂದರಾಜು

**ಜನವೈದ್ಯ-ಪಶುವೈದ್ಯಗಳನ್ನು ಕುರಿತಾದ ಸಾಂಪ್ರದಾಯಿಕ ಚಿಕಿತ್ಸೆಗಳು ಮತ್ತು ಅವುಗಳ ಪರಿಣಾಮಗಳ ಬಗೆಗಿನ ಪ್ರಾಮಾಣಿಕ ಆಭಿವ್ಯಕ್ತಿಯ ದಾಖಲಾತಿಯೇ ಪ್ರಸ್ತುತ ಲೇಖನ.**

**-ಸಂ.**

ಕೆಲವೇ ವರ್ಷಗಳ ಹಿಂದೆ ಊರಿನ ಪ್ರತಿ ಹೆಂಗಸರೂ ಗಂಡಸರೂ ಸಣ್ಣಪುಟ್ಟ ಕಾಯಿಲೆಗಳಿಗೆ ಸ್ವಯಂವೈದ್ಯರಾಗುತ್ತಿದ್ದರು. ಹಿರಿಯ ಅಜ್ಜ, ಅಜ್ಜಿಯರಂತೂ ಊರ ವೈದ್ಯರೇ ಆಗಿರುತ್ತಿದ್ದರು. ಅವರ ಒಡನಾಟದಲ್ಲಿ, ಮಾರ್ಗದರ್ಶನದಲ್ಲಿ ಹುಡುಗ ಹುಡುಗಿಯರೂ ಕೆಲ ರೋಗ-ಚಿಕಿತ್ಸೆಗಳ ಪ್ರಾಥಮಿಕ ತಿಳುವಳಿಕೆ ಪಡೆದವರಾಗಿದ್ದರು. ಊರುಗಳಲ್ಲಿ ಇಂದೂ ಅಜ್ಜ-ಅಜ್ಜಿಯರಿದ್ದಾರೆ. ಆದರೆ ಅವರಾರಿಗೂ ಇಂದು ತಮ್ಮ ಪಾರಂಪರಿಕ ವೈದ್ಯಜ್ಞಾನವನ್ನು ನೆನಪುಮಾಡಿಕೊಳ್ಳುವ ಅಗತ್ಯವೇ ಬರುವುದಿಲ್ಲ. ಕಲಿತ ಹೊಸ ಸೊಸೆಯರು ಮಕ್ಕಳ ಕೆಮ್ಮು ನೆಗಡಿಗೂ ಊರ ಸರ್ಕಾರಿ ವೈದ್ಯರ ಬಳಿಗೆ-ಅಲ್ಲ ಪ್ಯಾಟೆಯ ಶಾಪಿಗೇ (ಕ್ಲಿನಿಕ್ಗೆ)-ಹೋಗಿ ಇಂಜಕ್ಷನ್ ಚುಚ್ಚಿಸಿಕೊಡು ಬರುತ್ತಾರೆ. ಹೀಗಾಗಿ, ಹಳಬರಿಗೆ ತಮ್ಮ ವೈದ್ಯಜ್ಞಾನದ ಬಳಕೆಗೆ ಅವಕಾಶವೇ ಇಲ್ಲದೆ ಅವರು ಎಲ್ಲವನ್ನೂ ಮರೆತುಕೊಳ್ಳುತ್ತಿದ್ದಾರೆ; ಪರಿಣಾಮವಾಗಿ, ಆ ಸಾಂಪ್ರದಾಯಿಕ ಔಷಧಿ-ಚಿಕಿತ್ಸೆಗಳ ಗುಣಮಟ್ಟ - ಫಲಿತದ ಬಗೆಗೆ ಪ್ರಬಲವಾದ ಅನುಮಾನಗಳು ಹುಟ್ಟಿಕೊಂಡಿವೆ. ಅರ್ಥಾತ್, ನೂರಾರು ವರ್ಷಗಳಿಂದ ದೃಢವಾಗಿ ಉಳಿದುಬಂದಿದ್ದ ಜನಪದ ವೈದ್ಯಪದ್ಧತಿಯನ್ನು ಈಗ ತನ್ನ ಸತ್ವದಲ್ಲಿ ತಾನೇ ಅನುಮಾನಪಡುವಂತಹ ಸ್ಥಿತಿಗೆ ತಂದಿರಿಸಿದ್ದು ಆಧುನಿಕ ವೈದ್ಯ ಪದ್ಧತಿಯ 'ಮಹತ್ಸಾಧನೆ' ಯಾಗಿದೆ!

. ಈ ಬದಲಾವಣೆಗೆ ಪೂರಕವಾದ ಕಾರಣಗಳನ್ನು ಹೀಗೆ ಗುರುತಿಸಬಹುದು;

1. ಆಧುನಿಕ ಶಿಕ್ಷಣ ಹೆಚ್ಚಿನವರಿಗೆ ದೊರೆತದ್ದು : ಈ ಶಿಕ್ಷಣ ಪದ್ಧತಿ ಹಳೆಯದನ್ನು ಅನುಮಾನಿಸಿ ನೋಡುವ, ನವೀನವಾದುದನ್ನು 'ಸತ್ಯ', 'ಆದರ್ಶ' ವೆಂದು ನಂಬಿಸುವ ಕೆಲಸಮಾಡುತ್ತದೆ. ಅಂತೆಯೇ ಅಕ್ಷರ ಕಲಿತವರು ತಮ್ಮ ತಲೆಮಾರಿನ ಬದುಕನ್ನು ಅವಿಶ್ವಾಸದಿಂದ ಕಡೆಗಣಿಸುತ್ತಾರೆ. ಆಧುನಿಕ ಜೀವನಕ್ರಮವನ್ನು ಹಿಂದುಮುಂದು ನೋಡದೆ ಅಪ್ಪಿಕೊಳ್ಳುತ್ತಾರೆ. ಶಾಲಾಪಠ್ಯ ವಿಷಯಗಳೂ

ಇದಕ್ಕೆ ಪೂರಕವಾಗಿರುತ್ತವೆ.

2. ಹೀಗೆ ನಂಬಿಸುವ ಕಾರ್ಯವನ್ನು ದೂರದರ್ಶನ, ಪತ್ರಿಕೆಗಳಂತಹ ಪ್ರಚಾರ ಮಾಧ್ಯಮಗಳಲ್ಲಿನ ಜಾಹೀರಾತುಗಳು (ಹಳೆತಲೆಮಾರಿನ ಅನಕ್ಷರಸ್ಥರನ್ನು ಒಳಗೊಂಡಂತೆ ಎಲ್ಲರನ್ನೂ) ಅತಿ ಸುಲಭವಾಗಿ ಮಾಡುತ್ತವೆ. ಆಯ್ಕೆಗೆ ತಮ್ಮ ಸರಕನ್ನು ಬಿಟ್ಟು ಬೇರೆ ಪರ್ಯಾಯವೇ ಇಲ್ಲ ಎನ್ನುವಂತೆ ಮಂಕುಮರುಳು ಮಾಡಿಬಿಡುವುದು ಈ ಜಾಹೀರಾತುಗಳ ವಿಶೇಷ ಗುಣ.

3. ಈಗ ಎಂಥವರ ಕೈಯಲ್ಲೂ ತುಸು ಕಾಸು ಆಡುತ್ತಿರುವುದೂ ಇನ್ನೊಂದು ಕಾರಣ. ಹಿಂದೆ ಕಾಸಿಗೆ ಭಾರೀ ಬೆಲೆ ಇದ್ದಾಗ, ಅದರ ಸಂಪಾದನೆ ಕಠಿಣ ಶ್ರಮದಾಯಕವಾಗಿದ್ದಾಗ, ತಮ್ಮ ಔಷಧಿ ವಸ್ತುಗಳನ್ನು ತಾವೇ ಕಂಡುಕೊಳ್ಳುವ, ದಿನಬಳಕೆಯ ವಸ್ತುಗಳನ್ನೇ ಔಷಧಿಯಾಗಿ ಬಳಸಿಕೊಳ್ಳುವ ಅನಿವಾರ್ಯತೆ ಆ ಬಡ ಜನರಿಗಿರುತ್ತಿತ್ತು. ಈಗ ಕಾಸು ಕಂಡ ಮಂದಿ ದೇವಸ್ಥಾನದಲ್ಲಿ ದಕ್ಷಿಣೆ ಹಾಕಿಯೇ ತೀರ್ಥ ಪಡೆಯುವಂತೆ ಅಂಗಡಿ ವೈದ್ಯರಲ್ಲಿ ದುಡ್ಡು ಕೊಟ್ಟು ಔಷಧಿ ಪಡೆಯಲು ಮುಂದಾಗಿದ್ದಾರೆ.

4. ಹಿಂದೆ, ಬೇಕಾದ ಔಷಧಿಸಸ್ಯವನ್ನು ಸ್ವತಃ ಹುಡುಕಬೇಕಿತ್ತು. ಅರೆದು, ಕಷಾಯವೋ ಚೂರ್ಣವೋ ಮಾಡಿ ಉದ್ದೇಶಿತ ಔಷಧಿ ಸಿದ್ಧಗೊಳಿಸಬೇಕಿತ್ತು. ಅದು ಶ್ರಮದಾಯಕ ಕೆಲಸವೇ ಹೌದು. ಈಗ ಕೈಕೆಸರಾಗದೆ ಬಾಯಿ ಮೊಸರು ಮಾಡಿಕೊಳ್ಳುವ ಕಾಲ! ರೆಡಿಮೇಡ್ ಔಷಧಿಗಳು ಅದೂ ಆಹ್ಲಾದದ ಬಣ್ಣ–ರುಚಿಗಳಲ್ಲಿ ಎಲ್ಲೆಡೆ ಲಭ್ಯ. ಈಗ ದುಡ್ಡು ಕೊಟ್ಟರೆ ಬೇಕಾದ ಔಷಧಿ–ಚಿಕಿತ್ಸೆ ಲಭ್ಯವಾಗುವುದರಿಂದ ಹಳೆಯದಕ್ಕೆ ಗಂಟುಬೀಳುವ ಅಗತ್ಯವಿಲ್ಲ.

5. ಹಿಂದೆ, ಆಧುನಿಕ ವೈದ್ಯರು ಬೇಕೆಂದರೆ ಪಟ್ಟಣ, ನಗರಗಳಿಗೇ ಹುಡುಕಿ ಹೋಗಬೇಕಿತ್ತು. ಆ ಶ್ರಮ ಮತ್ತು ಖರ್ಚಿನ ಭಯದಿಂದಾಗಿ ಬಹಳ ಜನ ಸ್ಥಳೀಯ ಮನೆ ವೈದ್ಯಕ್ಕೇ ಮೊರೆಹೋಗುತ್ತಿದ್ದರು. ಈಗ, ಊರೂರಿಗೆ ಶಾಪು–ನರ್ಸಿಂಗ್ ಹೋಂಗಳಾಗಿವೆ. (ಇದರ ಪರಿಣಾಮವಾಗಿ ಹೊಸಬರು ಕಂಡು–ಕೇಳರಿಯದ ಹೊಸ ಹೊಸ ಭಯಂಕರ ಕಾಯಿಲೆಗಳು ಎಲ್ಲೆಡೆ–ಎಲ್ಲರಿಗೆ ಚಿರಪರಿಚಿತವಾಗುತ್ತಿವೆ!) ಅಂತೆಯೇ ಸಂಜೆ–ಮುಂಜಾನೆ ಮಕ್ಕಳು ಮರಿಗಳೊಂದಿಗೆ 'ಶಾಪು' ಗಳ ಮುಂದೆ ಸಾಲುಗಟ್ಟಿ ಕೂರುತ್ತಾರೆ.

ಈ ಪರಿಣಾಮ ಪಶುವೈದ್ಯ, ಸಸ್ಯವೈದ್ಯಗಳ ಕ್ಷೇತ್ರದಲ್ಲೂ (ನಮ್ಮಲ್ಲಿ ಹಿಂದಿನಿಂದಲೂ 'ಸಸ್ಯವೈದ್ಯ'ದ ಮಾಹಿತಿ ಸಂಗ್ರಹ ಅಧ್ಯಯನದ ಬಗೆಗೆ ಏನೇನೂ ಕೆಲಸ ಆದಂತಿಲ್ಲ; ಈಚೆಗೆ ಜೆ. ಕೃಷ್ಣಪ್ರಸಾದ್ ಅಂತಹವರು ಗಮನಿಸುವಂತಹ ಅಭ್ಯಾಸಗಳನ್ನು ಮಾಡುತ್ತಿದ್ದಾರೆ) ತೀವ್ರವಾಗಿ ಆಗಿದೆ. ಇದರಿಂದಾಗಿಯೇ ದನಗಳ ಸಾಮಾನ್ಯ ಖಾಯಿಲೆ ಬಗೆಗೂ ರೈತಯುವಕ ಇಂದು ಅಜ್ಞಾನಿಯಾಗಿ ಬೆಳೆದಿದ್ದಾನೆ. ಪ್ರತಿಯೊಂದಕ್ಕೂ ದನಗಳ ಸರ್ಕಾರಿ ಆಸ್ಪತ್ರೆಗೆ ಹೋಗುವಂತಾಗಿದೆ. ಅಲ್ಲಿನ ಕಾಂಪೌಂಡರೇ ದೊಡ್ಡ ಪಶುವೈದ್ಯನಂತೆ ಔಷಧಿ ನೀಡುತ್ತಾನೆ. 'ವಾಸಿಯಾದರೆ ಡಾಕ್ಟರ ಕೈಗುಣ, ಹಸು ಸತ್ತರೆ ಹಣೇಬರ' –ಎನ್ನುವುದು ಸಾಮಾನ್ಯವಾಗಿದೆ.

ಬೆಳೆಗಳ ವಿಚಾರದಲ್ಲಿಯೂ ಹಿಂದಿನವರಲ್ಲಿ ಇದ್ದ ಸಾಂಪ್ರದಾಯಿಕ ಜ್ಞಾನ ಇಂದಿನವರಲ್ಲಿ ಕಾಣೆಯಾಗಿದೆ. ಸಮೃದ್ಧ ಬೆಳೆಗೆ ಬೇಕಾದ ಗೊಬ್ಬರ, ಗೋಡುಮಣ್ಣು, ರೋಗರುಜಿನಗಳ ವಿರುದ್ಧ ಮುನ್ನೆಚ್ಚರಿಕೆಯಾಗಿ ಬಳಸುತ್ತಿದ್ದ ಬೇವಿನ ಹಿಂಡಿ – ಇತ್ಯಾದಿ ಉಪಾಯಗಳನ್ನು ಉದ್ದೇಶಪೂರ್ವಕವಾಗಿ ಮರೆತ ರೈತ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಲವಂತವಾಗಿ ಅಪ್ಪಿಕೊಂಡದ್ದರ ಪರಿಣಾಮ ಭೂಮಿ ಬರಡಾಗುತ್ತಿದೆ; ಆಹಾರ ಸತ್ವಹೀನವಾಗುತ್ತಿದೆ; ವಿಷವೂ ಆಗಿದೆ; ಮಾಡಿದ ಖರ್ಚನ್ನು ಸರಿದೂಗಿಸಲಾಗದೆ ಅತ್ಮಹತ್ಯೆಗೆ ಶರಣಾಗುವ ಅಪಾಯಕಾರಿ ಮಟ್ಟಕ್ಕೆ ಬಂದು ನಿಲ್ಲುವಂತಾಗಿದೆ.

–ಇದೆಲ್ಲಾ ಸರಿ. ಆದರೆ, ಇನ್ನೊಂದು ಮುಖದಿಂದ ನೋಡಿದಾಗ – ನಮ್ಮ ಗ್ರಾಮೀಣರ ವೈದ್ಯಪದ್ಧತಿ – "ಅಳಲೆಕಾಯಿ ಪಾಂಡಿತ್ಯ" ವಿಶ್ವಸನೀಯವೇ? ಆಧುನಿಕ ರೋಗಗಳಿಗೆ ಅದು ರಾಮಬಾಣವಾಗಲು ಸಾಧ್ಯವೇ? – ಇತ್ಯಾದಿ ಪ್ರಶ್ನೆಗಳು ಯಾರಲ್ಲಾದರೂ ಮೂಡುವುದು ಸಹಜ. ಇದಕೆ ಒಂದೇ ಮಾತಿನ ಉತ್ತರವೆಂದರೆ –

ಕಾಲ ಬದಲಾದಂತೆ, ಆಧುನಿಕ ಸಂಪರ್ಕಗಳು ಹೆಚ್ಚಾದಂತೆ, ಇಂದು ಹೊಸ ಹೊಸ ಖಾಯಿಲೆಗಳು ಹುಟ್ಟಿಕೊಂಡಿವೆ. ಬಹುಶಃ ಹಿಂದೆಯೂ ಇದ್ದೂ ಹೆಚ್ಚು ಪ್ರಚಾರಕ್ಕೆ ಬಾರದ ಖಾಯಿಲೆಗಳೂ ಇಂದು ಹೊಸ ಹೆಸರಲ್ಲಿ ಪ್ರಸಿದ್ಧವಾಗಿವೆ. ಹೊಸ ವಿದೇಶೀ ಖಾಯಿಲೆಗಳಿಗೆ ನಮ್ಮ ಸಾಂಪ್ರದಾಯಿಕ ಪದ್ಧತಿಯಲ್ಲಿ ಚಿಕಿತ್ಸೆ ಇದ್ದಿರಲಾರದು. (ಅಥವಾ, ಪ್ರಾಚೀನ ವೈದ್ಯಪದ್ಧತಿಯನ್ನು ಹೊಸ ಅರಿವಿನ

ಹಿನ್ನೆಲೆಯಲ್ಲಿ ಸರಿಯಾಗಿ ಪ್ರಯೋಗ ಮಾಡಿನೋಡದೆ ಅದರಲ್ಲಿ ಪರಿಹಾರಗಳೇ ಇಲ್ಲ- ಎಂದು ತೀರ್ಮಾನಿಸುವುದೂ ತಪ್ಪಾದೀತು). ಹಾವು ಕಡಿತಕ್ಕೆ ಸಾಂಪ್ರದಾಯಿಕ ಔಷಧಿ-ಚಿಕಿತ್ಸೆ ಇದ್ದರೂ ಅದನ್ನು ನಂಬಿಕೂರದೆ ಆಧುನಿಕ ವೈದ್ಯ ಚಿಕಿತ್ಸೆ ನೀಡುವುದೇ ಅತ್ಯಗತ್ಯ. ಇಂತಹ ಯಾವುದೇ ತುರ್ತು ಚಿಕಿತ್ಸೆಯ ವಿಷಯದಲ್ಲಿ ಸಾಂಪ್ರದಾಯಿಕ ವೈದ್ಯರನ್ನು ನಂಬಿಕೂರುವುದು ತೀರಾ ತಪ್ಪು. ಆದರೆ, ಸಣ್ಣಪುಟ್ಟ ಖಾಯಿಲೆಗಳ ವಿಷಯದಲ್ಲಿಯೂ ಆಧುನಿಕ ವೈದ್ಯವೇ ಪರಮೌಷಧಿಯಾಗಬೇಕೆ? ನಾಟಿವೈದ್ಯ, ಗೃಹವೈದ್ಯದಲ್ಲಿ ಸರಿಯಾಗಿ ಚಿಕಿತ್ಸೆ ದೊರೆಯದೆ ಜೀವನಷ್ಟ ಆಗಬಹುದು – ಎಂದು ಆಕ್ಷೇಪಿಸುವುದಾದರೆ, ಆಧುನಿಕ ಹೈಟೆಕ್ ಆಸ್ಪತ್ರೆಗಳಲ್ಲಿ ಹಣ ಮತ್ತು ಜೀವ-ಎರಡೂ ಕಳೆದುಕೊಳ್ಳುವ ಸಾಧ್ಯತೆಗಳೇ ಹೆಚ್ಚಿಲ್ಲವೆ? ಆಧುನಿಕ ವೈದ್ಯರಲ್ಲಿ ಎಷ್ಟು ಜನ ರೋಗಿಯ ಜೀವಕ್ಕೆ ಗ್ಯಾರಂಟಿ ನೀಡುತ್ತಾರೆ? ಆದ್ದರಿಂದ, ಕೊರತೆಗಳು ಎರಡೂ ಕಡೆ ಇವೆ. ಹಾಗೆ ನೋಡಿದರೆ, ಆಧುನಿಕ ವೈದ್ಯರಲ್ಲಿ ವಾಸಿಯಾಗದ ಕೆಲವೊಂದು ನೋವು-ಬಾಧೆಗಳು ನಾಟಿವೈದ್ಯರಲ್ಲಿ ನಿವಾರಣೆಯಾದ ನಿದರ್ಶನಗಳಿವೆಯಲ್ಲವೇ?

ಚಿಕ್ಕಂದಿನ ನನ್ನ ವೈದ್ಯಜಗತ್ತಿನ ಕೆಲ ಸ್ವಾನುಭವಗಳು ಹೀಗಿವೆ :

ನಾನಾಗ ಏಳೆಂಟನೇ ತರಗತಿಯವ. ತೋಟಕ್ಕೆ ಬರುವ ದನಗಳನ್ನು ಕಾಯುತ್ತಾ ಒಂದು ಮುಂಜಾನೆ ತೋಟದಲ್ಲಿದ್ದೆ. ಇದ್ದಕ್ಕಿದ್ದಂತೆ ಹೊಟ್ಟೆ ನೋವು ಶುರುವಾಯಿತು. ಕುಳಿತರೆ, ಮೇಲೆದ್ದು ನೆಟ್ಟಗೆ ನಿಲ್ಲಲಾಗದಂತೆ ಕರುಳು ಕುಗ್ಗಿಡಿದು ಹಿಂಡುವಂತಾಗುತ್ತಿತ್ತು. ಕೂರಲು ಆಗದು; ನಡೆಯಲೂ ಆಗದು; ಕೂಗಿಕೊಳ್ಳಲೂ ಆಗದು. ತೋಟ ಇದ್ದದ್ದು ಊರಿಂದ 2 ಫರ್ಲಾಂಗ್ ದೂರ. ಅಕ್ಕಪಕ್ಕ ಯಾರೂ ಇಲ್ಲ. ನರಳಾಟ. ಎಷ್ಟೋ ಹೊತ್ತಿಗೆ ಪಕ್ಕದ ಹೊಲದ ಹಾದಿಯಲ್ಲಿ ಬಂದ ಊರಿನ ಒಬ್ಬರ ಮೂಲಕ ನನ್ನ ಸಂಕಟ ಹೇಳಿ ಕಳಿಸಿದೆ. ಆಮೇಲೆ ಬಂದ ನನ್ನಣ್ಣ 'ಕೂಸುಮರಿ' ಮಾಡಿಕೊಂಡು ಮನೆಗೆ ಹೊತ್ತೊಯ್ದ. ಅಡಿಗೆ ಕೆಲಸದಲ್ಲಿ ನಿರತಳಾಗಿದ್ದ ನನ್ನಮ್ಮನಿಗೆ ನನ್ನ ಕಡೆ ಪೂರ್ಣ ಗಮನಕೊಡಲು ಬಿಡುವಿಲ್ಲ. ಆಕೆಗೆ ಇದು ಮಾಮೂಲಿ ಎನಿಸಿರಲೂಬಹುದು. ಸರಿ, 'ಅಂಗಾತ ಮಲಗಿಕೊಂಡು ಹೊಟ್ಟೆಮೇಲೆ ಬಿಸಿ ನೀರ ತಂಬಿಗೆ ಇಟ್ಟುಕೋ' ಅಂದಳು.

ಈ ರೀತಿ ಹೊಟ್ಟೆ ನೋವು ಬಂದವರಿಗೆ ಮಾಡುತ್ತಿದ್ದ ಸಾಮಾನ್ಯ ಚಿಕಿತ್ಸೆ ನಾನು ನೋಡಿದ್ದೆ. ಅಂಗಾತ ಮಲಗಿ, ಹೊಕ್ಕಳು ಸುತ್ತಾ ಚೂರು

ಹರಳೆಣ್ಣೆ ಸವರಿ ಅದರ ಮೇಲೆ ಒಂದು ಸಣ್ಣ ಕಲ್ಲುಗುಂಡು ಅಥವಾ ಬಿಸಿ ನೀರಿರುವ ತಂಬಿಗೆ ಇಟ್ಟುಕೊಂಡರೆ ಸ್ವಲ್ಪಹೊತ್ತಿಗೆ ನೋವು ಬಿಟ್ಟುಹೋಗುತ್ತಿತ್ತು. ಅಮ್ಮ ಹೇಳಿದಂತೆ ಈಗ ನಾನೇ 'ಸ್ವಯಂ–ವೈದ್ಯ' ಮಾಡಿಕೊಂಡೆ. ನನಗೀಗಲೂ ಅದು ನೆನಪಿಸಿಕೊಂಡರೆ ಆಶ್ಚರ್ಯವಾಗುತ್ತದೆ. ಕ್ಷಣಾರ್ಧದಲ್ಲಿ ಆ ಹಿಂಸೆ ನನ್ನಿಂದ ದೂರವಾಗಿತ್ತು. ಈಗ ಸುಮಾರು 35 ವರ್ಷಗಳಲ್ಲಿ ಮತ್ತೆ ಅದು ಹತ್ತಿರ ಬಂದಿಲ್ಲ.

ಹೀಗೆಯೇ ದನ, ಕುರಿಗಳ ಹಿಂದೆ ಹೊಲ, ದಿಣ್ಣೆ ತಿರುಗುವ ಹಳ್ಳಿಹುಡುಗರು ಮುಳ್ಳು ತುಳಿದು ಬರುವುದು ತೀರಾ ಸಾಮಾನ್ಯ ಅನುಭವ. ಕಾಲಿಗೆ ಚುಚ್ಚಿದ ಮುಳ್ಳನ್ನು ತಕ್ಷಣ ಕಿತ್ತುಹಾಕಿದರೆ, ಸ್ವಲ್ಪ ರಕ್ತ ಬಂದು, ಸುಮ್ಮನಾಗಿಬಿಡುತ್ತೆ. ಆದರೆ, ಕೆಲ ಮುಳ್ಳುಗಳು ಒಳಗೇ ಮುರಿದು – ತುಂಡಾಗಿ–ಸೇರಿಬಿಡುತ್ತವೆ. ಅವು ಸಂಜೆ ಮನೆಗೆ ಹಿಂದಿರುಗುತ್ತಿದ್ದಂತೆ ಹೆಚ್ಚು ಬಾಧೆ ಕೊಡತೊಡಗುತ್ತವೆ. ಪಾದವನ್ನು ಭದ್ರವಾಗಿ ಊರಲೂ ಆಗದಂತೆ, ಕುಂಟಿಕೊಂಡು ತಿರುಗಬೇಕಾಗುತ್ತದೆ. ಆಗ ರಾತ್ರಿ, ದೀಪದ ಬೆಳಕಿನಲ್ಲಿ ಮುಳ್ಳು ಹೊಕ್ಕ ಜಾಗದಲ್ಲಿ ಪಿನ್ನು ಅಥವಾ ಸೂಜಿಯಿಂದ ಸ್ವಲ್ಪ ಚರ್ಮ ಬಗೆದು, ಒಳಸೇರಿದ ಮುಳ್ಳನ್ನು ಚಿಮ್ಮಟದಿಂದ ಹೊರ ಎಳೆದು ತೆಗೆಯುತ್ತಿದ್ದರು. (ಮೇಲೆ ಇದ್ದರೆ ಪಿನ್ನಿನಿಂದಲೇ "ಚಿಟಗ ಮುಳ್ಳು" ಆಡಿಸಿದರೂ– ಮುಳ್ಳಿನ ಬುಡವನ್ನು ಅತ್ತ ಇತ್ತ ಅಲುಗಾಡಿವುದು – ಸಡಿಲವಾಗಿ ಮೇಲೆ ಬರುತ್ತಿತ್ತು) ಮುಳ್ಳು ಹೊರಬಂದಾಗಲೂ ಕೆಲವೊಮ್ಮೆ ನೋವು ಹಾಗೇ ಉಳಿಯುತ್ತಿತ್ತು. ಆಗ ಹಿರಿಯರು, 'ಕಾದೊಲೆ' ಮೆಟ್ಟಲು ಹೇಳುತ್ತಿದ್ದರು. ಅಂದರೆ, ಅಡುಗೆಯ ನಂತರ ಇನ್ನೂ ಬಿಸಿ ಇರುವ 'ಒಲೆತೋಳಿ'ನ ಮೇಲೆ ಮುಳ್ಳು ತುಳಿದ ಕಾಲನ್ನು ಹೆಚ್ಚು ಬಿಸಿ[illegible]ವಂತೆ ಕೆಲಬಾರಿ ಇಡುವುದು. ಅಥವಾ ಎಣ್ಣೆ ಕಾಸಿ ಬಿಡುತ್ತಿದ್ದರು. ಅಂ[illegible]ವು ಹಾಸಿಕೊಳ್ಳುವ ಕುರಿ ಕಂಬಳಿಯ ಅಂಚಿನ ಒಂದು ದಾರ ಕಿತ್ತು, ಅದನ್ನು ಉರಿವ ಹೊಂಗೆ ಎಣ್ಣೆ ಹಣತೆಯಲ್ಲಿನ ಎಣ್ಣೆಯಲ್ಲಿ ಚೂರು ಅದ್ದಿ, ಅದನ್ನು ಅದೇ ದೀಪದ ಕುಡಿಗೆ ಸೋಕಿಸಿ, ಅದು ಬಿಸಿಯಾದ ಕೂಡಲೇ ಎತ್ತಿ ಈ ಮುಳ್ಳು ಇದ್ದ ಜಾಗಕ್ಕೆ ಇಟ್ಟರೆ, ಕಾದ ಎಣ್ಣೆ–ಕಾವು ಗಾಯದ ಆಳಕ್ಕೆ ಇಳಿದು ಹುಡುಗನ ನೆತ್ತಿಯಲ್ಲಿ ಚಟಾರನೆ ಸಿಡಿದಂತಹ ಅನುಭವವಾಗುತ್ತಿತ್ತು. ಹೀಗೆ, ಒಂದೆರಡು ಸಾರಿ ಮಾಡಿಕೊಂಡು, ಮಲಗಿದರೆ, ಬೆಳಿಗ್ಗೆ ನೋವೆಲ್ಲಾ ಮಾಯ!

ಇನ್ನೂ ಆಳಕ್ಕೆ ಹೋದ ಅಥವಾ ಸೂಕ್ಷ್ಮವಾದ ಕೆಲ ಮುಳ್ಳು ತುಂಡುಗಳನ್ನು

ಹುಡುಕಿ ಈಚೆ ತೆಗೆಯಲಾಗುತ್ತಿರಲಿಲ್ಲ. ಆಗ ಮುಳ್ಳಿರುವ ಜಾಗದ ಮೇಲು ಚರ್ಮವನ್ನು ಸ್ವಲ್ಪ ಬಗೆದು, ಅದರಲ್ಲಿ ಎಕ್ಕದ ಹಾಲನ್ನು ಹಾಕಿಸುತ್ತಿದ್ದರು. ಹೀಗೆ ಮಾಡಿದರೆ, ಒಳಭಾಗ ಬೇಗ ಮೆದುವಾಗಿ, ಮುಳ್ಳು ತಾನಾಗಿ ಹೊರಬರುತ್ತಿತ್ತು.

ಬಿದ್ದು ಮೊಣಕೈ, ಮಂಡಿ ಗಾಯಮಾಡಿಕೊಳ್ಳುತ್ತಿದ್ದುದು ಸಾಮಾನ್ಯ. ಸುಮಾರಾಗಿ ರಕ್ತ ಬಂದರೆ, ಅದರ ಮೇಲೆ ಮೂತ್ರ ಮಾಡಿಕೋ ಎನ್ನುತ್ತಿದ್ದರು. ಎಳೆಯರಿಗೆ ಸಣ್ಣ ತರಚು ಗಾಯವಾದರೆ, ಬಿದ್ದ ಜಾಗದಲ್ಲಿ ಮೂರು ಬಾರಿ ಉಗಿಸಿ, ಎಂಜಲಿನೊಂದಿಗೆ ಆ ಧೂಳು ಕಲೆಸಿ, ಗಾಯಕ್ಕೆ ಹಚ್ಚಿ, ಸಮಾಧಾನ ಮಾಡಿ ಕರೆದೊಯ್ಯುತ್ತಿದ್ದರು.

ಕೈಕಾಲಿನಲ್ಲಿ ಸಣ್ಣ ಗುಳ್ಳೆ (ಕುರ) ಗಳಾಗಿ ಕೀವು ತುಂಬಿ ಬಾಧೆ ಕೊಡುತ್ತಿದ್ದುದು ಸಾಮಾನ್ಯ. ಬೇಲಿಗಿಡದ ಎಲೆ ಕಿತ್ತು, ಅಂಗೈಲಿ ಹಾಕಿ ಹೊಸಕಿ, ಅದರ ರಸದೊಂದಿಗೆ ಚೂರು ಸುಣ್ಣ ಸೇರಿಸಿ, ಗಾಯಕ್ಕೆ ಹಚ್ಚುತ್ತಾ ಬಂದರೆ 2-3 ದಿನಗಳಲ್ಲಿ ಗಾಯ ಒಡೆದು, ಕೀವು ಸೋರಿಹೋಗುತ್ತಿತ್ತು. ಇದಕ್ಕೇ ಕೆಲವೊಮ್ಮೆ ಹೊಂಗೆ ಬೀಜವನ್ನು, ಉಗುಳಿ (ಎಂಜಲು) ನೊಂದಿಗೆ ತೇಯ್ದು, ಅದನ್ನು ಗಾಯಕ್ಕೆ ಸವರುತ್ತಿದ್ದರು.

ನನ್ನ ತಂಗಿ ಚಿಕ್ಕವಳಿದ್ದಾಗ ಹೀಗೆ ಒಂದು ಗಾಯವಾಗಿ ನಸುರು (ನೀರು) ಆಡುತ್ತಲೇ ಇತ್ತು ; ಬೇಗ ಮಾಯಲಿಲ್ಲ. ಆಗ ಒಮ್ಮೆ ದಾರಿಯಲ್ಲಿ ಹೋಗುತ್ತಿದ್ದಾಗ ಅಲ್ಲಿ ಸಿಕ್ಕಿದ ಚೂರು ಸುದ್ದೆಮಣ್ಣಿಗೆ ಎಂಜಲು ಬೆರೆಸಿ, ಕಲೆಸಿ ಆ ಗಾಯಕ್ಕೆ ಸವರಿದ್ದೆ. ಕೆಲ ದಿನಗಳ ವರೆಗೆ ಆ ಮಣ್ಣು ಗಾಯಕ್ಕೆ ಹಾಗೆ ಅಂಟಿಕೊಂಡಿತ್ತು. ವಿಶೇಷವೆಂದರೆ, ದಿನದಿನಕ್ಕೆ ಗಾಯ ಮಾಯುತ್ತಾ ಬಂದು ಕೊನೆಗೆ ಮಣ್ಣಿದ್ದ ಭಾಗ ಉದುರಿ ಅಲ್ಲಿ ಹೊಸ ಚರ್ಮ ಬೆಳೆದುಕೊಂಡಿತ್ತು.

ಇದು ಹೇಗೆ ಸಾಧ್ಯವಾಯಿತು- ಎಂಬುದು ಆಗ ಗೊತ್ತಿರಲಿಲ್ಲ; ಕೆಲವರ್ಷಗಳ ಈಚೆಗೆ 'ಪ್ರಕೃತಿ ಚಿಕಿತ್ಸೆ' ಬಗೆಗೆ ಓದಿದಾಗ ಮಣ್ಣಿಗಿರುವ ವೈದ್ಯಕೀಯ ಗುಣ ಗೊತ್ತಾಯಿತು. ಈ ವೈದ್ಯ ಪದ್ಧತಿಯಲ್ಲಿ ಇದನ್ನು 'ಪುಲ್ಟೀಸ್' ಎಂದು ಕರೆಯುತ್ತಾರೆ. ಎಲ್ಲಾ ಅದೇ ಕ್ರಮವೇ. ಆದರೆ, ನಮ್ಮ ಗ್ರಾಮೀಣರು ಇದರ ವ್ಯವಸ್ಥಿತ ಅರಿವು ಇರದೆ, ಅದನ್ನು ಎಷ್ಟೋ ಕಾಲದಿಂದ ಬಳಸುತ್ತಾ ಬಂದಿದ್ದಾರೆ.

ಮಕ್ಕಳಿಗೆ ಕೆಲವೊಮ್ಮೆ ತಲೆ ಮತ್ತು ಮೊಣಕಾಲು ತುಂಬಾ ಹುಣ್ಣುಗಳಾಗಿ ಕೀವು ಹರಿಯುತ್ತಿತ್ತು. ಬೇರಾವ ಔಷಧಕ್ಕೂ ಅದು ಬಗ್ಗದಾಗ ಅಥವಾ ಅದರ ಚಹರೆ ನೋಡಿಯೇ ಅಜ್ಜಿಯರು ಅದು 'ನಾಗರು ತಂದು ಹಾಕಿದೆ' ಎನ್ನುತ್ತಿದ್ದರು. ಆಗ ತಾಯಂದಿರು ಹುತ್ತಕ್ಕೆ ತನಿ ಎರೆದು ಹುತ್ತದ ಮಣ್ಣು ತಂದು, ನೀರಲ್ಲಿ ಕಲೆಸಿ, ಈ ಗಾಯಕ್ಕೆ ಬಳಿಯುತ್ತಿದ್ದರು. ಇದೂ ಸಹ ಪುಲ್ಟೀಸ್ ರೀತಿಯೇ.

ನನಗಿನ್ನೂ ನೆನಪಿದೆ : ಆ ಕಾಲದ ತಾಯಂದಿರು-ಬಾಣಂತಿಯರಾಗಿದ್ದಾಗ ಸುಲಭವಾಗಿ 'ಸನ್ನಿ' (ರೋಗ)ಕ್ಕೆ ಒಳಗಾಗುತ್ತಿದ್ದರು. ಆ ಕಾಯಿಲೆಗೆ ನನ್ನ ಅಮ್ಮ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರು. ಅದಕ್ಕಾಗಿ ಒಮ್ಮೆ ಕತ್ತೆ ಲದ್ದಿ ಆಯ್ದು ತರಲು ಹೇಳಿದ್ದರು. ನಾನು ಸ್ಕೂಲು ಮುಗಿಸಿ, ಸಂಜೆ ಬರುವಾಗ ಪಾಳ್ಯದ ಅಗಸರ (ಗೊಬ್ಬರಕ್ಕಾಗಿ ಬೇರೆಯವರೂ ಸಾಕುತ್ತಿದ್ದರು) ಕತ್ತೆ ಲದ್ದಿ ಆಯ್ದು, ಬ್ಯಾಗಿನಲ್ಲಿ ತುಂಬಿ ತಂದುಕೊಟ್ಟಿದ್ದೆ. ಅಮ್ಮ ದನದ ಕೊಟ್ಟಿಗೆಯಲ್ಲಿ ಅದನ್ನು ಕಾಯಿಸಿ, ತಲೆ ಮೇಲೆ ದಪ್ಪ ಹೊದಿಕೆ ಮುಚ್ಚಿಕೊಂಡು, ಮುಖಕ್ಕೆ ಚೆನ್ನಾಗಿ ಬೆವರು (ಕೆಟ್ಟನೀರು) ಕೀಳುವಂತೆ ಹಬೆ-ಕಾವುಟ ಕೊಟ್ಟುಕೊಂಡದ್ದನ್ನು ನೋಡಿದ್ದೆ.

'ಹೊಟ್ಟೆಕಚ್ಚು' - ಭೇದಿ ಆಗುವವರಿಗೆ ಬೆಳಗಿನ ಹೊತ್ತು ಕಾಯಿಸಿದ ಬೆಣಚುಕಲ್ಲು ಹಾಕಿದ ಮೊಸರನ್ನ ಉಣ್ಣಿಸುತ್ತಿದ್ದರು.

ಕೆಮ್ಮು, ನೆಗಡಿಗಳು ಆಗಲೂ ಸಾಮಾನ್ಯ ಕಾಯಿಲೆಗಳೇ. ಅವುಗಳಿಗೆ ಅವರ ಚಿಕಿತ್ಸೆಯೂ ಸಾಮಾನ್ಯವೇ. ಗಂಟಲು 'ನಸನಸ' (ಕೆರೆತ) ಅನ್ನುತ್ತಿದ್ದರೆ, ಕಟ್ಟಿಕೊಂಡಿದ್ದರೆ - ಬಿಸಿನೀರಿಗೆ ತುಸು ಹರಿಸಿನ ಹಾಗೂ ಸುಣ್ಣ ಬೆರೆಸಿದರೆ 'ಓಕುಳಿ' (ಕೆಂಪು) ನೀರಾಗುತ್ತದೆ. ಒಲೆಯಲ್ಲಿ ಕಾಯಿಸಿದ ಕುಡ್ಲು ಅಥವಾ ಚೂರಿ (ಅಂತಹ ಏನಾದರೂ ಕಬ್ಬಿಣ) ಯನ್ನು ಈ ನೀರಿನಲ್ಲಿ ಅದ್ದಿ ಚೊರ್‌ಗುಟ್ಟಿಸಿ - ಆ ಬಿಸಿಬಿಸಿ ನೀರನ್ನೇ ಗಂಟಲು ಬೆಚ್ಚಗಾಗುವಂತೆ ಕುಡಿದರೆ ಗಂಟಲು ಸರಿಹೋಗುತ್ತಿತ್ತು.

ಹಸಿರಿನ ಮತ್ತು ಸುಣ್ಣಕ್ಕೆ ವೈದ್ಯಕೀಯ ಕ್ರಿಮಿನಾಶಕಗುಣ ಇರುವುದು ಗೊತ್ತಿರುವ ಸಂಗತಿ. ಆದರೆ, ಬಿಸಿ ಓಕುಳಿ ನೀರಿಗೆ ಚೆನ್ನಾಗಿ ಕಾದ ಕಬ್ಬಿಣ

ಸೋಕಿಸುವ, ಕಾಯಿಸಿದ ಬೆಣಚುಕಲ್ಲಿನ ಹಾಗೆ ಉಷ್ಣೋತ್ಕರ್ಷ? ಕ್ರಿಯೆಯ ಹಿಂದಿನ ವೈದ್ಯಕೀಯ ತತ್ವ ಗಮನಿಸಬೇಕಿದೆ.

ಕೆಲವೊಮ್ಮೆ 'ಕಿರುನಾಲಿಗೆ' ಆದಾಗ (ಕಿರು ನಾಲಿಗೆ ದೊಡ್ಡದಾಗಿ, ನಾಲಿಗೆ ಮೇಲೆ ಕೂರುವಂತಾದಾಗ – ಕೆಮ್ಮು ಬಹಳ) ಒಂದು (ಬಿದಿರ) ದಬ್ಬೆಯಿಂದ ಕೆಳ ನಾಲಿಗೆಯನ್ನು ಅದುಮಿಕೊಂಡು, ಇನ್ನೊಂದು ದಬ್ಬೆಯಿಂದ ಮೆಣಸಿನ ಪುಡಿಯನ್ನು ಕಿರುನಾಲಿಗೆಗೆ ಸೋಕಿಸುತ್ತಿದ್ದರು. ಈ ಚಿಕಿತ್ಸೆಗೂ ವಾಸಿಯಾಗದಿದ್ದರೆ, ನುರಿತ ಅಜ್ಜಿಯರು ಈ ರೋಗಿಯನ್ನು ಮನೆಯ ತಲೆಬಾಗಿಲ ಹೊಸ್ತಿಲ ಮೇಲೆ ಕೂರಿಸಿ, ಆತನ ನೆತ್ತಿಯಲ್ಲಿನ ನಾಲ್ಕೈದು ಕೂದಲನ್ನು ಹಿಡಿದು ಚಟಕ್ಕೆಂದು ಮೇಲಕ್ಕೆ ಎಳೆಯುತ್ತಿದ್ದರು. ಇದರಿಂದ 'ನೆತ್ತಿ ಬಿದ್ದಿದ್ದರೆ' ಹೋಗುತ್ತದೆ ಎಂದು ಭಾವಿಸುತ್ತಿದ್ದರು.

ಈ ತಂತ್ರ–ತತ್ವದ ಹಿನ್ನೆಲೆ ಏನೆಂಬುದನ್ನು ವೈದ್ಯರೇ ವಿಶ್ಲೇಷಿಸಿ ಹೇಳಬೇಕು. ಆದರೆ ಎಲ್ಲಾ 'ಚಿಕಿತ್ಸೆ' ಗಳೂ ವಿವರಣೆಗೆ ನಿಲುಕಲಾರವು ಎನಿಸುತ್ತೆ. 'ಕಾಲುಧೂಳು' ಆದವರಿಗೆ ಉಪ್ಪು ನೀವಳಿಸಿ ಒಲೆಗೆ ಹಾಕುವುದು... ಇತ್ಯಾದಿ – ಇವು ಕೇವಲ ನಂಬಿಕೆಗಳಾಗಿದ್ದಿರಬಹುದು. ರೋಗಿ ಉಂಡು, ಕೈ ತೊಳೆದ ತಣಿಗೆಗೆ ಚೊಂಬನ್ನು ನೀವಾಳಿಸಿ ಗುಬರು ಹಾಕಿದಾಗ ಅದು ಸೊರ್ ಎಂದು ಆ ನೀರನ್ನೆಲ್ಲಾ ಹೀರಿಕೊಂಡರೆ ರೋಗ ವಾಸಿಯಾಗುತ್ತೆ... ಎಂಬ ನಂಬಿಕೆ ಸಹ ಇಂತಹುದೇ.

ಜನಪದರ ವೈದ್ಯದಲ್ಲಿ ಇಂತಹ 'ನಂಬಿಕೆ ವೈದ್ಯ' ವೇ ಬಹಳ ಇದೆ. ಇದನ್ನೆಲ್ಲಾ ಈಗಲೂ ನಂಬುವ ಅಗತ್ಯವಿಲ್ಲ. ಆದುದರಿಂದ ಪ್ರಾಚೀನವಾದುದಕ್ಕೆ ಮಾನ್ಯತೆ ನೀಡುವಾಗ ಈ ಅರಿವಿನ ಎಚ್ಚರ ಅಗತ್ಯ. ಇಷ್ಟಾಗಿಯೂ ಕೆಲ ಸಾಮಾನ್ಯ ಕಾಯಿಲೆಗಳು ಹಳೇ ವೈದ್ಯಕ್ಕೆ ಜಗ್ಗಲಾರದಷ್ಟು ಬೆಳೆದಿವೆ ಏನೋ– ಎಂಬ ಅನುಮಾನ ಬರುತ್ತದೆ. ನನ್ನ ಅಮ್ಮನ ಈಗಿನ ಅನುಭವ ಕೇಳಿ : ಸೊಳ್ಳೆ ಕಡಿದ ಜಾಗವನ್ನು ಚೆನ್ನಾಗಿ ಕೆರೆದರಂತೆ. ಆ 'ತಿಮ್ರ' (ನವೆ) ಹೋದರೂ, ಅಲ್ಲಿ ಚರ್ಮ ಕಿತ್ತು, ಮಾರನೇ ದಿನ ನೀರಾಡತೊಡಗಿತು. ಸಕ್ಕರೆ ಖಾಯಿಲೆಯವರಿಗೆ ಗಾಯ ವಾಸಿಯಾಗುವುದು ಕಷ್ಟ. ಮಕ್ಕಳಿಗೆ ಗೊತ್ತಾದರೆ ಇನ್ನೆಲ್ಲಿ ಆಕ್ಷೇಪ ಮಾಡುತ್ತಾರೋ ಎಂದು, ಹಳೇ ನೆನಪಿನಂತೆ ಆ ಗಾಯಕ್ಕೆ ತುಸು 'ಮಣ್ಣು' (ಪುಲ್ಟೀಸ್ ರೀತಿ) ಹಾಕಿದರೂ ಗಾಯ ವಾಸಿಯಾಗಲೇ ಇಲ್ಲ. ಹೀಗಾಯಿತಲ್ಲಾ?

ಎಂಬ ಚಿಂತೆಯಿದ್ದಾಗ, ಮನೆ ಹತ್ತಿರ ಬಂದ ಒಬ್ಬಾಕೆಗೆ ಈ ಗಾಯದ ವಿಚಾರ ಹೇಳಿದಾಗ ಆಕೆ 'ಅಕ್ಕೋ, ಅಂಗಡೇಗೆ ಸಿಕ್ಕೋ 'ಮೂತೀವು' (ಕಣ್ಣು ಸೋಂಕಿಗೆ ಇಡುವ ಔಷಧಿ) ತಂದು ಇಡು, ಹೋತದೆ' – ಅಂದಳಂತೆ. ಅದರಂತೆ ನಾಲ್ಕಾಣೆ ಕೊಟ್ಟು ಒಂದು ತರಿಸಿ, ಆ ಔಷಧಿ ಸವರಿದರೆ, ಗಾಯ ವಾಸಿಯೇ ಆಯಿತು!' ಹಾಗಾದರೆ ಮಣ್ಣಿಗಿದ್ದ ವೈದ್ಯಕೀಯ ಗುಣ ಕ್ಷೀಣವಾಗಿದೆಯೇ ?

ಸೋಂಕಿನ ಕಾರಣದಿಂದಲೋ, ಶುಚಿತ್ವದ ಕೊರತೆಯಿಂದಲೋ ಗ್ರಾಮೀಣ ಮಕ್ಕಳಿಗೆ ಗಾಯ, ಕುರು ಆಗುವುದು ಸಾಮಾನ್ಯ. ಕುವೆಂಪು ಅವರು ತಮ್ಮ ವಿದ್ಯಾರ್ಥಿ ವಯಸ್ಸಿನಲ್ಲೊಮ್ಮೆ ಕಜ್ಜಿಯ ಪೀಡನೆಗೆ ಒಳಗಾದಂತೆ ಬಾಲ್ಯದಲ್ಲಿ ನಾನೂ ಒಮ್ಮೆ ಕಜ್ಜಿ ಹತ್ತಿ ಲಜ್ಜೆ ಬಿದ್ದದ್ದು ಉಂಟು. ಆದರೆ, ಆಗಲೂ ನನ್ನಮ್ಮ ಮಾಡಿದ್ದು ಒಂದು ರೀತಿ ಮೌಖಿಕ ಸಂಪ್ರದಾಯದ ಚಿಕಿತ್ಸೆಯನ್ನೇ. ದೊಡ್ಡಬಳ್ಳಾಪುರದ ಆಸ್ಪತ್ರೆಗಳಿಗೆ ಹೋಗಿಬರಲು ಹಣಕಾಸು ಅಥವಾ ಅದಕ್ಕಾಗಿ ಕರೆದುಕೊಂಡು ಹೋಗಿಬರುವ ಒಬ್ಬ ವ್ಯಕ್ತಿಯ ನೆರವು ಇಲ್ಲದಿದ್ದರಿಂದಲೋ ಏನೋ, ಹೀಗೆ ಯಾರೋ ಅನುಭವಸ್ಥ ತಾಯಿ ಹೇಳಿದ ವೈದ್ಯವನ್ನೇ ಮಾಡಿದಳು. ಅಂಗಡಿಯಿಂದ ಗಂಧಕ ಹಾಗೂ ಕೊಬ್ಬರಿ ಗಿಟಕು (ಇತರೆ ಪರಿಕರಗಳ ಹೆಸರು ಮರೆತುಹೋಗಿದೆ) ತರಿಸಿ, ಆ ಗಿಟಕಿನೊಳಗೆ ಗಂಧಕ ಹಾಕಿ, ಅದನ್ನು ಕಾಯಿಸಿ (ವಿವರ ಮರೆತಿದೆ) ನಂತರ, ಕೊಬ್ಬರಿ ಸೀಳಿ, ಅದರಲ್ಲಿನ ಎಣ್ಣೆ ಅಂಶವನ್ನು (ಗಂಧಕ ಸಹಿತ) ಮೈಗೆಲ್ಲಾ ಸವರಿ, ಬೆಳಗಿನ ಬಿಸಿಲಲ್ಲಿ ಒಂದೆರಡು ಗಂಟೆ ಹಾಗೇ ಇರಿಸುವುದು ; ಆ ಕೊಬ್ಬರಿಯನ್ನು ಹೊಟ್ಟೆಗೂ ತಿನ್ನಲು ಕೊಡುವುದು. ಹೀಗೆ ಎರಡು ಮೂರು ವಾರ ಮಾಡುತ್ತಿದ್ದಂತೆಯೇ ಗಾಯವೆಲ್ಲಾ ಮಾಯವಾಗಿದ್ದವು.

ಗಂಧಕ, ಕೊಬ್ಬರಿ ಎಣ್ಣೆ, ಎಳೆ ಬಿಸಿಲು – ಇವುಗಳಲ್ಲಿ ಚರ್ಮ ರೋಗವನ್ನು ನಿವಾರಿಸುವ ಗುಣ ಇರುವುದರಿಂದ, ಸಹಜವಾಗಿಯೇ ಈ ಚಿಕಿತ್ಸೆ ವೈದ್ಯಕೀಯ ಹಿನ್ನೆಲೆ ಪಡೆದಿದೆ. ಹೀಗೆ, ಜನಪದ ವೈದ್ಯದಲ್ಲಿ ಕೆಲವೊಂದು ವೈದ್ಯಕೀಯ ತತ್ವದ ಆಧಾರದ ಮೇಲೆ ಹುಟ್ಟಿಕೊಂಡಿದ್ದರೂ ಇನ್ನು ಕೆಲವು ಕೇವಲ ಮನೋವೈಜ್ಞಾನಿಕ ನೆಲೆಯಲ್ಲಿ ಅಂದರೆ ರೋಗಿಯನ್ನು ಮಾನಸಿಕವಾಗಿ ಸಂತೃಪ್ತಿಗೊಳಿಸಿ ರೋಗ ಉಪಶಮನ ಮಾಡುವಂತಹವಾಗಿದ್ದವು ಎನಿಸುತ್ತದೆ. ಉದಾಹರಣೆಗೆ : ಉಪ್ಪನ್ನೋ ಮೆಣಸಿನ ಕಾಯನ್ನೋ ರೋಗಿಯ ಮುಖದಿಂದ

ಕೆಳಕ್ಕೆ ನೀವಳಿಸಿ, ಒಲೆಯಲ್ಲಿ ಹಾಕುವುದು. ಅದು ಚಟಚಟ ಎಂದು ಸಿಡಿದರೆ 'ದಿಷ್ಟಿ ಆಗಿತ್ತು; ಹರಿಯಿತು' ಎನ್ನುವುದು, ಇತ್ಯಾದಿ.

ಆದರೆ, ಇನ್ನೊಂದು ವಿಧದ ವೈದ್ಯ ಇದೆ. ಅದು ಅವರ ಆದಿಮ ಬದುಕಿನ ಪಳೆಯುಳಿಕೆ ಆಗಿರುವ ಮಾಟ-ಮಂತ್ರಕ್ಕೆ ಸಂಬಂಧಿಸಿದ್ದು. ಇತರ ನಾಟಿ ವೈದ್ಯಗಳು ಇಂದು ಬಹುಮಟ್ಟಿಗೆ ಮರೆಯಾಗಿ ಹೋಗಿದ್ದರೂ ನಮ್ಮವರಲ್ಲಿ ಆಧುನಿಕ ವೈದ್ಯದಷ್ಟೇ ಪ್ರಬಲವಾಗಿ ಇನ್ನೂ ಉಳಿದಿರುವುದು ಈ ಮಾಟ-ಮಂತ್ರದ ವೈದ್ಯ! ಎಂತಹ ವಿಪರ್ಯಾಸ! ಇದಕ್ಕಿಂತಲೂ ವಿಪರ್ಯಾಸ ಎಂದರೆ ನನ್ನ ಬಾಲ್ಯದಲ್ಲಿ ಈ ಮಂತ್ರ-ತಂತ್ರದ ವೈದ್ಯವನ್ನು ಕೆಳವರ್ಗದ ಯಾರೋ ಒಬ್ಬಿಬ್ಬ 'ಪಂಡಿತ' ರು ನೋಡಿಕೊಳ್ಳುತ್ತಿದ್ದರು. ಆದರೆ, ಆಮೇಲೆ ಇದಕ್ಕಾಗಿ ಒಂದು 'ಮಾತಾಡುವ ದೇವರು', ಆಮೇಲೆ ಪಕ್ಕದ ಊರಲ್ಲಿ ಇನ್ನೂ ಒಂದು ದೇವರು ಹುಟ್ಟಿಕೊಂಡದ್ದು. ಈ ದೇವರು ಹೀಗೆ ಹೆಚ್ಚಾದಷ್ಟು ದೆವ್ವ ಪೀಡೆ, ಮಾಟದ ಸಮಸ್ಯೆ ಇರುವವರೂ ಊರುಗಳಲ್ಲಿ ಹೆಚ್ಚಾದದ್ದು!

ತೊಟ್ಟಿಲ ಕೂಸಾಗಲೀ, ಕೈಕೂಸಾಗಲೀ ಹೊಟ್ಟೆ ಉಬ್ಬರಿಸುವುದು, ಮಲಗಿದ್ದಾಗ 'ಮೆಟ್ಟುಬೀಳು'ವುದು ಇತ್ಯಾದಿ ಮಾಡಿದರೆ 'ಬಾಲಗ್ರಾವು' ಆಗಿದೆ ಎಂದು ಪಕ್ಕದ ಕರ್ಲಾಪುರದಿಂದ ಆಗಾಗ ಇದಕ್ಕಾಗಿ ಬರುತ್ತಿದ್ದ ಹರಿಜನರ ರಾಘವಯ್ಯನಿಂದ 'ಅಂತ್ರದ ಚೀಟು' ಬರೆಸಿ ಮಗುವಿನ ಕೊರಳಿಗೆ ಕಟ್ಟುತ್ತಿದ್ದರು. (ಆತ ಮಕ್ಕಳ ಅಥವಾ ದೊಡ್ಡ ರೋಗಿಯ ಕೈ ಹಿಡಿದು ನಾಡಿ ನೋಡಿಯೇ ಅದೇನು ಹೊಟ್ಟೆಗೆ ಹುಟ್ಟಿದ್ದೋ ಅಥವಾ ಗ್ರಹಶಂಕೆಯೋ-ಎಂದು ಹೇಳಿಬಿಡುತ್ತಿದ್ದ. ಮತ್ತು ಅದಕ್ಕೆ ತಕ್ಕ ಎರಡೂ ರೀತಿಯ ಚಿಕಿತ್ಸೆಯನ್ನು ಮಾಡುತ್ತಿದ್ದ.) ಮಕ್ಕಳಿಗೆ ಈ ತೊಂದರೆ ಬರದಿರಲಿ ಎಂದು ಮುನ್ನೆಚ್ಚರಿಕೆಯಾಗಿಯೇ ತಾಯಂದಿರು ಸಂತೆಯ ಪುಸ್ತಕ ವ್ಯಾಪಾರಿ ಬಳಿ ದೊರೆಯುತ್ತಿದ್ದ 'ಬಾಲಗ್ರಹ'ದ ಪುಸ್ತಕ ತರಿಸಿ, ಅದನ್ನು ಮಗುವಿನ ಕೆಳಗೆ ತೊಟ್ಟಿಲಲ್ಲಿ ಸದಾ ಹುದುಗಿಡುತ್ತಿದ್ದುದು ಸಾಮಾನ್ಯವಾಗಿತ್ತು. ಆದರೂ ಆಗಾಗ ಮಗುವಿಗೆ ಸಣ್ಣಪುಟ್ಟ ಖಾಯಿಲೆ ಬಂದಾಗ, ಓದ್ಯೆಕಾರರಿಂದ ಇಬೂತಿಗಟ್ಟಿ ಮಂತ್ರಿಸಿಕೊಂಡು ಬಂದು ಮಗುವಿಗೆ ಆ ವಿಭೂತಿ ಹಚ್ಚುವುದು ಅಥವಾ ಮಂತ್ರಿಸಿದ ಭಸ್ಮ ಕುಡಿಸುವುದೂ ಮಾಮೂಲಿ ಆಗಿತ್ತು. ಇಷ್ಟಾಗಿಯೂ, ಏಳು ಮಕ್ಕಳ ನನ್ನಮ್ಮ 'ನನ್ನ ಯಾವ ಮಕ್ಕಳಿಗೂ ಒಂದು ದಿನಕ್ಕೂ ಒಂದು ಅಂತ್ರ-ಮಂತ್ರ ಅಂತ ನಾನು ಕಟ್ಟಿಸಲಿಲ್ಲ' ಎಂದು ಹೆಮ್ಮೆಯಿಂದ ಹೇಳುತ್ತಿದ್ದುದುಂಟು.

ಅದರರ್ಥ ಆಕೆ ಭಾರೀ ವೈಚಾರಿಕ ಮನೋಭಾವದವಳೆಂದಲ್ಲ. ಆದರೂ ಅದೇಕೋ ಈ ವಿಚಾರದಲ್ಲಿ ಅಷ್ಟು 'ಪ್ರಗತಿಪರ'ವಾಗಿ ನಡೆದುಕೊಂಡಿದ್ದಳು. ನನ್ನ ಅತ್ತಿಗೆ ತನ್ನ ಮಕ್ಕಳಿಗೋ ಅಥವಾ ಪಕ್ಕದ ಮನೆಯವರು ತಮ್ಮ ಮಕ್ಕಳಿಗೋ ಕೊರಳಲ್ಲಿ ಅಥವಾ ತೋಳಲ್ಲಿ 'ತಾಯ್ತ' ಇತ್ಯಾದಿ ಕಟ್ಟಿರುವುದನ್ನು ನೋಡಿ ಆಸೆಯಿಂದ ನಾನು ಒಮ್ಮೆ, 'ನೀನ್ಯಾಕಮ್ಮ ನನಗೆ ತಾಯ್ತಾನೇ ಕಟ್ಟಿಸಿಲ್ಲ' – ಎಂದದ್ದಕ್ಕೆ ಆಕೆ ಆಕ್ಷೇಪಿಸುತ್ತಾ ಹಾಗೆ ಹೇಳಿದ್ದು ಚೆನ್ನಾಗಿ ನೆನಪಿಗೆ. ಆದರೆ ನನ್ನಮ್ಮನಂತಹವರ ಜಗತ್ತಿನಲ್ಲಿನ ಕೆಲವೊಂದು ಕಾಯಿಲೆಗಳು, ಅವುಗಳ ಕಾರಣಗಳು, ಅವುಗಳ ಚಿಕಿತ್ಸೆ ಹಾಗು ಆ ಸಂಬಂಧೀ ದೈವಗಳು ಯಾವುದೋ ಜಮಾನದ ನಂಬಿಕೆಗಳ ಫಲವಾದುವು ಎನಿಸುತ್ತದೆ (ನೋಡಿ : ಚನ್ನಾದೇವಿ ಅಗ್ರಹಾರ ; ಜಾನಪದೀಯ ಅಧ್ಯಯನ). ಕಾಲುಹೊಳೆಯಮ್ಮ, ದಾಟು, ಅರೆ ತಲೆನೋವಿಗೆ ಸೂರ್ಯನಾರಾಯಣನ ವ್ರತ ಹಿಡಿಯುವುದು... ಇಂತಹ ಎಷ್ಟೋ ದೈವೀಸಂಬಂಧಿ ರೋಗಗಳು – ಇದಕ್ಕೆ ನಿದರ್ಶನಗಳು.

೨

ನಮ್ಮೂರಿನಲ್ಲಿ ನನ್ನ ಅಪ್ಪ, ದೊಡ್ಡಪ್ಪ ಅವರನ್ನು ಸೇರಿಸಿ ಕನಿಷ್ಠ ನಾಲ್ಕೈದು ಜನರಾದರೂ ಪಶುಗಳಿಗೆ ಚಿಕಿತ್ಸೆ ಮಾಡುವವರು ಇದ್ದರು. ಇವರನ್ನು ಪಾರಿಭಾಷಿಕ ಅರ್ಥದಲ್ಲಿ 'ಪಂಡಿತ' ರೆಂದು ಕರೆಯಲಾಗದಿದ್ದರೂ ದನ, ಎಮ್ಮೆಗಳಿಗೆ ಬರುತ್ತಿದ್ದ ಕೆಲವೊಂದು ಕಾಯಿಲೆಗಳಿಗೆ ತಾವು ಹಿರಿಯರಿಂದ ಕಲಿತಿದ್ದ ಚಿಕಿತ್ಸೆಯನ್ನು ವಿಶ್ವಾಸಪೂರ್ವಕವಾಗಿಯೇ ಮಾಡುತ್ತಿದ್ದರು, ಮತ್ತು ಅದು ಪರಿಣಾಮಕಾರಿಯೂ ಆಗಿದ್ದಿರಬಹುದು ಎನಿಸುತ್ತದೆ.

ನಮ್ಮೂರಿನ ಸಾಕು ಪ್ರಾಣಿಗಳೆಂದರೆ ದನ, ಎಮ್ಮೆ, ಕುರಿ, ಮೇಕೆ ಹಾಗೂ ಕೋಳಿ. ಮನೆಗಳಲ್ಲಿ ಸಾಮಾನ್ಯವಾಗಿ ಇರುತ್ತಿದ್ದ ನಾಯಿ, ಬೆಕ್ಕುಗಳಿಗೆ ಯಾರೂ ವೈದ್ಯ ಮಾಡುತ್ತಿರಲಿಲ್ಲ. 'ನಾಯಿಗೆ ವೈದ್ಯ ಮಾಡಿದರೆ ಕೈಹತ್ತಲ್ಲ' ಎಂದು ನನ್ನ ದೊಡ್ಡಪ್ಪ ಒಮ್ಮೆ ಹೇಳಿದ್ದು ಚೆನ್ನಾಗಿ ನೆನಪಿದೆ. [ಆಮೆ ಓಡಿನಲ್ಲಿ (ಚಿಪ್ಪು) ಹಾಲು ಕುಡಿಸಿದರೆ ಹಾರೋ ಹಕ್ಕಿ ಹಿಡೀತೀನಿ– ಅಂತದಂತೆ ನಾಯಿ ಮರಿ ಎಂದು ಇನ್ನೊಬ್ಬರು ಹೇಳುತ್ತಿದ್ದುದು ನೆನಪಿದೆ]. ಕತ್ತೆ, ಮೇಕೆಗಳಿಗೆ ಯಾರಾದರೂ ಔಷಧಿ ಮಾಡಿದ್ದನ್ನು ನಾನು ಕಂಡಿಲ್ಲ; ಕೇಳಿಲ್ಲ. ಆದರೆ, ನಾಯಿ ಮಾತ್ರ ಸ್ವಯಂ

ವೈದ್ಯ-ಪಂಡಿತ ಎಂಬುದು ನನ್ನ ಅನುಭವಕ್ಕೆ ಬಂದಿದೆ. ಅಜೀರ್ಣ ಆದಾಗ ಅದು 'ಬೇಲಿ' ಎಲೆ ತಿಂದು ವಾಂತಿಮಾಡಿಕೊಳ್ಳವುದು ಸಾಮಾನ್ಯ ದೃಶ್ಯ. ಒಮ್ಮೆ ಕಡಿದಾಟದಲ್ಲಿ ಇನ್ನೊಂದು ನಾಯಿಯಿಂದ ತನ್ನ ಹೊಟ್ಟೆ ಮೇಲೆ ತೀವ್ರವಾಗಿ ಗಾಯ ಮಾಡಿಕೊಂಡಿದ್ದ ನಮ್ಮ ಮನೆ ನಾಯಿಗೆ ಹುಳು ಬಿದ್ದು ಬಹಳ ಬಾಧೆ ಪಡುತ್ತಿತ್ತು. ಬೇರೆ ಕಡೆ ಆದ ಗಾಯವನ್ನು ನೆಕ್ಕಿ, ನೆಕ್ಕಿ ವಾಸಿ ಮಾಡಿಕೊಳ್ಳುವುದು ಸಾಮಾನ್ಯ. ಆದರೆ, ಈ ಜಾಗ ಅದರ ಬಾಯಿಗೆ ಸುಲಭವಾಗಿ ಎಟುಕುತ್ತಿರಲಿಲ್ಲವಾದ್ದರಿಂದ ದಿನದಿನಕ್ಕೆ ವ್ರಣ ತೀವ್ರವಾಗುತ್ತಿತ್ತು. ಹುಳುಗಳಿಂದಾಗಿ ಇನ್ನು ಅದರ ಹೊಟ್ಟೆಯೇ ತೂತುಬಿದ್ದು, ಸತ್ತೇಹೋಗುವುದು ಖಂಡಿತ- ಎಂದು ನನಗೆ ಅನಿಸುತ್ತಿತ್ತು. ಆದರೂ ಕೊನೇ ಪ್ರಯತ್ನ ಎಂದು, ಮುಟ್ಟಲೂ ಅವಕಾಶ ಕೊಡದಿದ್ದ ಅದಕ್ಕೆ, ಮಲಗಿದ್ದಾಗ ಒಮ್ಮೆ ಒಂದೆರಡು ತೊಟ್ಟು 'ಡೆಟಾಲ್' ಉದುರಿಸಿದ್ದೆ. ಆ ಔಷಧಿಯನ್ನು ಒಂದು ಕ್ಷಣ ಅಲ್ಲಿ ಬಿಡದಂತೆ ಹೇಗಾದರೂ ಮಾಡಿ ನೆಕ್ಕಿಬಿಡುತ್ತಿತ್ತು. ಪಾಪದ ಜೀವ ಮೂರ್ಖತನದಿಂದ ಹಾಳಾಗುತ್ತಲ್ಲಾ ಎಂದು ಮರುಕವಾಗುತ್ತಿತ್ತು. ಆದರೆ, ಆಶ್ಚರ್ಯ! ವಾರ ಕಳೆಯುತ್ತಿದ್ದಂತೆ ಗಾಯ ಸುತ್ತಲೂ ಮಾಯುತ್ತಾ ಬಂದಿತ್ತು. ವ್ರಣನಾಶಕ ಔಷಧಿ ಅದರ ಶರೀರದಲ್ಲೇ ಉತ್ಪತ್ತಿಯಾಯಿತೋ ಅಥವಾ ಅದರ ಜೊಲ್ಲಿನ ಸಂಪರ್ಕ-ನೆಕ್ಕಿಕೊಳ್ಳುವುದರಿಂದ ಕೂಡಿಕೊಂಡ ಶುಚಿತ್ವದ ಕಾರಣವೋ ಕೆಲವೇ ದಿನಗಳಲ್ಲಿ ಚರ್ಮ ಕೂಡಿಕೊಂಡು ಅದು ಮೊದಲಿನಂತೆಯೇ ಆಗಿಬಿಟ್ಟಿತಲ್ಲಾ! ಹೀಗಾಗುವ ಮೂಲಕ ಸಣ್ಣ ಪುಟ್ಟ ಖಾಯಿಲೆಗಳಿಗೆಲ್ಲಾ ವೈದ್ಯರಲ್ಲಿ ಓಡುವ 'ಮಹಾ ಬುದ್ಧವಂತ ಪ್ರಾಣಿ' ಮನುಷ್ಯನನ್ನು ಅಣಕಿಸುವಂತಿತ್ತು. ಇದನ್ನು ನೋಡಿದಾಗ ಪ್ರತಿ ಜೀವಿಯಲ್ಲಿ ರೋಗಗಳಿಂದ ಸ್ವಯಂರಕ್ಷಣೆ ಮಾಡಿಕೊಳ್ಳುವ ಒಂದು ಶಕ್ತಿಯನ್ನು ನಿಸರ್ಗ ಇರಿಸಿದ್ದಿರಬಹುದು. ಆದರೂ ನಾಗರಿಕನಾಗುತ್ತಾ - ಆ ಮೂಲಕ ಪರಾವಲಂಬಿಯಾಗುತ್ತಾ ಬಂದ ಮನುಷ್ಯ ತನ್ನಲ್ಲಿನ ನಿಸರ್ಗಸಹಜ ಆ ಗುಣ - ಶಕ್ತಿಯನ್ನು ಮರೆಯುತ್ತಾ ಬಂದನೇನೋ ಅನಿಸುತ್ತದೆ.

ಆದರೂ ಎಲ್ಲಾ ಸಂದರ್ಭದಲ್ಲೂ ಪ್ರಾಣಿಯೇ ಆಗಲಿ, ಮನುಷ್ಯನೇ ಆಗಲಿ ಸ್ವಯಂವೈದ್ಯ ಮಾಡಿಕೊಳ್ಳವುದೂ ಸಾಧ್ಯವಾಗಲಾರದು. ಅಂತಹ ಸಂದರ್ಭದಲ್ಲಿ ಹೊರಗಿನ ವೈದ್ಯ ಅನಿವಾರ್ಯ. ಇಂತಹ ಸಂದರ್ಭದಲ್ಲೂ ಇವರ ಸಾಂಪ್ರದಾಯಿಕ ವೈದ್ಯಜ್ಞಾನ ಆಶ್ಚರ್ಯ ಉಂಟುಮಾಡುವಂತಹ ಪರಿಣಾಮ

ಉಂಟುಮಾಡುತ್ತಿದ್ದವು ಎಂಬುದನ್ನು ಹಲವು ಸಂದರ್ಭಗಳಲ್ಲಿ ನಾನು ನೋಡಿದ್ದೇನೆ. ಯಾರಾದರೂ ಕೈ, ಕಾಲು ಮುರಿದುಕೊಂಡರೆ ಅದಕ್ಕೆ ಬಿದಿರಿನ ದಬ್ಬೆ ಹಾಗೂ ಕೆಮ್ಮಣ್ಣು ಪಟ್ಟಿ ಹಾಕಿ ಕಟ್ಟಿ ವಾಸಿಮಾಡುತ್ತಿದ್ದುದು ಆಗ ಸಾಮಾನ್ಯ.

ನಮ್ಮವರ ಎಲ್ಲಾ ಸಾಂಪ್ರದಾಯಿಕ ಚಿಕಿತ್ಸೆಗಳಿಗೂ ಪರಿಣಾಮಕಾರಿಯಾಗಿರುತ್ತಿದ್ದವೇ ಎಂಬುದಕ್ಕೆ ಸ್ಪಷ್ಟ ಉತ್ತರ ನನಗೆ ಗೊತ್ತಿಲ್ಲ. ಆದರೆ, ಅವರ ಕೆಲವು ಚಿಕಿತ್ಸಾಕ್ರಮಗಳಂತೂ ಅಭ್ಯಾಸಿಗಳ ಕುತೂಹಲ ಕೆರಳಿಸಬಹುದೆನಿಸುತ್ತದೆ. ಉದಾಹರಣೆಗೆ– ಕೆಲವೊಮ್ಮೆ ದನ, ಎಮ್ಮೆಗಳ ನಾಲಿಗೆ ಊದಿಕೊಂಡು ಬಾಯಿಂದ ಹೊರಚಾಚಿರುತ್ತದೆ. ನಾಲ್ಕೈದು ಜನ ಸೇರಿ ಆ ಪ್ರಾಣಿಯನ್ನು ಎಚ್ಚರಿಕೆಯಿಂದ ಕೆಳಕ್ಕೆ ಬೀಳಿಸಿ, ಕಾಲುಗಳನ್ನು ಅಲುಗಿಸದಂತೆ ಕಟ್ಟಿ, ತಲೆ ಮೈಯನ್ನು ಭದ್ರವಾಗಿ ಅದುಮಿ ಹಿಡಿದುಕೊಳ್ಳುತ್ತಾರೆ. ಚಿಕಿತ್ಸಕ ಅದರ ನಾಲಿಗೆಯನ್ನು ಈಚೆಗೆ ಎಳೆದು, ತಿರುಗಿಸಿ, ಅಡಿಭಾಗದಲ್ಲಿನ ನೀಲಿ (ಕಪ್ಪು) ನರವನ್ನು ಚೂಪಾದ ಕತ್ತಾಳೆ ಮುಳ್ಳು ಅಥವಾ ದಬ್ಬಳದಿಂದ ಚುಚ್ಚಿ ಆ 'ಕೆಟ್ಟರಕ್ತ' ವನ್ನೆಲ್ಲಾ ಈಚೆಗೆ ಸುರಿಸುತ್ತಾನೆ. ಹೀಗೆ ಮಾಡಿದರೆ ಅದಕ್ಕೆ ಬಂದಿರುವ 'ನಾಗರು' ಎಂಬ ಕಾಯಿಲೆ ನಿವಾರಣೆಯಾಗುತ್ತದೆ ಎನ್ನುತ್ತಾರವರು. ಹಾಗೆಯೇ, ಇನ್ನೇನೋ ಒಂದು ಕಾಯಿಲೆಗೆ ಕಾಯಿಸಿದ ಎಣ್ಣೆ ಗಡಿಗೆಯನ್ನು ಎಮ್ಮೆಯ ಹಣೆ ಮೇಲೆ ಒತ್ತುತ್ತಾರೆ. ಹೀಗೆ ಚಿಕಿತ್ಸೆ ಪಡೆದು, ಹಣೆಯಲ್ಲಿ ಅಂಗೈಯಗಲ ಕೂದಲು ಕಳೆದುಕೊಂಡ ಗುರುತಿನ ಎಮ್ಮೆ ಊರಲ್ಲಿ ಕಾಣುವುದು ಸಾಮಾನ್ಯವಾಗಿದ್ದಿತು. ಕೆಲವು ಕಾಯಿಲೆಗಳ ನಿವಾರಣೆಗೆ ತಾಯಂದಿರು ಹಸುಳೆಯ ಹೊಕ್ಕಳು ಸುತ್ತ ಕಾಯಿಸಿದ ಸೂಜಿಯ ಬರೆ ಹಾಕುತ್ತಿದ್ದಂತೆ, ಗಂಡಸರು ತಮ್ಮ ದನಗಳ ತೊಡೆ ಮೇಲೆ ಬರೆ ಹಾಕುತ್ತಿದ್ದುದೂ ಆಗ ಈ ತರಾ ಸಾಮಾನ್ಯ ಸಂಗತಿ – ಚಿಕಿತ್ಸೆ ಆಗಿದ್ದಿತು.

ಎಷ್ಟು ಸಾರಿ 'ಹೋರಿ ಕೂಡಿಸಿ' ದರೂ ಫಲ ನಿಲ್ಲದ ಹಸುಗಳಿಗೆ ಫಲ ಕಚ್ಚುವಂತಾಗಲು ಇವರಲ್ಲಿ ಚಿಕಿತ್ಸೆ ಇದ್ದಿತು! ಬೀಜದ ಹೋರಿ ಕಟ್ಟಿದ್ದ ನನ್ನ ದೊಡ್ಡಪ್ಪ ಅನುಸರಿಸುತ್ತಿದ್ದ ಕ್ರಮ ಇದು : ಆ ಹಸುವಿಗೆ ಹೋರಿ ದಾಟಿಸಿದ ತಕ್ಷಣ, ಅದಕ್ಕಾಗಿ ತಂದಿಟ್ಟಿದ್ದ ತಾಜಾ ಎಕ್ಕದ ಗಿಡದ ತೆಳ್ಳನೆಯ ಸಪೂರ ಕಡ್ಡಿಯ ತುದಿಯ ಚಿಗುರನ್ನು ಚಿವುಟಿ ಹಾಕಿ, ಹಾಲು ಒಸರುವ ಆ ಕಡ್ಡಿಯನ್ನು ಹಸುವಿನ 'ಮಡ್ಲು' (ಯೋನಿ) ನಲ್ಲಿ ತೂರಿಸಿ ಒಂದೆರಡು ಸಲ ಹಿಂದೆ–ಮುಂದೆ ಆಡಿಸುವುದು. ಇದರಿಂದ ಗರ್ಭದ್ವಾರದಲ್ಲಿ ತಡೆಯಾಗಿರುವ ಕಶ್ಮಲ ದ್ರವ ಹೊರಬಂದು ವೀರ್ಯ

ಪ್ರವೇಶ ಸುಲಭವಾಗುತ್ತದೆ – ಎಂಬುದು ಅವರ ತಿಳುವಳಿಕೆಯಾಗಿದ್ದೀತೆನಿಸುತ್ತದೆ.

ಕುರಿಗಳಿಗೆ ಮೂಗು ಕಟ್ಟುವುದು, ಗೊಣ್ಣೆ ಸುರಿಯವುದು ಸಾಮಾನ್ಯ (ಸದಾ ಮೂಗಿನಲ್ಲಿ ಗೊಣ್ಣೆ ಸುರಿಸುವ ಹುಡುಗರಿಗೆ ನಮ್ಮಲ್ಲಿ 'ಗೊಣ್ಣೆಕುರಿ' ಎಂದು ಅಡ್ಡಹೆಸರಿಡುವುದೂ ಸಾಮಾನ್ಯ). ಅದಕ್ಕೂ ನಮ್ಮ ದೊಡ್ಡಪ್ಪ ಒಂದು ಸರಳ ಚಿಕಿತ್ಸೆ ಮಾಡುತ್ತಿದ್ದರು. ಹೊಲಬಯಲಲ್ಲಿ ಬೆಳೆಯುವ 'ಮೂಕರಿಗೆ' ಎಂಬ ಗಿಡದ ಎಲೆಗಳನ್ನು ತರಿಸಿ, ಅಂಗೈಲಿ ಹಾಕಿ ಹೊಸಕಿ ಆ ರಸವನ್ನು ಈ ಕುರಿಯ ಮೂಗಿಗೆ ಹಿಂಡಿದರೆ ಮೂಗು ಸರಾಗವಾಗಿ ಉಸಿರಾಡುತ್ತದೆ – ಎಂಬುದು ಅವರ ನಂಬಿಕೆಯಾಗಿತ್ತು.

ನಮ್ಮ ಜನ ತಮ್ಮ ಬೆಳೆಗಳ ರೋಗಕ್ಕೂ ಚಿಕಿತ್ಸೆ ಮಾಡುತ್ತಿದ್ದರು! ಅವುಗಳಲ್ಲಿ ನಾನು ವಿಶೇಷವಾಗಿ ಕಂಡದ್ದು, ನೆನಪಿನಲ್ಲಿಟ್ಟು ಕೊಂಡಿರುವುದು – ಹೊಲ, ತೋಟದಲ್ಲಿ ಪ್ರತಿವರ್ಷ ತಪ್ಪದೇ ಮುನೆಪ್ಪ (ದೇವರು) ನನ್ನು ಮಾಡುವುದು; ಅಲ್ಲಿ ಕೋಳಿಯನ್ನು ತಾವು ತಿಂದರೂ ಅದರ 'ಈರಿ' ಯನ್ನು ಸುಟ್ಟು ದೇವರಿಗೆ ಕರಿ ಏರಿಸುವುದು (ವಾಸನೆ ಹರಡುವಂತೆ ಮಾಡುವುದು) ಹಾಗೂ ರಾಗಿ ಪೈರು ಗಬ್ಬಕಟ್ಟುವ ತಿಂಗಳಲ್ಲಿ (ಸುಮಾರು ಅಕ್ಟೋಬರ್) ಊರು ಸುತ್ತಾ ಹೊಲದಲ್ಲಿ 'ಹಸಿರು ಹೊಂಗ್ಲು' ಚೆಲ್ಲುವುದು. ಅಂದರೆ, ಊರು ಮುಂದೆ ಮರಿ ಕಡಿದು ಅದರ ರಕ್ತದಲ್ಲಿ ಅನ್ನ, ಆವಿಗೆ ಬೂದಿ, ರಾಗಿ ಗರಿಚೂರು ಇತ್ಯಾದಿ ಕಲೆಸಿ ತಳವಾರರು 'ಬಲಿಯೋ ಬಲಿ' ಎಂದು ಕೂಗುತ್ತಾ ಅದನ್ನು ಹೊಲದಲ್ಲಿ ಎರಚುವುದು. ಅವರೇನೋ ಇದರಿಂದ ದುಷ್ಟಶಕ್ತಿ ಪೀಡೆ ಇಲ್ಲವಾಗುತ್ತದೆ ಎಂದು ನಂಬುತ್ತಿದ್ದರು. ಹೀಗೆ ಮಾಡುವ ಮೂಲಕ ಬೆಳೆಯ ನಡುವೆ ಬಿದ್ದ ಅನ್ನಕ್ಕೆ ಹಕ್ಕಿ–ಪಕ್ಷಿಗಳನ್ನು ಆಕರ್ಷಿಸುವ ಮೂಲಕ, ಪೈರಿನಲ್ಲಿನ ಹುಳು–ಹುಪ್ಪಟೆಗಳನ್ನು ಅವು ತಿನ್ನುವಂತೆ ಮಾಡಿ, ಬೆಳೆ ರಕ್ಷಿಸುವುದು ಅದರ ಹಿಂದಿನ ಉಪಾಯ ಎಂದು ಈಗಿನ ತಜ್ಞರು ಅರ್ಥೈಸುತ್ತಾರೆ.

ಹೀಗೆ, ನನ್ನೂರಿನವರ ವೈದ್ಯ ಜಗತ್ತಿನಲ್ಲಿ ಕೆಲವೆಡೆ ಪರಿಸರ ತತ್ವ ಅಡಕವಾಗಿದ್ದರೆ ಕೆಲವೆಡೆ ಕೇವಲ ನಂಬಿಕೆಗಳಿವೆ. ಈ ನಂಬಿಕೆಗಳು ಎಲ್ಲಾ ಸಂದರ್ಭದಲ್ಲೂ ಊರ್ಜಿತವಾಗುತ್ತವೆ ಎಂದೇನೂ ಇಲ್ಲ. ನಮ್ಮಲ್ಲಿ ಮಂತ್ರ ಹಾಕಿ ಚೇಳಿನ ವಿಷ ಇಳಿಸುವ 'ವೈದ್ಯ' ರಿದ್ದಾರೆ. ನನ್ನ ಅಮ್ಮ, ಅಣ್ಣರು ಹೀಗೆ

ಚೇಳಿನ ಮಂತ್ರ ಚಿಕಿತ್ಸೆ ಪಡೆದದ್ದುಂಟು. ಆದರೆ ಹಾವಿನ ಕಡಿತಕ್ಕೆ ಮಂತ್ರ–ನಾಟಿ ಔಷಧಿ– ಎಂದು ನಂಬಿ ಕೂರುವುದು ಬುದ್ಧಿವಂತಿಕೆಯದಲ್ಲ – ಎಂಬುದು ಕೊಳಕು ಮಂಡಲ ಹಾವಿನಿಂದ ಈಚೆಗೆ ಕಡಿಸಿಕೊಂಡಿದ್ದ ನನ್ನ ತಮ್ಮನ ಪ್ರಕರಣದಿಂದ ಅನುಭವಕ್ಕೆ ಬಂತು. ಸಂಜೆ ತೋಟದಲ್ಲಿ ಹಾವು ಕಡಿದ ತಕ್ಷಣ ಆತ ಸಹಜವಾಗಿಯೇ ಪಕ್ಕದ ಊರ ವೈದ್ಯರಲ್ಲಿ ಹೋದ. ಅವರು ಒಂದು ರೀತಿ ಬಹು ವೈದ್ಯತಜ್ಞರು. ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಮಂತ್ರವೈದ್ಯ.... ಇತ್ಯಾದಿ ಅರಿತ ಅವರಲ್ಲಿ ನಿತ್ಯ ನೂರಾರು ಜನ – ಬೆಂಗಳೂರಿನಿಂದಲೂ ಸಹ ಬಂದು ಸಾಲುಗಟ್ಟಿ ನಿಲ್ಲುತ್ತಾರೆ. ಅವರು ಇಂಜೆಕ್ಷನ್ ಕೊಟ್ಟು, ಹೋಮಿಯೋಪತಿಯದು ಎನಿಸುವ ಕೆಲವೊಂದು ಔಷಧಿಗಳನ್ನು ನೀಡಿದ್ದರು. ರಾತ್ರಿಯಲ್ಲಿ ಎಚ್ಚರವಿರಲಿ; ಬೆಳಿಗ್ಗೆ ಮತ್ತೆ ಬನ್ನಿ ಎಂದರು. ಜೀವಕ್ಕೇನೂ ಅಪಾಯವಿಲ್ಲ ಎಂದೂ ನನ್ನಲ್ಲಿ ಹೇಳಿದರು. ಮತ್ತೆರಡು ದಿನ ಹೋದಾಗಲೂ ಜೀವಕ್ಕೆ ಅಪಾಯವಾಗಲಿಲ್ಲ; ಆದರೆ ಕಾಲು ಊತ ಏರುತ್ತಾ ಹೋಗಿತ್ತು. 'ಆಸ್ಪತ್ರೆಯಲ್ಲಾದರ ಕುಯ್ದು ಕೆಟ್ಟ ರಕ್ತ ತೆಗೆಯುತ್ತಾರೆ; ನೀವೇ ಒತ್ತಿ ತೆಗೆಯಿರಿ' ಎಂದರು. ನಮ್ಮಿಂದ ಅದಾಗದು. ದೊಡ್ಡಾಸ್ಪತ್ರೆಯ (ವಿಕ್ಟೋರಿಯಾ) ನನ್ನ ಗೆಳೆಯ ವೈದ್ಯ ಕೊಳೆಯುತ್ತಿದ್ದ ಭಾಗವನ್ನೆಲ್ಲಾ ಚರ ಚರ ಕೊಯ್ದು ತೆಗೆದರು. ಅಗತ್ಯ ಚಿಕಿತ್ಸೆಯಿಂದ ಕಾಲು ಸರಿಹೋಯಿತು.

ನನ್ನೂರಿನ ವೈದ್ಯಜಗತ್ತಿನ ಮನೋಭೂಮಿಕೆಯಲ್ಲಿ ಇನ್ನೂ ಎಷ್ಟೋ ವೈವಿಧ್ಯದ ಮಾಹಿತಿಯುಂಟು. ಅದನ್ನೆಲ್ಲಾ ವಿವರ ಪೂರ್ಣವಾಗಿ ನೆನೆಯಹೋದರೆ ಅದೊಂದು ರೀತಿ 'ಹಳೆಯದರ ಕನವರಿಕೆ' ಯಂತೆ ಕೆಲವರಿಗೆ ಭಾಸವಾಗಬಹುದು. ಆದರೂ ಈ ಹಂತದಲ್ಲಿ ನಿಂತು ಅದನ್ನಿಷ್ಟು ಸ್ಮರಿಸುವುದು ಉಪಯುಕ್ತವಾದೀತೆಂದು ಭಾವಿಸಿದ್ದೇನೆ.

* * *

# ೭. ಕ್ಷಯರೋಗ ಮತ್ತು ಜಾನಪದ

ಪ್ರೊ । ಡಿ. ಲಿಂಗಯ್ಯ

**ಕ್ಷಯರೋಗ ಸಂಬಂಧಿ ಜಾನಪದೀಯ ಮಾಹಿತಿಯನ್ನು ಸವಿವರವಾಗಿ ಒದಗಿಸಿಕೊಡುವ ಪ್ರಸ್ತುತ ಲೇಖನವು ಅದರ ಆರೋಗ್ಯಪೂರ್ಣ ನೆಲೆಯನ್ನು ಪ್ರತಿಪಾದಿಸುತ್ತದೆ.**

–ಸಂ

ಕೆಲವು ವರ್ಷಗಳ ಹಿಂದೆ ಕ್ಷಯರೋಗವೆಂದರೆ ಜನರು ಬೆಚ್ಚಿಬೀಳುತ್ತಿದ್ದರು. ಕಲಬಂಟನ ಕಾಳಗದ ರಾಕ್ಷಸಿಯನ್ನು ಕಂಡಂತೆ ಹೆದರುತ್ತಿದ್ದರು. ಪ್ಲೇಗ್ ಮಾರಿ, ಕಾಲರ ಮಾರಿ, ಸಿಡುಬು ಮಾರಿ ಬಂದಾಗ ಗಾಬರಿ ಬೀಳುತ್ತಿದ್ದರಲ್ಲ ಅದಕ್ಕಿಂತ ಮಿಗಿಲಾಗಿ. ಈಗ ಏಡ್ಸ್‌ಮಾರಿಗೆ ಹೆದರುವ ಹಾಗೆ. ಕ್ಷಯ ಬಂದರೆ ಸಾವು ಗ್ಯಾರಂಟಿ ಎಂದೇ ನಂಬಿಕೆ. ಅದು ಬಡವರ ಕಾಯಿಲೆಯಲ್ಲ, ಶ್ರೀಮಂತರ ರೋಗ ಎಂಬ ಭಯ. ಕ್ಷಯಕ್ಕೆ 'ರಾಜ ಕ್ಷಯ' ಎಂದೇ ಹೆಸರಿತ್ತು. ಕ್ಷಯ ರೋಗಿಗೆ ಕೊಡಬೇಕಾದ ಒಂದೊಂದು ಇಂಜೆಕ್ಷನ್‌ಗೆ ಸಾವಿರಾರು ರೂಪಾಯಿ ಆಗುತ್ತದೆ, ಅಂತಹ ಹಲವಾರು ಇಂಜೆಕ್ಷನ್ ಚುಚ್ಚಿಸಿಕೊಳ್ಳಬೇಕು, ಲೆಕ್ಕವಿಲ್ಲದಷ್ಟು ಔಷಧಿ ನುಂಗಬೇಕು. ಈ ಔಷಧಿಗಳನ್ನು ಸಮುದ್ರದಾಚೆಯಿಂದ ತರಿಸಬೇಕು, ಬಡವರು ಈ ಖರ್ಚನ್ನು ಭರಿಸುವುದು ಸಾಧ್ಯವಿಲ್ಲ, ಶ್ರೀಮಂತರಿಗೆ ಆದರೆ ತಡೆಯಬಹುದು. ಇಷ್ಟೆಲ್ಲಾ ಖರ್ಚುಮಾಡಿ ಔಷಧಿ ಪಡೆದು ಚಿಕಿತ್ಸೆ ಮಾಡಿಸಿದರೂ ಬದುಕುವ ಖಾತ್ರಿಯಿಲ್ಲ ಎಂಬ ಏನೇನೋ ಕಥೆಗಳು ಪ್ರಚಾರದಲ್ಲಿದ್ದವು. ಕ್ಷಯ ತಗಲಿದವರನ್ನು ಅಸ್ಪೃಶ್ಯರಂತೆ ಕಾಣುತ್ತಿದ್ದರು. ಅವರನ್ನು ನೋಡಲು, ಅವರೊಂದಿಗೆ ಮಾತಾಡಲು, ಅವರನ್ನು ಮುಟ್ಟಿಸಿಕೊಳ್ಳಲು, ಅವರ ನೆರಳು ಮೆಟ್ಟಲು ಹೆದರುತ್ತಿದ್ದರು. ಕ್ಷಯರೋಗಿಗಳ ಬದುಕು ನರಕವಾಗಿತ್ತು. ಜನ್ಮಾಂತರ ಕರ್ಮದಿಂದ ಕ್ಷಯರೋಗ ಬರುವುದೆಂದು ಜನಪದರು ದೃಢವಾಗಿ ನಂಬಿದ್ದರು. ಆ ಹಿನ್ನೆಲೆಯಲ್ಲೇ ಪೂಜೆ ಪುನಸ್ಕಾರಗಳಿಗೆ ಮೊರೆಹೋಗುತ್ತಿದ್ದರು.

ಶಿಷ್ಟರ ಮಾತಿನ 'ಕ್ಷಯ' ಹಳ್ಳಿಗರ ಬಾಯಿಯಲ್ಲಿ 'ಚಯ' ವಾಗಿ ಮೆರೆಯುತ್ತಿತ್ತು. ಕ್ಷಯದ ತದ್ಭವ ಚಯ. ಈಗಲೂ ಹಳ್ಳಿಗರಲ್ಲಿ ಚಯ, ಚಾಯ, ಕ್ಷಯ ಶಬ್ದಗಳು ಬಳಕೆಯಲ್ಲಿವೆ. ಈಗ ಸ್ಯಾನಿಟೋರಿಯಂಗಳು ಪ್ರಾರಂಭವಾಗಿ, ಕಡಮೆ ಖರ್ಚಿನಲ್ಲಿ, ಸುಲಭವಾಗಿ ಚಿಕಿತ್ಸೆ ದೊರೆಯುತ್ತಿರುವುದರಿಂದ ಕ್ಷಯರೋಗದ ಸಾವು

ಕಡಮೆಯಾಗಿದೆ. ರೋಗ ತಗಲಿದ ಪ್ರಾರಂಭದ ಹಂತದಲ್ಲೇ ಚಿಕಿತ್ಸೆ ಪಡೆದರೆ ಬದುಕುವ ಸಂಭವ ಹೆಚ್ಚಿದೆ. ಆರು ತಿಂಗಳು ಅಥವಾ ಒಂದು ವರ್ಷ, ವಿಶೇಷ ಸಂದರ್ಭದಲ್ಲಿ ಇನ್ನೂ ಹೆಚ್ಚು ಕಾಲ ಆಸ್ಪತ್ರೆಯ ಒಳರೋಗಿಯಾಗಿ ಚಿಕಿತ್ಸೆ ಪಡೆಯಬಹುದು. ತಜ್ಞ ವೈದ್ಯರಿಂದ ಸೂಕ್ತ ಸಲಹೆ ಪಡೆದು, ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆದುಕೊಳ್ಳಬಹುದು. ಪ್ರಧಾನ ಚಿಕಿತ್ಸೆಯ ನಂತರ ಒಂದೆರಡು ವರ್ಷ ತಪ್ಪದೆ ಔಷಧಿ ಸೇವಿಸಿದರೆ ಸಂಪೂರ್ಣವಾಗಿ ಕ್ಷಯರೋಗವನ್ನು ನಿಯಂತ್ರಿಸಬಹುದು. ಆದರೂ ಕ್ಷಯರೋಗದ ಭಯ ತಪ್ಪಿಲ್ಲ. ಹಳ್ಳಿಗರಲ್ಲಿ ಚಿತ್ರ ವಿಚಿತ್ರವಾದ ಕಥೆಗಳಿವೆ, ನಂಬಿಕೆಗಳಿವೆ. ಇಂತಹ ವಿಷಯಗಳಲ್ಲಿ ಜನಪದ ಗರಿಗಟ್ಟಿಕೊಳ್ಳುತ್ತದೆ.

ಮೈಸೂರು ರಾಜ್ಯದ ರಾಜಕುಮಾರಿ ಕೃಷ್ಣರಾಜಮ್ಮಣ್ಣಿಯವರಿಗೆ ಕ್ಷಯ ರೋಗ ಬಂದು ಎಷ್ಟು ಚಿಕಿತ್ಸೆಮಾಡಿಸಿದರೂ ಎಷ್ಟು ಖರ್ಚುಮಾಡಿದರೂ ಬದುಕಿ ಉಳಿಯಲಿಲ್ಲವಂತೆ. ರಾಜ ಮನೆತನದವರೇ ಉಳಿಯೊಲ್ಲ ಅಂದಮೇಲೆ ಸಾಮಾನ್ಯರ ಪಾಡೇನು ಎಂಬುದು ಹಳ್ಳಿಗರ ಕಳವಳಕ್ಕೆ ಕಾರಣ. ಚಿಕಿತ್ಸೆ ಕೊಟ್ಟರೂ ಸತ್ತವರಿಗಿಂತ, ಚಿಕಿತ್ಸೆಯಿಲ್ಲದೆ ಸತ್ತವರಿಗೆ ಲೆಕ್ಕವಿಲ್ಲವಂತೆ. ಸತ್ತವರೆಲ್ಲ ಕ್ಷಯರೋಗಿಗಳೇ ಎಂಬಷ್ಟು ಉತ್ಪ್ರೇಕ್ಷ ಇವರದು. ಹೃದ್ರೋಗ, ಮೂತ್ರಪಿಂಡರೋಗ, ಲಿವರ್ ರೋಗ, ಮೆದುಳು ರೋಗ, ಕ್ಯಾನ್ಸರ್, ಏಡ್ಸ್ ಮುಂತಾದ ಭಯಂಕರ ರೋಗಗಳಿದ್ದರೂ ಅವುಗಳ ಸರಿಯಾದ ಪರಿಚಯ ಇಲ್ಲದುದರಿಂದಲೋ ಏನೋ ಕ್ಷಯರೋಗದ ಬಗೆಗಿನ ಗಾಬರಿ ಅಧಿಕವಾಗಿದೆ.

ಕ್ಷಯರೋಗಕ್ಕೆ ಏಳೇಳು ಜನ್ಮದ ಪಾಪ ಕಾರಣವೆಂಬ ನಂಬಿಕೆಯೂ ಇದೆ. ಯಾರದೋ ಶಾಪ ತಟ್ಟಿದೆ ಎಂದೂ ಭಾವಿಸುತ್ತಾರೆ. ಮಾಡಬಾರದ್ದು ಮಾಡಿದರೆ ಕ್ಷಯ ಬಾರದೆ ಇದ್ದೀತೇ ಎಂಬ ಗಾದೆಯನ್ನೇ ಹೇಳುತ್ತಾರೆ. ಕರ್ಮಕ್ಷಯಕ್ಕೆ ಕ್ಷಯಪ್ರಾಪ್ತಿ ಎನ್ನುವ ತೀರ್ಮಾನಕ್ಕೂ ಕೊನೆಯಿಲ್ಲ. ರಕ್ತಕ್ಷಯ, ಮೂಳೆಕ್ಷಯ, ಮೆದುಳು ಕ್ಷಯ, ಮೂತ್ರಪಿಂಡ ಕ್ಷಯ, ಜನನೇಂದ್ರಿಯ ಕ್ಷಯ, ಹೃದಯ ಕ್ಷಯ, ಯಕೃತ್ತು ಕ್ಷಯ, ಗರ್ಭಾಶಯ ಕ್ಷಯ ಮುಂತಾದವುಗಳು ಇದ್ದರೂ ನಮ್ಮಲ್ಲಿ ಶ್ವಾಸಕೋಶದ ಕ್ಷಯವೇ ಹೆಚ್ಚು. ನಾನಾ ಕಾರಣಗಳಿಂದ ಒಂದು ಶ್ವಾಸಕೋಶಕ್ಕೋ ಎರಡೂ ಶ್ವಾಸಕೋಶಗಳಿಗೋ ರೋಗ ತಗಲಬಹುದು. ಹೆಸರೇ ಹೇಳುವಂತೆ ದೇಹ ಕ್ಷಯಿಸಿ, ಆರೋಗ್ಯ ಕುಂದಿ, ದೇಹ ಅಕರಾಳ ವಿಕರಾಳ ಆಗಬಹುದು.

ವೈಜ್ಞಾನಿಕ ಚಿಕಿತ್ಸೆ, ಪುಷ್ಕಳವಾದ, ಆರೋಗ್ಯಕರವಾದ ಆಹಾರಸೇವನೆ ಅಗತ್ಯ. ರೋಗ ಬಂದರೆ ಆಸ್ಪತ್ರೆಗೆ ಹೋಗುವದಕಿಂತ ಹೆಚ್ಚಾಗಿ ಮಾಟಮಂತ್ರ ಮಾಡಿಸಿ, ಯಂತ್ರ ತಂತ್ರ ಕಟ್ಟಿಸುವವರೇ ಹೆಚ್ಚು. ದೇವರಿಗೆ ಹರಕೆ ಕಟ್ಟಿಕೊಳ್ಳುವವರೂ ಉಂಟು. ರೋಗ ವಾಸಿಯಾದರೆ ಹಬ್ಬಮಾಡಿಸುವ, ಊರೊಟ್ಟಿನ ಪರ ಮಾಡಿಸುವ, ಭುಕ್ತಿಮಾಡಿಸುವ ಹರಕೆಗಳ ಉದಾಹರಣೆಗಳೂ ಇವೆ. ನಂಜನಗೂಡಿನ ನಂಜುಡೇಶ್ವರ, ಮಲೆಮಾದೇಶ್ವರ, ತಿರುಪತಿ ವೆಂಕಟೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ಮಳ್ಳಯ್ಯನಗಿರಿಯ ನಿರ್ವಾಣಸ್ವಾಮಿ ಮೊದಲಾದ ದೇವರಿಗೆ ಕಾಣಿಕೆ ಅರ್ಪಿಸುವ ; ಅದೂ ಇದೂ ಒಡವೆ; ಮುಖವಾಡ ಮಾಡಿಸಿಕೊಡುವ ಹರಕೆಗಳೂ ಇವೆ. ಬಹಿರಂಗವಾಗಿ ಹರಕೆ ಕಟ್ಟಿಕೊಳ್ಳುವವರಿಗಿಂತ, ಗೋಪ್ಯವಾಗಿ ಹರಕೆ ಕಟ್ಟಿಕೊಂಡು ತೀರಿಸುವವರ ಸಂಖ್ಯೆ ಅಪಾರ. ಕೆಲವು ರೋಗಗಳಿಗೆ ಮಾರಮ್ಮ ಇರುವಂತೆ ಕ್ಷಯಕ್ಕೆ ನಿರ್ದಿಷ್ಟವಾದ ದೇವರಿಲ್ಲ. ಆದ್ದರಿಂದ ಸಿಕ್ಕಿದ ದೇವರಿಗೆಲ್ಲಾ ಹರಕೆ ಕಟ್ಟಿಕೊಳ್ಳುತ್ತಾರೆ. ವಾಸಿಯಾದರೆ ದೇವರು ಅನುಗ್ರಹಿಸಿದ; ವಾಸಿಯಾಗದಿದ್ದರೆ ದೇವರ ಅನುಗ್ರಹ ಸಿಗಲಿಲ್ಲ, ಅಷ್ಟೆ. ಹಣೆಯ ಬರಹಕ್ಕೆ ಯಾರು ಹೊಣೆಯೆಂಬ ಸಮಾಧಾನ. ಸತ್ತರೆ ಅವನ ಆಯಸ್ಸು ಇದ್ದದ್ದೇ ಅಷ್ಟು ಎಂಬ ತೀರ್ಮಾನ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಹರಕೆ ಹೊತ್ತುಕೊಳ್ಳುವವರೂ ಇಲ್ಲದಿಲ್ಲ. ಶುದ್ಧ ನಾಸ್ತಿಕರಾಗಿದ್ದವರೂ ಕೂಡ; ರೋಗಿಗಳಾದ ಮೇಲೆ ಪಕ್ಕಾ ಆಸ್ತಿಕರಾಗಿ ಪರಿವರ್ತನೆ ಹೊಂದುತ್ತಾರೆ.

ಕ್ಷಯರೋಗಿಗಳು ದೀರ್ಘಕಾಲ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ಪುರುಷರಿಗೇ ಬೇರೆ ವಾರ್ಡ್, ಸ್ತ್ರೀಯರಿಗೇ ಬೇರೆ ವಾರ್ಡ್ ಇರುವ ಪದ್ಧತಿಯಿದೆ. ವಿವಿಧ ಧರ್ಮ, ಜಾತಿ, ಭಾಷೆ, ಆಚಾರ ವಿಚಾರಗಳ ಜನರೊಡನೆ ಇರಬೇಕಾಗುತ್ತದೆ. ಪರಸ್ಪರ ಪರಿಚಯವಾದ ಮೇಲೆ ವಿಚಾರ ವಿನಿಯಮ, ಸ್ನೇಹ, ಸಲಿಗೆ ಬೆಳೆಯುತ್ತದೆ. ಅನುಭವ ಕಥನ, ಕುಚೇಷ್ಟೆ, ಕುಹಕ, ಸರಸ ಸಂಭಾಷಣೆ ಮೊದಲಾದವೂ ಕಾಣಿಸಿಕೊಳ್ಳುತ್ತವೆ. ಡಾಕ್ಟರು, ನರ್ಸ್‌ಗಳು, ಎಕ್ಸ್‌ರೇ ವಿಭಾಗದವರು, ಮಲಮೂತ್ರ ರಕ್ತ ಪರೀಕ್ಷಕರು, ವ್ಯಯಾಮ ತರಬೇತಿ ಸಹಾಯಕರು, ಶಸ್ತ್ರಚಿಕಿತ್ಸೆ ವಿಭಾಗದವರು, ಹೋಗಿ ಬರುವವರ ಶೀಲ ಸ್ವಭಾವಗಳು, ರೋಗಿಗಳ ಮಾತುಕತೆ, ಕಲ್ಪನೆಗಳ ವಸ್ತುವಾಗುವುದುಂಟು. ಸಾಕಷ್ಟು ಕಾಲ ಒಟ್ಟಿಗಿರುವ ರೋಗಿಗಳ ಸಮೂಹದಲ್ಲಿ ಜನಪದ ಅಂಶಗಳು ಹುಟ್ಟಿ ಬೆಳೆದು ರಂಜಿಸುತ್ತವೆ. ಹಲವು ಸಾಂದರ್ಭಿಕವಾಗಿ ಹುಟ್ಟಿ ಅಳಿದರೂ ಕೆಲವು ಸಮಷ್ಟಿ ರೂಪಗಳಾಗಿ ಮುಂದುವರಿಯುತ್ತವೆ. ಸ್ತ್ರೀ

ಪುರುಷ ರೋಗಿಗಳ ಆಲೋಚನಾ ವಿಧಾನದಲ್ಲಿ ಸಾಮ್ಯತೆ ಕಂಡುಬಂದರೂ ಅಲ್ಲಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವುಂಟು.

ಕ್ಷಯರೋಗ ಆಸ್ಪತ್ರೆಯ ಆವರಣದಲ್ಲಿ ಸಾಮಾನ್ಯವಾಗಿ ಬೇವಿನ ಮರಗಳನ್ನು ಬೆಳೆಸುತ್ತಾರೆ. ಕ್ಷಯರೋಗಿಗಳು ಬೇವಿನ ಮರಗಳ ವಿಷಯದಲ್ಲಿ ಆತ್ಮೀಯತೆ ಬೆಳೆಸಿಕೊಳ್ಳುವುದು ವಾಡಿಕೆ. ಬೇವಿನ ಮರದ ನೆರಳಿನಲ್ಲಿ ತಿರುಗಾಡುವುದು, ಬೇವಿನ ಮರದಡಿ ಕೂರುವುದು ಅವರಿಗೆ ಪ್ರಿಯ. ಒಂದೆರಡು ಬೇವಿನ ಎಲೆಗಳನ್ನು ಜೇಬಿನಲ್ಲಿಟ್ಟುಕೊಳ್ಳುವುದನ್ನು, ಸ್ನಾನದ ನೀರಿಗೆ ಬೇವಿನ ಎಲೆ ಹಾಕಿಕೊಂಡು ಸ್ನಾನಮಾಡುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ. ಕೆಲವರು ಬೇವಿನ ಮರಕ್ಕೆ ಕೈಮುಗಿಯುವುದೂ ಉಂಟು. ಬೇವಿನ ಮರದ ಗಾಳಿಯ ಸೇವನೆ ಆರೋಗ್ಯಕ್ಕೆ ಒಳ್ಳೆಯದು ಎಂಬ ವೈಜ್ಞಾನಿಕ ಅಂಶ ರೋಗಿಗಳಿಗೆ ಗೊತ್ತಿದೆಯೋ ಇಲ್ಲವೋ ಹೇಳುವುದು ಕಷ್ಟ. ಆದರೆ ಕ್ಷಯರೋಗಿಗಳಲ್ಲಿ ಬೇವಿನ ಮರದ ಬಗೆಗಿನ ಗೌರವ ಎದ್ದುಕಾಣುತ್ತದೆ. ಇವರಲ್ಲಿ ಜನಪದರು, ಶಿಷ್ಟರು ಎಂಬ ಭೇದವಿಲ್ಲ.

ಕ್ಷಯ ರೋಗಿಗಳು ರಕ್ತಮಾಂಸ ತುಂಬಿಕೊಳ್ಳಲು, ಅವರ ಆರೋಗ್ಯ ವೃದ್ಧಿಸಲು ಪುಷ್ಕಳವಾಗಿ ಊಟಮಾಡಬೇಕು. ಸಸ್ಯಾಹಾರ ಅಥವಾ ಮಾಂಸಾಹಾರ ಯಾವುದೇ ಪದ್ಧತಿಯ ಆಹಾರವಾದರೂ ಸತ್ವಯುತವಾಗಿರಬೇಕು. ಚುಚ್ಚುಮದ್ದು, ಮಾತ್ರೆಗಳ ಜೊತೆಗೆ ಧಾರಾಳವಾಗಿ ಮೀನೆಣ್ಣೆ, ಕೋಳಿಮೊಟ್ಟೆ ಸೇವಿಸಬೇಕಾಗುತ್ತದೆ. ಆಸ್ಪತ್ರೆಯಲ್ಲಿದ್ದಾಗ ಎಷ್ಟೋ ಜನ ಸಸ್ಯಾಹಾರಿಗಳು ಮಾಂಸಾಹಾರಿಗಳಾಗಿ ಪರಿವರ್ತನೆಗೊಳ್ಳುತ್ತಾರೆ. ಮಾಂಸಾಹಾರವನ್ನು ಪ್ರೇರೇಪಿಸುವವರಿಗಾಗಲಿ ಅದನ್ನು ಸ್ವೀಕರಿಸುವವರಿಗಾಗಲಿ ಬೇಸರವಿಲ್ಲ. ಹಣ್ಣು ಹಂಪಲುಗಳಂತು ಬೇಕೇಬೇಕು. ಮೊಟ್ಟೆಯಿಡುವ ಕೋಳಿಗಳ ಬಗೆಗೆ, ಎಣ್ಣೆ ಕೊಡುವ ಮೀನುಗಳ ಬಗೆಗೆ ಕಥೆ ಕಟ್ಟಿ ಹೇಳುತ್ತಾರೆ. ಅಂಥ ಕಥೆಗಳನ್ನು ಆಸಕ್ತಿಯಿಂದ ಕೇಳುತ್ತಾರೆ. ಮೀನಿನ ಪ್ರಸಂಗಗಳಿಗಾಗಿ ಬೈಬಲ್ ಗ್ರಂಥವನ್ನು ಓದುವವರೂ ಉಂಟು.

ಆಸ್ಪತ್ರೆಯಲ್ಲಿ ಬೇಸರ ಕಳೆಯಲು ಪಗಡೆ ಪಚ್ಚಿಯಾಟ ಆಡುವಾಗ, ಸಂಜೆಯ ಹೊತ್ತು ಆಸ್ಪತ್ರೆಯ ಆವರಣದಲ್ಲಿ ಗಾಳಿ ಸೇವನೆಗಾಗಿ ತಿರುಗಾಡುವಾಗ, ರೋಗಿಗಳ ಕಲ್ಪನೆಗಳು ಗರಿಗಟ್ಟಿಕೊಂಡು ವೈವಿಧ್ಯಮಯವಾಗಿ ಹೊರಹೊಮ್ಮುತ್ತವೆ. ಸಾಲ ಹೇಳಿ ಹಾದರಮಾಡುತ್ತಿದ್ದ ಘನಂದಾರಿ ಸಾಹಸವನ್ನು ರೋಚಕವಾಗಿ ಒಬ್ಬ ವಿವರಿಸುತ್ತಾನೆ; ತೋಟದಲ್ಲಿ ತೆಂಗಿನ ಕಾಯಿ ಕದಿಯಲು ಹೋಗಿ ಸಿಕ್ಕಿಬಿದ್ದ

ಒದೆತ ತಿಂದದ್ದು ಇನ್ನೊಬ್ಬನ ಕಥೆ; ಊರಿನ ಬಯಲಾಟದಲ್ಲಿ ಸೀರೆ ಕಪ್ಪಡಿಸಿ ಬಿದ್ದು ಅಪಹಾಸ್ಯಕ್ಕೆ ಗುರಿಯಾದದ್ದು ಮತ್ತೊಬ್ಬನ ಪ್ರಸಂಗ; ಜೀವನವೆಲ್ಲ ತೊಂದರೆಗೆ ಸಿಕ್ಕಿ ನರಳಿದ್ದು, ಇಲ್ಲದ ಉಸಾಬರಿ ಹೊತ್ತು ಸುಸ್ತಾದದ್ದು, ಬಡತನದಿಂದ ಜರ್ಝರಿತವಾದದ್ದು, ಹೊಟ್ಟೆಪಾಡಿಗಾಗಿ ಪಾಡುಪಟ್ಟಿದ್ದು, ಒಡಹುಟ್ಟಿದವರು ಕೈಕೊಟ್ಟಿದ್ದು, ಹೆಂಡತಿ ಮೋಸಮಾಡಿದ್ದು, ಮುಷ್ಠಿ ಮೈಥುನದಿಂದ ಆರೋಗ್ಯ ಕೆಡಿಸಿಕೊಂಡಿದ್ದು, ಅನೈತಿಕ ಲೈಂಗಿಕ ಸಂಪರ್ಕದಿಂದ ರತಿರೋಗಕ್ಕೆ ತುತ್ತಾದದ್ದು, ಒಂದಲ್ಲ ಎರಡಲ್ಲ, ಹಲವು ಹತ್ತು ವಿಷಯಗಳ ಪ್ರಸ್ತಾಪ. ಎಲ್ಲಕ್ಕೂ ಮೌಖಿಕ ಕಥೆಯ ರೂಪ.

ಆಸ್ಪತ್ರೆಯ ಬಗೆಗೂ ರೋಗಿಗಳಲ್ಲಿ ಕಥೆಗಳಿಗೆ ಬರವಿಲ್ಲ. ಡಾಕ್ಟರ್ ಇಂಜೆಕ್ಷನ್ ಕೊಡುವ ರೀತಿ, ನರ್ಸ್ ಚುಡಾಯಿಸುವುದು, ಕೆಲಸದ ಆಯಾ ಅಲಂಕಾರ ಮಾಡಿಬರುವುದು, ಸತ್ತ ರೋಗಿಯ ಪ್ರಸ್ತಾಪ ಮುಂತಾದವುಗಳ ಬಗೆಗೆ ಟೀಕೆ ಟಿಪ್ಪಣಿ. ಇಂಜೆಕ್ಷನ್, ಥರ್ಮಾಮೀಟರ್‌ಗೆ ಲೈಂಗಿಕಾರ್ಥ ಕಲ್ಪಿಸುವುದು, ಕ್ಷಯರೋಗ ಬಂದವರಿಗೆ ಮಕ್ಕಳಾಗುವುದಿಲ್ಲವೆಂದು ಹೆದರಿಸುವುದು. ಒಮ್ಮೆ ಕ್ಷಯರೋಗ ಬಂದು ಬದುಕಿ ಉಳಿದರೆ ಆಮೇಲೆ ಯಾವ ರೋಗವೂ ಬರುವುದಿಲ್ಲವೆಂದು ಕಣಿಹೇಳುವುದು. ಸಾಯುವುದೇ ನಿಜವಾದರೆ ತಿಂದು ಮಾಡಿ ಸಾಯುವುದು ಲೇಸೆಂದು ನಾಸ್ತಿಕ ನೀತಿ ಸಾರುವುದು. ಮದ್ಯಪಾನ, ವ್ಯಭಿಚಾರದ ಅಪಾಯ ಕುರಿತು ಉಪದೇಶ ನೀಡುವುದು ಮುಂತಾದವುಗಳೆಲ್ಲ ಈ ಸಮುದಾಯದಲ್ಲಿ ನಡೆಯುತ್ತದೆ. ಇವೆಲ್ಲ ಹೊತ್ತು ಕಳೆಯುವ ಪ್ರಸಂಗಗಳು.

ಸ್ತ್ರೀರೋಗಿಗಳ ಗುಂಪಿನಲ್ಲೂ ಕಥೆಗಳಿಗೆ ಲೆಕ್ಕವಿಲ್ಲ. ತನ್ನ ಗಂಡ ವರ್ಷಕ್ಕೊಂದು ಮಗು ಹೆರಿಸಿ ಈ ರೋಗ ತಂದ; ತನ್ನ ಅತ್ತೆ ಮಾವಂದಿರ ಹಿಂಸೆಯಿಂದ ನರಳಿ ನರಳಿ ಇಲ್ಲಿ ಬಂದೆ; ಕುಡುಕ ಗಂಡನ ಸಹವಾಸದಿಂದ ಕುಡಿದು ಕುಡಿದು ರೋಗ ತಂದುಕೊಂಡೆ; ರೋಗ ಬಂದಿದೆ ಎಂದು ಗೊತ್ತಾದ ಮೇಲೆ ಯಾರು ಮದುವೆಯಾಗುತ್ತಾರೆ? ಬಡವರಿಗೆ ರೋಗ ಕೊಡುವ ದೇವರಿಗೆ ಕಣ್ಣಿಲ್ಲ– ಹೀಗೆ ಏನೇನೋ ನೋವಿನ ಕಥೆಗಳನ್ನು ಬಣ್ಣಿಸುವ ಮಹಿಳಾ ರೋಗಿಗಳುಂಟು. ಕೆಲವು ಮೌಢ್ಯದ ಕಥೆಗಳು, ಕೆಲವು ಮರುಕಹುಟ್ಟಿಸುವ ಕಥೆಗಳು. ಎದೆಯ ಎಕ್ಸರೇ ನೋಡುವ ನೆಪದಲ್ಲಿ ಯುವ ವೈದ್ಯರ ಚಿಲ್ಲರೆ ಕೆಲಸ, ಇಂಜೆಕ್ಷನ್ ಕೊಡುವ ನೆಪದಲ್ಲಿ ವೈದ್ಯರು ಸೊಂಟ ಹಿಸುಕುವ ಮುಜುಗರ, ವ್ಯಾಯಾಮ ಮಾಡಿಸುವ

ಸಂದರ್ಭದಲ್ಲಿ 'ಕೈಯೆತ್ತು' ಎನ್ನುವ ಬದಲು ಬರೇ 'ಎತ್ತು' ಎಂದು ಹೇಳಿ ಗಾಬರಿಹುಟ್ಟಿಸುವ ಜವಾನರ ಚೇಷ್ಟೆ, ಮೇಟ್ರನ್ನಳ ಜಬರದಸ್ತು ಮೊದಲಾದವುಗಳನ್ನು ಕುರಿತು ಲವಲವಿಕೆಯಿಂದ ಮಾತಾಡಿ ಮಜಾ ತೆಗೆದುಕೊಳ್ಳುವ ಸ್ತ್ರೀರೋಗಿಗಳಿಗೆ ಕೊರತೆಯಿಲ್ಲ.

ಮೈಸೂರಿನಲ್ಲಿ ಹಂಡೆ ಬಸವ ಎನ್ನುವ ಭಾರೀ ಕಳ್ಳನಿದ್ದ. ದೊಡ್ಡ ಹಂಡೆಯೊಂದನ್ನು ಕದ್ದು ರಾಜಾರೋಷವಾಗಿ ಸಾಗಿಸುತ್ತಿದ್ದುದರಿಂದ ಅವನಿಗೆ ಆ ಹೆಸರು ಬಂತಂತೆ. ಆತ ಆಜಾನುಬಾಹು ಆಳು. ಹೇಗೋ ಏನೋ ಅವನಿಗೆ ಕ್ಷಯ ಬಂತು. ಒಬ್ಬ ಮುಸಲ್ಮಾನ ವೈದ್ಯ ಸ್ಯಾನಿಟೋರಿಯಂನಲ್ಲಿ ಚಿಕಿತ್ಸೆ ನೀಡಿದರು. ಕಾಯಿಲೆ ವಾಸಿಯಾಗಿ ಡಿಸ್‌ಚಾರ್ಜ್ ಆದವನು, ಜೈಲಿಗೆ ಹಿಂದಿರುಗುತ್ತಿದ್ದಾಗ, ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ, ತಪ್ಪಿಸಿಕೊಂಡು ಪರಾರಿಯಾಗಿ, ಅದೇ ರಾತ್ರಿ ತನಗೆ ಚಿಕಿತ್ಸೆ ನೀಡಿದ ವೈದ್ಯೆಯ ಮನೆಯಲ್ಲಿ ಕಳ್ಳತನ ಮಾಡಿದ. ಚಿಕಿತ್ಸೆ ನೀಡಿ ಉಪಚಾರಮಾಡಿದ ವೈದ್ಯೆ ಮನೆಯಲ್ಲಿ ಕಳ್ಳತನ ಮಾಡಿದ್ದು ಸರಿಯೇ ಎಂದು ಯಾರೋ ಕೇಳಿದಾಗ, ಹಂಡೆ ಬಸವ ಹೀಗೆ ಉತ್ತರಿಸಿದನಂತೆ : "ಆರು ತಿಂಗಳಿಂದ ಕಳ್ಳತನ ಮಾಡಿರಲಿಲ್ಲ. ಕಸಬು ಮರೆತುಹೋಗಿದೆಯೋ ಇಲ್ಲವೋ ನೋಡೋಣಾಂತ ಕಳ್ಳತನ ಮಾಡ್ದೆ!" ಆಗ ಸ್ಯಾನಿಟೋರಿಯಂ ಆವರಣದಲ್ಲಿ ಗಾದೆಯಂತಹ ಮಾತುಗಳು ಹುಟ್ಟಿಕೊಂಡವು:

1. ಹಂಡೆಬಸವನಿಗೆ ಅಯ್ಯೋ ಅಂದರೆ ಆರು ತಿಂಗಳು ಪಾಪ! 2. ಹಂಡೆ ಬಸವನಿಗೆ ಅಯ್ಯೋ ಅಂದ್ರೆ ಕಳ್ತನ ಮಾಡುದ ಬುಟ್ಟನಾ? 3. ಕಳ್ಳನಿಗೆ ಕ್ಷಯ ಬಂದರೂ ಕಳ್ತನ ಮಾಡುದ ಬುಡಲ್ಲ.

ಒಣಗಾಡಾಗಿದ್ದ ಮಂಡ್ಯ ಜಿಲ್ಲೆ ಇರ್ವಿನ್ ನಾಲೆ ಬಂದ ಮೇಲೆ ಹಸುರಾಯಿತು. ಖುಷ್ಕಿ ಜಮೀನು ತರಿ ಜಮೀನಾಯಿತು. ಗೆದ್ದಲು ಭೂಮಿ ಫಲವತ್ತಾಯಿತು. ಮಳೆ ಬಂದರೆ ಬೆಳೆ ಕಾಣುತ್ತಿದ್ದ ಭೂಮಿ ವರ್ಷವೆಲ್ಲಾ ಹಸುರು ತುಂಬಿ ಲಕಲಕಿಸುವಂತಾಯಿತು. ನಾಲೆ ಬಂದ ಹೊಸದರಲ್ಲಿ ಮಂಡ್ಯ ಜಿಲ್ಲೆಯಲ್ಲಿ ವಿಪರೀತ ಮಲೇರಿಯಾ ಕಾಯಿಲೆ. ಹೆಚ್ಚು ಕಡಮೆ ಎಲ್ಲರಲ್ಲೂ ಮಲೇರಿಯಾ ಗೆಡ್ಡೆ ಮನೆಮಾಡಿತ್ತು. ಸಂತಾನಹೀನತೆ ಅಧಿಕವಾಗುವ ಶಂಕೆ ಮೂಡಿತು. ಮಲೇರಿಯಾ ರೋಗದಿಂದ ಬಹಳಷ್ಟು ದಿನ ಜನರು ನರಳಿದರು. ಮಲೇರಿಯಾ ಕಾಯಿಲೆ ನಿಯಂತ್ರಣಕ್ಕೆ ಬರುವವರೆಗೂ ಜನರ ಪಾಡು ಚಿಂತಾಜನಕವಾಗಿತ್ತು.

ಏಕೋ ಏನೋ ಮಲೇರಿಯಾ ಪ್ರದೇಶದಲ್ಲಿ ಕ್ಷಯ ರೋಗ ಅಧಿಕವಾಯಿತು. ಒಂದು ಬೇನೆಯ ಜೊತೆಗೆ ಇನ್ನೊಂದು ವಕ್ಕರಿಸಿಕೊಂಡಿತು. ಮಲೇರಿಯಾಕ್ಕಿಂತ ಕ್ಷಯರೋಗ ಭಯಂಕರವಾಯಿತು. ಆಗ ಚಿಕಿತ್ಸೆ ಕಷ್ಟವಾಗಿತ್ತು. ಮೈಸೂರು ಸ್ಯಾನಿಟೋರಿಯಂ ಒಂದೇ ಆಶಾಕಿರಣ. ಅದನ್ನು ಕಾಣುವ ಹೊತ್ತಿಗೆ ಎಷ್ಟೋ ಜನ ಸಾಯುತ್ತಿದ್ದರು. ಕ್ಷಯ ಹುಟ್ಟಿಸಿದ ಭೀತಿ ಅಷ್ಟಿಷ್ಟಲ್ಲ. ಆಗ ಕ್ಷಯದ ಬಗೆಗೆ ಅನೇಕ ಕಥೆ, ಕಟ್ಟುಕಥೆ, ಐತಿಹ್ಯ, ಗಾದೆ, ಒಗಟು, ಬೈಗುಳ ಮೊದಲಾದವು ಹುಟ್ಟಿಕೊಂಡವು. ಈಗ ಕ್ಷಯ ವಾಸಿಯಾಗದ ಕಾಯಿಲೆಯಲ್ಲ. ಆದರೂ ಅದರ ಭಯ ನಿಂತಿಲ್ಲ.

ಕ್ಷಯರೋಗ ನಿಯಂತ್ರಣಕ್ಕೆ ಬಂದಿದ್ದರೂ ಈಚೆಗೆ ಅದು ಬೇರೊಂದು ಸೂಕ್ಷ್ಮರೀತಿಯಲ್ಲಿ ಮರುಕಳಿಸುತ್ತಿದೆಯೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಕ್ಷಯರೋಗವನ್ನು ಶಾಶ್ವತವಾಗಿ ನಿರ್ಮೂಲಮಾಡಲು ಸಂಶೋಧನೆಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯ ಕ್ಷಯರೋಗ ಸಂಘದಿಂದ ಕ್ಷಯರೋಗ ನಿರ್ಮೂಲನ ಆಂದೋಲನ ಕಾರ್ಯಗಳು ನಡೆಯುತ್ತಿವೆ. ಭಾರತ ಸರಕಾರ 1962ರಲ್ಲೇ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯವನ್ನು ಪ್ರಾರಂಭಿಸಿದೆ. ಈ ಸಾಂಕ್ರಾಮಿಕ ರೋಗದ ತಡೆಗೆ ಸಾಕಷ್ಟು ಹಣವನ್ನೂ ತೆಗೆದಿರಿಸುತ್ತಿದೆ. ಆದರೂ ಕ್ಷಯರೋಗದ ಅಪಾಯದ ಗಂಟೆ ಮೊಳಗುವುದು ನಿಂತಿಲ್ಲ.

ಕ್ಷಯರೋಗದ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತವೆ : ಕೆಮ್ಮು, ಕಫ, ಕಫದಲ್ಲಿ ವಾಸನೆ, ಕಫದಲ್ಲಿ ರಕ್ತ, ಎದೆನೋವು, ಜ್ವರ, ಮೈ ಬೆವರುವುದು, ಆಯಾಸ, ಹಸಿವು ಆಗದಿರುವುದು, ಕಣ್ಣಿಗೆ ಕಾಣುವಂತೆ ದೇಹ ಕೃಶವಾಗುವುದು ಇತ್ಯಾದಿ ಇದರ ಲಕ್ಷಣಗಳು. ದೀರ್ಘಕಾಲದ ಕೆಮ್ಮಿದ್ದರೆ ಸಾಧಾರಣ ಡಾಕ್ಟರ ಹತ್ತಿರ ಹೋಗುವುದಕ್ಕಿಂತ ಕ್ಷಯರೋಗದ ಆಸ್ಪತ್ರೆಗೆ ಹೋಗಿ ತೋರಿಸುವುದು ಸೂಕ್ತ. ಮಾಯ ಮಂತ್ರ, ಯಂತ್ರ ತಂತ್ರ, ದೇವರು ದಿಂಡರು, ಹರಕೆ ಹರಿಸೇವೆಯೆಂದು ಅಲೆಯಬಾರದು. ಮೂಢನಂಬಿಕೆಯ ಆಚರಣೆಗೆ ಕ್ಷಯರೋಗ ಜಗ್ಗುವುದಿಲ್ಲ, ಬಗ್ಗುವುದಿಲ್ಲ. ಔಷಧೋಪಚಾರದಿಂದಲೋ ಶಸ್ತ್ರಚಿಕಿತ್ಸೆಯಿಂದಲೋ ಅದರ ಬೇರನ್ನು ಕೀಳಬೇಕು.

ಕ್ಷಯರೋಗಕ್ಕೆ ನಾನಾ ಕಾರಣಗಳಿವೆ. ಅವುಗಳನ್ನು ಹೀಗೆ ಹೆಸರಿಸಬಹುದು: 1. ಆನುವಂಶೀಯತೆ 2. ಧೂಮಪಾನ, 3. ಮದ್ಯಪಾನ 4. ಪೌಷ್ಟಿಕ ಆಹಾರದ

ಕೊರತೆ 5. ಪರಿಶುದ್ಧ ಪರಿಸರದ ಕೊರತೆ 6. ಅತಿಯಾದ ಲೈಂಗಿಕತೆ 7.ಅನೈತಿಕ ವ್ಯಭಿಚಾರ 8. ನಿಯಮಿತ ವ್ಯಯಾಮದ ಕೊರತೆ 9. ದೈಹಿಕ, ಮಾನಸಿಕ ಒತ್ತಡ 10. ಏಡ್ಸ್ ರೋಗ ಇತ್ಯಾದಿ. ಕ್ಷಯರೋಗ ದೇಹದ ಯಾವ ಭಾಗಕ್ಕಾದರೂ ತಗಲಬಹುದು.

ಕ್ಷಯರೋಗ ಹಳ್ಳಿಗರಿಗೂ ಬರುತ್ತದೆ, ಪಟ್ಟಣಗರಿಗೂ ಬರುತ್ತದೆ. ಮಕ್ಕಳಾದಿಯಾಗಿ ಎಲ್ಲಾ ವಯಸ್ಸಿನವರೂ ಈ ರೋಗಕ್ಕೆ ತುತ್ತಾಗುತ್ತಾರೆ. ಹಳ್ಳಿಗರು ನಗರವಾಸಿಗಳಾದಾಗ ಬದಲಾದ ಜೀವನ ವಿಧಾನದಿಂದ ರೋಗಗ್ರಸ್ಥರಾಗುವುದೂ ಉಂಟು. ಕೊಳಚೆ ಪ್ರದೇಶದವರಿಗೆ ರೋಗ ನಿರೋಧಕಗಳನ್ನು ನೀಡಿ ರೋಗವನ್ನು ತಡೆಗಟ್ಟಿದರೂ ಕೆಲವು ಕಾಲದ ಮೇಲೆ ಅದೇ ಕಾಯಿಲೆ ಮರುಕಳಿಸುವುದಿದೆ. ಸಾಮಾನ್ಯವಾಗಿ ಹಳ್ಳಗರಿಗೆ ಪೌಷ್ಟಿಕ ಆಹಾರದ ಕೊರತೆಯಿದೆ; ನಿರ್ಮಲ ಪರಿಸರದ ಕೊರತೆಯಿಲ್ಲ. ಹಲವು ಪಟ್ಟಣಿಗರಿಗೆ ಪೌಷ್ಟಿಕ ಆಹಾರದ ಕೊರತೆಯಿಲ್ಲ; ನಿರ್ಮಲ ಪರಿಸರದ ಕೊರತೆಯಿದೆ. ಕೆಲವರಿಗೆ ಎರಡೂ ಕಡೆ ಯಾವುದೇ ಸೌಲಭ್ಯವಿಲ್ಲ; ಎಲ್ಲದರಲ್ಲೂ ಕೊರತೆಯಿರುತ್ತದೆ. ಈ ಎಲ್ಲ ಪರಿಸರದವರಲ್ಲಿಯೂ ಕ್ಷಯರೋಗ ಬರಬಹುದು.

ಸರಳವಾದ ಜನಪದ ಜೀವನ ಶೈಲಿ, ಸಮೃದ್ಧವಾದ ಶುದ್ಧವಾದ ಪ್ರಕೃತಿ ಪರಿಸರದ ಸಾಮೀಪ್ಯ, ಜನಪದ ಸಂಸ್ಕೃತಿಯ ಹಬ್ಬ ಹರಿದಿನ, ಜಾತ್ರೆ, ಉತ್ಸವ, ಹಾಡುಪಾಡು, ಆಚರಣೆ, ಆಚಾರ ವಿಚಾರಗಳ ಜೀವನೋತ್ಸಾಹ ಭರಿತ ಚಟುವಟಿಕೆ ಮುಂತಾದವುಗಳಿದ್ದರೂ ಬಡ ಹಳ್ಳಿಗರಲ್ಲಿ ಕ್ಷಯರೋಗದ ಪ್ರಮಾಣ ಅಧಿಕವಾಗಿರುವುದು ಆತಂಕಕಾರಿಯಾಗಿದೆ. ಗ್ರಾಮೀಣ ಬಾಣಂತಿಯರಲ್ಲಿ ಈ ಕಾಯಿಲೆ ಇನ್ನೂ ಹೆಚ್ಚಾಗಿದೆ. ಕ್ಷಯರೋಗದ ಬಗೆಗಿನ ಜಾಗೃತಿಯ ಕೊರತೆಯೇ ಇದಕ್ಕೆ ಮುಖ್ಯ ಕಾರಣವೆನ್ನಬಹುದು. ಜನಜಾಗೃತಿಯ ಕೊರತೆಯ ನಿವಾರಣೆಗೂ ಜನಪದ ಮಾಧ್ಯಮಗಳನ್ನೇ ಬಳಸಬೇಕಾಗಿದೆ.

ಕ್ಷಯರೋಗಕ್ಕೆ ಸಂಬಂಧಿಸಿದಂತೆ ಸಾಕಷ್ಟು ಗಾದೆಗಳು ಹುಟ್ಟಿಕೊಂಡಿವೆ. ಇವು ಹೆಚ್ಚಾಗಿ ಹಳ್ಳಿಗರಲ್ಲಿ ಬಳಕೆಯಾಗುತ್ತಿರುತ್ತವೆ. ಹೆಚ್ಚು ಕಡಮೆ ಈ ಗಾದೆಗಳೆಲ್ಲ ಅನುಕರಣೆಯಿಂದ ರೂಢಿಗೆ ಬಂದಿವೆ. ಇವುಗಳಲ್ಲಿ ಕ್ಷಯರೋಗಿಯ ಬಗೆಗಿರುವ ತಿರಸ್ಕಾರ, ಅಸಹ್ಯ ಅಪಾರವಾಗಿದೆ. ವಿವಿಧ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದಲ್ಲಿ ಕ್ಷಯರೋಗಿಯನ್ನು ಹೀನಾಯವಾಗಿ ಕಾಣುವುದು, ಅಶ್ಲೀಲವಾಗಿ ಹಂಗಿಸುವುದು

ಪ್ರಧಾನವಾಗಿದೆ. ಕ್ಷಯರೋಗಕ್ಕೆ ತುತ್ತಾದ ಹೆಂಗಸು, ಗಂಡಸು ಇಬ್ಬರಿಗೂ ಅನ್ವಯಿಸುವ ಗಾದೆಗಳು ಚಾಲ್ತಿಗೆ ಬಂದಿವೆ. ಕೆಲವು ಗಾದೆಗಳಿಗೆ ಹೇಳಿಕೊಳ್ಳುವಂತಹ ಅರ್ಥವೇನೂ ಇರುವುದಿಲ್ಲ. ಅಂತ್ಯಪ್ರಾಸವೇ ಕೆಲವು ಗಾದೆಗಳ ಜೀವಾಳ. ಕೆಲವು ಉದಾಹರಣೆಗಳನ್ನು ಗಮನಿಸಬಹುದು.

1. ಚಯ ಬಂದೋನ ಹೆಂಡತೀನ, ಚರ್ಮದವನು ಹೊತ್ಕಂಡೋದ 2. ಚಯ ಬಂದೋನು ಬಿಳಿಚಿಕೊಂಡರೆ, ಚಿನಾಲುಗಿತ್ತಿ ಬೆವತುಕೊಂಡಳು 3. ಚಯ ಬಂದೋನ ಮನೆ ಹಾಳು, ಚೌವುಳು ತುಂಬಿದ ಹೊಲ ಹಾಳು 4. ಅಟ್ಟಿಕ್ಕವಳ ಅಂತ್‌ಗಂಡು ನೋಡಬೇಡ, ಚಯ ಬಂದವಳ ಸಂಗ ಮಾಡಬೇಡ. 5. ಕ್ಷಯ ಬಂತು ಅಂತ, ಕಂಡು ಕಂಡಿದ್ದನ್ನೆಲ್ಲ ತಿಂದು ಮುಗಿಸಿದ. 6. ಚಯ ಬಂದೋನು ಚಾ ಕುಡಿಕೋದ್ರೆ, ಇದ್ದಬದ್ದ ನೊಣವೆಲ್ಲ ಓಡೋದೊ. 7. ಚಿನ್ನಾಲುಗಿತ್ತಿಗೆ ಚಯರೋಗ ಬಂತು, ಬಿನ್ನಾಣಗಿತ್ತಿಗೆ ಬೆರಗಲು ರೋಗ ಬಂತು. 8. ಚಯ ಬಂದವಳು ಚಿನಾಲಿ, ಮಾಯ ಬಲ್ಲವಳು ಮನೆಹಾಳಿ 9. ಮಲ್ಲೋಗರ ಬಂದವಳು ಮೂರು ಹೆತ್ತರೆ, ಕ್ಷಯ ಬಂದವಳು ಆರು ಹೆತ್ತಳು. 10. ಕ್ಷಯ ಬಂದವನು ಸಾಯಲ್ಲ, ಭಯ ಬಂದವನು ಬಾಳಲ್ಲ. 11. ಚಯ ಬಂದೋನ ಹೆಂಡತಿ ತೌರಿಗೆ ಹೋದರೆ, ಏನು ಮಾಡಳೋ ಅಂತ ಹಿಂದುಗಡೇನೇ ಹೋದ. 12. ಆಚೆ ಬೀದಿಲಿ ಕ್ಷಯ, ಈಚೆ ಬೀದಿಲಿ ಭಯ. 13. ಕೋಮಕೋದವನು ಕ್ಷೇಮ ತಂದ, ಕ್ಷಯ ಬಂದವನು ಕ್ಷೋಭೆ ತಂದ, 14. ಹೆಣ್ಣು ಕೊಡು ಮಾವ ಅಂದ್ರೆ, ಕ್ಷಯ ಬಂದ್ರ ಏನ್ ಮಾಡ್ತೀಯ ಅಂದ. 15. ಚಾಮನಳ್ಳಿಯವಳಿಗೆ ಚಯ ಬಂದ್ರೆ, ಚಂದಗಾಲದವಳು ಬಾಯಿ ಬಡಕೊಂಡಳು. 16. ಚಯ ಬಂತು ಅಂತ ತೆವಲು ಬುಡುಕಾದದೆ? 17. ಹೋದೆಯಾ ಚಯವೇ ಅಂದ್ರೆ, ಬಂದ ಗವಾಕ್ಷೀಲಿ ಅಂತು. 18. ಕ್ಷಯ ಬಂದೋರ ಮನೇಲಿ ಕೋಳಿಗೆ ಆಪತ್ತು. 19. ಚೆಂದುಳ್ಳಿ ಹೆಣ್ಣಿಗೆ ಚಯ ಬಂದಂಗೆ 20. ಚಯ ಬಂದ್ಯೋ ಚಪಿತ್ರ ತಂದ್ಯೋ. 21.ಚಯ ಬಂದವಳೋ ಆಯಗೆಟ್ಟವಳೋ. 22. ಕ್ಷಯ ಬಂದು ಕೋಶ ಕರಗಿತು. 23. ಚಪಿತ್ರ ಕಾಲಕ್ಕೆ ಚಯ ಬಂತು 24. ಕ್ಷಯ ಬಂದೋಳಿಗೆ ಕೆಮ್ಮುದು ಕಲಿಸಿದಂತೆ. 25. ಮಾಡಬಾರದ್ದು ಮಾಡಿದರೆ ಕ್ಷಯ ಬರದೆ ಇದ್ದೀತೆ? 26. ಕೆಮ್ಮಿ ಕೆಮ್ಮಿ ಕ್ಷಯ ಬಂತು.

ಸಾಮಾನ್ಯವಾಗಿ ಇತರ ಬೈಗುಳಗಳಂತೆ ಕ್ಷಯರೋಗದ ಬೈಗುಳಗಳಲ್ಲೂ

ಪರಸ್ಪರ ಸಿಟ್ಟು, ಸೇಡು, ರೋಷ, ಅಸಹ್ಯ ಅಧಿಕವಾಗಿದೆ. ಪ್ರತಿಯೊದು ಬೈಗುಳಲ್ಲೂ 'ಚಯ' ಶಬ್ದ ಒತ್ತಿದಂತೆ ಬಳಕೆಯಾಗುತ್ತದೆ. ಒಂದೆರಡು ಉದಾಹರಣೆಗಳು ಹೀಗಿವೆ : 1.ಅಯ್ಯೋ ನಿನಗೆ ಚಯಾ ಬರಾ. 2. ನಿನಗೆ ಚಯ ಬಂದು ಚಾಪೇಲಿ ಸುತ್ಕಂಡೋಗ. 3. ಚಯ ಬಂದು ನಿನ್ ವಂಶ ನಾಶ್‌ನಾಗ 4. ನಿನಗೆ ಚಯ ಬಂದು ಹೊತ್ಕಂಡೋಗ 5. ನಿನಗೆ ಚಯ ಬಂದು ರಕ್ತ ಕಾರ್ಕಂಡು ಸಾಯ.

ಕ್ಷಯರೋಗದ ಆಸ್ಪತ್ರೆ ಶೌಚಾಲಯ ಬರಹಗಳಲ್ಲಿ ರೋಗಿಗಳ ಅದುಮಿಟ್ಟ ಭಾವಗಳು ಹೊರಹೊಮ್ಮುವುದನ್ನು ಕಾಣಬಹುದು. ಹೆಂಗಸರ ವಾರ್ಡ್ ಹಾಗು ಗಂಡಸರ ವಾರ್ಡ್‌ಗಳಲ್ಲಿ ಇಂಥ ಬರಹಗಳು ಧಾರಾಳವಾಗಿ ಕಂಡುಬರುತ್ತವೆ. ಇವುಗಳಲ್ಲಿ ಅಶ್ಲೀಲ ಸಾಲುಗಳು, ಅಶ್ಲೀಲ ಚಿತ್ರಗಳು ಹೆಚ್ಚಾಗಿರುತ್ತವೆ. ಸ್ತ್ರೀ ಪುರುಷ ರೋಗಿಗಳು ದೀರ್ಘಕಾಲ 'ಹಾಸಿಗೆ ಪಥ್ಯ' ದಲ್ಲಿರಬೇಕಾದುದರಿಂದ, ಮರ್ಯಾದೆಗಾಗಿ ಬಲವಂತವಾಗಿ ಬಚ್ಚಿಟ್ಟುಕೊಂಡ ಲೈಂಗಿಕ ಭಾವನೆಗಳು, ಶೌಚಾಲಯದಂತಹ ತಾತ್ಕಾಲಿಕ ಏಕಾಂತ ಸ್ಥಳದಲ್ಲಿ ಬರಹ ರೂಪದಲ್ಲಿ ಮೂಡಲು ಕಾರಣವೆಂದು ಹೇಳಬಹುದು. ಕೆಲವು ಕಡೆ ಕಾಗದದ ಚೂರುಗಳಲ್ಲೂ ಇಂಥ ಬರವಣಿಗೆಯನ್ನು ನೋಡಬಹುದು. ಆತ್ಮೀಯರ ನಡುವೆಯೂ ಸಮವಯಸ್ಕರ ಮಾತುಕತೆಯಲ್ಲೂ ಇವು ಕಂಡುಬರುತ್ತವೆ. ಕೆಲವು ಅಶ್ಲೀಲ ಬರಹಗಳು ಸೂಚ್ಯವಾಗಿದ್ದರೆ, ಹಲವು ವಾಚ್ಯವಾಗಿರುತ್ತವೆ. ಇಲ್ಲೂ ಅನುಕರಣೆಯ ಪಾತ್ರ ಹೆಚ್ಚಾಗಿರುತ್ತದೆ. ಯಾವುದೋ ಪ್ರಸಿದ್ಧ ಹಾಡಿನ ಸಾಲು, ರೂಢಿಯ ಮಾತುಗಳಿಗೆ ತಳಕುಹಾಕಿಕೊಂಡು ಹುಟ್ಟಿರುತ್ತದೆ. ಹೆಂಗಸರ ವಾರ್ಡ್ ಶೌಚಾಲಯ ಬರಹಗಳಿಗೆ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು :

1. ಕಾದಿರುವೆನು ಚೆಲುವಿ
   ಚೆಲುವ ಬರುವನೆಂದು
   ಡಿಸ್‌ಚಾರ್ಜ್ ಮಾಡಿಸುವನೆಂದು
   ಸ್ಯಾನಿಟೋರಿಯಂ ಬಿಡಿಸುವನೆಂದು.

2. ನರ್ಸಪ್ಪ ಬಂದನು
   ಸ್ಟ್ರೆಪ್ಟಮೈಸಿನ್ ತಂದನು
   ಸೂಜಿ ಹೊಟ್ಗೆ ತುಂಬಿದನು

ಸೀರೆ ಬಿಚ್ಚು ಎಂದನು
ಅತ್ಲಾಗ್ ಇತ್ಲಾಗ್ ನೋಡುವಷ್ಟರಲ್ಲಿ
ಚುರುಕ್ ಅಂತ ಚುಚ್ಚಿದನು
ಉಜ್ಕಂಡು ಮಲಿಕೊ ಅಂದನು.

3. ಇಂಜೆಕ್ಷನ್ ಕೊಡುಕೆ ನರ್ಸಪ್ಪ ಸರಿ
ಥರ್ಮಾಮೀಟರ್ ಇಡುಕೆ ನರ್ಸಮ್ಮ ಸರಿ.

4. ಎಲ್ಲರುವೆ ಗೆಳೆಯ ಬಾರೋ
ಇಲ್ಲಿರುವೆ ಮುಸುಡಿ ತೋರೊ.

5. ಬಾರೋ ಬಾರೋ ಗೂಟಪ್ಪ
ಬಂದು ನೋಡೋ ಚೋಟಪ್ಪ.

6. ಎತ್ತು ಎತ್ತು ಅಂತಿದ್ದ ಗೆಳೆಯ
ಎತ್ತಲಾಗೋದನೋ ಹಾಳಾಗಿ
ಎತ್ತಿಗಂಡು ನಿಂತಿವ್ನಿ ಬಾ ಅಂದ್ರು
ಬರೋವರು ಗತಿಯಿಲ್ಲ ಇತ್ಲಾಗಿ.

ಹೆಂಗಸರ ವಾರ್ಡ್‌ನ ಶೌಚಾಲಯ ಬರಹಗಳಿಗಿಂತ, ಗಂಡಸರ ವಾರ್ಡ್ ಶೌಚಾಲಯ ಬರಹಗಳು ಹೆಚ್ಚು. ಎರಡೂ ಕಡೆಗಳಲ್ಲೂ ಲೈಂಗಿಕ ಭಾವನೆಗಳದೇ ಮೇಲುಗೈ. ಲಘುಹಾಸ್ಯ, ವ್ಯಂಗ್ಯ, ಗಣಿತಸೂತ್ರ, ಚಿತ್ರಗಳ ಮಾದರಿಗಳೂ ಉಂಟು. ಸಹಜ ಹಾಗೂ ಸಾಮಾನ್ಯವೆನ್ನುವಂತೆ ಅಶ್ಲೀಲತೆ ತುಂಬಿಕೊಂಡಿರುತ್ತದೆ. ಕೆಲವು ಉದಾಹರಣೆಗಳು ಹೀಗಿವೆ.

1. ಆಸ್ಪತ್ರೆಗೆ ರೋಗಿಗಳು ಭೂಷಣ
ರೋಗಿಗಳಿಗೆ ಆಸ್ಪತ್ರೆ ಭೂಷಣ
ನರ್ಸುಗಳಿಗೆ ಬಹುಪತಿತ್ವವೇ ಭೂಷಣ
ಹರ ಹರಾ ಶ್ರೀ ಚನ್ನ ಕ್ಷಯೇಶ್ವರಾ !

2. ಕ್ಷಯ ಬಂತು ಕ್ಷಯ
ಮನೆ ಮಂದಿ ಸಾಯ.

3. ಕ್ಷಯಮ್ಮ ಕ್ಷಯಮ್ಮ
ಕೈಮುಗಿತೀನಿ ಹೋಗಮ್ಮ.

4. ಮುಂಜಾವದಲ್ಲಿ ಬಂದಳು ನರ್ಸಮ್ಮ
.ಹುಡುಕಾಡಿ ತಡಕಾಡಿ ಮುಟ್ಟಿದಳು
ಥರ್ಮಾಮೀಟರ್ ಹಿಡಿದು ನೋಡಿದಳು
ಕುಲುಕಾಡ್ಸಿ ಅಲುಗಾಡ್ಸಿ ಬೆಚ್ಚಿದಳು
ಬಿಸಿಯಾಗಿದೆ ಅಂತೇಳಿ ಗೊಣಗಿದಳು
ಚಾರ್ಟು ತೆಗೆದು ಮಾರ್ಕಮಾಡಿ ಮಡಗಿದಳು.

5. ಆಕಳಿಕೆ ಹೆಚ್ಚಾದೋ ತೂಕಡಿಕೆ ಘನವಾದೋ
ದೂರದ ಹೆಣ್ಣು ನೆನಪಾದೋ-ಕ್ಷಯಪ್ಪ
ಕೂಗಿ ಸಾಕಾಯ್ತು ಬರನಿಲ್ಲ.

6. ಕ್ಷಯರೋಗ ಬಂದ್ರೆ ಗೋವಿಂದೋ ಗೋವಿಂದ.
(+ಮೂರು ನಾಮದ ಚಿತ್ರ)

7. ಶಿಶ್ನ (ಚಿತ್ರ) + ಯೋನಿ (ಚಿತ್ರ) = ಕ್ಷಯ.

8. ಗಂಡು ಹೆಣ್ಣಿನ ಸಂಭೋಗ (ಚಿತ್ರ) = ಪ್ರಾಣಹರಣ.

9. ತಿರುಪತಿ ತಿಮ್ಮಪ್ಪ
ಕ್ಷಯರೋಗ ಯಾಕಪ್ಪ ?

10. ಬೆಟ್ಟದ ಮೇಗಳ ಬೆಟ್ಟಪ್ಪ
ಕ್ಷಯರೋಗವ ಕಳೆಯಪ್ಪ.

11. ಇದಕ್ಕೆ ಅದರ ಗ್ಯಾನ
ಅದಕ್ಕೆ ಇದರ ಗ್ಯಾನ
ಇದು ಕರೆಯುವಂಗಿಲ್ಲ
ಅದು ಬರುವಂಗಿಲ್ಲ.

12. ಗಂಡು ನರ್ಸುಗು ಹೆಣ್ಣು ನರ್ಸುಗು ನೇರ
ಸೂಜಿಕಣ್ಣಿಗೆ ದಾರ.

13. ನರ್ಸಪ್ಪ ಬತ್ತಾನೆ ದಾರಿಬಿಡು
ಸೂಜಿ ತಕ್ಕಬತ್ತಾನೆ ಜಾಗಕೊಡು.

14. ಒರಳುಕಲ್ಲು + ಗುಂಡುಕಲ್ಲು = ವ್ಯಾ ವ್ಯಾ (ಅಳುವ ಮಗುವಿನ ಚಿತ್ರ).

15. ಗಂಡು (ಚಿತ್ರ) + ಹೆಣ್ಣು (ಚಿತ್ರ) = ಕ್ಷಯ

ಕ್ಷಯರೋಗದ ಆಸ್ಪತ್ರೆಯ ಶವಾಗಾರದ ಬಾಗಿಲು ಮುಚ್ಚಿದ್ದರೆ ಒಳಗೆ ರೋಗಿಯ ಶವವಿದೆಯೆಂದೂ ಬಾಗಿಲು ತೆರೆದಿದ್ದರೆ ಯಾರೂ ಸತ್ತಿಲ್ಲವೆಂದೂ ಎಲ್ಲರಿಗೂ ತಿಳಿದಿರುವ ವಿಷಯ. ಕ್ಷಯ ರೋಗಿಗಳು ಸಂಜೆಯ ಹೊತ್ತು ಗಾಳಿಸೇವನೆಗಾಗಿ ತಿರುಗಾಡುವಾಗ ತಪ್ಪದೆ ಶವಾಗಾರವನ್ನು ನೋಡುತ್ತಾರೆ. ಆಗ ಅವರ ಮನಸ್ಸಿನಲ್ಲಿ ಸಾವು ಬದುಕಿನ ಆತಂಕಕಾರಿಯಾದ ಭಯದ ಭಾವನೆಗಳು ಸುಳಿದಾಡುತ್ತವೆ. ಸ್ಯಾನಿಟೋರಿಯಂ ಶವಾಗಾರದ ಗೋಡೆಯ ಮೇಲೂ ಕೆಲವು ಬರಹಗಳು ಕಂಡು ಬರುವುದುಂಟು. ಇಲ್ಲಿ ವೈರಾಗ್ಯದ ಅಂಶ ವಿಶೇಷವಾಗಿರುತ್ತದೆ. ಇಂಥ ಬರಹಗಳು ಇತರ ರೋಗಿಗಳ ಆಸ್ಪತ್ರೆಗಳ ಶವಾಗಾರಗಳಲ್ಲೂ ಕಾಣಸಿಗುತ್ತವೆ. ಇವು ಸಾಕಷ್ಟು ಲೋಕವ್ಯವಹಾರಜ್ಞಾನವಿರುವ ರೋಗಿಗಳ ಕಲ್ಪನೆಗಳಂತೆ ತೋರುತ್ತವೆ. ಈ ಉದಾಹರಣೆಗಳನ್ನು ನೋಡಿ : 1. ಮಹಾತ್ಮರು ಮಲಗಿದ್ದಾರೆ, ಕೈಮುಗಿಯಿರಿ. 2. ಈ ಜಗತ್ತನ್ನೆಲ್ಲ ನಮಗೆ ಬಿಟ್ಟು, ಕೈಲಾಸಕ್ಕೆ ಹೋದರು. ನಮಸ್ಕಾರ ಮಾಡಿ. 3. ಸತ್ತವರಿಗೆ ಸ್ವರ್ಗ ಸಿಗಲಿ. 4. ಸತ್ತವರು ಗೆದ್ದರು, ಇದ್ದವರು ಸೋತರು. 5. ಓಹೋ ಯಮದೇವರು, ಕೈಮುಗಿದೆ ನನ್ನೊಡೆಯ! 6. ಮುಚ್ಚಿದರೆ ಮುಕ್ತಿ, ತೆರೆದರೆ ನರಕ 7. ಶವಾಗಾರದಲ್ಲಿ ಜಾತಿಯಿಲ್ಲ, ಸತ್ತವರಿಗೆ ಸೂತಕವಿಲ್ಲ 8.ಸತ್ತರೆ ಸ್ವರ್ಗ, ಇದ್ದರೆ ನರಕ. 9. ಕ್ಷಯರೋಗ, ಭವರೋಗ, 10. ಕ್ಷಯ ಅಕ್ಷಯ.

ಪ್ಲೇಗು, ಕಾಲರ, ಸಿಡುಬು, ಏಡ್ಸ್ ಕಾಯಿಲೆಗಳಿಗೆ ಅದೇ ಹೆಸರಿನಲ್ಲಿ ದೇವರು ಹುಟ್ಟಿಕೊಂಡಿವೆ. ಆದರೆ ಕ್ಷಯದ ಹೆಸರಿನಲ್ಲಿ ದೇವರು ಸೃಷ್ಟಿಯಾಗಿರುವುದು ಕಂಡುಬರುವುದಿಲ್ಲ. ಜನಪದರು ಇದನ್ನೇಕೆ ಬಿಟ್ಟರೋ ಗೊತ್ತಿಲ್ಲ. ಪ್ಲೇಗು ರೋಗದ ಬಗೆಗೆ ಜನಪದ ಗೀತೆ ಹುಟ್ಟಿರುವುದುಂಟು. ಆದರೆ ಕ್ಷಯರೋಗದ ಬಗೆಗೆ ಹೇಳಿಕೊಳ್ಳುವಂತಹ ಜನಪದ ಗೀತೆ ಹುಟ್ಟಿಲ್ಲ.

ಡಾ. ರೋಬರ್ಟ್ ಕಾಕ್ ಎಂಬಾತ ದಿನಾಂಕ 24-3-1882 ರಂದು ಕ್ಷಯರೋಗದ ರೋಗಾಣು ಕಂಡುಹಿಡಿದು ಮನುಕುಲಕ್ಕೆ ಮಹೋಪಕಾರ

ಮಾಡಿದ್ದಾನೆ. ಈ ಸ್ಮರಣೆಗಾಗಿ ಪ್ರತಿ ವರ್ಷ ಮಾರ್ಚ್ ತಿಂಗಳಿನ 24 ರಂದು ವಿಶ್ವದಲ್ಲೆಲ್ಲಾ ಕ್ಷಯರೋಗ ದಿನ ಆಚರಣೆಯಾಗುತ್ತಿದೆ. ವಿದ್ಯಾವಂತ ಕ್ಷಯರೋಗಿಗಳು ಆ ದಿನವನ್ನು ತಪ್ಪದೆ ನೆನೆಸಿಕೊಳ್ಳುತ್ತಾರೆ. ಜನಪದರು ಕ್ಷಯರೋಗದ ಔಷಧಿ ಕಂಡುಹಿಡಿದಾತನಿಗೆ ಕೈಮುಗಿಯುವುದೂ ಉಂಟು.

ಕ್ಷಯರೋಗ ಭಯಂಕರ ಸಾಂಕ್ರಾಮಿಕ ರೋಗ. ಈಗ ಸಂಪೂರ್ಣವಾಗಿ ಗುಣವಾಗುವ ರೋಗ. ಮೈಮರೆತರೆ ಮರುಕಳಿಸುವ ಅಪಾಯವೂ ಇದೆ. ಭಾರತದಲ್ಲಿ ಪ್ರತಿ ನಿಮಿಷಕ್ಕೆ ಒಬ್ಬರು ಕ್ಷಯರೋಗದಿಂದ ಸಾಯುತ್ತಿರುವುದಾಗಿ ಅಂದಾಜು ಮಾಡಲಾಗಿದೆ. ಪ್ರಪಂಚದ ಮೂರನೆ ಒಂದು ಭಾಗದಷ್ಟು ಕ್ಷಯರೋಗಿಗಳು ಭಾರತದಲ್ಲಿದ್ದಾರೆ. ಕ್ಷಯರೋಗ ಬಂದರೆ ಹಿಂದಿನಂತೆ ಯಾರೂ ಮಾಯಮಂತ್ರ ಮಾಡಿಸುವುದಿಲ್ಲ; ಯಂತ್ರ ತಂತ್ರ ಕಟ್ಟಿಸುವುದಿಲ್ಲ; ನೇರವಾಗಿ ಆಸ್ಪತ್ರೆಗೆ ತೆರಳುತ್ತಾರೆ. ಅಷ್ಟರಮಟ್ಟಿಗೆ ಪರಿಸ್ಥಿತಿ ಸುಧಾರಿಸಿದೆ. ಆದರೆ ಹರಕೆ ಕಟ್ಟಿಕೊಳ್ಳುವುದು, ಪೂಜೆ ಪುನಸ್ಕಾರ ಮಾಡಿಸುವುದು ನಿಂತಿಲ್ಲ.

ಕ್ಷಯರೋಗವನ್ನು ಸುಲಭವಾಗಿ ಪತ್ತೆ ಮಾಡುವುದು, ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸುವುದು ಸಾಧ್ಯವಾಗಿದೆ. ರೋಗಿಯ ಕಫ, ಮಲ ಮತ್ತು ರಕ್ತ ಪರೀಕ್ಷೆಯಿಂದ ಕ್ಷಯರೋಗವನ್ನು ಪತ್ತೆಮಾಡಬಹುದು. ಕ್ಷಕಿರಣದಿಂದ ದೇಹದ ಯಾವ ಭಾಗದಲ್ಲಿ ಅಥವಾ ಯಾವ ಶ್ವಾಸಕೋಶದಲ್ಲಿ ರೋಗವಿದೆಯೆಂದು ತಿಳಿಯಬಹುದು. ಅದಕ್ಕೆ ತಕ್ಕಂತೆ ಚಿಕಿತ್ಸೆ ಪ್ರಾರಂಭಿಸಬಹುದು. ಪ್ರತಿನಿತ್ಯ ಬಿಡದಂತೆ ಮೂವತ್ತು ದಿನ ಸ್ಟ್ರಪ್ಟಮೈಸಿನ್ ಚುಚ್ಚುಮದ್ದು ಹಾಕಿಸಿಕೊಳ್ಳಬೇಕು. ಜೊತೆಗೆ ಐ.ಎನ್.ಎಚ್. ಗುಳಿಗೆ, ಎಪಿಎಸ್. ಔಷಧಿಯನ್ನು ಆರು ತಿಂಗಳವರೆಗೆ ಅಥವಾ ವೈದ್ಯರು ಸಲಹೆ ಮಾಡುವಷ್ಟು ದಿನ ಸೇವಿಸಬೇಕು. ಶ್ವಾಸಕೋಶಕ್ಕೆ ಕೊಳವೆ ಲೈಟು ರವಾನಿಸುವುದರ ಮೂಲಕ ಪರಿಶೀಲಿಸಿ ರೋಗ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಬಹುದು. ಅಗತ್ಯವೆನಿಸಿದರೆ ಕುತ್ತಿಗೆಯ ಭಾಗದಲ್ಲಿ ಮಲಿನ ರಕ್ತನಾಳವನ್ನು ಸ್ಥಗಿತಗೊಳಿಸಬಹುದು. ತೀರಾ ಅಗತ್ಯವಾದರೆ ಮೇಜರ್ ಆಪರೇಷನ್‌ಗೆ ಪ್ರಯತ್ನಿಸಬಹುದು.

ಶ್ರೀ ಮಲೆಮಾದೇಶ್ವರ ಸ್ವಾಮಿ ಜನಪದ ಮಹಾಕಾವ್ಯದಲ್ಲಿ, ಆತ ತಾಯಿಯ ಗರ್ಭದಿಂದ ಎಲ್ಲರಂತೆ ಹುಟ್ಟದೆ, ತಾಯಿಯ ಬೆನ್ನನ್ನು ಸೀಳಿಕೊಂಡು ಹೊರಬಂದು ಮೂಡಿದ ಪ್ರಸಂಗವನ್ನು ನೆನಪಿಸುವಂತೆ, ಶ್ವಾಸಕೋಶದ ಶಸ್ತ್ರಚಿಕಿತ್ಸೆ ನಡೆಯುತ್ತದೆ.

ಅರವಳಿಕೆಯಿಂದ ಜ್ಞಾನ ತಪ್ಪಿಸಿದ ಕ್ಷಯರೋಗಿಯ ಬೆನ್ನಿನಲ್ಲಿ ಅರ್ಧಚಂದ್ರಾಕೃತಿಗೆ ಕೊಯ್ದು, ಕಿಬ್ಬರಿಯ ಒಂದೆರಡು ಮೂಳೆಗಳನ್ನು ಮುರಿದು, ಒಳಗೆ ಎಡೆಮಾಡಿಕೊಂಡು, ಶ್ವಾಸಕೋಶವನ್ನು ಸಮೀಪಿಸಿ, ಕ್ಷಯರೋಗಗ್ರಸ್ತ ಭಾಗವನ್ನು ಅಥವಾ ಇಡೀ ಶ್ವಾಸಕೋಶವನ್ನು ಕತ್ತರಿಸಿಹಾಕಿ, ಹೊಲೆದು ಔಷಧೋಪಚಾರದೊಡನೆ ಶುಶ್ರೂಷೆ ಮಾಡುತ್ತಾರೆ. ಒಂದೆರಡು ತಿಂಗಳಿನಲ್ಲಿ ರೋಗಿ ಮಾಮೂಲಿ ಸ್ಥಿತಿಗೆ ಬರುತ್ತಾನೆ.

ಶಸ್ತ್ರಚಿಕಿತ್ಸೆಯ ಕ್ರಮಗಳನ್ನು ಕೇಳಿದ ಮಾತ್ರಕ್ಕೆ ಕೆಲವು ರೋಗಿಗಳು ಭಯದಿಂದ ತತ್ತರಿಸಿಹೋಗುತ್ತಾರೆ; ದಿಢೀರನೆ ಜ್ವರ ಬಂದು ನರಳುತ್ತಾರೆ; ಮನೆಗೆ ಹೋಗಿ ಉಳಿದಷ್ಟು ದಿನ ಬದುಕಲು ಬಯಸುತ್ತಾರೆ. ಅಂತಹ ಹೆದರುಪುಕ್ಕಲರಿಗೆ ಆಪರೇಷನ್ ಮಾಡುವುದಿಲ್ಲ, ಔಷಧಿಗಳಿಂದಲೇ ಸುಧಾರಿಸುತ್ತಾರೆ. ಶ್ವಾಸಕೋಶದ ಭಾಗವನ್ನು ಅಥವಾ ಇಡೀ ಒಂದು ಶ್ವಾಸಕೋಶವನ್ನು ತೆಗೆದುಹಾಕಿದರೂ ಉಳಿದ ಒಂದೇ ಶ್ವಾಸಕೋಶದಿಂದ ಬದುಕುಳಿಯುವುದಕ್ಕೆ ತೊಂದರೆಯಿಲ್ಲ. ಆದರೆ ಎರಡೂ ಶ್ವಾಸಕೋಶಗಳಿಗೆ ರೋಗ ಹರಡಿ ಗಂಭೀರ ಸ್ಥಿತಿ ಮುಟ್ಟಿದರೆ ಅಂಥ ರೋಗಿಯನ್ನು ಉಳಿಸಿಕೊಳ್ಳುವುದು ಕಷ್ಟ.

ದೇಹವಿರುವ ತನಕ ರೋಗವಿರುತ್ತದೆ. ರೋಗವಿರುವ ತನಕ ರಕ್ಷಣೆಗೆ ಹೋರಾಡಬೇಕು. ಮನೆಮಠ, ಆಸ್ತಿಪಾಸ್ತಿಯನ್ನು ರಕ್ಷಿಸಿಕೊಳ್ಳುವಂತೆ, ದೇಹವನ್ನು ರಕ್ಷಿಸಿಕೊಳ್ಳಬೇಕು. ಇದು ಅನಿವಾರ್ಯ. ನೂರಾರು ವರ್ಷಗಳ ಹಿಂದೆ ಕ್ಷಯರೋಗಕ್ಕೆ ಚಿಕಿತ್ಸೆಯಿಲ್ಲದೆ ಜನರು ಸಾಯುತ್ತಿದ್ದರು. ಈಗ ಚಿಕಿತ್ಸೆಯಿದ್ದರೂ ತಿಳುವಳಿಕೆಯಿಲ್ಲದೆ, ಎಚ್ಚರವಹಿಸದೆ ಜನರು ಸಾಯುತ್ತಿದ್ದಾರೆ. ಇದು ತಪ್ಪಬೇಕು.

ಕ್ಷಯರೋಗದ ಬಗೆಗೆ ಅಪಾಯದ, ಅವೈಜ್ಞಾನಿಕವಾದ ಮೂಢನಂಬಿಕೆಗಳು ರೂಢಿಯಲ್ಲಿವೆ. ಇಂಥವು ಜನಪದರಲ್ಲಿ ಉಳಿದವರಿಗಿಂತ ಅಧಿಕವಾಗಿವೆ; ಹೊತ್ತು ಹುಟ್ಟುವುದಕ್ಕೆ ಮೊದಲು ಈಚಲು ಮರ ಅಥವಾ ತೆಂಗಿನ ಮರದಿಂದ ಇಳಿಸಿದ ನೀರಾವನ್ನು ಕುಡಿದರೆ ಕ್ಷಯರೋಗ ಅಥವಾ ಯಾವುದೇ ಮಾರಕರೋಗ ಹುಟ್ಟಿಲ್ಲದಂತೆ ಅಡಗುವುದಂತೆ. ನೀರಾ ಸರ್ವರೋಗ ನಿವಾರಕವಂತೆ. ಇದನ್ನು ಯಾವ ಕಾರಣಕ್ಕೂ ನಂಬಬಾರದು, ಅನುಸರಿಸಬಾರದು. ಯಾವುದೇ ರೀತಿಯ ಮದ್ಯಪಾನ ಮಾಡಿದರೂ ಕ್ಷಯರೋಗಿಗಳಿಗೆ ಅಪಾಯ. ಅನೇಕ ಕಾಯಿಲೆಗಳು ಅಂಟಿಕೊಳ್ಳುವುದಕ್ಕೆ ಮದ್ಯಪಾನವೇ ಮುಖ್ಯ ಕಾರಣವೆಂಬುದನ್ನು ಮರೆಯಬಾರದು.

ಹಲಸಿನ ಹಣ್ಣಿನ ತೊಳೆ ತಿಂದರೆ ಕ್ಷಯರೋಗ ಅಥವಾ ಏಡ್ಸ್ ರೋಗ ವಾಸಿಯಾಗುತ್ತದೆ ಎಂದು ನಂಬುವುದೂ ಉಂಟು. ಇದಕ್ಕೆ ವೈಜ್ಞಾನಿಕವಾದ ಸಮರ್ಥನೆಯಿಲ್ಲ. ಹಣ್ಣು ತಿಂದರೆ ರಕ್ತಪುಷ್ಟಿಯಾಗಬಹುದು. ಅಷ್ಟರಿಂದಲೇ ರೋಗವಂತೂ ವಾಸಿಯಾಗುವುದಿಲ್ಲ. ಅದು ನಿಜವಿದ್ದರೆ ಹಲಸಿನ ಹಣ್ಣು ತಿನ್ನುವವರಿಗೆ ರೋಗ ವಾಸಿಯಾಗಬೇಕಿತ್ತು ಅಥವಾ ರೋಗವೇ ಬರಬಾರದಿತ್ತು.

ಮೈನೆರೆಯದ ಬಾಲಕಿಯೊಡನೆ ಸಂಭೋಗ ಮಾಡಿದರೆ ಕ್ಷಯರೋಗ ವಾಸಿಯಾಗುವುದೆಂಬ ಮೌಢ್ಯವೂ ಇದೆ. ಇದು ಅತ್ಯಂತ ಅಪಾಯದ ಹಾಗೂ ಹೇಯವಾದ ಕೃತ್ಯ. ಯಾರೋ ಕುಹಕಿಗಳು ಹಬ್ಬಿಸಿರುವ ಕಿಂವದಂತಿ ಇದು. ಹೀಗೆ ಮಾಡಿದರೆ ನಿರಪರಾಧಿಯಾದ ಮುಗ್ಧ ಬಾಲಕಿಗೂ ರೋಗ ಅಂಟುತ್ತದೆ; ರೋಗಿ ಮತ್ತಷ್ಟು ಹೈರಾಣಾಗುತ್ತಾನೆ.

ಮಂಡಲದ ಹಾವಿನಿಂದ ಕಚ್ಚಿಸಿಕೊಂಡರೆ ಮಾರಕ ಸ್ವರೂಪದ ಕ್ಷಯರೋಗ ವಾಸಿಯಾಗುವುದೆಂಬ ಅಪದ್ಧವೂ ಚಾಲ್ತಿಯಲ್ಲಿದೆ. ಮಂಡಲದ ಹಾವು ಕಚ್ಚಿದರೆ ವಿಷವೇರಿ, ದೇಹ ಕೊಳೆತು, ರೋಗಿ ಬೇಗ ಸಾಯುತ್ತಾನೆಯೇ ಹೊರತು ದೇವರಾಣೆಗೂ ಕ್ಷಯರೋಗ ವಾಸಿಯಾಗುವುದಿಲ್ಲ. ಜಗತ್ತಿನ ಯಾವ ಜನಾಂಗದಲ್ಲೂ ಇಂಥ ಅಪಾಯದ ಚಿಕಿತ್ಸೆಯಿಲ್ಲ.

ಕ್ಷಯರೋಗ ಬಂದವರು ಮದುವೆ ಮಾಡಿಕೊಳ್ಳುವಂತಿಲ್ಲ, ಅಂಥವರಿಗೆ ಮಕ್ಕಳಾಗುವುದಿಲ್ಲ ಎಂದು ಬೆದರಿಸುವವರೂ ಇದ್ದಾರೆ. ಇದೂ ಕೂಡ ನಿರಾಧಾರವಾದ ನಂಬಿಕೆ. ಕ್ಷಯರೋಗ ಉಲ್ಬಣಗೊಂಡಿರುವಾಗ ಚಿಕಿತ್ಸೆ ಪಡೆಯದೆ ಮದುವೆಯಾಗುವುದು ತಪ್ಪು. ಆದರೆ ಕ್ಷಯರೋಗಕ್ಕೆ ವೈಜ್ಞಾನಿಕವಾಗಿ ಚಿಕಿತ್ಸೆ ಪಡೆದು ಗುಣಮುಖರಾದವರು ಧಾರಾಳವಾಗಿ ಮದುವೆಯಾಗಬಹುದು, ಮಕ್ಕಳನ್ನು ಪಡೆಯಬಹುದು. ಕ್ಷಯರೋಗಕ್ಕೂ ಷಂಡತನಕ್ಕೂ ಯಾವುದೇ ಸಂಬಂಧವಿಲ್ಲ.

ಕ್ಷಯರೋಗಕ್ಕೆ ಚಿಕಿತ್ಸೆ ನಡೆಸಿದರೆ, ಔಷಧಿಯ ಶಕ್ತಿ ಇರುವವರೆಗೆ ಮಾತ್ರ ಕ್ಷಯ ರೋಗಾಣುಗಳು ಮೂರ್ಛೆಬಂದಂತೆ ಮಂಕಾಗಿರುತ್ತವೆ; ಔಷಧಿಧ ಶಕ್ತಿ ಕುಗ್ಗಿದ ಕೂಡಲೆ, ಸೆರೆಯಿಂದ ಬಿಡುಗಡೆ ಹೊಂದಿದ ಕಳ್ಳರಂತೆ, ಮತ್ತೆ ಎಚ್ಚೆತ್ತುಕೊಂಡು ರೋಗವನ್ನು ಮರುಕಳಿಸುತ್ತವೆ ಎಂದು ಅರೆಬರೆ ತಿಳಿವಳಿಕೆಯ ವೈದ್ಯರೇ ರೋಗಿಗಳನ್ನು ದಂಗಾಗಿಸುವುದುಂಟು. ಇಂತಹ ಅಪಕ್ವ ಕೇಳಿಕೆಗಳಿಗೆ

ಕಿವಿಗೊಡಬಾರದು. ಸತ್ತವರು ಎದ್ದು ಬರುವುದು ಕಾಲ್ಪನಿಕ ಜನಪದ ಕಥೆಗಳಲ್ಲಿ ಮಾತ್ರ ಸಾಧ್ಯ; ವಾಸ್ತವದಲ್ಲಿ ಅಲ್ಲ. ತೀಕ್ಷ್ಣವಾದ ಔಷಧಿಗೆ ರೋಗಾಣುಗಳು ಸಾಯುತ್ತವೆ. ಆಕಸ್ಮಿಕವಾಗಿ ರೋಗ ಮರುಕಳಿಸಿದರೆ ಅದಕ್ಕೂ ಚಿಕಿತ್ಸೆಯಿದೆ. ಯಾವುದಕ್ಕೂ ಚಿಕಿತ್ಸೆಯಿಂದ ದೂರವಿರಬಾರದು.

ಜನಪದ ಜೀವನ ಶೈಲಿಯಿಂದ ಕ್ಷಯರೋಗವನ್ನು ತಡೆಗಟ್ಟಬಹುದು ಅಥವಾ ಕಡಮೆ ಮಾಡಬಹುದು. ಸರಳವಾದ, ಶುಚಿಯಾದ ಜೀವನಕ್ಕೆ ಆದ್ಯತೆ ನೀಡಬೇಕು. ಪರಿಶುದ್ಧವಾದ ಗಾಳಿ ಬೆಳಕು ಯಥೇಚ್ಛವಾಗಿರುವ ಮನೆಗಳಲ್ಲಿ ವಾಸಿಸಬೇಕು. ಪ್ರಕೃತಿಯ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಶುದ್ಧ ಗಾಳಿ ದೊರಕುವ ಹೊಲಗದ್ದೆ ತೋಪು ತೋಟ ಬಯಲುಗಳಲ್ಲಿ ತಿರುಗಾಡುವುದು, ವಾಸಿಸುವುದು ಪ್ರಯೋಜನಕಾರಿ. ಮಿತಿಮೀರಿದ ಹಣದಾಸೆಯಿಂದ ದೂರವಿರಬೇಕು. ಅಲ್ಪತೃಪ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಮಾನಸಿಕ ಒತ್ತಡ, ದೈಹಿಕ ದಣಿವಿನ ನಿವಾರಣೆಗೆ ಜನಪದ ಸಂಗೀತ ಕಲೆ ಆಚರಣೆ ಆಟಪಾಟ ಕಥೆ ಹಾಡು ಮನೋರಂಜನೆಗೆ ಸ್ಪಂದಿಸಬೇಕು. ಅಭಿರುಚಿಯಿರುವವರು ಸ್ವತಃ ಭಾಗವಹಿಸಬೇಕು. ಸೋಗಿನ ಮನೋರಂಜನೆಯ ದುರ್ವ್ಯಸನಗಳಿಂದ ದೂರವಿರಬೇಕು. ಯಾಂತ್ರಿಕ ಜೀವನ, ದುಡಿಮೆ, ಚಿಂತೆ, ಧಾವಂತಗಳನ್ನು ಕಡಮೆ ಮಾಡಿಕೊಳ್ಳಬೇಕು. ಯಾವುದನ್ನೂ ದುರಾಸೆಯಿಂದ ಮುಕ್ಕಬಾರದು. ಸರಳವಾದ ಬದುಕನ್ನು ಸಮಾಧಾನಚಿತ್ತದಿಂದ ಅನುಭವಿಸಬೇಕು. ಮಾನಸಿಕ ಸ್ವಾಸ್ಥ್ಯ, ನಿಯಮಿತ ವ್ಯಾಯಾಮ, ಕ್ರಮಬದ್ಧ ಜೀವನ ಮುಖ್ಯವಾಗಿರಬೇಕು.

ಜನಪದ ಸಾಂಸ್ಕೃತಿಕ ಬದುಕನ್ನು ಅಳವಡಿಸಿಕೊಂಡರೆ ಹೆಚ್ಚು ಆರೋಗ್ಯವಂತರಾಗಿರಲು ಸಾಧ್ಯ. ಪೌಷ್ಟಿಕವಾದ ಆಹಾರ, ಪರಿಶುದ್ಧವಾದ ವಿಹಾರವನ್ನು ಒಳಗೊಂಡ ಜನಪದ ಶೈಲಿಯಿಂದ ಕ್ಷಯರೋಗವನ್ನು ಸ್ವಲ್ಪಮಟ್ಟಿಗೆ ಶಮನಗೊಳಿಸಬಹುದು. ಆದರೆ ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ. ಅದಕ್ಕೆ ಆಧುನಿಕ ಚಿಕಿತ್ಸಾ ವಿಧಾನವೇ ಸರಿಯಾದ ಮದ್ದು. ಕ್ಷಯರೋಗವಾಗಲೀ ಇತರ ಯಾವುದೇ ರೋಗವಾಗಲೀ ಆಕ್ರಮಣ ಮಾಡದಂತೆ ಬದುಕಬೇಕಾದರೆ ಜನಪದ ಜೀವನ ಶೈಲಿ ಸಹಕಾರಿಯಾಗುತ್ತದೆ ಎಂಬುದನ್ನು ಮರೆಯಬಾರದು.

ಮನುಷ್ಯ ಸೃಷ್ಟಿ ಪ್ರಕೃತಿಯ ಕೊಡುಗೆ. ಮನುಷ್ಯನಿಗೆ ಬರುವ ಕಾಯಿಲೆಯೂ ಪ್ರಕೃತಿಯ ಕೊಡುಗೆ. ಅಂದರೆ ಪ್ರಕೃತಿಯಲ್ಲಿ ಜೀವಸೃಷ್ಟಿಯೂ ಉಂಟು; ಅದರ

ನಾಶವೂ ಉಂಟು.' ಕಾಯಿಲೆ ರೂಪದ ನಾಶವನ್ನು ತಡೆಗಟ್ಟುವುದು ಅಥವಾ ಕಡಮೆ ಮಾಡುವುದು ಮನುಷ್ಯ ಬುದ್ಧಿಗೆ ಸವಾಲು. ಪ್ರಾಕೃತಿಕ ವಿಧಾನದಿಂದಲೇ ಪ್ರಕೃತಿಯಿಂದಾಗುವ ನಾಶವನ್ನು ತಡೆಯಬೇಕು. ಅದು ಜಾನಪದ ಜೀವನ ವಿಧಾನದಿಂದಾಗಬಹುದು ಅಥವಾ ಶಿಷ್ಟ ಜೀವನ ವಿಧಾನದಿಂದಾಗಬಹುದು. ಇದರಲ್ಲಿ ಜಾನಪದದ ಪಾತ್ರವೂ ಇದೆಯೆಂಬುದು ಗಮನಿಸಬೇಕಾದ ವಿಷಯ.

ಜನಪದರ ಪ್ರಾಚೀನ ಜೀವನಶೈಲಿ, ಬದಲಾದ ಪರಿಸ್ಥಿತಿ, ಜನಪದರಲ್ಲಿ ಕ್ಷಯರೋಗದ ಪ್ರಮಾಣ, ಅದು ಹರಡುವ ಸಂದರ್ಭ, ರೋಗಕ್ಕೆ ತುತ್ತಾಗುವ ಜನರ ಆರ್ಥಿಕ ಸಾಮಾಜಿಕ ಮಾಹಿತಿ ಮೊದಲಾದವುಗಳನ್ನು ಕ್ಷೇತ್ರಕಾರ್ಯಕ್ಕೆ ಒಳಪಡಿಸಿದರೆ, ಕ್ಷಯರೋಗದ ಏರಿಕೆಯಲ್ಲಿ ಜನಪದ ಜೀವನ ಶೈಲಿಯ ಕೊರತೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಈ ಮಾನದಂಡವನ್ನು ಪಟ್ಟಣಿಗರಿಗೂ ಅನ್ವಯಿಸಿ, ಫಲಿತಾಂಶವನ್ನು ಕ್ರೋಢೀಕರಿಸಿ, ನಿವಾರಣೆಗೆ ಪ್ರಯತ್ನಿಸಿದರೆ, ಇನ್ನಷ್ಟು ಸಾಧನೆಯನ್ನು ಕಾಣಬಹುದು.

ಜನಪದರಲ್ಲಾಗಲೀ ಶಿಷ್ಟಪದರಲ್ಲಾಗಲೀ ಕ್ಷಯರೋಗದ ಬಗೆಗೆ ಇನ್ನೂ ಜನಜಾಗೃತಿಯ ಅವಶ್ಯಕತೆಯಿದೆ. ಇದಕ್ಕೆ ಜನಪದ ಕಲೆಗಳನ್ನು ಯಶಸ್ವಿಯಾಗಿ ಬಳಸಿಕೊಳ್ಳಬಹುದು. ಜನಸಮೂಹ ಸೇರುವ ಊರೊಟ್ಟಿನ ಸ್ಥಳ, ಸಾರ್ವಜನಿಕ ನಲ್ಲಿಗಳ ಎಡೆ, ಸಂತೆಮಾಳ, ಜಾತ್ರೆ, ಪಂಚಾಯಿತಿ ಕಟ್ಟೆ, ನ್ಯಾಯಬೆಲೆ ಅಂಗಡಿ, ಬಸ್ ನಿಲ್ದಾಣ, ರೈಲುನಿಲ್ದಾಣಗಳಲ್ಲಿ; ಸಮೂಹ ಮಾಧ್ಯಮಗಳಲ್ಲಿ ; ಹರಿಕಥೆ, ಶಿವಕಥೆ, ಸೂತ್ರದ ಗೊಂಬೆ, ತೊಗಲುಗೊಂಬೆ, ಯಕ್ಷಗಾನ ನಾಟಕಗಳ ಮೂಲಕ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಯಾವುದೇ ಪ್ರಚಾರ ಸಾಧನಗಳಿಗಿಂತ ಜನಪದ ಕಲಾಮಾಧ್ಯಮಗಳು ಅರ್ಥಪೂರ್ಣವಾಗಿರುತ್ತವೆ. ಭೂಮಿಯ ಮೇಲೆ ಕ್ಷಯರೋಗ ಮೂಲೋತ್ಪಾಟನೆಯಾಗುವವರೆಗೆ ಜಾಗೃತಿ ಚಟುವಟಿಕೆಗಳು ನಿಲ್ಲಬಾರದು. ಮನುಕುಲಕ್ಕೆ ಮಾರಕವಾಗಿರುವ ಕ್ಷಯರೋಗ ನಿರ್ಮೂಲನ ವಿಧಾನಕ್ಕೆ, ಜನಜಾಗೃತಿಗೆ, ಜಾನಪದ ಹಿಂದೆಂದಿಗಿಂತ ಇಂದು ಹೆಚ್ಚು ಪ್ರಸ್ತುತವಾಗಿದೆ.

* * *

# ೮. ಹೃದ್ರೋಗ ಮತ್ತು ಜಾನಪದ

**ಮೂಲ : ರಿಚರ್ಡ್ ಎಂ. ಡಾರ್ಸನ್**

**ಅನುವಾದ : ಡಾ । ಕೆ. ಆರ್. ಸಂಧ್ಯಾರೆಡ್ಡಿ**

**ಪಾರಂಪರಿಕ ಜನಪದ ಜೀವನ ಶೈಲಿ ಮತ್ತು ಜಾನಪದೀಯ ಪರಿಕರಗಳು ಒತ್ತಡ ಮತ್ತು ಆತಂಕಗಳಿಂದ ವ್ಯಕ್ತಿಗೆ ಮಾನಸಿಕ ಬಿಡುಗಡೆಯನ್ನು ಒದಗಿಸುತ್ತವೆಯಲ್ಲದೆ, ಹೃದ್ರೋಗದಂತಹ ಭೀಕರ ರೋಗವನ್ನು ನಿವಾರಿಸಬಲ್ಲುದೆಂಬ ಆಶಯವನ್ನು ಲೇಖನವು ಅಭಿವ್ಯಕ್ತಿಸುತ್ತದೆ.**

**–ಸಂ.**

1972ರ ನವಂಬರ್ 18ನೇ ತಾರೀಖು, ಶನಿವಾರ ಬೆಳಿಗ್ಗೆ ಅಸ್ಟಿನ್‌ನ ಟೆಕ್ಸಾಸ್ ವಿಶ್ವಿದ್ಯಾಲಯದ ಜೋ–ಸಿ–ಥಾಂಸನ್ ಸಮಾವೇಶ ಕಟ್ಟಡದಲ್ಲಿ ನಡೆಯುತ್ತಿದ್ದ ಆ ದಿನದ ಅಮೆರಿಕನ್ ಫೋಕ್ಲೋರ್ ಸೊಸೈಟಿ ಕಾರ್ಯಕ್ರಮದಲ್ಲಿ ಭಾಗವಹಿಸಲು ನಾನು ಉಪಹಾರ ಮುಗಿಸಿ ಹೊರಡುವ ತರಾತುರಿಯಲ್ಲಿದ್ದೆ. ಮೆಟ್ಟಿಲು ಹತ್ತುತ್ತಿರುವಾಗ ವಿಚಿತ್ರವಾದ, ಈ ಮೊದಲೆಂದೂ ಅನುಭವಿಸದಿದ್ದಂತಹ ಒಂದು ವೇದನೆಯ ಅನುಭವವಾಯಿತು. ಈ ವೇದನೆಯನ್ನು ಸರಿಯಾಗಿ ವಿವರಿಸುವುದಕ್ಕೆ "ಆನೆಯೊಂದು ಎದೆಯ ಮೇಲೆ ಕಾಲಿಟ್ಟು ತುಳಿದಂತೆ" ಎಂಬುದು ಸರಿಯಾದ ಪದ ಎಂದು ನನಗೆ ಆಮೇಲೆ ಹೊಳೆಯಿತು. ಹೋಟೆಲ್ ಕೋಣೆಗೆ ಹಿಂದಿರುಗಿಬಿಡೋಣ ಎಂದು, ನಾನು ಅತ್ಯಂತ ನಿಃಶಕ್ತಿಯಿಂದ ನನ್ನ ಹೆಜ್ಜೆಗಳನ್ನು ಹಿಂದಿರುಗಿಸಿದೆ. ಜನರ ಗುಂಪು ಎದುರಿನಿಂದ ಬರುತ್ತಿತ್ತು. ಯಾರು ಯಾರೋ ನಿಂತು ನನ್ನೊಂದಿಗೆ ಮಾತಾಡತೊಡಗಿದರು. ನನಗೆ ಏನಾಗುತ್ತಿದೆ ಎಂಬುದನ್ನು ಅರಿಯದಿದ್ದ ಫ್ರಾನ್ಸಿಸ್ ಗಿಲ್ ಮೋರ್ ನಮ್ಮಿಬ್ಬರಿಗೂ ಸಮಾನ ಆಸಕ್ತಿಯ ವಿಷಯವೊಂದರ ಬಗ್ಗೆ ಚರ್ಚಿಸುತ್ತಾ ನನ್ನೊಂದಿಗೇ ಹಿಂದಕ್ಕೆ ಹೆಜ್ಜೆಹಾಕಿದರು. ರೂಮು ಸೇರುತ್ತಿದ್ದಂತೆ ಹಾಸಿಗೆಯ ಮೇಲೆ ಕುಸಿದೆ. ನಾಲ್ಕು ಗಂಟೆಯ ಕಾಲ ಹಾಗೇ ಮಲಗಿದ್ದೆ. ಎಚ್ಚರವಾದಾಗ ನೋವು ಕಾಣೆಯಾಗಿತ್ತು.

ಹಿಂದಿನ ರಾತ್ರಿ ನಾನು ಗೋಲ್ಡ್ ಸ್ಟೀನ್ ವಿಲ್ಲಸ್ ಓಪನ್ ಹೌಸ್‌ನಲ್ಲಿ ಜಾನಪದದ ಪದವೀ ವಿದ್ಯಾರ್ಥಿಗಳೊಂದಿಗೆ ಮಾತಾಡುತ್ತ ಬೆಳಗಿನ ಜಾವ 3 ಗಂಟೆಯವರೆಗೆ ಎದ್ದಿದ್ದೆ. ಆಮೇಲೆ ಮಲಗಿ ಬೆಳಿಗ್ಗೆ ಎದ್ದದ್ದು 7 ಗಂಟೆಗೆ.

ಆದ್ದರಿಂದ ಇದು ತೀರಾ ಆಯಾಸದ ಪರಿಣಾಮವಿರಬೇಕು ಎಂದು ಅಲಕ್ಷಿಸಿದೆ. ಮಾರನೆಯ ಬೆಳಿಗ್ಗೆ ಫ್ರಾಂಕ್ ಡಿಕಾರೊ ಅಧ್ಯಕ್ಷತೆಯಲ್ಲಿ 'ಜಾನಪದದ ಇತಿಹಾಸ' ಎಂಬ ಗೋಷ್ಠಿಯಲ್ಲಿ ಪ್ಯಾನಲ್ ಸದಸ್ಯನಾಗಿ ಕುಳಿತಿದ್ದಾಗ ಎದೆಯಲ್ಲಿ ಮತ್ತೊಮ್ಮೆ ಚಳುಕಿದಂತಾಯ್ತು. ಎದೆಯನ್ನು ಕೈಯಿಂದ ಗಟ್ಟಿಯಾಗಿ ಒತ್ತಿ ಹಿಡಿದುಕೊಳ್ಳುವಂತಾಯಿತು. ನನಗೆ ಮಾತಾಡಲು ಸಾಧ್ಯವಾಗುವುದೋ ಇಲ್ಲವೋ ಎಂಬ ಅನುಮಾನ ಮೂಡಿತು. ಮುಂದಿನ ಸಾಲಿನಲ್ಲಿ ಕುಳಿತಿದ್ದ ಕಾರ್ಮನ್ಗಿಯ್ ನನ್ನ ಸ್ಥಿತಿಯನ್ನು ನೋಡಿ ಏನು ಎನ್ನುವಂತೆ ಮುಖಮಾಡಿದರು. ಈ ಸಲ ಕೆಲವು ಕ್ಷಣಗಳ ನಂತರ ನೋವು ಮಾಯವಾಯಿತು. ನಾನಾಡಬೇಕಿದ್ದ ಮಾತುಗಳನ್ನು ಹೇಳಿ ಮುಗಿಸಿದೆ. ಇದು ಬಹುಶಃ ನಾನು ಅಧಿವೇಶನದಲ್ಲಿ ಕುಳಿತಿದ್ದ ಕಾರಣಕ್ಕಿರಬಹುದು ಅಥವಾ ನನ್ನ ವಿಲಕ್ಷಣ ಅನ್ನನಾಳಕ್ಕೆ ಸಂಬಂಧಿಸಿದ ಯಾವುದೋ ವ್ಯತ್ಯಾಸವಿರಬಹುದು ಎಂದುಕೊಂಡು ಸುಮ್ಮನಾದೆ. ಡಿಸೆಂಬರ್ 6 ರಂದು ಈ ನೋವು ಮತ್ತೆ ಮರುಕಳಿಸಿತು. ಆ ದಿನ ನಾನು ಹೊಸ ಪ್ರಕಟಣಾ ಸಂಸ್ಥೆಯೊಂದರ ನಿರ್ದೇಶಕರ ಮಂಡಳಿಯ ಸಭೆಗಾಗಿ ಇಂಡಿಯಾನಾ ಪೋಲಿಸ್ಗೆ ಹೋಗುತ್ತ ಡ್ರೈವಿಂಗ್‌ನ ಕೊನೆಯ ಹಂತದಲ್ಲಿದ್ದಾಗ ಹೀಗಾಯಿತು. ಒಂದು ಲೋಟ ಬಿಸಿನೀರು ಕುಡಿದು ನಿಭಾಯಿಸಿದೆ. ಸಭೆ ಮುಗಿಯಿತು.

ಕ್ರಿಸ್‌ಮಸ್ ರಜೆ ಅವಧಿಯಲ್ಲಿ ನಾನು ಗ್ಲೋರಿಯಾ ಜೊತೆ ನಮ್ಮ ಮನೆಯ ಸುತ್ತ ಅಡ್ಡಾಡುತ್ತಿದ್ದಾಗ ಮತ್ತೊಮ್ಮೆ ಹೀಗೇ ಆಯಿತು. ಆದರೆ ಡಿಸೆಂಬರ್ 26 ರಂದು ಬಹುದೀರ್ಘ ಕಾಲದವರೆಗೆ, ತುಂಬ ಯಾತನಾಮಯವಾದ ಇಂಥ ನೋವು ಬಂದಾಗ ಆಸ್ಪತ್ರೆಗೆ ಹೋಗುವ ಬಗ್ಗೆ ಯೋಚಿಸಲೇಬೇಕಾಯಿತು. ಆದರೂ ಬಿಸಿನೀರಿನ ಶವರ್ ಕೆಳಗೆ ಸ್ವಲ್ಪ ಕಾಲ ನಿಂತ ಮೇಲೆ ಈ ನೋವು ಕಡಿಮೆಯಾಯಿತು. ನನ್ನ ಕುಟುಂಬ ವೈದ್ಯ ರಜೆಯ ಮೇಲೆ ಹೋಗಿದ್ದರು. ಎದೆನೋವಿನ ಬಗ್ಗೆ ಅಲಕ್ಷ್ಯ ಸಲ್ಲದು ಎಂದು ಅವರ ನರ್ಸ್ ಎಚ್ಚರಿಸಿದಳು. ಇದಾದ ಎರಡು ದಿನಗಳ ಮೇಲೆ ಪುನಃ ಏಳನೇ ಸಲಕ್ಕೆ ಅಂತಹದೇ ನೋವು ಬಂತು. ಈ ಸಲದ ನೋವು ಎಷ್ಟು ದೀರ್ಘ ಹಾಗು ತೀವ್ರವಾಗಿತ್ತೆಂದರೆ ನನ್ನನ್ನು ಗ್ಲೋರಿಯಾ ಬ್ಲೂಮಿಂಗ್‌ಟನ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಾರ್ಡಿಗೆ ಕರೆದೊಯ್ದಳು. ಅಲ್ಲಿ ಇಸಿಜಿ ಮಾಡಿದರು. ಕೆಲಸದ ಮೇಲಿದ್ದ ವೈದ್ಯರು ಇದನ್ನು ಆ್ಯಂಜಿನಾ ಎಂದು ಗುರುತಿಸಿ ಕೆಲವು ದಿನಗಳ ಕಾಲ ನಿಗಾ ಪರೀಕ್ಷೆಗೆಂದು ಆಸ್ಪತ್ರೆಗೆ ದಾಖಲು

ಮಾಡಿಕೊಂಡರು. ಆದರೆ ನನ್ನ ಆಸ್ಪತ್ರೆ ವಾಸ್ತವ್ಯ 1973 ರ ಫೆಬ್ರವರಿ 3ರವರೆಗೂ ವ್ಯಾಪಿಸಿತು. ಎದೆಯ ತಜ್ಞ ಡಾ.ಗ್ರೆನ್ ಲಿ ನನ್ನ ಪರೀಕ್ಷೆ ಕೈಗೊಂಡರು. ರಕ್ತದ ತೆಳುದಾರಿಗಳು ಮತ್ತು ನಿರೋಧಕಗಳು ಆ್ಯಂಜಿನಾವನ್ನು ಕಡಿಮೆ ಮಾಡುವುದಾಗಿ ತಿಳಿಸಿದ ಆತ ಇನ್ನು ಕೆಲವೇ ದಿನಗಳಲ್ಲಿ ನೀವು ಮನೆಗೆ ಹೋಗಿ ಆಮ್‌ಹರ್ಸ್ಟ್‌ಗೆ ಹೋಗುವ ಸಿದ್ಧತೆ ನಡೆಸಬಹುದು ಎಂದರು.

ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿ ಹೋಗಬೇಕಿದ್ದ 5ನೇ ದಿನ ಎದೆನೋವು ಮತ್ತೆ ಬಂತು. ಮೊದಲ ಬಾರಿಗೆ ನನಗೆ ನೋವು ನಿವಾರಕ ಚುಚ್ಚುಮದ್ದು ಕೊಟ್ಟರು. ಮಾರನೇ ಬೆಳಿಗ್ಗೆ ಪುನಃ ನೋವು ಬಂತು. ಇದು ಒಂಬತ್ತನೇ ಸಲ. ಆಗ ನರ್ಸು ನನ್ನ ನಾಲಗೆಯ ಕೆಳಗೆ ನೈಟ್ರೋಗ್ಲಿಸರಿನ್ ಮಾತ್ರೆ ಇಟ್ಟಳು. ಅದು ಕೇವಲ ಐದು ಸೆಕೆಂಡುಗಳೊಳಗೆ ನನ್ನ ಆ್ಯಂಜಿನಾವನ್ನು ಹೊಡೆದೋಡಿಸಿತು. ಈ ಹಂತದಲ್ಲಿ ಡಾ. ಲೀ ಅಭಿಪ್ರಾಯ ಬದಲಾಯಿತು. ಹೀಗೆ ವಿಶ್ರಾಂತಿಯಲ್ಲಿದ್ದಾಗಲೇ ನೋವು ಬರುವುದೆಂದರೆ ಅದು ತೀರಾ ಗಂಭೀರ ವಿಷಯ ಎಂದು ತಿಳಿಸಿದ ಅವರು ಕ್ಲೀವ್ ಲ್ಯಾಂಡ್ ಕ್ಲಿನಿಕ್ಗೆ ಹೋಗಿ ತೆರೆದ ಹೃದಯದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದೂ, ಕರೊನರಿಗಳ ಅಡಚಣೆಯ ಭಾಗಗಳನ್ನು ತಪ್ಪಿಸುವುದಕ್ಕಾಗಿ ಕಾಲಿನಲ್ಲಿರುವ ಧಮನಿಗಳನ್ನು ತೆಗೆದು ಹೃದಯಕ್ಕೆ ಜೋಡಿಸುತ್ತಾರೆಂದೂ ತಿಳಿಸಿದರು. ಹೃದಯಾಘಾತ ಪೂರ್ವದ "Acute Coronary inefficiency" ಎಂಬುದಾಗಿ ಅವರು ನನ್ನ ರೋಗವನ್ನು ಗುರುತಿಸಿದ್ದರು. ಹೀಗಾಗಿ ಇಲ್ಲಿ ಹೃದಯವು ಒತ್ತಡವನ್ನು ತೋರಿಸುತ್ತಿತ್ತೇ ಹೊರತು ಹಾನಿಯಾಗಿರಲಿಲ್ಲ. ಏರ್ ಆ್ಯಂಬುಲೆನ್ಸ್ ಎಂದು ಕರೆಯಲಾಗುವ ವಿಮಾನದಲ್ಲಿ ನನ್ನನ್ನು ಗ್ಲೋರಿಯಾಳನ್ನು ಕ್ಲೀವ್ ಲ್ಯಾಂಡ್ಗೆ ಕಳಿಸುವ ಏರ್ಪಾಡನ್ನು ಡಾ.ಲೀ ಅವರೇ ಮಾಡಿದರು.

ಜನವರಿ 5ನೇ ತಾರೀಖು. ಹೊಲಸಿನಿಂದ ನಾರುವ ಕೊಲೆಪಾತಕಿಗಳಿಗೆ ಹೆಸರಾದ ಕ್ಲೀವ್ ಲ್ಯಾಂಡ್ ಪಟ್ಟಣದ ಕೇಂದ್ರಭಾಗದಲ್ಲಿ ನೆಲೆಸಿದ್ದ ಸುಪ್ರಸಿದ್ಧ ಕ್ಲೀವ್ ಲ್ಯಾಂಡ್ ಕ್ಲಿನಿಕ್ ಅನ್ನು ನಾನು ಪ್ರವೇಶಿಸಿದೆ. ಮೊದಲವಾರದ ಅಲ್ಲಿನ ಅನುಭವಗಳನ್ನು ಕುರಿತಂತೆ ನನ್ನ ಜಾನಪದ ಅಧ್ಯಾಪಕವೃಂದ, ವಿದ್ಯಾರ್ಥಿಗಳು, ವಿಶ್ವವಿದ್ಯಾಲಯದ ಆಡಳಿತಗಾರರು, ಸಹೋದ್ಯೋಗಿಗಳು, ಹಲವಾರು ಸ್ನೇಹಿತರು,

ಹೀಗೆ ಎಲ್ಲರನ್ನೂ ಒಟ್ಟಾಗಿ ಉದ್ದೇಶಿಸಿ ಜನವರಿ 13 ರಂದು ಒಂದು ಪತ್ರ ಬರೆದೆ. ಅದು ಹೀಗಿದೆ :

ಗೆ,

ಫ್ಯಾಕಲ್ಟಿ ಅಂಡ್ ಸ್ಟೂಡೆಂಟ್ ಆಫ್
ದಿ ಫೋಕ್‌ಲೋರ್ ಇನ್‌ಸ್ಟಿಟ್ಯೂಟ್,
ಇಂಡಿಯಾನ ಯೂನಿವರ್ಸಿಟಿ

ಇಂದ,

ರಿಚರ್ಡ್ ಎಂ. ಡಾರ್ಸನ್
ಸ್ಥಳ : ಕ್ಲೀವ್ ಲ್ಯಾಂಡ್ ಕ್ಲಿನಿಕ್ ಆಸ್ಪತ್ರೆ
ದಿ : ಜನವರಿ 13, 1973

ಪ್ರೀತಿಯ ಎಲ್ಲರಿಗೂ,

ನಿಮ್ಮೆಲ್ಲರ ಶುಭ ಹಾರೈಕೆಗಳಿಗಾಗಿ ಧನ್ಯವಾದಗಳು. ಕ್ಲೀವ್ ಲ್ಯಾಂಡ್ ಕ್ಲಿನಿಕ್ ಅದ್ಭುತವಾಗಿದೆ. ಇಲ್ಲಿ 37 ರೋಗಗಳಿಗೆ ಸಂಬಂಧಿಸಿದ ಸೂಪರ್ ಸ್ಪೆಶಲಿಸ್ಟಗಳಿದ್ದಾರೆ. ನಿಮ್ಮನ್ನು ಈ ಕೊನೆಯಿಂದ ಆ ಕೊನೆಯವರೆಗೆ ಸಂಪೂರ್ಣ ತಪಾಸಣೆ ಮಾಡಿಹಾಕುತ್ತಾರೆ. ನನ್ನ ಒಂಬತ್ತು ರಕ್ತನಾಳಗಳನ್ನು ಪರೀಕ್ಷಿಸಿದ ನಂತರ ಹೃದ್ರೋಗ ತಜ್ಞರ ಒಂದು ತಂಡ (ಈ ವೈದ್ಯರೆಲ್ಲ ಸದಾ ಗುಂಪುಗುಂಪಾಗಿಯೇ ಇರುತ್ತಾರೆ. ಮುಖ್ಯಸ್ಥ ಮತ್ತು ಆತನ ಪರಿವಾರ) ನನ್ನ ಕೋಣೆಗೆ ಬಂತು. ನಾನು ಒಂದಿಷ್ಟು ಧೈರ್ಯಗೆಡದೆ ಅವರನ್ನು ಎದುರಿಸಿದೆ. ತಂಡದ ನಾಯಕ (ಜಗತ್ಪ್ರಸಿದ್ಧ ರೋಗನಿರ್ಣಯ ತಜ್ಞ) ನನ್ನನ್ನು ಪ್ರಶ್ನಿಸಿದ : "ಪ್ರೊಫೆಸರ್! ನಿಮಗೆ ಯಾವಾಗಲಾದರೂ ಸಿಫಿಲಿಸ್ ಆಗಿತ್ತೆ? ನಿಮ್ಮ ಸೆರಾಲಜಿ ಪರೀಕ್ಷೆ ಪಾಸಿಟಿವ್ ತೋರಿಸುತ್ತಿದೆ." ಇಂಥದ್ದನ್ನು ನಾನು ಖಂಡಿತಾ ನಿರೀಕ್ಷಿಸಿರಲಿಲ್ಲ! ನನ್ನ ಮುಖವೆಲ್ಲ ಕೆಂಪಾಯಿತು. ನನ್ನ ಸದ್ಗುಣಗಳ ಪಟ್ಟಿಯನ್ನು ಅವರ ಮುಂದಿಟ್ಟು "ಸಿಗರೇಟು ಸೇದುವುದಿಲ್ಲ, ಮದ್ಯಪಾನ ಮಾಡುವುದಿಲ್ಲ, ಕಾಫಿ ಟೀ ಯಾವುದೂ ಇಲ್ಲ. ಇನ್ನು ಅಂಥ ಇಂಥ ಚಟವಂತೂ ಇಲ್ಲವೇ ಇಲ್ಲ" ಎಂದೆ. ಒಟ್ಟಿನಲ್ಲಿ ಡಾಕ್ಟರು ಕೇಳಿದ ಇಂಥ ಪ್ರಶ್ನೆಯಿಂದ ನನ್ನ ರಕ್ತದೊತ್ತಡ ಎಷ್ಟು ಹೆಚ್ಚಾಯಿತೆಂದರೆ ಮಾರನೇ ದಿನ ನಡೆಯಬೇಕಾಗಿದ್ದ cardiac catheterization ಗೆ ಅದರಿಂದ

ತೊಂದರೆಯಾಗಬಹುದೆಂದು ಅವರು ಎಚ್ಚರಿಸಿದರು. ಸೆರಾಲಜಿ ಟೆಸ್ಟ್ ಅನ್ನು ಮತ್ತೆ ಚೆಕ್ ಮಾಡುವುದಾಗಿ ಮಾತುಕೊಟ್ಟರು.

ಮಾರನೇ ದಿನ ನನ್ನನ್ನು catheterization ಕೋಣೆಗೆ ಇಳಿಸಿದರು. ಕಾರ್ಡಿಯಾಸ್ಕೋಪ್ ಕೆಳಗಿದ್ದ ತಿರುಗು ಮೇಜಿಗೆ ಬಿಗಿದು ಕಟ್ಟಿದರು. ಬಲತೋಳು ಚಾಚಿಸಿದರು. ಆ ತೋಳಿಗೆ ಧಮನಿಗಳಲ್ಲೆಲ್ಲ ಪರಿಚಲಿಸುವ ನೀಲಿ ಬಣ್ಣದ ದ್ರವವನ್ನು ಚುಚ್ಚಿದರು. ನನ್ನನ್ನು ತಿರುಚಾಡಿ ಆ ಬಣ್ಣವು ಸಂಚರಿಸುವ ಮಾರ್ಗದ ಫೋಟೋ ಹಿಡಿದರು. ಕಾರ್ಡಿಯಾಲಜಿಸ್ಟ್ ಗಳು ಕೊಡುವ 'ಔಷಧೋಪಚಾರ ಮಾಡಿ ಮನೆಗೆ ಕಳಿಸಿ', 'ಶಸ್ತ್ರ ಚಿಕಿತ್ಸೆ ಸದ್ಯಕ್ಕೆ ಬೇಡ', 'ತಕ್ಷಣವೇ ಶಸ್ತ್ರ ಚಿಕಿತ್ಸೆ' ಅಥವಾ 'ಶವದ ಮನೆಗೆ ಸಾಗಿಸಿ', – ಮುಂತಾದ ತೀರ್ಮಾನಗಳಿಗೆ ಈ ಫೋಟೋ ಫಿಲ್ಮೇ ಆಧಾರ. "The dye is cast" ಎಂಬ ನಾಣ್ಣುಡಿ ಈ ಮೂಲದಿಂದಲೇ ಹುಟ್ಟಿರಬೇಕು (ಇಲ್ಲಿ ಈ ಸಾಂಪ್ರದಾಯಿಕ ನಾಣ್ಣುಡಿಯನ್ನು ಡಾರ್ಸನ್ ಶ್ಲೇಷಾರ್ಥದಲ್ಲಿ ಬಳಸಿದ್ದಾರೆ. ಇದರ ಅರ್ಥವೇನೆಂದರೆ ಕೆಲಸ ಶುರುವಾಗಿದೆ. ಇನ್ನು ಅದನ್ನು ತಡೆಯಲು ಸಾಧ್ಯವಿಲ್ಲ ಎಂದು.) ನನ್ನನ್ನು ಹೀಗೇ ಅವರು ತಿರುಚಾಡುತ್ತಾ ಇದ್ದ ಒಂದು ಹಂತದಲ್ಲಿ ನನ್ನ ಮುಖ ದೊಡ್ಡ ಡಾಕ್ಟರ ಕಿವಿಗೆ ತೀರಾ ಸಮೀಪ ಬಂದಿತು. ಇಂಥ ಪ್ರಸಿದ್ಧ ವೈದ್ಯರ ಗಮನ ನಮ್ಮತ್ತ ತಿರುಗುದೇ ಬಹಳ ಅಪರೂಪವಾದ್ದರಿಂದ ಈ ಸದವಕಾಶವನ್ನು ಬಿಡಬಾರದೆಂದುಕೊಂಡ ನಾನು ಅವರ ಕಿವಿಯಲ್ಲಿ ಮೆಲ್ಲಗೆ ಕೇಳಿದೆ "ಡಾಕ್ಟರೆ, ನನ್ನಂಥ ಪರಿಶುದ್ಧ ಅಚ್ಚ ಅಮೆರಿಕನ್ ಮಾದರಿಯಾದ ನನಗೆ, ನಮ್ಮ ಫೋಕ್‌ಲೋರ್ ಇನ್‌ಸ್ಟಿಟ್ಯೂಟಿನ ವಿದ್ಯಾರ್ಥಿಗಳಿಗೆಲ್ಲ ಆದರ್ಶಸ್ಫೂರ್ತಿಯಾಗಿರುವ ನನ್ನಂಥವನಿಗೆ ವಿ.ಡಿ. ಇದೆ ಎಂದರೆ ನಂಬುವ ಮಾತೆ?"

ಈ ಪ್ರಶ್ನೆಗೆ ಉತ್ತರವನ್ನು ಅವರು ಮಾರನೇ ದಿನ ನಾನು ಮತ್ತು ಗ್ಲೋರಿಯಾ catheterising ಕೋಣೆಯ ಹೊರಗಿದ್ದ ಅವರ ಆಫೀಸು ಕೋಣೆಯಲ್ಲಿ ಕುಳಿತಿದ್ದಾಗ ಕೊಟ್ಟರು. ಏನೊಂದೂ ಉದ್ವೇಗವಿಲ್ಲದ ತಣ್ಣನೆ ದನಿಯಲ್ಲಿ "ಆ ರಿಪೋರ್ಟ್ ಫಾಲ್ಸ್ ಪಾಸಿಟಿವ್" ಎಂದರು. ನಿಮಗೆ ವಿ.ಡಿ. ಯಿಲ್ಲ ಎಂದು ಹೇಳುತ್ತಾ ಮೇಜಿನ ಮೇಲೆ ಏನೇನೋ ಚಾರ್ಟುಗಳನ್ನು ಹರಡಿದರು. ( ವೈದ್ಯನ ಹೆಸರು ಡಾ. ರಚ್‌ವಿ, ಅತ್ಯಂತ ಸ್ಫುರದ್ರೂಪಿ, ಹೊಳೆವ ಕಣ್ಣಿನ ಮೆಡಿಟರೇನಿಯನ್) ಮಾತು ಮುಂದುವರೆಸುತ್ತಾ – ಆದರೂ ನಿಮಗೆ ಕೆಲವೊಂದು ತೊಂದರೆಗಳಿವೆ. ನಿಮ್ಮ

ಎಲ್ಲ ಮೂರು ಕರೊನರಿ ಆರ್ಟರಿಗಳಿಗೆ ಸೌಮ್ಯರೂಪದ ಡಯಾಬಿಟಿಸ್ ಇದೆ. ಅತಿಯಾದ ಕೊಲೆಸ್ಟರಾಲ್, ಅತಿಯಾದ ಯೂರಿಕ್ ಆ್ಯಸಿಡ್, ಅತಿಯಾದ ಬ್ಲಡ್ ಶುಗರ್, ಹೀಗೇ ನನಗೂ ಗ್ಲೋರಿಯಾಗೂ ಅರ್ಥವಾಗದ ಇನ್ನೊಂದೆರಡು ಅತಿಗಳನ್ನು ಅವರು ಹೇಳಿದರು. ನಿಮ್ಮ ಎರಡೂ ಕಾಲುಗಳ ವೀನ್ ಗಳನ್ನು ನಿಮ್ಮ ಹೃದಯಕ್ಕೆ ಟ್ರಾನ್ಸ್‌ಪ್ಲಾಂಟ್ ಮಾಡುವ ಡಬಲ್ ಬೈಪಾಸ್ ಸರ್ಜರಿಯನ್ನು ನಾನು ರೆಕಮಂಡ್ ಮಾಡುತ್ತಿದ್ದೇನೆ. ಅಲ್ಲದೆ ಹಿಗ್ಗಿರುವ ನಿಮ್ಮ ಅನ್ನನಾಳ ಈ ರೀತಿಯ ಓಪನ್ ಹಾರ್ಟ್ ಸರ್ಜರಿಯಲ್ಲಿ ಕೆಲವು ತೊಂದರೆಗಳನ್ನು ಕೊಡುವ ಸಾಧ್ಯತೆ ಇದೆ ಎಂದರು.

ಇದೆಲ್ಲವನ್ನೂ ಅರಗಿಸಿಕೊಳ್ಳಲು ನನಗೆ ಸ್ವಲ್ಪ ಹೆಚ್ಚು ಕಾಲವೇ ಹಿಡಿಯಿತು. ನನ್ನ ಕಣ್ಣುಗಳು ಗ್ಲೋರಿಯಾ ಕಣ್ಣುಗಳನ್ನು ಸಂಧಿಸಿ ನಂತರ ಡಾಕ್ಟರ್ ಕಡೆಗೆ ತಿರುಗಿದವು. ನಾನು ಹೇಳಿದೆ : "ನೋಡಿ ಡಾಕ್ಟರೆ, ನಿಮ್ಮೊಂದಿಗೆ ಪಣ ಕಟ್ಟುತ್ತೇನೆ, ವಿ.ಡಿ.ಯ ಬದಲಿಗೆ ನೀವೇನೇ ಕೊಟ್ಟರು ನಾನು ಅದಕ್ಕೆ ಸಿದ್ಧ!" ದುರದೃಷ್ಟದ ಮಾತೆಂದರೆ ಕ್ಲೀವ್ ಲ್ಯಾಂಡ್ ಕ್ಲಿನಿಕ್‌ನಲ್ಲಿ ಈ ರೀತಿ ವ್ಯವಹಾರ ಸಾಧ್ಯವಿಲ್ಲ. ಆದರೂ ಡಾಕ್ಟರು ಒಂದು ರಿಯಾಯಿತಿ ನೀಡಿದರು. ಸರ್ಜನ್‌ಗಳು ಹೊಸ ಧಮನಿಗಳನ್ನು ಜೋಡಿಸುತ್ತಿರುವಾಗ ನನ್ನ ಅನ್ನನಾಳದ ಕೆಳಗಿರುವ ಕಾರ್ಡಿಯಾವನ್ನೂ ಸಹ ಕೂತು ಮಾಡುತ್ತಾರಂತೆ. ಈ ಸಮಸ್ಯೆ ನನ್ನ 14ನೇ ವಯಸ್ಸಿನಿಂದಲೂ ಕಾಡುತ್ತಿತ್ತು. ಈ ಶಸ್ತ್ರಚಿಕಿತ್ಸೆಗೆ ಇನ್ನೊಂದು ಹತ್ತು ನಿಮಿಷ ಎಕ್ಸ್‌ಟ್ರಾ ಆಗಬಹುದು ಅಷ್ಟೆ! ಅಂದಿದ್ದಾರೆ ವೈದ್ಯರು. ಆಗ ಅಯ್ಯೋ ಎಂಥ ಕೆಲಸವಾಯಿತು ಎಂದು ನಾನು ಪಶ್ಚಾತ್ತಾಪ ಪಟ್ಟೆ. ಯಾಕೆಂದರೆ ನನ್ನ ಎರಡನೇ ಕಾಲ್ಬೆರಳಿನ ಮೇಲೆ ಎದ್ದಿದ್ದ ಗಂಟನ್ನು (ಅದು ಅನೇಕ ನರ್ಸುಗಳ ಕುತೂಹಲಕ್ಕೆ ಕಾರಣವಾಗಿ ಅವರೆಲ್ಲ ಗುಂಪುಗುಂಪಾಗಿ ಅದನ್ನು ನೋಡಲು ಬಂದಿದ್ದರು. ನಾನು ತಮಾಷೆಗೆ ಹೇಳುತ್ತಿಲ್ಲ.) ನಾವು ಕ್ಲೀವ್ ಲ್ಯಾಂಡ್ ಕ್ಲಿನಿಕ್ಕಿಗೆ ಸ್ಥಳಾಂತರಗೊಳ್ಳುವ ಹಿಂದಿನ ದಿನವಷ್ಟೆ ಅದನ್ನು ಗ್ಲೋರಿಯಾ ಕೊಯ್ದು ತೆಗೆದಿದ್ದಳು. ಇಲ್ಲದಿದ್ದರೆ ಈ ಸರ್ಜನರೇ ಅದನ್ನು ಕೊಯ್ದುಹಾಕಿರುತ್ತಿದ್ದರು. ಅದಕ್ಕೆ ಇನ್ನೊಂದೈದು ನಿಮಿಷ ಎಕ್ಸ್‌ಟ್ರಾ ಬೇಕಾಗುತ್ತಿತ್ತು ಅಷ್ಟೆ!

ಈ ಪತ್ರ ನನ್ನ ಅತ್ಯಂತ ಯಶಸ್ವೀ ಅಪ್ರಕಟಿತ ಬರಹ ಎನಿಸಿಕೊಂಡಿದೆ! ಚಾನ್ಸೆಲರ್ ಬೈರಂ ಕಾರ್ಟರ್ ಅವರು ಇಂಡಿಯಾನಾ ವಿಶ್ವವಿದ್ಯಾಲಯದ ಟ್ರಸ್ಟಿ

ಮಂಡಳಿಯ ಮಾನಸಿಕ ಸಭೆಯಲ್ಲಿ, ಇತ್ತೀಚೆಗೆ ನಿಧನರಾದ ಮತ್ತು ತೀವ್ರವಾಗಿ ಖಾಯಿಲೆಯಿಂದ ನರಳುತ್ತಿರುವ ಬೋಧಕ ಸದಸ್ಯರ ಬಗ್ಗೆ ಮಾಮೂಲಿ ಪ್ರಕಟಣೆಗಳನ್ನು ಮಾಡಿದ ನಂತರ ನನ್ನ ಈ ಪತ್ರವನ್ನೂ ಸಹ ಓದಿದ್ದರು.

ಶಸ್ತ್ರಚಿಕಿತ್ಸಾ ಪೂರ್ವದ ಆಸ್ಪತ್ರೆ ವಾಸ್ತವ್ಯದ ಅವಧಿ ಬಹಳ ಆಹ್ಲಾದಕರವಾಗಿತ್ತು. ನಾನು ಎಷ್ಟೋ ವರ್ಷಗಳ ನಂತರ ಮೊದಲ ಬಾರಿಗೆ ರಜೆ ಹಾಕಿಬಂದಿದ್ದೆ. ಪುನಃ ಎದೆನೋವು ಬಂದಿರಲಿಲ್ಲ. ಹಾಗೂ ಕ್ಲೀವ್ ಲ್ಯಾಂಡ್ ಕ್ಲಿನಿಕ್ನಲ್ಲಿ ನನಗೆ ಅತಿ ಗರಿಷ್ಠವಾದ ಚಲನ ಸ್ವಾತಂತ್ರ್ಯ ಕೊಟ್ಟಿದ್ದರಿಂದ ಪ್ರತಿಯೊಂದು ಗಳಿಗೆಯನ್ನೂ ನಾನು ಆನಂದವಾಗಿ ಅನುಭವಿಸಿದೆ. ನಡೆದಾಡುವ ಸ್ಥಿತಿಯಲ್ಲಿದ್ದರೆ ಇಡೀ ಅಂತಸ್ತಿನಲ್ಲಿ ಸುತ್ತಾಡಬಹುದಾದ ಸ್ವಾತಂತ್ರ್ಯ ಕೊಡುತ್ತಾರೆ. ಗ್ಲೋರಿಯಾಳನ್ನು ಇಷ್ಟು ಹತ್ತಿರದಿಂದ ಬಹುಕಾಲ ನೋಡುವ ಇಂತಹ ಅವಕಾಶ ನಮ್ಮ ಪ್ರಣಯ ಪ್ರಾರಂಭವಾದಾಗಿನಿಂದ ಇದುವರೆಗೆ ಎಂದೂ ಸಿಕ್ಕಿರಲಿಲ್ಲ. ಇದಲ್ಲದೆ ಅಲ್ಲಿ ಚಿತ್ರವಿಚಿತ್ರ ಜನರ ಭೇಟಿಯಾಯಿತು. ತಮ್ಮ ದೇಹರಚನೆಯ ಪ್ರತಿಯೊಂದು ಅಂಗಾಂಗವನ್ನು ಬ್ಯಾಂಡೇಜುಗಳಿಂದ ಸುತ್ತಿಸಿಕೊಂಡು ತಮ್ಮ ರಕ್ತನಾಳದ ಮೂಲಕ ಆಹಾರ ಉಣಿಸುವ ಕೊಳವೆ ಕಂಬಗಳನ್ನು ಎದುರಿಗಿಟ್ಟುಕೊಂಡವರು ತಮ್ಮ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಅದ್ಭುತ ಕಥೆಗಳನ್ನು ಹೇಳುತ್ತಿದ್ದರು. ಹಜಾರದ ಕೊನೆಯಲ್ಲಿದ್ದ ರೋಗಿಗಳ ಕೈಸಾಲೆಯಂತೂ ಸಾವಿಗೆ ಸವಾಲು ಹಾಕಿನಿಂತವರ ವಿನಿಮಯ ಭೂಮಿಯಿಂತಿತ್ತು. ಮೂತ್ರ ವಿಸರ್ಜನ ನಾಳಕ್ಕೆ ಕ್ಯಾನ್ಸರ್ ಆಗಿದ್ದ ಒಬ್ಬ ಬಡಪಾಯಿ ರೋಗಿ ಇದ್ದ. ಅವನ ಊರಿನ ವೈದ್ಯರು ಇನ್ನು ಸಾಧ್ಯವಿಲ್ಲ ಎಂದು ಕೈಚೆಲ್ಲಿದ್ದರು. ಆದರೆ ಕ್ಲೀವ್ ಲ್ಯಾಂಡ್ ಕ್ಲಿನಿಕ್ಕಿನ ಮೂತ್ರಶಾಸ್ತ್ರ ತಜ್ಞರು ಅವನದೇ ಮಾಂಸಖಂಡದಿಂದ ಅವನಿಗೆ ಹೊಸದೊಂದು ಅಂಗವನ್ನು ಇಡಿಯಾಗಿ ರೂಪಿಸಿ ಕೊಟ್ಟಿದ್ದರು. ಕಾರ್ಖಾನೆಯ ಯಂತ್ರಕ್ಕೆ ಸಿಕ್ಕಿಕೊಂಡ ಬಲಗೈಪೂರ್ತಿ ಚಟ್ನಿಯಂತೆ ಜಜ್ಜಿಹೋಗಿದ್ದ ಒಬ್ಬ ಭಾರೀ ಹರಟೆಯ ಹೆಂಗಸಿಗೆ, ಜಜ್ಜಿ ಹೋದ ಕೈ ಚೂರುಗಳನ್ನೇ ಅವಳ ಕಿಬ್ಬೊಟ್ಟೆಗೆ ಹೊಲೆದು ಆಕೆಯ ಅಂಗಾಂಗದಿಂದಲೇ ಹೊಸದೊಂದು ಕೈ ರೂಪುಕೊಳ್ಳುವಂತೆ ಮಾಡಿದ್ದರು. ಮಾನವ ದೇಹಕ್ಕೆ ಆಗಬಹುದಾದ ನಾನು ಕಲ್ಪಿಸಿಕೊಳ್ಳಬಹುದಾದ ಯಾವುದೇ ದೊಡ್ಡ ಹಾನಿಯನ್ನೂ ಕ್ಲೀವ್ ಲ್ಯಾಂಡ್ ಕ್ಲಿನಿಕ್ ಸರಿಪಡಿಸುತ್ತಿತ್ತು. ಎಷ್ಟೋ ಜನ ತಮ್ಮ ಬದುಕಿನ ಬಹಳಷ್ಟು ಕಾಲವನ್ನು ಕ್ಲೀವ್ ಲ್ಯಾಂಡ್ ಕ್ಲಿನಿಕ್ಕಿಗೆ ಬಂದುಹೋಗುವುದರಲ್ಲೆ ಕಳೆದಿದ್ದರು.

ನನ್ನ ರೂಂಮೇಟ್ ಆಗಿದ್ದ ಹರಟೆಮಲ್ಲ ಬಾಬ್ ರಿಚರ್ಡ್ಸ್‌ಗೆ ಇನ್ನೂ 31 ವರ್ಷ ವಯಸ್ಸು. ಅವನು 15ನೇ ವಯಸ್ಸಿನಲ್ಲಿ ಮೋಟಾರು ಸೈಕಲ್ಲಿನ ಮುಂಭಾಗವನ್ನು ಆಟೊವೊಬ್ಬೈಲ್ಗೆ ಗುದ್ದಿ ತನ್ನ ಮೂತ್ರಪಿಂಡಗಳನ್ನು ಪುಡಿಪುಡಿಮಾಡಿಕೊಂಡಾಗಿನಿಂದ ಇದುವರೆಗೆ ಅವನಿಗೆ ದೊಡ್ಡ ಪ್ರಮಾಣದ ಇಪ್ಪತ್ತೈದು ಶಸ್ತ್ರಚಿಕಿತ್ಸೆಗಳಾಗಿದ್ದವು.

ಒಂದು ಶುಕ್ರವಾರ, ಆಗಲೇ ಸಂಜೆ ಕಳೆದು ಬಹಳ ಹೊತ್ತಾಗಿತ್ತು. ಈ ಹೊಸ ರೋಮಾಂಚಕಾರೀ ಜೀವನಕ್ಕೆ ಹೊಂದಿಕೊಂಡು, ಇನ್ನೇನು ನನ್ನನ್ನು ಡಾಕ್ಟರುಗಳು ಮರೆತೇಬಿಟ್ಟಿರಬಹುದು ಎಂಬ ಅರ್ಧ ಅನುಮಾನದಿಂದ, ನನ್ನ ಕಾಲತುದಿಯಲ್ಲಿದ್ದ ಟಿವಿಯಲ್ಲಿ ಜೇಮ್ಸ್ ಡೋರಿಸ್ ನ ಡೇಥ್ರಿಲ್ಲರನ್ನು ವೀಕ್ಷಿಸುತ್ತಾ ಸ್ವಸ್ಥವಾಗಿ ಕುಳಿತಿದ್ದಾಗ ಟಿವಿ ಬದಿಯಿಂದ ಎತ್ತರದ ಕಲ್ಲುಮುಖದ ಒಬ್ಬ ಯುವ ಸರ್ಜನ್ ಪ್ರತ್ಯಕ್ಷಗೊಂಡು ತನ್ನ ಆಸ್ಟ್ರೇಲಿಯನ್ ಉಚ್ಚಾರದಲ್ಲಿ "ಮುಂದಿನ ಸೋಮವಾರ ನೀವು ಹಾರ್ಟ್ ಸರ್ಜರಿಗೆ ಸಿದ್ಧವೇ" ಎಂದು ಕೇಳಿದ. ನಾನು ಸಿದ್ಧವಾಗಿದ್ದೆ. ಅನ್ನನಾಳದ್ದೂ ಆಗಲೇ ಮಾಡುತ್ತೀರಾ? ಎಂದು ಕೇಳಿದೆ. "ಹೌದು ನಾವು ಎಲ್ಲವನ್ನೂ ಒಂದೇ ಏಟಿಗೆ ಮುಗಿಸಿಹಾಕಬೇಕೆಂದಿದ್ದೇವೆ" ಎಂದು ಛೇಡಿಸುವ ದನಿಯಲ್ಲಿ ಹೇಳಿದ.

ತೆರೆದ ಹೃದಯದ ಶಸ್ತ್ರಚಿಕಿತ್ಸೆಗೆ ಸಿದ್ಧರಾದ ಎಲ್ಲರಿಗೂ ಶಸ್ತ್ರಚಿಕಿತ್ಸೆಯ ಹಿಂದಿನ ದಿನ ಸಂಜೆ ನಾಲ್ಕು ಗಂಟೆಗೆ ನರ್ಸೊಬ್ಬಳು ಒಂದೇ ಒಂದು ವಿವರ ಬಿಡದಂತೆ ಸಕಲವನ್ನು ತಿಳಿಸುತ್ತಾಳೆ. ಈ ನಿರೂಪಣೆ ಕೇಳಿದ ನಂತರ ಒಬ್ಬ "ಈ ಆಪರೇಶನ್ನಿನ ಸಹವಾಸವೇ ಬೇಡ. ನನ್ನ ಊರಿಗೆ ಹೋಗಿ ಅಲ್ಲಿ ಕೊನೆಗಾಲಕ್ಕೆ ಕಾಯುತ್ತೇನೆ" ಎಂದು ಹೊರಟೇಹೋಗಿದ್ದ. ಇನ್ನೊಬ್ಬ "ಐ.ಸಿ. ಯೂನಿಟ್ಟನ್ನು ಟಾರ್ಚರ್ ಚೇಂಬರ್" ಎಂಬುದಾಗಿ ವರ್ಣಿಸಿದ. ತಮ್ಮ ಪ್ರೀತಿಪಾತ್ರರ ಸ್ಥಿತಿಯನ್ನು ಕಂಡು ತಾಳಿಕೊಳ್ಳಲಾರದೆ ಎಷ್ಟೋ ಜನ ಮೂರ್ಛೆಹೋದ ಕಾರಣ ಹತ್ತಿರದವರನ್ನು ಅಲ್ಲಿ ಒಳಗೇ ಬಿಡುವುದಿಲ್ಲ. ಇಲ್ಲಿ ವ್ಯಕ್ತಿಯನ್ನು ಹೆಚ್ಚು ಕಡಿಮೆ ಜೀವಂತ ಸ್ಥಿತಿಯಲ್ಲಿ ನಿರ್ಜಿವ ಸ್ಥಿತಿಗೆ ಇಳಿಸಿಬಿಡುತ್ತಾರೆ.

ನನಗೆ ಎಚ್ಚರವಾದಾಗ ನಾನು ನನ್ನ ಗಂಟಲ ಕೆಳಗಿದ್ದ ಕೊಳವೆಯಿಂದ ಉಸಿರಾಡುತ್ತಿದ್ದೆ. ನನ್ನ ಎದೆಗೆ ತೂರಿಸಿದ್ದ ಎರಡು ನಾಳಗಳು ರಕ್ತ ಸರಬರಾಜು

ಮಾಡುತ್ತಿದ್ದವು. ನನ್ನ ಬಲತೋಳಿನಲ್ಲಿದ್ದ ಇನ್ನೊಂದು ಕೊಳವೆಯು ರಕ್ತನಾಳದ ಮೂಲಕ ಆಹಾರ ಸರಬರಾಜು ಮಾಡುತ್ತಿತ್ತು. ಮೂತ್ರನಾಳಕ್ಕೆ ಅಳವಡಿಸಿದ್ದ ಕೊಳವೆ ಮೂತ್ರವಿಸರ್ಜನೆಯನ್ನು ಹೊರಹಾಕುತ್ತಿತ್ತು. ಆದರೆ ಕಿಬ್ಬೊಟ್ಟೆಗೆ ಹಾಕಿದ್ದ ನಾಳ ಮಾತ್ರ ನರ್ಸುಗಳು, ಕೆಲಸದಾಳುಗಳು ಹಾಗೂ ಬೇರೆ ವೈದ್ಯರನ್ನು ಕೂಡ ಗೊಂದಲಕ್ಕೀಡುಮಾಡಿತ್ತು. ಅವರ ಪೈಕಿ ಒಬ್ಬ ವೈದ್ಯರು "ಇದೇನು ವಿಸರ್ಜನ ಕೊಳವೆಯೇ ಅಥವಾ ಆಹಾರನಾಳವೇ" ಎಂದು ವಿಚಾರಿಸಿದರು. ಇದು ಆಹಾರ ಕೊಳವೆಯೇ ಎಂಬ ಸಾಧ್ಯತೆ, ನಾನು ಯಾವುದರ ಬಗ್ಗೆ ತುಂಬ ಹೆದರಿದ್ದೆನೋ ಅದೇ ಆಗಿತ್ತು. ಅದೇನೆಂದರೆ ನನ್ನ ಅನ್ನನಾಳ ಮುಚ್ಚಿಹೋಗಿದ್ದು ನನ್ನ ಕರೊನರಿಗಳ ಜೊತೆಗೆ ಅದರ ಬೈಪಾಸ್ ಕೂಡ ನಡೆಯಬೇಕಿತ್ತು. Achalasia (ಊದಿಕೊಂಡು ಸರಿಯಾಗಿ ಕಾರ್ಯನಿರ್ವಹಿಸದಿದ್ದ ಅನ್ನನಾಳ ದೋಷದ ಹೆಸರು) ದಿಂದ ಅರ್ಟೀರಿಯೋ ಸ್ಕ್ಲಿರೋಸಿಸ್ ಇನ್ನಷ್ಟು ಉಲ್ಬಣಗೊಂಡಿದ್ದನ್ನು ನಾನು ಇದೇ ಮೊದಲು ನೋಡಿದ್ದು ಎಂದು ಒಬ್ಬ ಡಾಕ್ಟರು ಉದ್ಗರಿಸಿದರು. ಮೂರು ಬೈಪಾಸ್ಗಳ ಮೇಲೆ ಅನ್ನನಾಳದಲ್ಲಿ ರಂಧ್ರಮಾಡುವ ಶಸ್ತ್ರಚಿಕಿತ್ಸೆ (cardiomyotamy) ತುಂಬ ಅಪಾಯಕಾರಿ ಎಂದು ಭಾವಿಸಿದ ಕಾರಣ ಅದನ್ನು ಮಾಡದಿರಲು ಡಾ. ಗ್ರೋವ್ಸ್ ನಿರ್ಧರಿಸಿದ್ದಾರೆ ಎಂದು ತಿಳಿದು ಬಂತು. ಅವರ ನುಡಿಗಟ್ಟಿನಲ್ಲೆ ಹೇಳುವುದಾದರೆ ಸರ್ಜನರು ಅನ್ನನಾಳದಿಂದ ಸುಮಾರು 12 ಪೌಂಡುಗಳಷ್ಟು ತೊಪ್ಪೆಯನ್ನು (Sauer krout) ಹೊರ ತೆಗೆದಿದ್ದೇನೋ ಹೌದು. ಅದರ ನೆನಪಿಗಾಗಿ ಹೊಟ್ಟೆಯ ದ್ರವಗಳನ್ನು ಬಸಿದುಹಾಕಲು ಹೆಚ್ಚುವರಿ ಕೊಳವೆಯೊಂದನ್ನು ಅಳವಡಿಸಿದ್ದರು. ನನ್ನ ಒಳಗಿದ್ದುದೆಲ್ಲ ಹರಿದು ಹೋಗುವತನಕ ನನಗೆ ಬಾಯಿಮೂಲಕ ಆಹಾರ ಅಥವಾ ಪಾನೀಯ ಸೇವಿಸುವ ಅನುಮತಿ ಇರಲಿಲ್ಲ. ಅಲ್ಲದೆ, ನನ್ನನ್ನು ನೋಡಿಕೊಳ್ಳುತ್ತಿದ್ದ ವೈದ್ಯ ಅನೇಕ ದಿನಗಳ ಕಾಲ ತನ್ನ ಸ್ಟೆಥೋಸ್ಕೋಪನ್ನು ನನ್ನ ಕಿಬ್ಬೊಟ್ಟೆಯ ಮೇಲಿಟ್ಟು ಅವನೇ ಹೇಳಿದ ಹಾಗೆ 'Bowel Sounds' (ಮಲದ ಚಲನೆಯ ಶಬ್ದ) ಆಲಿಸುತ್ತಿದ್ದ. ನನಗೂ ಕೂಡ ಈ ಶಬ್ದವನ್ನು ಆಲಿಸುವ ಕುತೂಹಲ ಬೆಳೆಯಿತು. ಮೊದಲ ಶಬ್ದ ಆಲಿಸಿದ ಕೂಡಲೇ ನನ್ನಲ್ಲಿ ಎಂಥ ಆನಂದೋದ್ವೇಗ ಉಂಟಾಯಿತೆಂದರೆ ಅದನ್ನು ಸಿಕ್ಕ ಸಿಕ್ಕವರಿಗೆಲ್ಲ ಸಾರಿಕೊಂಡು ಬಂದೆ. ಅಲ್ಲದೆ ಬೊಯಿಲನ್ (ಮಾಂಸದ ಸಾರು) ಮತ್ತು ಜೆಲ್ಲಿಯ ಔತಣ ಮಾಡಿದೆ.

ಹೃದ್ರೋಗಿಯನ್ನು ಅವನಿಗೆ ತಗಲಿಸಿದ ಎಲ್ಲ ಕೊಳವೆ, ಬಿರಟೆಗಳಿಂದ ವಿಮುಕ್ತಗೊಳಿಸಿದ ನಂತರ ಆಳವಾಗಿ ಉಸಿರು ತೆಗೆದುಕೊಳ್ಳುವ ಮತ್ತು ಬಲವಂತದಿಂದ ಕೆಮ್ಮಿಸುವ ಅಧ್ಯಾಯದ ಆರಂಭ. ಆಗಂತೂ ರೋಗಿಯನ್ನು ಮತ್ತೊಮ್ಮೆ ಸೀಳಿಹಾಕಿದ ಅನುಭವವಾಗುತ್ತದೆ. ಅವನು ಮೊದಲು ಆಮ್ಲಜನಕ ಉಸಿರಾಟ ಯಂತ್ರದ ಮೂಲಕ ಹತ್ತು ನಿಮಿಷಗಳ ಕಾಲ ಆಮ್ಲಜನಕವನ್ನು ಒಳಗೆಳೆದುಕೊಳ್ಳಬೇಕು. ಅನಂತರ ಕೆಮ್ಮಲು ಪ್ರಯತ್ನಿಸಬೇಕು. ಆ ಸಂದರ್ಭದಲ್ಲಿ ಒಬ್ಬ ಧಾಂಡಿಗ ಸಹಾಯಕ ಪಕ್ಕದಲ್ಲಿ ನಿಂತು ಬೆನ್ನಿನ ಮೇಲೆ ಬಡಿಯುತ್ತಿರುತ್ತಾನೆ. ಶ್ವಾಸಕೋಶಗಳಲ್ಲಿ ಉಳಿದುಕೊಂಡಿರುವ ದ್ರವಗಳೆಲ್ಲ ಹೊರಗೆ ಬರುವಂತೆ ಗಟ್ಟಿಯಾಗಿ ಪ್ರಯತ್ನಿಸುವಂತೆ ಪ್ರಚೋದಿಸುತ್ತಿರುತ್ತಾನೆ. ಇದೆಲ್ಲವೂ ಸರಿಯಾಗಿ ನಡೆದರೆ ಎದೆ ಮತ್ತು ಕಾಲಿನ ಹೊಲಿಗೆಗಳನ್ನು ಒಂಬತ್ತು ದಿನ ತುಂಬುವುದರೊಳಗೆ ತೆಗೆಯುತ್ತಾರೆ. ಹನ್ನೊಂದನೇ ದಿನ, ನನ್ನನ್ನು ಚೇತರಿಸಿಕೊಳ್ಳುವುದಕ್ಕೆ ಮನೆಗೆ ಕಳಿಸಿದರು. ಈವರೆಗೂ ನಾನು ಮೊದಲಿಗಿಂತ ಚೆನ್ನಾಗಿದ್ದೇನೆ. ನನ್ನ ಕಳ್ಳ ಈಸೋಫ್ಯಾಗಸ್ (ಅನ್ನನಾಳ) ಕೂಡ ಸರಿಯಾಗೇ ಇದೆ.

ಥಾಮಸ್ ಥಾಂಸನ್ ಅವರು 'Hearts' ಎಂಬ ಗ್ರಂಥದಲ್ಲಿ ಕರೋನರಿ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು "ಅತ್ಯಂತ ಸೂಕ್ಷ್ಮದ ಮತ್ತು ತ್ರಾಸದಾಯಕವಾದ ಶಸ್ತ್ರಚಿಕಿತ್ಸೆ" ಎಂದು ಕರೆದಿದ್ದಾರೆ. ಇಲ್ಲಿ ಸರ್ಜನರು ಪ್ರತಿಯೊಂದು ಸೂಕ್ಷ್ಮ ವಿವರಗಳಿಗೂ ಗಮನಕೊಟ್ಟು ಸಿದ್ಧಮಾಡಿಕೊಳ್ಳಬೇಕಾಗುತ್ತೆ.

ಇದು ಎಷ್ಟರಮಟ್ಟಿಗೆ ಯಶಸ್ವೀ ಶಸ್ತ್ರಚಿಕಿತ್ಸೆ ಎಂಬುದನ್ನು ಈಗಲೇ ಹೇಳುವುದು ಸಾಧ್ಯವಿಲ್ಲ. ಯಾಕೆಂದರೆ ಅದರ ಆರಂಭವಾಗಿದ್ದೇ ತೀರ ಇತ್ತೀಚೆಗೆ. ಅಂದರೆ 1967ರಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಪ್ರತಿ 1000 ರೋಗಿಗಳಲ್ಲಿ ಒಂದು ವರ್ಷದ ನಂತರ ಮರಣದ ದರ 6.2% ಆಗಿದ್ದರೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದೆ ಸಾವಿಗೀಡಾದ ತೀವ್ರ ಸ್ವರೂಪದ ಕರೊನರಿ ರೋಗಿಗಳ ದರ 11.9% ಎಂದು ಕ್ಲೀವ್ ಲ್ಯಾಂಡ್ ಕ್ಲಿನಿಕ್ಕಿನ ಹೃದಯತಜ್ಞರು ಹೇಳುತ್ತಾರೆ. ಮೂರು ವರ್ಷಗಳ ನಂತರ ಕಡಿಮೆ ಸ್ಯಾಂಪಲ್ಲುಗಳ ಮೇಲೆ ಇದೇ ಸಮೀಕ್ಷೆ ನಡೆಸಿದಾಗ ಅದು 13.4% ಪ್ರತಿಯಾಗಿ 24.9% ರಷ್ಟಿತ್ತು. ಆದ್ದರಿಂದ ಬೈಪಾಸ್ ಶಸ್ತ್ರಚಿಕಿತ್ಸೆಯಿಂದ ಮರಣದ ಪ್ರಮಾಣ ಸುಮಾರು ಅರ್ಧದಷ್ಟು ಕಡಿಮೆಯಾಗುತ್ತಿದೆ ಎಂದು ಸರ್ಜನ್ನರು ನಿರ್ಣಯಿಸುತ್ತಾರೆ. ಇದಕ್ಕಿಂತ ಮುಖ್ಯವಾಗಿ ಶಸ್ತ್ರಚಿಕಿತ್ಸೆ ಪಡೆದುಕೊಂಡವರು ಉತ್ತಮ ಆರೋಗ್ಯ

ಉತ್ಸಾಹಗಳಿಂದ ಬಾಳಿದರೆ, ವಾಡಿಸಿಕೊಳ್ಳದೆ ಹೋದವರು ನಿಃಶಕ್ತ ರೋಗಿಗಳಾಗಿಯೇ ಬದುಕು ಸಾಗಿಸಬೇಕಾಗುತ್ತದೆ. ಪ್ರತಿವರ್ಷ ಸುಮಾರು 7,00,000 ಅಮೇರಿಕನ್ನರು ಕರೊನರಿ ಅರ್ಟರಿಯಾ ಸ್ಕ್ಲಿರೋಸಿಸ್ನಿಂದ ಮರಣ ಹೊಂದುತ್ತಾರೆ. ಆದ್ದರಿಂದ ಯುಎಸ್ ಆಸ್ಪತ್ರೆಯಲ್ಲಿ ಅತ್ಯಂತ ಹೆಚ್ಚಾಗಿ ಅನುಸರಿಸುವ ಪರಿಣಾಮಕಾರಿಯಾದ ಜೀವರಕ್ಷಕ ವಿಧಾನ ಎಂದು ಹೆಸರಾಗಿರುವ ಕರೊನರಿ ಬೈಪಾಸ್ ಶಸ್ತ್ರಚಿಕಿತ್ಸೆಯು ವರ್ಷಕ್ಕೆ ಸುಮಾರು 60,000 ಅಮೆರಿಕನ್ನರ ಪ್ರಾಣವನ್ನು ಉಳಿಸುವ ಮೂಲಕ ವಾರ್ಷಿಕ ಸಾವುಗಳ ಪ್ರಮಾಣ ಹೆಚ್ಚಾಗುವುದನ್ನು ತಪ್ಪಿಸಿದೆ.

ಕರೊನರಿ ಹೃದ್ರೋಗಕ್ಕೆ ಮನುಷ್ಯ ಚಿಕಿತ್ಸೆ ಕಂಡುಹಿಡಿದಿದ್ದಾನೆ. ಅದು ಬರದಂತೆ ತಡೆಯುವುದೂ ಸಾಧ್ಯವೆ?

## ಭಾಗ II : ಆಪತ್ತಿಗೆ ಜಾನಪದ

ಹೃದ್ರೋಗಕ್ಕೆ, ಅದರಲ್ಲಿಯೂ ಮುಖ್ಯವಾಗಿ ಕರೊನರಿ ಆರ್ಟರಿಗಳಲ್ಲಿ ಕೊಬ್ಬಿನ ಅಂಗಾಂಗಗಳು ತುಂಬಿಕೊಂಡು ಕೊನೆಗೆ ಇಡೀ ರಕ್ತಪರಿಚಲನೆಗೇ ತಡೆ ಒಡ್ಡುವಂತಹ ಆರ್ಟೀರಿಯಾ ಸ್ಕ್ಲಿರೋಸಿಸ್ಗೆ ಏನು ಕಾರಣ? ನಾನು ಚೇತರಿಸಿಕೊಳ್ಳುತ್ತಿದ್ದ ಅವಧಿಯಲ್ಲಿ ಈ ವಿಷಯ ಕುರಿತಂತೆ ವಿವಿಧ ಊಹೆಗಳನ್ನು ಮುಂದಿಡುವ ಅಪಾರವಾದ ಸಾಹಿತ್ಯವನ್ನು ಓದಿದೆ. ದಿನಪತ್ರಿಕೆಗಳ ವೈದ್ಯಕೀಯ ಸಲಹೆಗಳ ಅಂಕಣಗಳು, ವೈದ್ಯರ ವೃತ್ತಿಪರ ಜರ್ನಲ್ಗಳು, ನ್ಯೂಯಾರ್ಕ್ ಟೈಮ್ ಮ್ಯಾಗಜೈನ್ನಲ್ಲಿ ಸುದೀರ್ಘ ಅಗ್ರ ಲೇಖನ, ಹೂಸ್ಟನ್ನಿನಲ್ಲಿ ಮೈಕೇಲ್ ಡಿಬೆಕಿ ಹಾಗೂ ಡೆಂಟನ್ ಕೂಲಿಯವರು ಕೈಗೊಂಡ ಹಾರ್ಟ್‌ಸರ್ಜರಿ ಪ್ರಯೋಗಗಳನ್ನು ಕುರಿತಂತೆ ಥಾಮಸ್ ಥಾಂಸನ್ನರ 'ಹಾರ್ಟ್ಸ್' ಎಂಬ ಅತ್ಯಂತ ಸ್ವಾರಸ್ಯಕರ ಗ್ರಂಥ, ಕ್ಲೀವ್ ಲ್ಯಾಂಡ್ ಕ್ಲಿನಿಕ್ಕಿನಲ್ಲಿ ನಡೆದ ಯಶಸ್ವೀ ಕರೊನರಿ ಬೈಪಾಸ್ ಸರ್ಜರಿಯನ್ನು ಕುರಿತಂತೆ, ಶಸ್ತ್ರಚಿಕಿತ್ಸೆಯ ನಂತರ ಹೊಸ ಮನುಷ್ಯರೇ ಆಗಿ ರೂಪುಗೊಂಡಂಥ ಚಟುವಟಿಕೆಯಿರುವವರ ಫೋಟೋ ಸಹಿತವಾಗಿ ಟೈಮ್ ಮ್ಯಾಗಜೈನ್ನಲ್ಲಿ ಪ್ರಕಟವಾದ ಲೇಖನ.... ಹೀಗೆ ಈ ಕುರಿತಾದ ಅಪಾರ ಸಾಹಿತ್ಯವನ್ನು ಓದಿದೆ. 1960 ಮತ್ತು 70ರ ದಶಕಗಳಲ್ಲಿ 'ನಂಬರ್ ಒನ್ ಕಿಲರ್' ಎಂದು ಹೆಸರಾದ ಈ ರೋಗದ ಬಗ್ಗೆ ಅತಿ ಹೆಚ್ಚಿನ ಗಮನ ನೀಡುವುದು, ಚರ್ಚೆ ನಡೆಸುವುದು, ಅಪಾಯವನ್ನು ಅರಿತುಕೊಳ್ಳುವುದು ತೀರಾ ಅಗತ್ಯವಾಗಿದೆ. ಈ ರೋಗ ದೊಡ್ಡವರೂ ಚಿಕ್ಕವರೆನ್ನದೆ

ಯಾರಿಗೆ ಬೇಕಾದರೂ ಬರಬಹುದು. ಕೊರಿಯಾ ಯುದ್ಧದಲ್ಲಿ ಸಾವಿಗೀಡಾದ ಅಮೆರಿಕನ್ ಯೋಧರ ಅಟಾಪ್ಸಿ (ಶವಪರೀಕ್ಷೆ) ನಡೆಸಿದಾಗ ಅವರಲ್ಲಿ ಇನ್ನೂ 20ರ ಹರಯದಲ್ಲಿದ್ದ ಅನೇಕರ ರಕ್ತನಾಳಗಳಲ್ಲಿ ಆಗಲೇ ಪೆಡುಸಾಗುತ್ತಿರುವ ಲಕ್ಷಣ ಕಂಡುಬಂದಿರುವುದು ತಿಳಿಯಿತು. ತುಕ್ಕು ಹಿಡಿದು ಕಿಟ್ಟ ಕಟ್ಟಿ ಮುಚ್ಚಿಕೊಂಡ ಕೊಳವೆಗಳ ಚಿತ್ರವನ್ನು ಇದಕ್ಕೆ ಹೋಲಿಕೆಯಾಗಿ ಕೊಡಲಾಗಿದೆ. ಕರೊನರಿ ಹೃದ್ರೋಗಕ್ಕೆ ಎಡೆಮಾಡಿಕೊಡುವ ಅರ್ಧ ಡಜನ್ ಕಾರಣಗಳನ್ನು ವೈದ್ಯರು ಹೇಳುತ್ತಾರೆ. ಅನುವಂಶಿಕತೆ, ಸ್ಥೂಲಕಾಯ, ವ್ಯಾಯಾಮವಿಲ್ಲದಿರುವಿಕೆ, ಧೂಮಪಾನ, ಆಹಾರದಲ್ಲಿ ಮಿತಿಮೀರಿದ ಪ್ರಮಾಣದ ಕೊಬ್ಬು ಮತ್ತು ಸಕ್ಕರೆ ಇವು ಅಧಿಕ ಕೊಲೆಸ್ಟರಾಲ್ ಮತ್ತು ಬ್ಲಡ್ ಶುಗರ್ ಕೌಂಟ್ಸ್ ರೂಪದಲ್ಲಿ ಮತ್ತು ಭಾರೀ ಒತ್ತಡದ ಮೂಲಕ ಕಾಣಿಸಿಕೊಳ್ಳುತ್ತದೆ. ಈ ಎಲ್ಲ ಅಂಶಗಳನ್ನೂ ಒಳಗೊಂಡಂತಹ ಯಾವುದೋ ಒಂದು ಚಿಹ್ನೆ ಬಹುತೇಕ ಕರೊನರಿ ಪ್ರಕರಣಗಳಲ್ಲಿ ಕಂಡುಬರುತ್ತದೆ. ನನ್ನದೇ ಪ್ರಕರಣ ಹೇಳುವುದಾದರೆ ಇದಕ್ಕೆ ಅನುವಂಶೀಯತೆ, ಸಕ್ಕರೆ ಹಾಗೂ ಬಹುತೇಕ ಅಮೆರಿಕನ್ನರು ದೂರುವ ಒತ್ತಡ (stress) ಕಾರಣವಾಗಿದ್ದವು. ಒತ್ತಡವನ್ನು ಬಿಟ್ಟು ಉಳಿದ ಅಂಶಗಳನ್ನು ನಿಖರವಾಗಿ ಗುರುತಿಸುವುದು ಸಾಧ್ಯ. ಸ್ಮೋಕಿಂಗ್ ಟಾರ್ ಮತ್ತು ನಿಕೊಟಿನ್ ತುಂಬಿದ ಸಿಗರೇಟುಗಳ ವಿರುದ್ಧ ಹಾಗೂ ಅತಿಯಾದ ಸಂತೃಪ್ತ ಕೊಬ್ಬು ಮತ್ತು ಹೆಚ್ಚಿನ ಸಕ್ಕರೆ ಸೇವನೆಯ ವಿರುದ್ಧ ಅಮೆರಿಕನ್ನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. "ನಮ್ಮದು ಸಕ್ಕರೆ ಖಾಯಿಲೆಯ ಗುಜರಿ ವ್ಯಕ್ತಿಗಳ ದೇಶವಾಗಲಿದೆ" ಎಂದು ಒಬ್ಬ ಸಸ್ಯಾಹಾರಿ ಗೃಹಿಣಿ ಹೇಳಿದ ಮಾತುಗಳನ್ನು ಪತ್ರಿಕೆಗಳು ಉಲ್ಲೇಖಿಸಿವೆ. "ಆಹಾರದ ಬಗ್ಗೆ ಅನಕ್ಷರತೆ ತುಂಬಿದವರ ಸಮಾಜ ನಮ್ಮದು" ಎಂದು ಒಬ್ಬ ಆಹಾರ ತಜ್ಞ ಹೇಳುತ್ತಾರೆ. ಆಹಾರ ಪಥ್ಯದ ಅನುಸರಣೆ ಈಗ ಒಂದು ರಾಷ್ಟ್ರೀಯ ಗೀಳೇ ಆಗಿಬಿಟ್ಟಿದೆ. ಆದರೆ ಇದಕ್ಕೆ ಪ್ರತಿಯಾಗಿ ಒತ್ತಡ ಎಂದರೇನು? ಇದನ್ನು ನಿಯಂತ್ರಿಸುವುದಾಗಲೀ ಅಳೆಯುವುದಾಗಲೀ ಹೇಗೆ? ಕೆಲವು ವೈದ್ಯರು ಅಮೆರಿಕದ ಪುರುಷರನ್ನು ಎ ಮತ್ತು ಬಿ ಎಂಬ ಎರಡು ವ್ಯಕ್ತಿತ್ವ ಮಾದರಿಗಳಾಗಿ ವಿಂಗಡಿಸುತ್ತಾರೆ. ಇದರಲ್ಲಿ 'ಎ' ಗುಂಪಿನವರು ಹೀಗೇ ಆಗಬೇಕೆಂಬ ಮನೋಭಾವದ, ಉದ್ವೇಗದ, ಮಿತಿಮೀರಿದ ಒತ್ತಡದ ಸ್ವಭಾವದವರು. 'ಬಿ' ಗುಂಪಿನವರು ಯಾವುದೇ ಒತ್ತಡವಿಲ್ಲದೆ ಆರಾಮವಾಗಿರುವ, ಆದಂತೆ ಆಗಲಿ ಎಂಬ ಮನೋಭಾವದ ಜನರು. ಮೊದಲನೆಯ ಗುಂಪಿನವರು ಸಾಮಾನ್ಯವಾಗಿ ಆರ್ಟರಿಯೊ ಸ್ಕ್ಲಿರೋಸಿಸ್ಗೆ

ಬಲಿಯಾಗುತ್ತಾರೆ. ಜನಸಾಮಾನ್ಯರಿಗಾಗಿ ಅಮೆರಿಕಾದ ವೈದ್ಯಕೀಯ ಸಂಘದಿಂದ ಪ್ರಾಯೋಜಿತವಾದ 'Today's Health' ಎಂಬ ಪತ್ರಿಕೆ ಎ ಮಾದರಿ ವ್ಯಕ್ತಿತ್ವದವರ ಒಂದು ಪ್ರಕರಣವನ್ನು ಉದಾಹರಣೆಯಾಗಿ ನೀಡಿದೆ. ಅದನ್ನು ನೋಡೋಣ : ಆತ ಕೆಲಿಫೋರ್ನಿಯಾದ ಬಹಳ ಯಶಸ್ವೀ ವ್ಯಾಪಾರಿ. ಹಾಲನ್ನು ಸಂಸ್ಕರಿಸುವ ಹಾಗೂ ವಿತರಿಸುವ ಘಟಕದ ಮಾಲೀಕ. ಅವನು ಹಗಲಿಡೀ ಭಾರೀ ಒತ್ತಡದಲ್ಲಿ ಕೆಲಸವಮಾಡಿದ ನಂತರ ರಾತ್ರಿ ಬಹಳ ಹೊತ್ತಾದ ಮೇಲೆ ಭಾರೀ ಮದ್ಯಪಾನದೊಂದಿಗೆ ಭೂರಿಭೋಜನ ಮಾಡಿದ. ಆಮೇಲೆ ಅಂಗಸೌಷ್ಠವ ಕಾಪಾಡಿಕೊಳ್ಳುವುದಕ್ಕಾಗಿ ಓಟದ ವ್ಯಾಯಾಮ ಮಾಡಿದ. ಹೀಗೆ ಟ್ರ್ಯಾಕ್‌ನಲ್ಲಿ ಓಡುತ್ತಲೇ ಹೃದಯಾಘಾತವಾಗಿ ಸಾವನ್ನಪ್ಪಿದ. ಅತಿಯಾಗಿ ತಿನ್ನುವುದು, ಅತಿಯಾಗಿ ಕುಡಿಯುವುದು. ಇಷ್ಟರ ಮೇಲೆ ವ್ಯಾಯಾಮ.... ಇವು ಕರೊನರಿಗೆ ಎಡೆಮಾಡಿಕೊಟ್ಟವು. ಅಥ್ಲೀಟುಗಳೇನೂ ಇದರಿಂದ ದೂರವಲ್ಲ. ಇವರು ಮೇಲ್ನೋಟಕ್ಕೆ ದೃಢಕಾಯರಂತೆ ಕಂಡುಬಂದರೂ ಇತರ ಅಮೆರಿಕನ್ನರಂತೆಯೇ ಇವರೂ ಒತ್ತಡಕ್ಕೆ ಬಲಿಯಾಗುತ್ತಾರೆ. ಶ್ರಮ ಮತ್ತು ಉದ್ವೇಗಗಳು ಹೃದಯಾಘಾತ ಉಂಟುಮಾಡುತ್ತವೆ. ಹೃದಯದ ಮಾಂಸಖಂಡದಲ್ಲಿ ಪೇಸ್‌ಮೇಕರನ್ನು ಅಳವಡಿಸುವ ಶಸ್ತ್ರಚಿಕಿತ್ಸೆಯಾದ ನಂತರ ಹೂಸ್ಟನ್ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ಒಬ್ಬ ಟೆಕ್ಸಾಸ್ ಡೀನನ ಉದಾಹರಣೆಯನ್ನು ಥಾಮಸ್ ಥಾಂಸನ್ ಕೊಡುತ್ತಾರೆ. ಆತ ಆಸ್ಪತ್ರೆಯಿಂದ ಬಿಡುಗಡೆಯಾಗಿ ಏರ್ ಪೋರ್ಟ್‌ಗೆ ಬಂದಾಗ ಆಗಷ್ಟೇ ವಿಮಾನ ಹೊರಟುಹೋದ ವಿಷಯ ತಿಳಿಯಿತು. ಇನ್ನೊಂದು ಕಡೆ ಹೋದರೆ ಬೇರೆ ವಿಮಾನ ಸಿಗುವ ಸಾಧ್ಯತೆ ಇದೆ ಎಂದು ತಿಳಿದ ಕೂಡಲೇ ಆತ ಎರಡೂ ಸೂಟ್ ಕೇಸುಗಳನ್ನು ಬಾಚಿಕೊಂಡು ಅಲ್ಲಿಗೆ ಧಡಧಡ ಬಂದ. ಅವನ ಪೇಸ್‌ಮೇಕರ್ ಗೋತಾ ಹೊಡೆಯಿತು, ಸರಿ. ಅವನು ಮನೆ ಸೇರುವ ಮೊದಲೇ ಪುನಃ ಆಸ್ಪತ್ರೆ ಸೇರಬೇಕಾಯಿತು. ಮತ್ತೆ ಎರಡು ಶಸ್ತ್ರ ಚಿಕಿತ್ಸೆಗಳಾದವು. ಅವೂ ವಿಫಲವಾಗಿ ಅಂತಿಮವಾಗಿ ಆತ ಸಾವಪ್ಪಿದ. ಆದ್ದರಿಂದ ನಮ್ಮ ಜೀವನಶೈಲಿಯೇ ಒತ್ತಡಕ್ಕೆ ಕಾರಣ ಎಂದು ನಾವು ಗುರುತಿಸಬಹುದು. ಕರೊನರಿ ಹೃದ್ರೋಗಕ್ಕೂ ಅಮೆರಿಕನ್ ಜೀವನಶೈಲಿಗೂ ಇರುವ ಸಂಬಂಧ ಕುರಿತಂತೆ ಕಾರ್ನೆಲ್ ಯೂನಿವರ್ಸಿಟಿ ಮೆಡಿಕಲ್ ಕಾಲೇಜಿನಲ್ಲಿ ಕ್ಲಿನಿಕಲ್ ಪ್ರೊಫೆಸರ್ ಆಗಿರುವ ಎರಿಕ್ ಜೆ. ಕ್ಯಾಸೆಲ್ ಅವರು "disease as a way to Life" ಎಂಬ ಲೇಖನದಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಒಂದು ಸಮಾಜದ ಮೂಲಭೂತ ಸಾಮಾಜಿಕ

ಮತ್ತು ಆರ್ಥಿಕ ವಿನ್ಯಾಸಗಳೇ ಆ ಸಮಾಜದಲ್ಲಿ ಕಂಡುಬರುವ ರೋಗಗಳನ್ನು ನಿರ್ಧರಿಸುತ್ತವೆ. ಇದಕ್ಕೂ ಅಲ್ಲಿ ಲಭ್ಯವಿರುವ ಆರೋಗ್ಯಸೇವೆ ಅಥವಾ ಆರೋಗ್ಯದ ಅರಿವಿಗೂ ಸಂಬಂಧವಿಲ್ಲ. ಇದನ್ನೇ ಸರಳವಾಗಿ ಹೇಳುವುದಾದರೆ ರೋಗಗಳಿಗೂ ನಮ್ಮ ಜೀವನಶೈಲಿಗೂ ನೇರಸಂಬಂಧವಿದೆ. ರೋಗಿಯ ಯಾವ ಜೀವನಶೈಲಿ ಆರ್ಟರಿಗಳು ದಪ್ಪವಾಗುವುದಕ್ಕೆ ಕಾರಣವಾಯಿತೋ ಅದೇ ಜೀವನಶೈಲಿಯನ್ನು ಮತ್ತೆ ಅನುಸರಿಸುವುದಾದಲ್ಲಿ ಪೇಸ್‌ಮೇಕರ್ ಅಥವಾ ಕರೊನರಿ ಬೈಪಾಸ್ ಶಸ್ತ್ರಚಿಕಿತ್ಸೆಯಿಂದ ಏನೂ ಪ್ರಯೋಜನವಾಗದು. ಕಿಟಕಿಗಳೇ ಇಲ್ಲದ, ಮರ ಮತ್ತು ಮಣ್ಣಿನಿಂದ ನಿರ್ಮಿಸಿದ ಒಂಟಿ ಕೋಣೆಯ ಮನೆಗಳಲ್ಲಿ ವಾಸಿಸುವ ನವಾಜೊ ಇಂಡಿಯನ್ ಕೂಡುಕುಟುಂಬಗಳಿಗೆ ಆಧುನಿಕ ಆರೋಗ್ಯ ಸೌಲಭ್ಯಗಳನ್ನು ತರುವುದಕ್ಕಾಗಿ 1950ರಲ್ಲಿ ವೈದ್ಯರು ಮತ್ತು ನರ್ಸುಗಳ ಒಂದು ತಂಡ ಮಾಡಿದ ಪ್ರಯತ್ನಗಳನ್ನು ಇದಕ್ಕೆ ಉದಾಹರಣೆಯಾಗಿ ಅವರು ಕೊಡುತ್ತಾರೆ. ಅಲ್ಲಿ ಕಾರ್ಯ ನಿರ್ವಹಿಸಿದ ಈ ತಂಡವು ಐದು ವರ್ಷಗಳ ಕೊನೆಯ ಹೊತ್ತಿಗೆ ಮಕ್ಕಳ ಕ್ಷಯ ಮತ್ತು ಕಿವಿಸೋಂಕಿನ ರೋಗಗಳನ್ನು ಕಡಿಮೆಮಾಡಿತು. ಆದರೆ ಈ ನವಾಜೊಗಳಲ್ಲಿ ಮತ್ತೆ ಅದೇ ರೋಗಗಳೇ ಕಂಡುಬಂದುವೇ ಹೊರತು ಬೇರೆ ಯಾವ ಬದಲಾವಣೆಯನ್ನೂ ಅದು ತರಲಿಲ್ಲ. ಅವರ ಮಕ್ಕಳು ಮೊದಲಿನಂತೆಯೇ ಅತಿಸಾರ ಮತ್ತು ನ್ಯುಮೋನಿಯಾಗಳಿಂದ ಸಾಯುತ್ತಲೇ ಇದ್ದರು. ಆಹಾರದ ಅಪೌಷ್ಟಿಕತೆಯನ್ನಾಗಲಿ, ನೈರ್ಮಲ್ಯೀಕರಣದ ಕೊರತೆಯನ್ನಾಗಲೀ ಆಂಟಿ ಬಯಾಟಿಕ್‌ಗಳು ನಿವಾರಿಸಲಿಲ್ಲ. ಪ್ರಸ್ತುತ ಶತಮಾನದ ಕೊನೆಯ ಭಾಗದಲ್ಲಿ ಅತಿಜನಸಾಂದ್ರತೆಯ ಕೈಗಾರಿಕಾ ನಗರಗಳ ಯಹೂದ್ಯ ವಸತಿಗಳಲ್ಲಿ ವಾಸಿಸುತ್ತಿದ್ದ ಮಕ್ಕಳೂ ಸಹ ಈ ನವಾಜೊ ಮಕ್ಕಳ ಥರದ ಖಾಯಿಲೆಗೇ ತುತ್ತಾಗುತ್ತಿದ್ದವು. 1950ರ ಹೊತ್ತಿಗೆ ಕ್ಷಯ, ಟೈಫಾಯಿಡ್, ಡಯೇರಿಯಾ, ನ್ಯುಮೋನಿಯಾಗಳಂತಹ ಮಾರಿಗಳಿಂದ ಸಾಯುವವರ ಸಂಖ್ಯೆ ಕಡಿಮೆಯಾಗಿತ್ತು. ಇದಕ್ಕೆ ಈ ಮೊದಲು ಬಳಕೆಯಲ್ಲಿಲ್ಲದ ಹೊಸ ಔಷಧಗಳು ಅಥವಾ ವ್ಯಾಕ್ಸೀನುಗಳು ಕಾರಣವಾಗಿರದೆ ಜೀವನದ ಸ್ಥಿತಿಗತಿಗಳಲ್ಲಿ ಸುಧಾರಣೆಯಾದುದೇ ಕಾರಣವಾಗಿತ್ತು. ಈ ಹಳೆಯ ರೋಗಗಳು ಹಿಂದೆ ಸರಿಯುತ್ತ ಬಂದಂತೆ ಕ್ಯಾನ್ಸರ್, ಹೃದ್ರೋಗ, ಪಾರ್ಶ್ವವಾಯು ಮೊದಲಾದ ಹೊಸ ರೋಗಗಳು ಶ್ರೀಮಂತ ಜಗತ್ತಿಗೆ ಜೊತೆ ಎಂಬಂತೆ ಕಾಣಿಸಿಕೊಂಡವು. ಇತ್ತೀಚೆಗೆ ಕೈಗಾರಿಕೀಕರಣಗೊಂಡ ದೇಶಗಳಾದ ಸೋವಿಯತ್ ಯೂನಿಯನ್ ಮತ್ತು ವೆನಿಜುಯೇಲಾಗಳೂ ಸಹ ಆರ್ಟರಿಯೋ ಸ್ಕ್ಲಿರೋಸಿಸ್ಸಿಂದ

ಹೆಚ್ಚು ಜನ ಸಾಯುತ್ತಿರುವ 'ಹೆಮ್ಮೆ'ಗೆ ಪಾತ್ರವಾಗುತ್ತಿದೆ. ಇದು ಈ ದೇಶಗಳ ಸಮೃದ್ಧಿ ಹೆಚ್ಚಾಗುತ್ತಿರುವುದರ ದ್ಯೋತಕ.

ಕರೊನರಿ ಹೃದ್ರೋಗಗಳಿಗೆ ಎಡೆಮಾಡಿ ಕೊಡುವಂಥ ಉದ್ವೇಗ ಮತ್ತು ಒತ್ತಡವನ್ನು ತಪ್ಪಿಸಬೇಕಾದರೆ ಇಂಥ ಶ್ರೀಮಂತ ದೇಶಗಳ ಜನ ಯಾವ ರೀತಿಯ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು? ಆಧುನಿಕ ಜೀವನ ಶೈಲಿ ಒದಗಿಸುತ್ತಿರುವಂಥ ಸ್ಥಾನಮಾನ, ಪದವಿ, ಗೌರವ, ಸಿರಿವಂತಿಕೆ ಇತ್ಯಾದಿ ಆಕರ್ಷಣೆ ಅನುಕೂಲಗಳನ್ನು ಮನುಷ್ಯ ಸುಲಭವಾಗಿ ಬಿಟ್ಟುಕೊಡುವುದು ಸಾಧ್ಯವಿಲ್ಲ. ಆದರೆ ಪಾರಂಪರಿಕ ಸಮಾಜಗಳಲ್ಲಿರುವಂತಹ ತೀರಾ ವಿಭಿನ್ನವಾದ ಜೀವನಗತಿ ಮತ್ತು ಮೌಲ್ಯಗಳನ್ನು ಆಧುನಿಕ ಜೀವನಪದ್ಧತಿಗೆ ಬದಲಾಗಿ ಜಾನಪದ ತಜ್ಞರು ತೋರಿಸಬಲ್ಲರು. ಅಧಿಕ ಒತ್ತಡ ಮತ್ತು ಹೃದಯಾಘಾತಗಳು ಜನಪದರನ್ನು ಎಷ್ಟರಮಟ್ಟಿಗೆ ಬಾಧಿಸುತ್ತಿವೆ?

1973, ಏಪ್ರಿಲ್ 16ರ ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆಯ ಮೊದಲ ಪುಟದಲ್ಲಿಯೇ ಇರುವ ಸುದೀರ್ಘ ಲೇಖನದ ಪ್ರಕಾರ ಎಲ್ಲಿಯವರೆಗೆ ಜನಪದರು ಅಮೆರಿಕನೀಕರಣಕ್ಕೆ ಈಡಾಗುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಇದರ ಭಯ ಇಲ್ಲ. ಬಿಲ್ ರಿಚರ್ಡ್ಸ್ ಈ ಪತ್ರಿಕೆಗಾಗಿ ಬರೆದ American Ethic Kills Minds ಎಂಬ ಶೀರ್ಷಿಕೆಯ ಲೇಖನವೊಂದರಲ್ಲಿ ಪೂರ್ವ ಪೆನ್ಸಿಲ್ವೇನಿಯಾದ ರೊಸೆಟೊ ಎಂಬ ಊರಿನ ಕಥೆ ಇದೆ. ಒಂದು ಸಾವಿರದ ಆರುನೂರು ಇಟಾಲಿಯನ್ ಜನಸಂಖ್ಯೆಯಿರುವ ಈ ಊರಿನ ಜನರು ಹೃದಯಾಘಾತಗಳಿಗೆ ಸಂಪೂರ್ಣ ನಿರೋಧಕತೆಯಿಂದಾಗಿ 1960ರ ಆರಂಭದಲ್ಲಿ ರಾಷ್ಟ್ರೀಯ ಗಮನ ಸೆಳೆದಿದ್ದರು. ಟೆಕ್ಸಾಸ್ ವಿಶ್ವವಿದ್ಯಾಲಯದ ಡಾ.ಜಾನ್ ಸಿ. ಬ್ರುನ್ ಎಂಬ ವೈದ್ಯಕೀಯ ಸಮಾಜಶಾಸ್ತ್ರಜ್ಞರ ನೇತೃತ್ವದಲ್ಲಿ ಒಂದು ಸಂಶೋಧನಾ ತಂಡವು 1961ರಲ್ಲಿ ರೆಸೆಟೊಗೆ ಬಂದಿಳಿಯಿತು. ಇಲ್ಲಿ ಹೃದಯ ಸಂಬಂಧಿ ಖಾಯಿಲೆಗಳ ಪ್ರಮಾಣವು ಪ್ರತಿ 1000 ಪುರುಷರಿಗೆ 3.95 ರಂತೆ ರಾಷ್ಟ್ರೀಯ ಸರಾಸರಿಯಲ್ಲಿ ಅದರ ಮಾನವೇ ಒಂದು ಭಾಗದಷ್ಟಿದೆ ಮತ್ತು ಈ ಪ್ರದೇಶದ ಇಟಾಲಿಯನೇತರ ಊರುಗಳ ಕೇವಲ $^1/_4$ ರಷ್ಟಿದೆ ಎಂದು ವರದಿ ಮಾಡಿತು.

ಇಷ್ಟಾಗಿಯೂ ಕುಳ್ಳನೆಯ ಭಾರೀ ತೂಕದ ರೊಸೆಟಿಯನ್ನರು ಊಟದಲ್ಲಿ ಅತಿ ಧಾರಾಳವಾಗಿ ಪಾಸ್ತಾ, ಪ್ರಾಸ್ಕಿಯುಟೊ ಮತ್ತು ಸ್ಕಾರ್ಪೆಟಿಯನ್ ಸೇವಿಸುತ್ತಿದ್ದರು.

(ಹಂದಿಯ ಕೊಬ್ಬಿನಲ್ಲಿ ಕರಿದ ಹಸಿರು ಮೆಣಸು ಮತ್ತು ಧಾರಾಳವಾಗಿ ಹಂದಿಯ ಕೊಬ್ಬು ಹಾಕಿ ಮಾಡಿದ ಸಾರಿನಲ್ಲಿ ಅದ್ದಿದ ಬ್ರೆಡ್ಡು). ಅವರ ಊಟದ ಅವಧಿ ಆರು ಗಂಟೆಗಳಷ್ಟು ದೀರ್ಘಕಾಲದ್ದು. ಬ್ರುನ್ ತಂಡವು 1965ರಲ್ಲಿ ಒಂದು ವರದಿಯನ್ನು ಪ್ರಕಟಿಸಿ ನಲವತ್ತೇಳು ವರ್ಷ ವಯಸ್ಸಿಗೆ ಕಡಿಮೆ ಇರುವ ಒಬ್ಬನೇ ಒಬ್ಬ ರೊಸೆಟಿಯನ್ನನಿಗೂ ಕೂಡ ಹೃದಯಾಘಾತವಾದ ದಾಖಲೆ ಇಲ್ಲ. ಅಮೆರಿಕನ್ನರಿಗಿಂತ ಈ ರೊಸೆಟಿಯನ್ನರು ಹತ್ತಿಪ್ಪತ್ತು ವರ್ಷ ಹೆಚ್ಚು ಕಾಲ ಬದುಕಿರುತ್ತಾರೆ ಎಂದು ವರದಿ ಮಾಡಿತು. ಕೃಷಿಯಾಧಾರಿತ ರೊಸೆಟೊ, ವಾಲ್ ಪೋರ್ಟ್, ಫಾಗಿಯಾ ಮೊದಲಾದ ಹಳ್ಳಿಗಳಿಂದ 1882 ರಲ್ಲಿ ಮೊದಲ ಬಾರಿಗೆ ಬಂದ ವಲಸೆಗಾರರ ಗೋರಿಕಲ್ಲುಗಳ ಬರಹಗಳಿಂದ ತಿಳಿದುಬರುವಂತೆ ಇವರೆಲ್ಲ ದೀರ್ಘಾಯುಷಿಗಳಾಗಿದ್ದರು ಎಂಬುದಕ್ಕೆ ಸಾಕ್ಷ್ಯಸಿಗುತ್ತದೆ. ಉದಾ : ಫಾಸ್ಟೊ ಸಬಾಟಿನೋ 1866–1951, ವಿನ್ಸೆನ್ಜಾಗಾಗಿಯಾಗಾರೋ–1879–1953....

ದೀರ್ಘಾಯುಷಿ ರೊಸೆಟಿಯನ್ನರನ್ನು ಕುರಿತಂತೆ ಟೈಮ್ ನ್ಯೂಸ್ ಮ್ಯಾಗಜೈನಿನಲ್ಲಿದ್ದ ಲೇಖನವೊಂದು ನನ್ನ ಗಮನ ಸೆಳೆದುದಕ್ಕೆ ಕಾರಣ ಈ ಮಿತಿಮೀರಿದ ತೂಕದ ಅಧಿಕ ಕೊಲೆಸ್ಟರಾಲ್ ಭೋಜನಪ್ರಿಯರು ಹೃದ್ರೋಗಕ್ಕೆ ನಿರೋಧಕತೆ ಹೊಂದಿದ್ದರು ಎಂಬುದಲ್ಲ. ಬದಲಾಗಿ ಅವರು ವಲಸೆ ಬಂದ ಗ್ರಾಮೀಣ ಸಮುದಾಯದವರು, ಶುದ್ಧ ಇಟಾಲಿಯನ್ನರು, ಅಮೆರಿಕಾದಲ್ಲಿ ವಸತಿ ಹೂಡಿದ ಹಳೆಯ ಜಗತ್ತಿನ ಮೂಲ ಸಮುದಾಯಕ್ಕೆ ಸೇರಿದವರಾಗಿದ್ದರು ಎಂಬುದು. ತೌಲನಿಕ ಕ್ಷೇತ್ರಕಾರ್ಯಕ್ಕೆ ಇದು ಸಾಕಷ್ಟು ಸಾಧ್ಯತೆಗಳನ್ನು ಹೊಂದಿದೆ ಎಂದು ನನಗನ್ನಿಸಿತು. ಅದನ್ನು ಕಾರ್ಲಾ ಬಿಯಾಂಕಾಗೆ ತಿಳಿಸಿದೆ. ಆಕೆ ಜಾನಪದದಲ್ಲಿ ಡಾಕ್ಟೊರೇಟ್ ಮಾಡಲು ಇಂಡಿಯಾನಾ ವಿಶ್ವವಿದ್ಯಾಲಯಕ್ಕೆ ಬಂದಿದ್ದಳು. ಮತ್ತು ಇಟಾಲಿಯನ್ ಅಮೆರಿಕನ್ನರಲ್ಲಿ ಕ್ಷೇತ್ರಕಾರ್ಯ ನಡೆಸಿ 'The Two Rosetor' ಎಂಬ ಅದ್ಭುತ ಬರಹ ಪ್ರಕಟಿಸಿದಳು. ಅದನ್ನು ಇಂಡಿಯಾನಾ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸುತ್ತಿದೆ. ಆಕೆಯ ಮುಖ್ಯ ಆಸಕ್ತಿ ತೌಲನಿಕ ಜನಾಂಗಿಕ ಶಾಸ್ತ್ರ ಮತ್ತು accultaration process ಕಡೆಗಿರುವುದಾದರೂ ಪೆನ್ಸಿಲ್ವೇನಿಯಾ ರೊಸೆಟನ್ನರಲ್ಲಿ ಹೃದ್ರೋಗ ಇಲ್ಲದಿರುವ ಬಗ್ಗೆಯೂ ನಾವು ಚರ್ಚೆಮಾಡಿದೆವು. ಅವರು ಹಳೆಯ ಜಗತ್ತಿನಿಂದ ಹೊಸ ಜಗತ್ತಿಗೆ ಮಾಡಿದ ಯಶಸ್ವೀ ಸ್ಥಿತ್ಯಂತರದಲ್ಲಿ ಇದರ ವಿವರಣೆ ಅಡಗಿದೆ ಎಂಬ ಒಮ್ಮತಕ್ಕೆ ಬಂದೆವು. ಈ ಸ್ಥಿತ್ಯಂತರದ ಮೂಲಕ ಅವರು

ಎರಡು ಜಗತ್ತುಗಳ ಉತ್ತಮಾಂಶಗಳನ್ನು ಗಳಿಸಿದ್ದರು. ಈ ಹೊಸ ವ್ಯವಸ್ಥೆಗೆ ಬಂದ ನಂತರ ಅವರು ನಗರದ ಯೆಹೂದ್ಯ ವಸತಿ ಸ್ಥಳಗಳಲ್ಲಿ ವಾಸ್ತವ್ಯ ಹೂಡಿ ಮಧ್ಯಮವರ್ಗದ ಉಪನಗರಗಳಿಗೆ ಏರುವಂತಹ ತ್ರಾಸದಾಯಕ ಪ್ರಯತ್ನಕ್ಕೆ ಕೈಹಾಕಿರಲಿಲ್ಲ. ಸ್ಲೇಟುಸ್ತರಗಳ ಕಡೆ ಆಕರ್ಷಿತರಾಗಿ ಬಂದ ಇಂಗ್ಲಿಷ್ ಮತ್ತು ವೆಲ್ಸ್ ಗಣಿಗಾರರ ಜೊತೆಗೂಡಿ ಮೊದಲು ಬಂದ ವಲಸೆಗಾರರೂ ಸಹ ಪೂರ್ವ ಪೆನ್ಸಿಲ್ವೇನಿಯಾದ ಸ್ಲೇಟುಗಣಿಗಳಲ್ಲಿ ಕೆಲಸ ಪಡೆದು ದಿನಕ್ಕೆ 50 ಸೆಂಟ್ ಗಳಿಸುತ್ತಿದ್ದರು. ಇಲ್ಲಿ ಅವರು ಚೆನ್ನಾಗಿ ವೃದ್ಧಿ ಹೊಂದಿದರು. ಸ್ವಂತ ಮನೆಗಳನ್ನು ಕೊಂಡರು. ತಮ್ಮದೇ ಸಮುದಾಯವನ್ನು ಸ್ಥಾಪಿಸಿದರು. ಈಗಲೂ ಕೂಡ ಇದರಲ್ಲಿ 95% ಇಟಾಲಿಯನ್ನರೇ ಇದ್ದಾರೆ. ಅವರು ತಮ್ಮ ಪ್ರಚಂಡವಾದ ಹಾಗೂ ನಿಕಟವಾಗಿ ಹೆಣೆದುಕೊಂಡ ಜೀವನಕ್ರಮದಿಂದ ಸ್ಥಳೀಯರಿಂದ ಮಾನ್ಯತೆ ಗಳಿಸಿಕೊಂಡರು. ಈ ಅದೃಷ್ಟವಂತ ರೊಸೆಟನ್‌ಗಳು ಮಧ್ಯಮವರ್ಗದ ಅಮೆರಿಕಾದ ಅನುಕೂಲತೆಗಳನ್ನು ಅನುಭವಿಸುವುದರ ಜೊತೆಗೆ ತಮ್ಮ ಪಾರಂಪರಿಕ ಸಂಸ್ಕೃತಿಯ ಧಾರ್ಮಿಕ ಏಕತೆಯನ್ನು ಉಳಿಸಿಕೊಂಡರು. ಅವರು ಧಾರಾಳವಾಗಿ ತಿಂದರು ಮತ್ತು ದೀರ್ಘಾಯುಷಿಗಳಾಗಿ ಬದುಕಿದರು.

ಆದರೆ 1960ರ ಮಧ್ಯಭಾಗದಲ್ಲಿ ಈ ಸ್ವರ್ಗಕ್ಕೆ ಸೈತಾನನ ಪ್ರವೇಶವಾಯಿತು. ಇದರಿಂದ ರೊಸೆಟೊ ಬದುಕು ಭ್ರಷ್ಟವಾಯಿತು. ಇಲ್ಲಿನ ಹೃದಯಾಘಾತಗಳ ಪ್ರಮಾಣವು 1972ರ ರಾಷ್ಟ್ರೀಯ ಸರಾಸರಿಯ ಮೂರುಪಟ್ಟು ಹೆಚ್ಚಾಯಿತು ಮತ್ತು ಇದಕ್ಕೆ ಕಾರಣವನ್ನು ಕಂಡುಹಿಡಿಯಲು ವೈದ್ಯಕೀಯ ಸಾಮಾಜಿಕ ಸಂಶೋಧಕರು ಮತ್ತೆ ರೊಸೆಟೊಗೆ ಬಂದರು. ಕಾರಣವನ್ನು ಅವರು ತಕ್ಷಣವೇ ಗುರುತಿಸಿದರು ಮತ್ತು ಅದಕ್ಕೆ "ಅಮೆರಿಕನೀಕರಣ" ಎಂಬ ಹಣೆಪಟ್ಟಿ ಹಚ್ಚಿದರು.

ಡಾ. ಬ್ರುನ್ ಈ ಬಗ್ಗೆ ಹೀಗೆ ಹೇಳುತ್ತಾರೆ : "ನಾವು ದಂಗಾಗಿಬಿಟ್ಟೆವು. ಇಲ್ಲಿ ಎದ್ದು ಕಾಣುವಂತಹ ಬದಲಾವಣೆ ನಡೆದಿತ್ತು. ಪುರುಷರು ಕಂಟ್ರಿಕ್ಲಬ್ಬುಗಳಿಗೆ ಸೇರಿದ್ದರು. ಗಾಲ್ಫ್ ಆಡುತ್ತಿದ್ದರು. ಅವರ ಮಕ್ಕಳು ಚಿತ್ರವಿಚಿತ್ರ ಕಾರುಗಳನ್ನು ಓಡಿಸುತ್ತಿದ್ದರು. ಕಾಲೇಜುಗಳಿಗೆ ಹೋಗುತ್ತಿದ್ದರು. ಪ್ರತಿಯೊಬ್ಬರೂ ಕೂಡ ಆದಷ್ಟು ಬೇಗ ದುಡ್ಡುಮಾಡುವುದರಲ್ಲಿ, ಖರ್ಚುಮಾಡುವುದರಲ್ಲಿ ತೊಡಗಿದ್ದರು. ಊಟದ ಸಮಯದಲ್ಲಿ ಕುಟುಂಬದ ಎಲ್ಲ ಸದಸ್ಯರೂ ಊಟದ ಮೇಜಿನ ಮುಂದೆ ಇಲ್ಲದಿದ್ದಂತಹ ಒಂದೇ ಒಂದು ಕುಟುಂಬವನ್ನು 1961ರಲ್ಲಿ ಕಂಡಿರಲಿಲ್ಲ. ಈಗ

ಹಾಗಿಲ್ಲ. ಅವಸರದಲ್ಲಿ ಬರುತ್ತಾರೆ. ಏನೋ ಒಂದಿಷ್ಟು ತಿನ್ನುತ್ತಾರೆ. ಪುನಃ ಹೊರಗೆ ಓಡುತ್ತಾರೆ. ಮೊದಲು ಅವರು ಪರಸ್ಪರ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಸುಖದುಃಖ ಹಂಚಿಕೊಳ್ಳುತ್ತಿದ್ದರು. ಈಗ ನಿನಗಿಂತ ನಾನು ಚೆನ್ನಾಗಿದ್ದೇನೆ, ಎಂದು ತೋರಿಸಿಕೊಳ್ಳುವ ಹಂಬಲವೇ ಎಲ್ಲರಿಗೂ. 1961 ರಿಂದ 1971ರ ಅವಧಿಯಲ್ಲಿ ರೋಸೆಟನ್ ಕೌಟುಂಬಿಕ ಆದಾಯವು 7000 ಡಾಲರ್‍ಗಳಿಂದ 11,000 ಡಾಲರ್‌ಗಳಿಗೆ ಏರಿತು. 1971ರ ರೋಸೆಟನ್ನರ ಬಳಿ ಬಣ್ಣದ ಟಿವಿ ಇದ್ದವು. ದೊಡ್ಡ ದೊಡ್ಡ ಕಾರುಗಳಿದ್ದವು. ಖಾಲಿಯಾದ ವಿಸ್ತಾರ ನಿವೇಶನಗಳಲ್ಲಿ ಇಟ್ಟಿಗೆ ಮತ್ತು ಕಲ್ಲಿನಲ್ಲಿ ನಿರ್ಮಿಸಿದ ಸುಂದರ ಮನೆಗಳಿದ್ದವು. ಅಥವಾ ತಮ್ಮ ಹಳೆಯ ಮನೆಗಳನ್ನು ಮಾರ್ಪಡಿಸಿ ಹೊಸ ರೀತಿ ಕಟ್ಟಿಸಿದ್ದರು. ಮೊದಲು ಹಿತ್ತಲಲ್ಲಿದ್ದ ಹಣ್ಣಿನ ತೋಟ ಅಥವಾ ಹಣ್ಣಿನ ಮರಗಳಿಗೆ ಬದಲಾಗಿ ಈಗ ಮನೆಯ ಮುಂದೆ ನೀಟಾದ ಹಲ್ಲುಹಾಸುಗಳಿದ್ದವು. "ಜನ ಭಾರೀ ಅಂತಸ್ತಿನ ಜೀವನ ಮಾಡುತ್ತಿದ್ದಾರೆ" ಎಂದು 72 ವರ್ಷ ವಯಸ್ಸಿನ ಮೇರಿ ಕೆನಾವೊ ಹೇಳಿದಳು. ಅವಳು ಒಂದು ಖಾನಾವಳಿಯ ಒಡತಿ. ಮೊದಲೆಲ್ಲ ನಾವು ಒಂದು ದೊಡ್ಡ ಕುಟುಂಬದಂತೆ ಸಂತೋಷವಾಗಿರುತ್ತಿದ್ದೆವು. ಆದರೆ ಈಗ ನಾನು ನಿನಗಿಂತ ಚೆನ್ನಾಗಿದ್ದೇನೆ ಅಥವಾ ನೀನು ನನಗಿಂತ ಚೆನ್ನಾಗಿದ್ದೀಯಲ್ಲ ಎಂಬ ಧೋರಣೆ ಕಂಡುಬರುತ್ತಿದೆ. ಎಲ್ಲರೂ ಮರೆಯುತ್ತಿದ್ದಾರೆ ಎಂದಳು.

ಒಂದು ದಶಕದ ಕಾಲಾವಧಿಯಲ್ಲಿ ರೊಸೆಟಿಯನ್ನರ ಕೆಲಸ, ಆಟದ ಅಭ್ಯಾಸಗಳು ಮತ್ತು ಒಂದು ಕಾಲದ ನಿರಾತಂಕ ಸುಖದ ಜೀವನ ಶೈಲಿ ಗಮನಾರ್ಹವಾಗಿ ಬದಲಾಗಿತ್ತು. ಮೇಲುಮೇಲಿನ ಸ್ಥಾನಗಳಿಗೆ ಏರುತ್ತಿದ್ದ ರೊಸೆಟನ್ನರು ಈಗ ಆಫೀಸು ಮತ್ತಿತರ ಆಧಿಕಾರದ ಕೆಲಸಗಳಿಂದಾಗಿ ಊರಿನಿಂದ 30 ಮೈಲುಗಳಾಚೆ ಹೋಗಿಬರುತ್ತಿದ್ದರು. ಮಕ್ಕಳು ಕಾಲೇಜು, ಕೆಲಸ, ಮದುವೆ ಇತ್ಯಾದಿ ಕಾರಣವಾಗಿ ಹೊರ ಜಗತ್ತನ್ನು ಪ್ರವೇಶಿಸಿದ್ದರು. ಹಳೆಯ ಸಾಮುದಾಯಿಕ ಉಲ್ಲಾಸ ಜೀವನಕ್ಕೆ ಬದಲಾಗಿ ಬಂದಿದ್ದ ದಿನನಿತ್ಯದ ಸ್ಪರ್ಧೆಯ ಜೀವನ ವಿಧಾನವೇ ಹೃದ್ರೋಗಗಳಿಗೆ ಕಾರಣ ಎಂಬುದು ಡಾ. ಬ್ರುನ್ ಅವರ ವಿವರಣೆಯಾಗಿತ್ತು. ರೊಸೆಟಾದಲ್ಲಿ ಕೌಟುಂಬಿಕ ಹಾಗು ಸಾಮುದಾಯಿಕ ಬೆಂಬಲ ಕಾಣೆಯಾಗುತ್ತಿದೆ. ಇಲ್ಲಿ ಹೃದಯಾಘಾತಕ್ಕೊಳಗಾದ ಬಹುತೇಕ ಪುರುಷರು ಒತ್ತಡದ ಜೀವನ ನಡೆಸುತ್ತಿದ್ದರು ಮತ್ತು ತಮ್ಮ ಒತ್ತಡವನ್ನು ತಗ್ಗಿಸಿಕೊಳ್ಳುವ ಯಾವ ಹೊರದಾರಿಯೂ

ಅವರಿಗಿರಲಿಲ್ಲ. ಈ ಜನ ಏನೋ ಪಡೆಯುವುದಕ್ಕಾಗಿ ಮತ್ತೇನೋ ಕೊಟ್ಟಿದ್ದರು. ಅದು ಅವರನ್ನು ಕೊಲ್ಲತೊಡಗಿತ್ತು ಎನ್ನುತ್ತಾರೆ ಬ್ರುನ್.

ಕೆಲವು ವೈದ್ಯಕೀಯ ಸಂಶೋಧಕರು ಬ್ರುನ್ ಅವರ ವಿಶ್ಲೇಷಣೆಯನ್ನು ಒಪ್ಪಲಿಲ್ಲ. ಮಿನೆಸೊಟಾ ವಿಶ್ವವಿದ್ಯಾಲಯದ ಪಬ್ಲಿಕ್ ಹೆಲ್ತ್ ಪ್ರೊಫೆಸರ ಎಮಿರಿಟಸ್ ಆದ ಡಾ. ಅನ್ಸೆಲ್ ಕೆಯಿಸ್ ಅವರು ಎರಡನೇ ವರದಿಯು ಮೊದಲನೆಯದರ ತಪ್ಪು ಅಂಕಿ ಅಂಶಗಳನ್ನು ಆಧರಿಸಿದೆ. ಮೊದಲನೇ ಅಂಕಿ ಅಂಶ ಯಾಕೆ ವ್ಯತ್ಯಾಸವಾಯಿತೆಂದರೆ ರೊಸೆಟ್ಟಾದ ಮೂಲ ವೈದ್ಯಕೀಯ ದಾಖಲೆಗಳ ಬಗ್ಗೆ ವರದಿಮಾಡಿದ ಸ್ಥಳೀಯ ವೈದ್ಯನಿಗೆ ಹೃದಯಾಘಾತ ಎಂಬ ಪದವನ್ನು ಬಳಸುವುದು ಇಷ್ಟವಿರಲಿಲ್ಲ. ಮತ್ತು ಅಂತಹ ಯಾವುದೇ ಪ್ರಕರಣವನ್ನು ಮಾನ್ಯ ಮಾಡಲು ಆತ ನಿರಾಕರಿಸಿದ್ದ. ಈ ಕಾರಣದಿಂದ ಬ್ರುನ್ ಅವರ ಎರಡೂ ವರದಿಗಳು ಸರಿಯಿಲ್ಲ ಎಂದು ಅವರು ವಿವಾದವೆತ್ತಿದರು. ಅಂದರೆ ನಲವತ್ತೆಂಟು ವರ್ಷಕಾಲ ರೊಸೆಟ್ಟೋರ ವೈದ್ಯರಾಗಿದ್ದ ಡಾ. ಜೋಸೆಫ್ ಫರೇಸ್ ಅವರು ಕೆಯಿಸ್ ಅವರ ಅಭಿಪ್ರಾಯವನ್ನು ಪ್ರಶ್ನಿಸಿದರು. ತಮ್ಮ ರೋಗಿಗಳ ಆಹಾರಾಭ್ಯಾಸಗಳು ಅತಿರೇಕದ್ದಾಗಿದ್ದರೂ ಅವರೆಂದೂ ಹೃದ್ರೋಗದಿಂದ ನರಳಲಿಲ್ಲ ಎಂದು ಅವರು ಸ್ಪಷ್ಟವಾಗಿ ಘೋಷಿಸಿದರು. ಆದರೆ ಇತ್ತೀಚಿನ ವರ್ಷಗಳಲ್ಲಿ 30–40ರ ವಯೋಮಿತಿಯಲ್ಲಿರುವ ರೊಸೆಟನ್ನರಿಗೆ ಅವರು ನರದೌರ್ಬಲ್ಯಗಳಿಗೆ ಚಿಕಿತ್ಸೆ ನೀಡುತ್ತಿದ್ದುದು ನಿಜ. ಈ ಸಮಸ್ಯೆಯೂ ಕೂಡ ಮೊದಲೆಂದೂ ಕಂಡುಬಂದಿರಲಿಲ್ಲ. ಈಗ ಕಿರಿಯ ಪೀಳಿಗೆಯವರಲ್ಲಿ ಯಾರಿಗೆ ಹೃದಯಾಘಾತವಾಗುತ್ತಿದೆ ಎಂದರೆ ಯಾರು ಒತ್ತಡದಲ್ಲಿ ಕೆಲಸ ಮಾಡುತ್ತಾ ತಾವೆಷ್ಟು ಹಣ ಮಾಡಬೇಕು ಎಂದು ತಲೆಕೆಡಿಸಿಕೊಳ್ಳುತ್ತಿದ್ದರೊ ಅಂಥವರಿಗೆ ಮಾತ್ರ ಎಂದು ಡಾ. ಫರೇಸ್ ಒಪ್ಪಿಕೊಳ್ಳುತ್ತಾರೆ.

ಈ ಹಂತದಲ್ಲಿ ನಾವು ಒತ್ತಡದಿಂದ ಉಂಟಾಗುವ ಖಾಯಿಲೆಗಳಾದ ಅರ್ಟೀರಿಯೊ ಸ್ಕ್ಲಿರೊಸಿಸ್ ಮತ್ತು ಆಧುನಿಕ ಜೀವನ ಶೈಲಿಗೆ ಸಂಬಂಧವಿದೆ ಎಂದು ಹೇಳುವುದಕ್ಕೆ ರೊಸೆಟೊ ಅನುಭವವನ್ನು ಆಧಾರವಾಗಿಟ್ಟುಕೊಳ್ಳುವುದಾದಲ್ಲಿ ಇದಕ್ಕೆ ಸಂವಾದಿಯಾದ ಆಧಾರ ಮತ್ತೆಲ್ಲಾದರೂ ಇದೆಯೇ ಎಂದು ಕೇಳಬಹುದು. ಜನಪಧ ಶೈಲಿ ಅಥವಾ ಹಸನ್ ಎಲ್–ಶಮಿ ಕರೆಯುವಂತೆ ಜಾನಪದೀಯ ನಡವಳಿಕೆ ಹೇಗೆ ಒತ್ತಡವನ್ನು ಬಿಡುಗಡೆ ಮಾಡುತ್ತದೆ ಎಂದು ನೋಡಬಹುದು.

ಮೊದಲನೆಯ ಅಂಶಕ್ಕೆ ಸಂಬಂಧಿಸಿದತೆ ಈಜಿಪ್ಟಿನ ಕೈರೋದ ವೃತ್ತಪತ್ರಿಕೆಯಲ್ಲಿ ಪ್ರಕಟವಾದ ವಿಷಯ ನೋಡೋಣ. ಅದು ಹೀಗಿದೆ: "ಉದ್ಯೋಗಸ್ಥ ಮಹಿಳೆಯರು ಹೃದಯ ಬೇನೆಗಳ ಬಲೆಗೆ" (The working women entere the trap of Heart Ailments - 1973) ಎಂಬುದು ಇದರ ಶೀರ್ಷಿಕೆ. ಕಳೆದ 10 ವರ್ಷಗಳ ಅವಧಿಯಲ್ಲಿ ಈಜಿಪ್ಟಿನ ಮಹಿಳೆಯರಲ್ಲಿ ಆರ್ಟೀರಿಯಲ್ ಏರುಪೇರುಗಳು ಹಾಗು ರಕ್ತ ಗರಣೆಕಟ್ಟುವಿಕೆ (Thrombosis) ಪ್ರಕರಣಗಳು ಹೆಚ್ಚಾಗಿವೆ ಎಂದು ಈ ವರದಿ ತಿಳಿಸುತ್ತದೆ. ಈ ಅವಧಿಯಲ್ಲಿ ಅವರು ಪುರುಷರಂತೆಯೇ ಭಾರೀ ಸ್ಪರ್ಧಾತ್ಮಕವಾದ ಕಾರ್ಯಗಳಲ್ಲಿ ತೊಡಗುವುದಕ್ಕಾಗಿ ತಮ್ಮ ಸಾಂಪ್ರದಾಯಿಕ ಪಾತ್ರಗಳನ್ನು ತೊರೆದುಬಿಟ್ಟರು. ಕಳೆದ ವರ್ಷ 'ಕ್ವೆಸರ್ ಅಲ್ ಐನಿ' ಆಸ್ಪತ್ರೆಯ ಒಳರೋಗಿ ಮತ್ತು ಕಾರ್ಡಿಯಾಕ್ ವಿಭಾಗದಲ್ಲಿ ಚಿಕಿತ್ಸೆ ನೀಡಲಾದ ಒಟ್ಟು 179,403 ಹೊರರೋಗಿಗಳಲ್ಲಿ ಹೆಂಗಸರ ಸಂಖ್ಯೆ 102,000 ಆಗಿದ್ದು ಇವರಲ್ಲಿ 48,000 ಮಂದಿಗೆ ಹೃದಯ ಬೇನೆಗಳಿದ್ದವು. ಇದರಲ್ಲಿ ಹೃದ್ರೋಗಗಳೆಂದು ಹೇಳಲಾದ ಅನೇಕ ಪ್ರಕರಣಗಳು ವಾಸ್ತವಾಗಿ ನರದೌರ್ಬಲ್ಯದ ಸ್ಥಿತಿಗಳಾಗಿದ್ದು ಅವು ಆಂಜಿನಾ ಪೆಕ್ಟೋರಿಸ್‌ನಂತಹದೇ ಚಿಹ್ನೆಗಳನ್ನು ಉಂಟುಮಾಡುವ ಮಾನಸಿಕ ಒತ್ತಡವನ್ನು ಪ್ರತಿಬಿಂಬಿಸುತ್ತಿದ್ದವು. ಆದರೆ ಈ ಮಹಿಳೆಯರು ತಮ್ಮ ಗಂಡಂದಿರ ಅನುಕಂಪೆಯನ್ನು ಗಳಿಸುವುದಕ್ಕಾಗಿ ತಮಗಿರುವುದು ಹೃದಯಬೇನೆಯೇ ಹೊರತು ಮತ್ತೊಂದಲ್ಲ ಎಂದೇ ಪಟ್ಟುಹಿಡಿಯುತ್ತಿದ್ದರು.

ಪಾರಂಪರಿಕ ಜೀವನ ಶೈಲಿಯ ವಿಧಾನಗಳು ಒತ್ತಡ ಮತ್ತು ಆತಂಕಗಳಿಗೆ ಹೇಗೆ ಹೊರದಾರಿ ಒದಗಿಸುತ್ತವೆ ಎಂಬ ಅಂಶಕ್ಕೆ ಸಂಬಂಧಿಸಿದಂತೆ ಎಲ್ ಶಮಿ ಅವರು ಈಜಿಪ್ಟಿನ ಜಾನಪದ ಪದ್ಧತಿಗಳ ಹಿನ್ನೆಲೆಯಲ್ಲಿ ನೇರವಾಗಿ ಬರೆದಿದ್ದಾರೆ. ಪಾರಂಪರಿಕ ಸಂಸ್ಕೃತಿಗಳು ತಮ್ಮ ಸದಸ್ಯರಿಗೆ ವಿವಿಧ ರೀತಿಯ ಜಾನಪದೀಯ ನಡವಳಿಕೆಗಳ ವಿನ್ಯಾಸಗಳನ್ನು ಒದಗಿಸುತ್ತವೆ. ಇವುಗಳ ಸಾಮಾಜಿಕ ಶೈಲಿ ಹಾಗೂ ವಸ್ತುವು ಅಪರಾಧೀ ಮನೋಭಾವ, ಉದ್ವೇಗ ಮತ್ತಿತರ ರೂಪದ ಒತ್ತಡಗಳನ್ನು ಬಿಡುಗಡೆ ಮಾಡುವುದಕ್ಕೆ ಅನುಕೂಲವಾಗಿವೆ. ಎಲ್. ಶಮಿ ಅವರು "ಒತ್ತಡ ತಗ್ಗಿಸುವ ಪದ್ಧತಿಗಳು" ಎಂದು ಕರೆಯುವವುಗಳಲ್ಲಿ ವೈಯಕ್ತಿಕ ಮತ್ತು ಸಾಮುದಾಯಿಕ ಪ್ರಕಾರಗಳೆರಡೂ ಸೇರುತ್ತವೆ. ಹಾಡು, ನರ್ತನ, ಕಥೆಗಾರಿಕೆ, ಒಗಟು ಹಾಕುವಿಗೆ, ಗಾದೆಗಳ ಬಳಕೆ, ನಂಬಿಕೆಗಳ ಪ್ರತಿಪಾದನೆ, ಹಾಸ್ಯ,

ಜಾನಪದೀಯ ಆಟಗಳನ್ನು ಆಡುವುದು, ಜನಪದೀಯ ವೈದ್ಯದ ಬಳಕೆ, ಅಣಕುಯುದ್ಧ, ವಾಗ್ಯುದ್ಧ, ಧಾರ್ಮಿಕ ಮಂತ್ರನುಡಿ ಹಾಗೂ ದ್ರೋಹಕಾರಕ ವಿಧಿಗಳೆಲ್ಲವೂ ಸೇರುತ್ತವೆ. ಮೌಖಿಕ ಅಭಿವ್ಯಕ್ತಿ ಪ್ರಕಾರಗಳಾದ ಕಥೆ, ಹಾಡು, ಒಗಟುಗಳ ವಸ್ತು ವಿನ್ಯಾಸಗಳು ಕಾಲ್ಪನಿಕ ಈಡೇರಿಕೆಗಳಿಗೆ ಅವಕಾಶ ಮಾಡಿಕೊಡುವ ಮೂಲಕ ಒತ್ತಡವನ್ನು ಕಡಿಮೆಮಾಡುತ್ತವೆ, ಅದನ್ನು ಚೆದುರಿಸುತ್ತವೆ. ಅಗಮ್ಯಗಮನದ ಭಾವನೆಗಳು, ಅಂತಸ್ತಿನ ಹಂಬಲ, ಐಹಿಕಭೋಗ ವಸ್ತುಗಳ ಬಯಕೆ ಮೊದಲಾದವುಗಳಿಗೆ ಈ ಅಭಿವ್ಯಕ್ತಿಯ ಮೂಲಕ ಸಮಾಧಾನ ಸಿಗುತ್ತದೆ. ಇವುಗಳನ್ನು ಜಾನಪದರು ಆನಂದಿಸುತ್ತಾರೆ. ಆದರೆ ಪಟ್ಟಣದ ಮಧ್ಯಮ ವರ್ಗದವರು ಇದನ್ನು ಅವಗಣಿಸುತ್ತಾರೆ. ಪಟ್ಟಣದ ಕೆಳವರ್ಗದ ಜನ, ಗ್ರಾಮೀಣರು ಹಾಗೂ ಅಲೆಮಾರೀ ಅರಬ್ಬರ (ಬೆಡೋಯಿನ್) ಸಾಮುದಾಯಿಕ ನೃತ್ಯಗಳಂತಹ ಚಲನಾತ್ಮಕ ಪ್ರಕಾರಗಳಲ್ಲಿರುವ ದೈಹಿಕ ಚಲನೆಗಳು, ಅವರೊಂದಿಗೆ ಜೊತೆಗೂಡುವ ಶಾಬ್ದಿಕ ರೂಪಗಳು ಸಮಾಜಕ್ಕೆ ಒಪ್ಪಿತವಾಗುವ ರೀತಿಯಲ್ಲಿ ಭಾವೋದ್ವೇಗದ ಒತ್ತಡಗಳಿಗೆ ಬಿಡುಗಡೆ ಒದಗಿಸುತ್ತವೆ. ಇಲ್ಲಿ ಎಲ್ ಶಮಿಯವರು ನೂಬಿಯನ್ (ದಕ್ಷಿಣ ಈಜಿಪ್ಟ್ ಮತ್ತು ಉತ್ತರದ ಸುಡಾನಿನ ನೈಲ್ ನದಿಕಣಿವೆ) ಸಾಂಸ್ಕೃತಿಕ ಪ್ರದೇಶವೊಂದರ ಪಾರಂಪರಿಕ ನೃತ್ಯ ಸಮಾರಂಭದ ಉದಾಹರಣೆ ಕೊಡುತ್ತಾರೆ. ಇದು ಜನಪದ ಸಮುದಾಯದ ಭಾವನಾತ್ಮಕ ಸಮತೋಲನವನ್ನು ಕಾಪಾಡುವುದಕ್ಕೆ ನೆರವಾಗುತ್ತದೆ.

ನೂಬಿಯನ್ ರಾಷ್ಟ್ರದ ಐವರು ಪಿತಾಮಹರ ಜನ್ಮದಿನವನ್ನು ಆಚರಿಸುವ ಸಂದರ್ಭದಲ್ಲಿ ಆಚರಣೆಯ ನೆಲದ ಮೇಲೆ ಅನೇಕ ಕಾಫ್ ವೃತ್ತಗಳನ್ನು ಬರೆಯುತ್ತಾರೆ. ನೃತ್ಯದಲ್ಲಿ ನೂರಾರು ಯುವಕರು ಮತ್ತು ವಯಸ್ಸಾದ ಗಂಡಸರು ಭಾಗವಹಿಸಿದರೆ, ಹಲವಾರು ಮಕ್ಕಳು ಅದನ್ನೇ ಗಮನವಿಟ್ಟು ನೋಡುತ್ತಿರುತ್ತವೆ. ಹೆಂಗಸರು ಕೆಳಮಟ್ಟದ ಛಾವಣಿಯಿರುವ ತಮ್ಮ ಮನೆಗಳ ಮೇಲಿನಿಂದ ನೋಡುತ್ತಿರುತ್ತಾರೆ. ಲಯಬದ್ಧವಾದ ಚಪ್ಪಾಳೆ ಹಾಗೂ ತಮ್ಮಟೆಯ ವಾದನಕ್ಕೆ ಅನುಗುಣವಾಗಿ ಇಲ್ಲಿನ ಕುಣಿತ ಬಿರುಸಿನ ತಾರಕಕ್ಕೇರಿದರೂ ಅದರ ಸುಸಂಬದ್ಧತೆಯನ್ನು ಕಾಪಾಡಿಕೊಂಡಿರುತ್ತದೆ. ಇಲ್ಲಿನ ಆವೇಶಪೂರಿತ ಚಲನ ಚಟುವಟಿಕೆಯಿಂದ, ಅದರೊಂದಿಗೆ ಸೇರಿದ ಶಾಬ್ದಿಕ ಚಟುವಟಿಕೆಯಿಂದ ಉಂಟಾದ ಭಾವೋದ್ರೇಕದ ಬಿಡುಗಡೆಯು ತನ್ನತನ, ತನ್ನ ಕುಟುಂಬ, ತನ್ನ ಸಾಮಾಜಿಕ

ಗುಂಪು ಎಂಬ ಭಾವನೆಯನ್ನು ಉನ್ನತೀಕರಿಸುತ್ತದೆ. ನಾನು ಕಲಾವಿದ, ನಾನು ಉದಾರಿ, ನಾವು ಈ ದೇಶದ ಒಡೆಯರು, ನನ್ನ ಸಹೋದರ ಕೈರೋದಲ್ಲಿ ಉದ್ಯೋಗ ಮಾಡುತ್ತಿದ್ದಾನೆ, ನಾವು ಶ್ರೇಷ್ಠ ಅರಬ್ಬರು ಮುಂತಾದ ಟಿಪಿಕಲ್ ಮಾತುಗಳನ್ನು ಅತ್ಯಂತ ಭಾವೋದ್ರೇಕದಿಂದ ಹೇಳಿಕೊಳ್ಳುತ್ತಿರುವಾಗ ಇನ್ನೊಬ್ಬ ವ್ಯಕ್ತಿ ಹಾಡುವ ತಾಣಕ್ಕೆ ನುಗ್ಗಿಬಂದು 'ನೀನು ಕಲಾವಿದನಾದರೆ ನಾನೂ ಕಲಾವಿದ' ಎಂದು ಹೇಳುವವರೆಗೆ ಮೇಲಿನ ಮಾತುಗಳನ್ನೇ ಹೇಳುತ್ತಿರುತ್ತಾನೆ. ಈ ಹಾಡುಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ವಸ್ತುವೆಂದರೆ ಔದಾರ್ಯ, ಧೈರ್ಯ, ಸಾಮಾಜಿಕ ಘನತೆ, ನನ್ನ ಸೋದರಮಾವ ಶ್ರೇಷ್ಠ, ನಾವು ಶ್ರೇಷ್ಠ ಅರಬ್ ವಂಶದಲ್ಲಿ ಬಂದವರು ಎಂಬ ವಾಕ್ಚತುರತೆ...

ಪಟ್ಟಣದ ಮಧ್ಯಮ ವರ್ಗದವರು ಹೀಗಳೆಯುವ ಇಂತಹ ಜಾನಪದೀಯ ನಡವಳಿಕೆಯು ಸಾಮಾನ್ಯ ಜನರ ಸ್ವಾಭಿಮಾನವನ್ನು ಸ್ವೀಕರಿಸುತ್ತದೆ. ಸಮಾಧಾನ ನೀಡುತ್ತದೆ. ಅದೇ ಸಮಯದಲ್ಲಿ ಆಧುನಿಕ ಜೀವನದಲ್ಲಿರುವಂತಹ ಸ್ಪರ್ಧಾತ್ಮಕ ವ್ಯಕ್ತಿವಾದದ ಭಯಂಕರ ಒತ್ತಡವನ್ನು ತಪ್ಪಿಸುತ್ತದೆ.

ಆದ್ದರಿಂದ ಹೃದ್ರೋಗವನ್ನು ಜಾನಪದದ ಅಧ್ಯಯನದಿಂದಲ್ಲ, ಜಾನಪದದಂತೆ ಬದುಕು ನಡೆಸಿದರೆ ತಪ್ಪಿಸಬಹುದು (Folklore lived non-studied is the surest preventive of Heart Disease) ಎಂಬ ಊಹಾ ಸಿದ್ಧಾಂತ ಸ್ಥಾಪಿತವಾದಂತಾಯಿತು.

* * *

# ೯. ಕಾಮಾಲೆ

ಪ್ರೊ. ಹಿ.ಶಿ. ರಾಮಚಂದ್ರೇಗೌಡ

ಮೂಲ ಜನಪದ ಔಷಧ ಪದ್ಧತಿ ಮತ್ತು ಅಲೋಪತಿ ಔಷಧ ಪದ್ಧತಿಗಳ ನಡುವೆ ಹೊಯ್ದಾಡುತ್ತಿರುವ ಜನಪದರು, ಜನಪದ ವೈದ್ಯವು ಅನುಭವಶೋಧಿತ ವಿಜ್ಞಾನ ಎಂಬುದನ್ನು ಸಾಧಿಸಿ ತೋರಿಸಲು ಕಾಲ ಈಗ ಪಕ್ವವಾಗಿದೆ ಎಂಬ ಗಟ್ಟಿನಿಲುವನ್ನು ಲೇಖನವು ಪ್ರತಿಪಾದಿಸುತ್ತದೆ.

–ಸಂ.

ಕಾಮಾಲೆ ಪುಟ್ಟ ಕಳೆಗೋಗನ ಬಾರೋ
ಮೂಡ್ಲಿಂದ ಮಳೆ ಬಂತು ಮನೆಗೋಗನ ಬಾರೊ

ಈ 'ಬಾರೊ' ಸಂಸ್ಕೃತಿ ಹೆಣ್ಣಿಗೆ ಯಾಕೆ ಬಂತು? ಈಗ ಪ್ರಚಲಿತವಿರುವ ಭಾರತೀಯ ಸಂಸ್ಕೃತಿಯ ಪ್ರಕಾರ ಗಂಡನಿಗೆ ಇರುವ ಸಂಬೋಧನೆ 'ಬನ್ರಿ'. ಹೆಣ್ಣಿಗೆ ಇರುವ ಸಂಬೋಧನೆ 'ಬಾರೆ'. ಪ್ರಚಲಿತ ಭಾರತೀಯ ಅರ್ಥಾತ್ ಹಿಂದೂ ಸಂಸ್ಕೃತಿ ಪ್ರಭಾವಿತ ಸಂಸ್ಕೃತಿಯಲ್ಲಿ ಗಂಡು ಬಹುವಚನ, ಹೆಣ್ಣು ಏಕವಚನ. ಆದರೆ ಮೇಲಿನ ಹಾಡಿನಲ್ಲಿ ಹೆಣ್ಣು ಗಂಡು–ಗಂಡ ಅರ್ಥಾತ್ ವೀರನನ್ನು ಏಕವಚನಕ್ಕೆ ತಂದು ಮುಟ್ಟಿಸಿದ್ದಾಳೆ. ಇದು ಆಘಾತದ ಸಂಗತಿಯೆ ಹೌದು. ಯಾಕೆ ಹೀಗಾಯಿತು? ಇಲ್ಲಿ ಗಂಡು ತನ್ನ ಗಂಡಸುತನ ಅರ್ಥಾತ್ ವೀರ ಅಂದರೆ ವೀರ್ಯ ಇಲ್ಲದವನಾಗಿದ್ದಾನೆ. ಅವನು ಪುಟ್ಟಣ್ಣ, ಪುಟ್ಟಯ್ಯ, ಪುಟ್ಟೇಗೌಡ ಅಥವಾ ಪುಟ್ಟರಾಜ ಆಗಿಲ್ಲ. ಸಾಧನೆಯ ನಾಮಗಳಾದ ಅಣ್ಣ, ಅಯ್ಯ, ಗೌಡ ಅಥವ ರಾಜನ ಸ್ಥಾನದಿಂದ ಚ್ಯುತನಾಗಿದ್ದಾನೆ. ಇಲ್ಲಿ ಅವನು ಕೇವಲ ಪುಟ್ಟ. ಕೂಲಿಕಾರರಿಗೆ ಇರುವ ಸಂಬೋಧನೆ ಲಕ್ಕ, ತಿಮ್ಮ, ಚಿಕ್ಕ... ಥರ ಪುಟ್ಟ.

ಇಂಥ ಕೆಳಗತಿ ಏಕೆ? ಅವನಿಗೆ ಕಾಮಾಲೆ ಆಗಿದೆ. ಗಂಡು ಅಥವ ಗಂಡನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುವ ಶಕ್ತಿಯನ್ನು ಕಳಕೊಂಡಿದ್ದಾನೆ. ಈ ಬಗೆಯ ಶಕ್ತಿಯನ್ನು ಕಳಕೊಳ್ಳುವ ಒಂದು ಸ್ಥಿತಿ ಕಾಮಾಲೆ. ಅವನಲ್ಲಿ ಹೆಂಡತಿಯನ್ನು ನಿರ್ವಹಿಸುವ ಶಕ್ತಿ ಇಲ್ಲ, ಆದ್ದರಿಂದ 'ಎದ್ದೂ ಮಾಡ ನಿದ್ದೆಯನ್ನೂ ಕೊಡ' ಸ್ಥಿತಿಗೆ ತಲುಪಿದ್ದಾನೆ. ಕ್ರಿಯಾಹೀನನಾದ ಅವನನ್ನು ಹೆಂಡತಿ ಸದರಕ್ಕೆ ಇಟ್ಟುಕೊಂಡಿದ್ದಾಳೆ. ಆದರೆ ಗಂಡನನ್ನು ವಾಚ್ಯ ಮಾಡುವುದು ಅವಳಿಗೆ ಇಷ್ಟವಿಲ್ಲ.

ವಾಚ್ಯ ಮಾಡಿದರೆ 'ಗಂಡ' ಕಳೆದುಹೋಗುತ್ತಾನೆ. ಹೆಂಡತಿತನ ಪ್ರಶ್ನಿತವಾಗುತ್ತದೆ. ಆಗ ಅವರಿಬ್ಬರೂ ಸಂಸ್ಕೃತಿ–ಸಂಬಂಧದ ಹೊರಗೆ ಉಳಿಯಬೇಕಾಗುತ್ತದೆ ದೈಹಿಕ ಘನತೆಯನ್ನು ಮೀರಬಹುದು. ಆದರೆ ಸಾಂಸ್ಕೃತಿಕ ಘನತೆಯನ್ನು ಮೀರಿ, ಸುಂದರಪ್ರೇಮ ಅರ್ಥಾತ್ ಹಿತವಾದ ಸೆಕ್ಸ್ ಅನ್ನು ಅನುಭವಿಸಲಾಗುವುದಿಲ್ಲ. ಆದ್ದರಿಂದ ಗಂಡನ ಅಶಕ್ತತೆಯನ್ನು ಸಾಹಿತ್ಯ ಸಂಸ್ಕೃತಿ ಮಾಧ್ಯಮದಲ್ಲಿ ಅಭಿನಯಿಸಿದ್ದಾಳೆ. ಮೇಲಿನ ಹಾಳು "ಕಳೆ'ಗೆ ಬದಲಾಗಿ 'ಹೊಲಕೋಗನ" ಎಂದು ಬರುವುದೂ ಉಂಟು. ತನ್ನ ಹಂಲವನ್ನು ಉತ್ತು ಕಳೆಯನ್ನು ತೆಗೆದು ಬೀಜ ಬಿತ್ತಲಾರದ ಗಂಡ ಎಂಬುದೆ ಅವಳ ಸಿಡುಕು. ಅವಳು ಆಪಾಟಿ ಸಿಡುಕಬೇಕಾದರೆ....

ಕಾಮಾಲೆಯನ್ನು 'ಹಸಿರು ಮುಂಡಿಗೆ' ರೋಗ ಎಂದೂ ಕರೆಯಲಾಗುತ್ತದೆ. ಮೈಯೆಲ್ಲ ಹಸಿರಾಗುವ ಪ್ರಕ್ರಿಯೆಯಲ್ಲಿರುತ್ತದೆ. ಈ ಕಾಯಿಲೆಯ ಮೂರನೆಯ ಹಂತ ತಲುಪಿದ ರೋಗಿ 'ಅಸ್, ಉಸ್' ಸ್ಥಿತಿಯಲ್ಲಿರುವುದುಂಟು. ಹಾಸಿಗೆ ಹಾಸಿಕೊಂಡು ಮಲಗದಿದ್ದರೂ, ಮನೆಯ ಹೊರಗಿನ ಪ್ರಜೆ ಅಲ್ಲ. ಆರಂಭ ಭಯವಿಲ್ಲದಿದ್ದರೂ ಕೊನೆಯ ಘಟ್ಟ ಅಪಾಯಕಾರಿ. ಈ ಕಾಯಿಲೆಗೆ ಇಂಗ್ಲಿಷ್ ಡಾಕ್ಟರುಗಳು ಜಾಂಡಿಸ್ ಎಂದು ಕರೆದಿದ್ದಾರೆ. ಭಾರತೀಯ ಆಯುರ್ವೇದದಲ್ಲಿ ಈ ಕಾಯಿಲೆಗೆ ಕಾರಣಗಳು ಹಾಗು ಉಪಶಮನದ ಬಗ್ಗೆ ಸಾಕಷ್ಟು ವಿವರಗಳಿವೆ. ಇಂಗ್ಲಿಷ್ ವೈದ್ಯರು ಬೇರೆ ಕಾಯಿಲೆಗಳಿಗೆ ಇರುವ ರೀತಿ ಈ ಕಾಯಿಲೆಗೆ ನಿರ್ದಿಷ್ಟ ಔಷಧಿ ಇಲ್ಲ ಎನ್ನುತ್ತಾರೆ. ಈ ಕಾಯಿಲೆಗೆ ಬಹುಮುಖ್ಯ ಔಷಧಿ ವಿಶ್ರಾಂತಿ ಎಂದು ಹೇಳುತ್ತಾರೆ.

ಬಹುಜನರ ಔಷಧೋಪಚಾರವಾದ ಜನಪದ ಔಷಧ ಪದ್ಧತಿಯೊಂದಿದೆ. ಆಧುನಿಕ ಉತ್ಪಾದನಾ ತತ್ವ ಜನರನ್ನು ವರ್ಗೀಕರಿಸಿ; ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್, ಥರ್ಡ್ ಕ್ಲಾಸ್ ಮತ್ತು ಫೋರ್ತ್ ಕ್ಲಾಸ್ ನಲ್ಲಿ ಇಟ್ಟು ಅವನತೀಕರಣಗೊಳಿಸಿದಂತೆ ಜನರ ಔಷಧ ಪದ್ಧತಿಯನ್ನೂ ಅವನತೀಕರಣಗೊಳಿಸಿತು. ಫಸ್ಟ್ ಕ್ಲಾಸ್ನವರು ಚಿಂತಿಸಿದ್ದು ಮತ್ತು ಉತ್ಪತ್ತಿ ಮಾಡಿದ್ದೆಲ್ಲ, ಶ್ರೇಷ್ಠ ದರ್ಜೆ, ಥರ್ಡ್ ಅಂಡ್ ಫೋರ್ತ್ ಕ್ಲಾಸ್ನವರು ಚಿಂತಿಸಿದ್ದು ಹಾಗೂ ಉತ್ಪತ್ತಿ ಮಾಡಿದ್ದೆಲ್ಲ ಕನಿಷ್ಠದರ್ಜೆ ಎಂಬ ಮುದ್ರೀಕರಣ ವ್ಯವಸ್ಥೆ (Marking system) ಯನ್ನು ಬಳಕೆಗೆ ತರಲಾಯಿತು. ಈ ಬಗೆಯ ಉತ್ಪತ್ತಿ ಮತ್ತು

ಮುದ್ರೀಕರಣ ವ್ಯವಸ್ಥೆಯಿಂದ ಅಯೋಧ್ಯೆ ರಾಮ ಮತ್ತು ಅಗಸರ ರಾಮ ದೂರದೂರ ಆದರು. ಆದ್ದರಿಂದ ಅಮೆರಿಕದ ಮುದ್ರೆಯನ್ನು ಹಾಕಿದ ಕತ್ತೆಯನ್ನು ಕುದುರೆ ಬೆಲೆಗೆ ಮಾರಲು ಸಾಧ್ಯವಾಯಿತು; ಭಾರತ ಅಥವಾ ಬಾಂಗ್ಲಾ ದೇಶದ ಮುದ್ರೆಯನ್ನು ಹಾಕಿದ ಕುದುರೆಯನ್ನು ಕತ್ತೆ ಬೆಲೆಗೆ ಮಾರುವುದು ಕಷ್ಟವಾಯಿತು. ಆಧುನಿಕವೆಂಬ ಒಂದೆರಡು ಶತಮಾನಗಳು ಮಾಡಿದ ವೈಚಾರಿಕ ಚೋರತನದಿಂದಾಗಿ ಇಡೀ ಜಗತ್ತು ತುಂಡುತುಂಡು ವಿಭಾಗೀಕರಣದಲ್ಲಿ ಹಾಗೂ ಅಸಹನೀಯ ತಾರತಮ್ಯದಲ್ಲಿ ಬದುಕುವಂತಾಗಿದೆ. ಆದರೆ ಇದೇ ಆಧುನಿಕತೆ ಮುಂದಿಟ್ಟ ಭೌತಿಕ ವೈಭವಗಳ ಆಮಿಷದಿಂದಾಗಿ ಜನ ಮುಂದುವರಿದಿದ್ದೇವೆ ಎಂಬ ಭ್ರಮೆಯಲ್ಲಿ ಬದುಕುತ್ತಿರುವುದು ಅಷ್ಟೆ ನಿಜವೂ ಆಗಿದೆ.

ಈ ಮಾಯಾಜಾಲದಲ್ಲಿ ನಮ್ಮ ಜನಪದ ಔಷಧ ಪದ್ಧತಿ ಮಂಕುಹಿಡಿದು ಮಲಗಿದೆ. ಅಜ್ಞಾನಿಗಳ ಔಷಧ ಎಂಬ ಅಪಹಾಸ್ಯಕ್ಕೆ ಒಳಗಾಗಿದೆ. ತಾನು ಹೆತ್ತದ್ದು, ಹೊತ್ತದ್ದು, ಸಾಕಿದ್ದು ಮತ್ತು ಬದುಕುತ್ತಿರುವುದು ಕನಿಷ್ಠ ಎಂದು ಜನ-ಜನಪದ ಅಂದುಕೊಂಡಿದ್ದಾರೆ. ಹಾಗಿದ್ದಲ್ಲಿ ಆಧುನಿಕವಾದುದನ್ನು ಕಂಡುಹಿಡಿದವರು ಜನ ಅಲ್ಲವೆ ಎಂಬ ಪ್ರಶ್ನೆ ಕೇಳಬಹುದು. ಆಧುನಿಕ ಜ್ಞಾನ ಜನರ ಒಡೆತನಕ್ಕೆ ಬಂದೆ ಇಲ್ಲ. ಅದು ಜನರನ್ನು ಬಳಕೆದಾರರನ್ನಾಗಿ ಮಾಡಿಕೊಂಡು ಸಂಪತ್ತು ಶೇಖರಿಸುವವರ ಕೋಣೆಯಲ್ಲಿ ಬಂಧಿತವಾಗಿದೆ. ಜಗತ್ತಿನ ಯಾವ ಮೂಲವಸ್ತುವೂ ಆಧುನಿಕವಲ್ಲ; ಅದು ಸಾರ್ವಕಾಲಿತ. ಮೂಲವಸ್ತುಗಳನ್ನು ವಿಂಗಡಿಸುವ, ವಿಸ್ತರಿಸುವ ಹಾಗೂ ಸಂಯುಕ್ತಗೊಳಿಸುವ ಪ್ರಕ್ರಿಯೆ ಮಾತ್ರ ಆಧುನಿಕ ಅಷ್ಟೆ. ಇದನ್ನು ಬಂಡವಾಳಿಗರು ಮಾಡಿಸುತ್ತಿದ್ದಾರೆ; ಜನಸಾಮಾನ್ಯರು ಸುಮ್ಮನಿದ್ದಾರೆ. ಆಧುನಿಕವಾಗುವುದೆಂದರೆ ಪ್ರಯೋಗಶೀಲತೆಗೆ ಒಡ್ಡಿಕೊಳ್ಳುವುದು ಎಂದು ಅರ್ಥ. ಆ ಸವಾಲನ್ನು ಜನಪದರು ತಮ್ಮ ಜ್ಞಾನಪದ್ಧತಿಗಳಲ್ಲಿ ಪ್ರಯೋಗಿಸಬೇಕು. ಜನಪದ ಔಷಧಿ ಪದ್ಧತಿ ಇಂಥ ಪರಿಶೀಲನೆಗಾಗಿ ಕಾಯುತ್ತಿದೆ. ಜನಪದ ತಜ್ಞ ಅದನ್ನು ಕ್ರಿಯೆಗೆ ಒಡ್ಡಬೇಕು.

**ಅಪಾಯದ ಎಚ್ಚರಿಕೆ :** ಯಾವುದೇ ಸಾಮಾನ್ಯ ಜ್ಞಾನ ಸಂಸ್ಕೃತೀಕರಣಗೊಂಡರೆ, ಎಂದರೆ ಮೇಲಿನ ಜ್ಞಾನಕ್ಕೆ ವಿಧೇಯವಾದರೆ ಅದು ಕೆಲವು ಫಲಾನುಭವಿಗಳ ಸೊತ್ತಾಗುತ್ತದೆ, ಸಾಮಾನ್ಯರ ಕೈಬಿಡುತ್ತದೆ. ಭಾರತೀಯ ಆಯುರ್ವೇದ ಔಷಧ ಪದ್ಧತಿ ಇದಕ್ಕೆ ಉದಾಹರಣೆ. ಅಲ್ಲಿರುವ ಬಹುತೇಕ ಔಷಧಿಗಳು ಜನಪದರಲ್ಲಿ

ಅಸಲಿಯಾಗಿ ಈಗಲೂ ಇವೆ. ಆದರೆ ಆಯುರ್ವೇದ ಇವುಗಳನ್ನೆಲ್ಲ ಭಾಷೆ ಹಾಗೂ ಪ್ರಕ್ರಿಯೆಯಲ್ಲಿ ಸಂಸ್ಕೃತೀಕರಿಸಿಕೊಂಡು ಪಂಡಿತರೆಂಬ ಗೊಡ್ಡು ಹಸುಗಳ ಆಹಾರವಾಯಿತು. ಪಂಡಿತರೆಂದರೆ ಕೇಳಬೇಕೆ? ಜನ ಹೆದರಿ ಓಡಿಹೋದರು. ಇವರಿಗಿಂತ ಪರಕೀಯರ ಇಂಗ್ಲಿಷ್ ಔಷಧಿ ವಾಸಿ ಎಂದು ಅದರ ಬೆನ್ನುಹತ್ತಿದರು. ಅದು ಅವರ ಭರವಸೆಯನ್ನು ಸಾಕಷ್ಟು ಪೂರೈಸಿದೆ. ಈಗ ಅದು ಔಷಧ ಉಪಚಾರವಾಗಿಲ್ಲ; ಶುದ್ಧ ವ್ಯಾಪಾರವಾಗಿದೆ. ಈ ಬಗ್ಗೆ ಒಬ್ಬ ಜನಚಿಂತಕ ಹೇಳುವುದು ಹೀಗೆ : "Only 125 generic medicines are required for 99 percent of ailments. But there are more than 60,000 brand names in drugs. A Voluntary Health Association of India says that the multinationals are collecting annually Rs.1800 crore by selling banned and bannable drugs and Rs.1000 crore annually by selling non essential tonics." ಈ ವ್ಯಾಪರ 400% ಕ್ಕಿಂತ ಅಧಿಕ ಲಾಭವನ್ನು ಗಳಿಸುತ್ತಿದೆ. ಮುಂದುವರಿದ ರಾಷ್ಟ್ರಗಳ ಔಷಧ ಉದ್ದಿಮೆದಾರರೊಂದಿಗೆ ಹಿಂದುಳಿದ ದೇಶಗಳ ವ್ಯಾಪಾರಿಗಳು ಶಾಮೀಲಾಗಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಜನ ಸಾಯಲು ಸನ್ನದ್ಧರಾಗಿದ್ದಾರೆ ಎಂದು ತಿಳಿದರೆ ಅವರು ಬಹುಬೇಗ ಸಾಯುವ ಸಿದ್ಧ ಔಷಧಿ ತಯಾರಿಸಿ ಅದರಿಂದ ಲಾಭಮಾಡುತ್ತಾರೆ. ಸಾಯುವವರ ಮನೆಯಲ್ಲಿ ಸುಂಕ ವಸೂಲಿ ಮಾಡುವ ಜನ ಇವರು. ಇದರಿಂದ ಎಲ್ಲ ಮಧ್ಯಮ ಹಾಗೂ ಕೆಳವರ್ಗದ ಜನ ನೊಂದಿದ್ದಾರೆ. ಅತ್ತ ತಮ್ಮ ಮೂಲ ಜನಪದ ಔಷಧ ಪದ್ಧತಿಗೆ ಹಿಂದಿರುಗಲಾರದೆ, ಇತ್ತ ಅಲೋಪತಿ ಔಷಧದ ದಬ್ಬಾಳಿಕೆಯನ್ನು ಪ್ರತಿರೋಧಿಸಲಾರದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇಂಥ ವಂಚಿತ ಜನಪದರ ಬಗ್ಗೆ ಚಿಂತಿಸುವುದು ಜನಪದ ತಜ್ಞನ ಕರ್ತವ್ಯ. ಜನಪದ ತಜ್ಞ ಸಮಾಜಸುಧಾರಕ ಅಲ್ಲ, ನಿಜ. ಆದರೆ ಆತ ಜನಪದ ಶವಪರೀಕ್ಷಕ ಕೂಡ ಅಲ್ಲ, ಅಲ್ಲವೆ? ನಿಜವಾದ ಅರ್ಥದಲ್ಲಿ ಜಾನಪದ ತಜ್ಞ ಜನಪದದ ಚಿಕಿತ್ಸಕ. ಅವನ ಚಿಂತನೆಯಲ್ಲಿ ಪ್ರಯೋಗಶೀಲತೆ ಇಲ್ಲ ಎಂದಾದರೆ ಆತ ಜನಪದ ಶವಪೆಟ್ಟಿಗೆಗೆ ಮೊಳೆಹೊಡೆಯುತ್ತಿದ್ದಾನೆ ಎಂದೆ ತಿಳಿಯಲಾಗುವುದು.

ಎಲ್ಲ ಸಂಸ್ಕೃತಿಗಳೂ ಹೇಳುವುದು ಉಪಚಾರ ಮಾಡು, ಅಪಚಾರ ಮಾಡಬೇಡ ಎಂದು. ಔಷಧ ಎಲ್ಲ ಉಪಚಾರಗಳಿಗಿಂತ ಶ್ರೇಷ್ಠ ಉಪಚಾರ, ಅದಕ್ಕೆ ಬೆಲೆ

ಕಟ್ಟಲಾಗದು. ಭಾರತೀಯ ಜನಪದ ವೈದ್ಯರು, ಎಂದರೆ ನಮ್ಮ ಅಜ್ಜ-ಅಜ್ಜಿಯರು ತಮ್ಮ ಔಷಧೋಪಚಾರಕ್ಕೆ ಎಂದೂ ಬೆಲೆಯನ್ನು ತೆಗೆದುಕೊಂಡವರಲ್ಲ. ಔಷಧದ ಉತ್ಪತ್ತಿ ನಿಸರ್ಗದ್ದು ಅರ್ಥಾತ್ ಭಗವಂತನದು. ಸೇವೆ ಮಾತ್ರ ನಮ್ಮದು ಎಂದು ತಿಳಿದಿದ್ದರು. ಈಗ ಭಗವಂತ ಮತ್ತು ಜನರ ಮಧ್ಯೆ ಉದ್ಯಮಿಗಳು ಅವತರಿಸಿ ಅವಾಂತರ ಮಾಡಿದ್ದಾರೆ.

## ಜನಪದ ವೈದ್ಯವೇ ಏಕೆ?

ಈ ಪ್ರಶ್ನೆ ನಾನು ಅಥವ ನಾವು ಏಕೆ ಎಂದು ಕೇಳಿಕೊಂಡಂತೆ. ಉತ್ತರ ಗೊತ್ತಿದ್ದರೂ ಈ ಪ್ರಶ್ನೆ ಕೇಳುವ ಸ್ಥಿತಿಗೆ ಬಂದಿದ್ದೇವಲ್ಲ! ಇನ್ನೆಂಥ ಮಂಪರಿನಲ್ಲಿರಬಹುದು ನಾವು? "...that folk medicine has grown originally aut of the whoel of folk belief and custom, thought, life and speech. Medicine is older than doctors. Hence the definition; Folk medicine is the substance of all the traditional viewpoints on sickness and healing methods applied against disease which exist among the people." ಇದು oswald A Erich and Richard Beitl ರ ಅಭಿಪ್ರಾಯ. ಯಾರೆ ಒಬ್ಬ ಪ್ರಯೋಗಶೀಲ ಜಾನಪದ ತಜ್ಞನ ಅಭಿಪ್ರಾಯ ಇದಕ್ಕಿಂತ ಬೇರೆಯಾಗಿರುವುದಿಲ್ಲ; ಇನ್ನೂ ಉತ್ತಮವಾಗಿಯೆ ಇರುತ್ತದೆ. ಅಂದರೆ ಜನಪದ ವೈದ್ಯ ಸಾಮಾನ್ಯ ವೈದ್ಯ. ಇತರ ವೈದ್ಯಪದ್ಧತಿಗಳು ಭಾಗಿಕ ವೈದ್ಯ ಆಚರಣೆಗಳು. ಸಾಮಾನ್ಯ ಎಂಬ ಪದ ಬಂದ ತಕ್ಷಣ ಕೆಳಮಟ್ಟದ ಎಂದ ಅಭಿಪ್ರಾಯ ಎಲ್ಲ ಕಡೆ ಇದೆ. ಸಾಮಾನ್ಯ ಜನರು ಹಾಗೂ ಅವರ ಶೋಧವನ್ನು ಕಡೆಗಾಣಿಸಿದ ಹಾಗೂ ದೂರಸರಿಸಿದ ಹಲವು ಬಗೆಯ ಪ್ರಭುಗಳ ಹುನ್ನಾರ ಇದು. ನಿಜವಾದ ಅರ್ಥದಲ್ಲಿ ಸಾಮಾನ್ಯ ಸಾರ್ವಕಾಲಿಕ ಮತ್ತು ಶ್ರೇಷ್ಠ. ಅಂದರೆ 'ಸಾರ್ವಕಾಲಿಕ ಶ್ರೇಷ್ಠ'. ಸಕಾಲಿಕ ಅಥವ ಅಕಾಲಿಕ ಶ್ರೇಷ್ಠತೆಗಳು ಒಡೆಯರು ಹಾಗು ಪುರೋಹಿತ ವರ್ಗಗಳಿಂದ ಸೃಷ್ಟಿಯಾಗುವ ಮತ್ತು ಯಾವುದೋ ಒಂದು ನೆಲೆಯಲ್ಲಿ ಶೋಷಣಾ ತತ್ವ ಯೋಜಿತವೂ ಆಗಿರುತ್ತವೆ.

ಜನಪದ ವೈದ್ಯ ಸಮಗ್ರ ವೈದ್ಯ (holistic medicine). ಇದು ಒಂದು ಗುಳಿಗೆ, ಸಿರಪ್ ಅಥವ ಚೀಪುವ ಭೌತಿಕ ಸ್ವರೂಪದ ಔಷಧ ಮಾತ್ರವಲ್ಲ. ಈ

ಔಷಧ ನಂಬಿಕೆ, ನಡವಳಿಕೆ, ಆಚಾರ ಉಪಚಾರ, ಆಹಾರ ಹಾಗೂ ಸಂಬಂಧ. ಜನಪದರಲ್ಲಿ ಒಬ್ಬ ಕಾಯಿಲೆ ಬಿದ್ದರೆ ಊರವರು, ಹೊರಗಿನವರು, ಮತ್ತು ಸಂಬಂಧಿಕರೆಲ್ಲ ಬಂದು ನೋಡಿ, ಉಪಚಾರ ಮಾಡಿ, ಸಾಂತ್ವನ ಹೇಳಿ, ಕೈಗೆ ಏನಾದರೂ ಕೊಟ್ಟು ಹರಸಿ ಹೋಗುತ್ತಾರೆ. ಆ ಕಾಯಿಲೆ ಅವನ ಹಳಸಿದ ಸಂಬಂಧಗಳನ್ನು ಅಭಿವೃದ್ಧಿ ಮಾಡುತ್ತದೆ. ಶತ್ರುಗಳ ಮನಸ್ಸನ್ನು ಕರಗಿಸಿ ಮಿತ್ರರ ಸಂಖ್ಯೆಯನ್ನು ಹೆಚ್ಚಿಸುತ್ತದೆ. ನಡೆಯದೆ ಇದ್ದ ಆಚರಣೆ, ಊಟೋಪಚಾರಗಳು ನಡೆಯುತ್ತವೆ. ಅಂದರೆ ಈ ಔಷಧದಲ್ಲಿ ಸಾಮಗ್ರಿ ಮಾತ್ರವಲ್ಲ, ಮನಸ್ಸು ಇದೆ. ಆ ಮನಸ್ಸು ರೋಗಿಯ ಇಚ್ಛಾಶಕ್ತಿಯನ್ನು ಹೆಚ್ಚಿಸುತ್ತದೆ. ಅಲೋಪತಿ ನೋಡುವ ಹಾಗೆ ಈ ಪದ್ಧತಿ ರೋಗಿ ಒಬ್ಬ ಹೊರಗಿನ ವ್ಯಕ್ತಿ ಎಂದು ಭಾವಿಸುವುದಿಲ್ಲ. ಅವನನನ್ನು ಸಂಬಂಧ, ಸನಿಹದಿಂದ ದೂರ ಇಡುವುದಿಲ್ಲ. ರೋಗಿ ಒಂಟಿ ಇದ್ದಷ್ಟೂ ಅಪಾಯ. ಅವನು ತನ್ನ ನೋವು ಮತ್ತು ತಾಪತ್ರಯಗಳನ್ನು ಇತರೆಲ್ಲರ ಜೊತೆ ಹಂಚಿಕೊಂಡಿದ್ದರೆ ಕ್ಷೇಮ ಎಂಬ ಒಡನಾಟ ತತ್ವವೆ ಜನಪದರ ಸಾಮಾಜಿಕ ತತ್ವ. ಆದ್ದರಿಂದ ಜನಪದದಲ್ಲಿ ಒಬ್ಬನೆ ವೈದ್ಯ ಎಂಬ ತತ್ವ ಇಲ್ಲ. ಶಕ್ತಿ ವೈದ್ಯ, ನಂಬಿಕೆ ವೈದ್ಯ, ತಂತ್ರ ವೈದ್ಯ, ದೈವ ವೈದ್ಯ, ಹಿರಿಯ ವೈದ್ಯ, ಮಾಂತ್ರಿಕ ವೈದ್ಯ, ಸಂಚಿತ ವೈದ್ಯ, ಹೀಗೆ ಹಲವರುಂಟು. ಇವರು ಒಬ್ಬನೇ ರೋಗಿಯನ್ನು ಉಪಚರಿಸುವ ಹಲವು ವೈದ್ಯರು. ಅಲೋಪತಿ ವೈದ್ಯರ ಥರ; ಮೂಳೆ ವೈದ್ಯ, ಕಣ್ಣು ವೈದ್ಯ, ಕಿವಿ, ಮೂಗು ಮತ್ತು ಗಂಟಲು ವೈದ್ಯ, ಶಸ್ತ್ರಚಿಕಿತ್ಸೆ ವೈದ್ಯ... ಒಂದೇ ದೇಹವನ್ನು ಹಲವು ಭಾಗಗಳಾಗಿ ಹಂಚಿಕೊಂಡವರಲ್ಲ. ಅಲೋಪತಿ ರೋಗಿಯ ಆರ್ಥಿಕ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅದು ಪರೀಕ್ಷೆ ಮಾಡಿ ಔಷಧ ಬರೆದುಕೊಡುತ್ತದೆ ಅಥವ ಒಳರೋಗಿಯಾಗಿ ಸೇರಿಸಿಕೊಳ್ಳುತ್ತದೆ. ಪುಷ್ಟಕರವಾದ ಆಹಾರವನ್ನು ಸೇವಿಸಲು ಹೇಳುತ್ತದೆ. ಜನಪದ ವೈದ್ಯ ಮೂಲತಹ ಒಂದು ಆಹಾರ. ಅದು ಮೂಲ ಆಹಾರದ ಕೊರತೆಯನ್ನು ತುಂಬುವ ಮೇಲು ಆಹಾರ. ರೋಗಿಯ ಆರ್ಥಿಕ ಸ್ಥಿತಿ ನೋಡಿ ತನ್ನ ಔಷಧ ನೀಡುತ್ತದೆ. ಸಾಮಾಜಿಕವಾಗಿ ರೋಗಿಗೆ ಇತರರು ನೆರವು ನೀಡುವಂತೆ ಮಾಡುತ್ತದೆ. ರೋಗಿಯ ಹತ್ತಿರ, ನೆಂಟರ ಹತ್ತಿರ, ಮಕ್ಕಳ ಹತ್ತಿರ ಹಾಗೂ ಅಶಕ್ತರ ಹತ್ತಿರ ಬರಿಗೈಲಿ ಹೋಗಬಾರದು ಎಂಬುದು ಜನಪದರ ಆರ್ಥಿಕ ಹಂಚಿಕೆಯ ಸ್ವ ಸಂಯೋಜಿತ (inbuilt) ನಡವಳಿಕೆ ಎಂಬ ನಿಯಮ.

## ಜನಪದ ವೈದ್ಯ–ಒಂದು ವಾಸ್ತವ?

ಪ್ರಸ್ತುತ ನಾವು ಎದುರಿಸಬೇಕಾಗಿರುವ ಸಮಸ್ಯೆ ಇದು. ಜನಪದ ವೈದ್ಯ ವೈದ್ಯನೆ? ಇದನ್ನು ಪ್ರಾಯೋಗಿಸುವವನು ವೈದ್ಯನೆ? ಜನಪದ ವೈದ್ಯದಲ್ಲಿ ರೋಗ ಗುರುತಿಸಲ್ಪಟ್ಟು ವಿವರಿಸಲ್ಪಟ್ಟಿದೆಯೇ – ಎಂಬ ಅನನ್ಯತೆ (identify) ಪ್ರಶ್ನೆಗಳನ್ನು ಎತ್ತಿದರೆ ಜನಪದ ವೈದ್ಯರು ಹೊರಹಾಕಲ್ಪಡುತ್ತಾರೆ. ಕದ್ದು ಮುಚ್ಚಿ ಔಷಧ ಕೊಡುತ್ತಾರೆ. ಇಲ್ಲವೆ ಮುಗ್ಧತೆಯಿಂದ ತಾವು ಕಲಿತುದನ್ನು ದಾನ ಮಾಡುತ್ತಾರೆ. ಈಗ ನಮ್ಮ ಮುಂದೆ ಇರುವ ಸವಾಲು ಜನಪದ ವೈದ್ಯ ಮತ್ತು ವೈದ್ಯರಿಗೆ ಈ ಸ್ಥಿತಿ ಯಾಕೆ ಬಂತು? ಈ ಸ್ಥಿತಿ ಸಹಜವಾದುದೆ ಅಥವ ನಿವಾರಿಸಬಹುದಾದುದೆ ಎಂಬುದು.

ನಾವು ಮಂಗಗಳಂತೆ ಕೂತು ಮಾತಾಡಬಾರದು. ಇಲ್ಲಿ ಒಂದು ದೊಡ್ಡ ಅಂತಾರಾಷ್ಟ್ರೀಯ ರಾಜಕೀಯ ಇರುವುದು ಕಾಣುತ್ತದೆ. ಅದು ಉದ್ದಿಮೆದಾರರ ರಾಜಕೀಯ. ಎಲ್ಲ ರಾಜಕೀಯವೂ ಮೂಲತಃ ಆರ್ಥಿಕ ರಾಜಕೀಯವೇ. ಜನಪದ ವೈದ್ಯಪದ್ಧತಿ ಅನಾಥ, ಉಪೇಕ್ಷಿತ ಆಗಲು ಅಂತಾರಾಷ್ಟ್ರೀಯ ಉದ್ಯಮ ತತ್ವ ಮತ್ತು ಉದ್ಯಮಪತಿಗಳು ಕಾರಣ. ಇವರು ಜಗತ್ತಿನ ಉತ್ಪನ್ನಗಳನ್ನು ಎರಡು ರೀತಿ ವಿಂಗಡಿಸಿದ್ದಾರೆ. ಒಂದು, ಕಚ್ಚಾವಸ್ತುಗಳು, ಎರಡು ಸಿದ್ಧವಸ್ತುಗಳು. ಇವರ ಅರ್ಥದಲ್ಲಿ ಕಚ್ಚಾವಸ್ತುಗಳು (raw products) ನೈಸರ್ಗಿಕ ಹಾಗು ಸ್ಥಳೀಯ (local), ಸಿದ್ಧವಸ್ತುಗಳು (finished products) ವೈಜ್ಞಾನಿಕ ಶೋಧ ಹಾಗು ಅಂತರಾಷ್ಟ್ರೀಯ. ಸಹಜವಾಗಿ ಜನ ತಮ್ಮ ಒಳಿತಿಗಾಗಿ, ಅಭಿವೃದ್ಧಿಗಾಗಿ ಆಯ್ಕೆಮಾಡಿಕೊಳ್ಳಬೇಕಾದ ವಸ್ತುಗಳು ಎರಡನೆಯ ವರ್ಗದವು ಎಂದು ಹೇಳುತ್ತಾರೆ. ಇವರ ಉದ್ಯಮ ತತ್ವದಂತೆ ವಿಜ್ಞಾನ ನಿಸರ್ಗದಲ್ಲಿ ಇಲ್ಲ; ಅದು ನಿಸರ್ಗ ವಸ್ತುಗಳಿಂದ ಪುನರ್ ರೂಪಿಸಿದ್ದು ಹಾಗೂ ರೂಢಿಸಿದ್ದು. ಆದಕಾರಣ ಮೊದಲನೆಯ ವರ್ಗದ ಔಷಧಗಳು ವೈಜ್ಞಾನಿಕ ಆಗುವುದಿಲ್ಲವಾಗಲಿ ಜನ–ವಿದ್ಯಾವಂತ ಜನ ಅವುಗಳನ್ನು ಬಳಸಲು ಬಯಸುವುದಿಲ್ಲ. ವಿಜ್ಞಾನವೆಂಬ ಬೇತಾಳದ ಬೆನ್ನು ಹತ್ತಿತ ಜನ ವಿಜ್ಞಾನ ಎಂಬುದು ತನ್ನೊಳಗಿನ, ತನ್ನನ್ನು ರೂಪಿಸಿರುವ ನಿಸರ್ಗದ ತತ್ವ ಎಂದು ತಿಳಿಯಲು ಹೋಗುವುದಿಲ್ಲ;

"ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ ಅಲ್ಲಲ್ಲಿ ಆಹಾರವಿಟ್ಟವರು ಯಾರೊ?"

ಎಂಬ ಒಂದು ಅಂತರ್ಗತ ಪ್ರಶ್ನೆಯನ್ನು ಹಾಕಿಕೊಂಡರೆ ಸಾಕು. ನಿಸರ್ಗ ತನ್ನೊಳಗಿನ ಪ್ರತಿಯೊಂದು ವಸ್ತು ಹಾಗೂ ಜೀವಿಗಳಲ್ಲಿ ಸಂಬಂಧವನ್ನು ಇಟ್ಟಿದೆ. ಅದು ಕನಕದಾಸರು ಹೇಳುವಂತೆ ಸಕಲೆಂಟು ಜೀವಿಗಳಿಗೆ ಆಹಾರ ಒದಗಿಸಿರುವ ಕ್ರಮ ಇರಬಹುದು, ಜೀವಜ್ಞಾನಿಗಳು ಹೇಳುವಂತೆ ಸಕಲೆಂಟು ಜೀವಿಗಳಿಗೆ ಸಮಾನವಾಗಿಯೇ ಒದಗಿಸಿರುವ ಗಾಳಿ, ನೀರು ಮತ್ತು ಭೂಮಿ ಇರಬಹುದು. ಅದೇ ರೀತಿ ನಿಸರ್ಗ ಸಕಲ ಜೀವಿಗಳಿಗೂ ಅದರ ಒಳಗೆ ಹಾಗೂ ಹೊರಗೆ ಔಷಧ ಉಪಚಾರ ವ್ಯವಸ್ಥೆಯನ್ನು ಮಾಡಿದೆ. ಅವಾಂತರಗಳಿಗೆ ಅದು ಔಷಧಿ ಇಟ್ಟಿಲ್ಲ ನಿಜ, ಯಾಕೆಂದರೆ ಕೆಲವೊಮ್ಮೆ ತನ್ನ ಸಹಜ ಕ್ರಮದಿಂದ ನಿಸರ್ಗವೇ ಅವಾಂತರಕ್ಕೆ ಒಳಗಾಗುತ್ತದೆ. ಇಂಥ ಅವಾಂತರಗಳಿಗೆ ಮದ್ದು ಕಾಣದಾದಾಗ ಕೆಲವರು ಅದು ಭಗವಂತನ ಕೈಲಿದೆ ಎಂದು ಹೇಳಿಬಿಟ್ಟರು. ಆದರೆ ಇರುವ ಹಾಗೆ ನಿಸರ್ಗ ಸಕಲೆಂಟು ಜೀವಾತ್ಮಗಳಿಗೆ ಗಾಳಿ, ನೀರು, ಆಹಾರ ಒದಗಿಸಿರುವ ಹಾಗೆ ಔಷಧಿಯನ್ನೂ ಒದಗಿಸಿದೆ. ಮನುಷ್ಯ ನಿರ್ಮಿತವಲ್ಲದ ಒಂದು ಅಭಿವೃದ್ಧಿ ತತ್ವ ನಿಸರ್ಗದಲ್ಲಿ ಇದೆ. ಅದು ಸಕಲ ಜೀವಿಗಳ ಸಮತೋಲನ ಬೆಳವಣಿಗೆ. ಅದಕ್ಕೆ ಹೊರತಾದ ಅತಿ ಅಭಿವೃದ್ಧಿಗೆ ಮನುಷ್ಯ ಹೊರಟು, ಅತಿ ರೋಗಗಳನ್ನು ಸೃಷ್ಟಿಮಾಡಿ, ಆ ಅತಿರೋಗಗಳಿಗೆ ಅತಿಶಯವಾದ ಔಷಧಿ ಕಂಡುಕೊಳ್ಳಲು ಹೊರಟಿದ್ದಾನೆ. ಈ ಶೋಧಕ್ಕೆ ಹೆಚ್ಚಿನ ಹಣ ಬೇಕು? ಅದನ್ನು ಸಾಮಾನ್ಯ ಮನುಷ್ಯರಿಂದಲೆ ಕಿತ್ತುಕೊಳ್ಳಲಾಗುತ್ತಿದೆ. ಮತ್ತೊಂದು ರೀತಿಯಲ್ಲಿ ಇದು ಪರಿಷತ್ತಿನ ಸಂಗ್ರಹ ತತ್ವವೂ ಹೌದು: ಈಗಿನ ಯಾವ ಔಷಧ ಉದ್ಯಮಿಯೂ ಜನಗಳ ಹಿತಕ್ಕೆಂದು ಹೊಸ ಔಷಧಿ ಶೋಧಿಸುತ್ತಿಲ್ಲ. ಹಾಗಿದ್ದಲ್ಲಿ ಯಾವ ಉದ್ಯಮಿ ಬೇಕಾದರೂ ಅಂಥ ಔಷಧಿ ಕಂಡುಹಿಡಿಯಲಿ ಎನ್ನುತ್ತಿದ್ದರು. ಪರಿಸ್ಥಿತಿ ಅದಲ್ಲ. ಒಬ್ಬ ಉದ್ಯಮಿ ತಯಾರು ಮಾಡುತ್ತಿರುವ ಔಷಧಿ ಕ್ರಮವನ್ನು ಮತ್ತೊಬ್ಬ ಅನುಸರಿಸಬಾರದು ಎಂದು ಏಕಸ್ವಾಮ್ಯ (ಪೇಟೆಂಟ್) ಹಕ್ಕನ್ನು ಪಡೆದುಕೊಳ್ಳಲಾಗುತ್ತಿದೆ. ಇದನ್ನು ಯಾರು ಜನಕ್ಷೇಮ ಚಿಂತನೆ ಎನ್ನುತ್ತಾರೆ? ಆದ್ದರಿಂದಲೆ ಔಷಧವೂ ವ್ಯಾಪಾರವೆ, ರೋಗವೂ ವ್ಯಾಪಾರದ ವಸ್ತುವೆ. ಸಹಜವಾಗಿ ಒಂದು ಔಷಧದ ಉದ್ಯಮಿ ತನ್ನ ಔಷಧಿ ವಾಸಿಮಾಡುವ ಖಾಯಿಲೆ ಹೆಚ್ಚು ಹೆಚ್ಚು ಜನಗಳಿಗೆ ಬಂದು ತನ್ನ ಪ್ರಾಡೆಕ್ಟ್ ಗೆ ಹೆಚ್ಚು ಹೆಚ್ಚು ಬೇಡಿಕೆ ಬರಲಿ ಎಂದು ಬಯಸುತ್ತಾನೆ. ಇದು ಈಗ ಬಳಕೆಯಲ್ಲಿರುವ ಇಂಗ್ಲಿಷ್ ಔಷಧದ ಇತಿಹಾಸ.

ಹಾಗಿದ್ದರೆ ಜನಪದ ವೈದ್ಯವನ್ನು ವಾಸ್ತವ ಮಾಡುವುದು ಹೇಗೆ? ನಮ್ಮ ಜನಪದ ವೈದ್ಯರಿಗೆ ರೆಕಗ್ನಿಷನ್ ಅರ್ಥಾತ್ ಪದವಿ ಇಲ್ಲ. ಈ ಪದವಿಗಳೆಲ್ಲ ಪಾಶ್ಚಾತ್ಯ ವಿದ್ಯಾಭ್ಯಾಸ ಕ್ರಮದಿಂದ ಬಂದವು. ಅವು ಅಕ್ಷರ ಜ್ಞಾನಕ್ಕೆ ಸೇರಿದವು. ನಮ್ಮ ಜನಪದ ವೈದ್ಯರು ಅಕ್ಷರ ಕಲಿಯಲಿಲ್ಲ. ಅಕ್ಷರ ಕಲಿತವರು ಜನಪದ ವೈದ್ಯವನ್ನು ಕಲಿಯಲಿಲ್ಲ. ಪದವಿ ಇರುವ ವೈದ್ಯನಿಂದ ಒಬ್ಬ ರೋಗಿ ಸತ್ತರೆ ಆತ ಸತ್ತ ಬಗ್ಗೆ ಪ್ರಮಾಣಪತ್ರ ಕೊಟ್ಟರೆ ಆಯಿತು. ಅದನ್ನು ಸಾವು ಎಂದು ಗಣಿಸಲಾಗುತ್ತದೆ. ನಮ್ಮ ಜನಪದ ವೈದ್ಯನ ಉಪಚಾರದಲ್ಲಿದ್ದು ರೋಗಿ ಸತ್ತರೆ ಅದು ಕೊಲೆ, ವೈದ್ಯನಿಗೆ ವಾಸಾಸ್ಥಾನದಲ್ಲಿ ಪ್ರಮೋಷನ್! ನಾವು ತುರ್ತಾಗಿ ಜನಪದ ವೈದ್ಯಪದ್ಧತಿಯನ್ನು ಪ್ರಮಾಣಜ್ಞಾನ ವ್ಯವಸ್ಥೆಯ ಲಿಸ್ಟ್ ಗೆ ತರಬೇಕು. ಜನಪದ ವೈದ್ಯನನ್ನು ಅಧಿಕೃತ ವೈದ್ಯನ ನೆಲೆಗೆ ನಿಲ್ಲಿಸಬೇಕು. ಅದು ಹೇಗೆ?

*"ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ*
*ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ"*

ಇನ್ನೊಬ್ಬರನ್ನೇ ನಂಬಿ ನಿಮ್ಮನ್ನು ಯಾಕೆ ಕಳೆದುಕೊಳ್ಳುತ್ತೀರಿ?

ನಮ್ಮ ಜನಪದ ವೈದ್ಯವನ್ನು ಅನುಭವ ಶೋಧಿತ (ಪ್ರಯೋಗಶಾಲೆ ಅಲ್ಲ) ವಿಜ್ಞಾನ ಎಂಬುದನ್ನು ಸಾಧಿಸಿ ತೋರಿಸಬೇಕು. ವರ್ಣ, ಜಾತಿ, ವರ್ಗ ಇನ್ನಿತರ ಕಾರಣದಿಂದಲೇ ವೈದ್ಯರಾಗಿರುವವರನ್ನು ನಿರಾಕರಿಸಬೇಕು. ನಮ್ಮ ಯಾವುದನ್ನೇ ಆದರೂ ಪುರಾತನತೆಗೆ, ಪುರಾಣಕ್ಕೆ ಹಾಗೂ ಸಂಸ್ಕೃತಕ್ಕೆ ಅಂಟಿಸಿ ಅದನ್ನು ಶ್ರೇಷ್ಠ ಎಂದು ಪ್ರತಿಪಾದಿಸುವ ಹುಂಬತನವನ್ನು ಕೈಬಿಡಬೇಕು. ನಮ್ಮ ಬಹುತೇಕ ಸಹಜಜ್ಞಾನ ಸತ್ತಿರುವುದು ಇಲ್ಲವೆ ಅವನತೀಕರಣ ಪ್ರಕ್ರಿಯೆಯಲ್ಲಿರುವುದು ಈ ನಮ್ಮ ಅಂಧಮತೀಯ ಮಮಕಾರದಿಂದ. ನಮ್ಮ ಜನಪದ ವೈದ್ಯ ಕೂಡ ಇಂಥ ಪೂತನಿ ಕೈಗೆ ಸಿಕ್ಕ ಕೃಷ್ಣನಂತಾಗಿದೆ.

ಜಾಗತೀಕರಣ ಬರುತ್ತಿದೆ, ಜಾಗತಿಕ ಪ್ರಭುಗಳು ಬರುತ್ತಿದ್ದಾರೆ. ದೊಡ್ಡ ಮಾರುಕಟ್ಟೆ ಬಂದು ನಮ್ಮ ಇರುವ ಬಹುತೇಕ ಉದ್ಯೋಗಗಳನ್ನು ನಾಶಮಾಡುತ್ತಿದೆ. ನಾವು ಸರ್ಕಾರಿ ನೌಕರಿಯಲ್ಲಿ ಇರಬೇಕಾಗಿಲ್ಲ. ನಮ್ಮ ನಮ್ಮ ಊರುಗಳಲ್ಲಿದ್ದೇ ನಿರುದ್ಯೋಗಿಗಳಾಗುತ್ತೇವೆ. ಅಂಥ ಸಂದರ್ಭದಲ್ಲಿ ನಮ್ಮ ಸತ್ತುಹೋಗುತ್ತಿರುವ ದೇಶೀಜ್ಞಾನಗಳು ಆಶ್ರಯ ಪಡೆದು ಅವುಗಳನ್ನು ಅಭಿವೃದ್ಧಿಪಡಿಸಿ, ನೀವೂ ಅಭಿವೃದ್ಧಿ

ಹೊಂದಿರಿ. ಇದೆಲ್ಲವನ್ನು ಬದುಕುವುದಕ್ಕಾಗಿ ಮಾಡಿರಿ, ಹಣಕ್ಕೆಂದೆ ಮಾಡಬೇಡಿ; ಹಣಕ್ಕಾಗಿಯೇ ಮಾಡುವವರ ಮೇಲೆ ಕಲ್ಲೆಸೆಯಿರಿ. ಅವರು ಏಸುವಿನಂತೆ ಸ್ವರ್ಗಕ್ಕೆ ಹೋಗಲಿ!

## ಮೂಢನಂಬಿಕೆ ಮತ್ತು ಜನಪದ ವೈದ್ಯ

ಒಳ್ಳೆಯದೆಲ್ಲವನ್ನೂ ನಂಬಿಕೆ ಮಾಡುವ ಪ್ರವೃತ್ತಿ ಆದಿಕಾಲದಿಂದಲೂ ಇತ್ತು. ಒಳ್ಳೆಯದನ್ನು ಜನ ಮರೆಯಬಾರದು ಎಂಬುದೆ ಅದರ ಉದ್ದೇಶ. ಜನ-ಜನಪದಗಳು ಇಷ್ಟುಕಾಲ ಉಳಿದುಬಂದಿರುವುದು ಇಂಥ ನಂಬಿಕೆಗಳಲ್ಲಿ. ಸಕಾಲಿಕ ಮತ್ತು ಸಾರ್ವಕಾಲಿಕ ಎಂಬ ಎರಡು ಬಗೆಯ ನಂಬಿಕೆಗಳುಂಟು. ಸಕಾಲಿಕವಾದವು ಸಾಯಬೇಕು, ಹಾಗೆಯೆ ಉಳಿದರೆ ಅವು ಮೂಢನಂಬಿಕೆಗಳಾಗುತ್ತವೆ. ಆರ್ಥಿಕ ಅಥವ ಸ್ಥಾನಮಾನದ ಲಾಭಕ್ಕಾಗಿ ಇಂತಹ ತಾತ್ಕಾಲಿಕ ನಂಬಿಕೆಗಳನ್ನು ಕೆಲವು ಕದೀಮರು ಎಲ್ಲ ಬುಡಕಟ್ಟು, ಬಣ, ಪಂಗಡ, ಜಾತಿ ಹಾಗೂ ವರ್ಗಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಅವುಗಳನ್ನು ಪರಿಶೀಲಿಸಿ ನಮ್ಮ ಮನೆ ಮತ್ತು ಮನದಿಂದ ಮೊದಲು ಹೊರಹಾಕಬೇಕು. ನಮ್ಮ ಜನಪದ ವೈದ್ಯರನ್ನೇ ತೆಗೆದುಕೊಳ್ಳಿ; ಅವರು ಕೊಡುವ ಔಷಧಿಗೆ ಕಾಸು ತೆಗೆದುಕೊಳ್ಳುವುದಿಲ್ಲ, ಬಡವರಾಗಿದ್ದು ಸಹಾಯ ಮಾಡಿದರೆ ಪಡೆಯುತ್ತಾರೆ. ಇದು ಅವರ ನಂಬಿಕೆ; ಸಾರ್ವಕಾಲಿಕ ನಂಬಿಕೆ. ಇದು ಇರಲಿ. ತಾವು ಕಲಿತ ವಿದ್ಯೆಯನ್ನು ಬೇರೊಬ್ಬರಿಗೆ ಹೇಳಿಕೊಡಬಾರದು ಎಂಬ ನಂಬಿಕೆ ಅವರಲ್ಲಿದೆ. ಇದು ಮೂಢನಂಬಿಕೆ. ಮೇಲು ಜಾತಿಯವರು ತಮ್ಮ ವಿದ್ಯೆಯನ್ನು ಕೆಳವರ್ಗದ ಜನರಿಗೆ ಕಲಿಸಿಕೊಟ್ಟರೆ ಅದರಿಂದ ಬರುವ ಲಾಭ ಹಂಚಿಹೋಗುತ್ತದೆ ಎಂಬ ಕಾರಣಕ್ಕೆ ವಿದ್ಯೆಯ ಹಂಚಿಕೆಯನ್ನು ವಿರೋಧಿಸಿದರು ಮತ್ತು ತಡೆಹಿಡಿದರು. ಜನಪದ ಧರ್ಮದಲ್ಲಿ ಈ ತತ್ವ ಇರಲಿಲ್ಲ. 'ದಾರಿಯ ಕಲ್ಲು ಮುಳ್ಳು ತೆಗಿ, ಹಸಿದವರಿಗೆ ಅನ್ನ ಹಾಕು, ಅಶಕ್ತರನ್ನು ಉಪಚರಿಸು' ಎಂಬುದು ಅವರ ತತ್ವ. ಜನಪದ ವೈದ್ಯೆಯಾಗಿದ್ದ ನಮ್ಮವ್ವ ಚಿಕ್ಕಹುಡುಗನಿದ್ದಾಗ ಹೇಳಿಕೊಟ್ಟ ತತ್ವ ಇದು. ಜನಪದ ವೈದ್ಯರು ಮೇಲುಜಾತಿಯವರ ಧರ್ಮತತ್ವವನ್ನು ಅನುಸರಿಸಿ, ತಮ್ಮ ವಿದ್ಯೆಯನ್ನು ಬೇರೆಯವರಿಗೆ ಹೇಳಿಕೊಡುವುದನ್ನು ನಿಲ್ಲಿಸಿದರು. ಜನಪದ ವೈದ್ಯದಲ್ಲಿ ನಿಷ್ಠ ಮತ್ತು ಪ್ರಾಮಾಣಿಕತೆಯ ಪ್ರಮಾಣಶುದ್ಧಿ ಬಹಳ ಮುಖ್ಯ. ಆ ದೃಷ್ಟಿಯಿಂದ ತರಲೆ-ತಾಪತ್ರಯದವರಿಗೆ ತಮ್ಮ ವಿದ್ಯೆ ಕಲಿಸಬಾರದು ಎಂದು ಜನಪದ ವೈದ್ಯ ಹೇಳುತ್ತಿದ್ದರೆ ಅದು ಒಪ್ಪತಕ್ಕ ವಿಷಯ. ಆದರೆ ನಮ್ಮ

ಇಡೀ ಜನಪದ ವೈದ್ಯವನ್ನು ಮೂಢನಂಬಿಕೆ ಎಂದು ಮಾಡಿಬಿಟ್ಟಿದ್ದಾರಲ್ಲ, ಇದಕ್ಕೇನು ಮಾಡುತ್ತೀರಿ?

ಈ ಹೊತ್ತಿಗೆ ಜಗತ್ತಿನ ಶ್ರೇಷ್ಠ ಮೂಢನಂಬಿಕೆ ಎಂದರೆ ಆಧುನಿಕ ಎಂಬುದೆಲ್ಲ ಪರಮ ಸತ್ಯ ಹಾಗೂ ಪಾರಂಪರಿಕವಾದುದೆಲ್ಲ ವರ್ಜಿಸುವಂಥದ್ದು ಎಂದು ನಂಬಿರುವುದು. ಈ ಎರಡೂ ಕಡೆ ಒಪ್ಪುವಂಥದೂ ಇದೆ, ವರ್ಜಿಸುವಂಥದೂ ಇದೆ ಎಂದು ತಿಳಿಯುವುದೆ ನಿಜವಾದ ನಂಬಿಕೆ ಮತ್ತು ವಿಜ್ಞಾನ. ಈ ನಿಟ್ಟಿನಲ್ಲಿ ಆಧುನಿಕ ಜ್ಞಾನವನ್ನೂ ಪಾರಂಪರಿಕ ಜ್ಞಾನವನ್ನೂ ಪುನರ್ ಶೋಧನೆಗೆ ಒಳಪಡಿಸಬೇಕು. ಆಗ ನಮಗೆ ಸಮಗ್ರ ಜ್ಞಾನ ಸಾಧ್ಯವಾಗುತ್ತದೆ. ನಮ್ಮ ಜನಪದ ಔಷಧದ ಶೋಧ ಈ ನಿಟ್ಟಿನಿಂದ ನಡೆಯಬೇಕಿದೆ.

## ಜನಪದ ವೈದ್ಯನ ಪ್ರಾಮಾಣಿಕತೆ :

ತಕ್ಷಣವೇ ಯಾವುದಾದರೊಂದು ಹೊಸದನ್ನು ಜನರ ಮುಂದೆ ಇಡುವಾಗ ಯೋಚಿಸಬೇಕು. ಹಳೆಯದೆನ್ನುವುದನ್ನು ಒಪ್ಪಿಸುವಾಗ ಮತ್ತೂ ಚಿಂತಿಸಬೇಕು. ಬೆಸ್ಟ್‌ಗಳನ್ನು ಹುಡುಕಿ ಹೊರಟಿರುವ ನೆಲೆ ಇಲ್ಲದ ಪರಿಸ್ಥಿತಿ ಇದು. ನಮ್ಮ ಪರಂಪರೆಯಿಂದಲೂ ಜನ ಬೆಸ್ಟ್‌ಅನ್ನೆ ಬಯಸಿದ್ದಾರೆ. ನಾವು ಮೊದಲಿಗೆ ಸಾಂಪ್ರದಾಯಿಕ ಬೆಸ್ಟ್ ಗಳನ್ನು ಹುಡುಕಿಕೊಟ್ಟು ಜನರನ್ನು ಒಪ್ಪಿಸಬೇಕು, ಆಧುನಿಕ ಬೆಸ್ಟ್‌ಗಳ ಜೊತೆಗೆ ಪೈಪೋಟಿ ನಡೆಸಬಾರದು. ನನ್ನ ಎರಡು ಅನುಭವಗಳನ್ನು ಮುಂದಿಡುತ್ತೇನೆ.

ನನ್ನ ಅವ್ವ ನನಗೆ ಜನಪದ ವೈದ್ಯ ತೋರಿಸಿಕೊಟ್ಟಳು. ಕಾಯಿಲೆ ತೋರಿಸುವುದು, ಇದಕ್ಕೆ ಕೊಡುವ ಔಷಧ ತೋರಿಸುವುದು ಮತ್ತು ರೋಗಿಯನ್ನು ವಾಸಿಮಾಡುವ ಕ್ರಮವನ್ನು ತೋರಿಸುತ್ತಿದ್ದಳು. ಬಾಯಿಮಾತಿನಿಂದ ಹೆಚ್ಚೇನೂ ಹೇಳುತ್ತಿರಲಿಲ್ಲ. ಬಾಯಿಮಾತಿನಲ್ಲಿ ಹೇಳುವುದು ಹೆಚ್ಚಿನ ಪಾಲು ಎಚ್ಚರಿಕೆಯಾಗಿರುತ್ತಿತ್ತು. ನಾನು ಓದು ಕಲಿಯಲು ಸೇರಿ ವಿಜ್ಞಾನ ವಿದ್ಯಾರ್ಥಿಯಾದೆ. ಆಧುನಿಕತೆಯ ಹುಚ್ಚು ಹತ್ತಿ ಅವ್ವ ಹೇಳಿಕೊಟ್ಟದ್ದೆಲ್ಲ ಅವೈಜ್ಞಾನಿಕ ಅಂದುಕೊಂಡೆ. ಅಲ್ಲದೆ ನಿಲ್ಲಿಸಿದೆ ಅಮ್ಮನ ವಿದ್ಯೆಯನ್ನು. ನಾನು ಎಂ.ಎ.ಗೆ ಪಾಠಮಾಡುವ ಹೊತ್ತಿಗೆ ಶೋಷಣಾ ವಿಜ್ಞಾನ ಯಾವುದು? ಜೀವನ ವಿಜ್ಞಾನ ಯಾವುದು? ಎಂಬ ತಿಳುವಳಿಕೆಗೆ ಬಂದೆ. ಪಾಶ್ಚಾತ್ಯ ಜ್ಞಾನಸ್ಫೋಟ ಮಾನವ ಕ್ಷೇಮದ

ಕಾರಣದಿಂದಲೆ ಆದುದು ನಿಜ, ಬರಬರುತ್ತ ರಾಯರ ಕುದುರೆ ಕತ್ತೆ ಆಯಿತು ಎಂಬಂತೆ ಅದು ಉದ್ಯಮಪತಿಗಳ ಉದ್ಯೋಗ ಆಯಿತು. ನಿಜದ ವಿಜ್ಞಾನ ಜಾರಿತು. ಆಗ ವೈಚಾರಿಕತೆ ಎಂಬುದೊಂದು ಸಮಾನತಾ ಜೀವನ ಚಿಂತನೆ ಹುಟ್ಟಿಕೊಂಡಿತು. ನಾನು ಅದರಲ್ಲಿ ಭಾಗಿಯಾದೆ. ವಿಜ್ಞಾನ ನಿಜವಾದ ಜ್ಞಾನವಾಗಿ ಜನತೆಯ ಕೈಸೇರಬೇಕಾದರೆ ಅದಕ್ಕೆ ವೈಚಾರಿಕ ಮುಖ ಬೇಕು ಎಂಬುದನ್ನು ತಿಳಿದುಕೊಂಡೆ. ಆಗ ನನಗೆ ನಿಜವಿಜ್ಞಾನದ ದರ್ಶನ ಆಯಿತು. ವಿಜ್ಞಾನ ಏಕಕಾಲದ ಉತ್ಪತ್ತಿ ಅಲ್ಲ. ಬಹುಜನರ ಬಹುಕಾಲದ ಸಂಪಾದನೆ ಎಂಬುದು ಅರಿವಿಗೆ ಬಂತು. ಆಗ ಅಮ್ಮನ ಔಷಧಿಯ ಸತ್ಯಾಸತ್ಯತೆಯನ್ನು ತಿಳಿದುಕೊಂಡೆ. ಪ್ರಯೋಗಕ್ಕೆ ಅವಸರಪಡಲಿಲ್ಲ, ಕಾದೆ. ಸರ್ಕಾರಿ ಔಷಧ ಕಾಲೇಜಿನ ಅಧ್ಯಾಪಕರು ನನಗೆ ಮಿತ್ರರಾದರು. ಜಾಂಡಿಸ್ ಕಾಯಿಲೆ ಬಗ್ಗೆ ತಿಳಿಸಿದರು. ಅಲೋಪತಿಯಲ್ಲಿ ನಿರ್ದಿಷ್ಟ ಔಷಧ ಇಲ್ಲ, ಆದರೆ ಪೂರಕ ಔಷಧಿಗಳಿವೆ, ವಿಶ್ರಾಂತಿ ಈ ರೋಗಕ್ಕೆ ಶ್ರೇಷ್ಠ ಮದ್ದು ಎಂದರು. ನನ್ನ ಔಷಧಿ ಬಗ್ಗೆ ಹೇಳಿದೆ. ಪರೀಕ್ಷಿಸಿ, ಪ್ರಯೋಗಿಸಿ ನೋಡಿ ಎಂದರು. ನಾನು ಪ್ರಯೋಗಿಸಿದೆ, ಕಾಯಿಲೆ ವಾಸಿಯಾಯಿತು. ನನ್ನಂತೆ ಹಲವರು ಈ ರೋಗಕ್ಕೆ ಔಷಧಿ ಕೊಡುವುದನ್ನು ನೋಡಿದೆ. ಅಲ್ಲಿಯೂ ರೋಗಿ ಗುಣಮುಖವಾಗುವುದನ್ನು ಕಂಡೆ. ನನ್ನ ಮತ್ತು ಅವರ ಔಷಧಗಳನ್ನು ಪರಿಶೀಲಿಸಿ ಪರೀಕ್ಷಿಸಿ ನೋಡಿದೆ. ಕಾಮಾಲೆ ಆದವರು ಕೋಳಿಸಾರು ತುಪ್ಪ ಕುಡಿದು ಸತ್ತದನ್ನೂ ಕೇಳಿದೆ.

ಒಂದು ಮುಖ್ಯ ಘಟನೆ : ನನ್ನ ಪಕ್ಕದ ಮನೆಯ ಮೇಸ್ತ್ರಿಗೆ ಜಾಂಡಿಸ್ ಇತ್ತು. ಬಹಳ ಕಾಲದಿಂದ ಅವರು ಅದನ್ನು ತಾತ್ಸಾರ ಮಾಡಿಕೊಂಡು ಬಂದಿದ್ದರು. ಎಣ್ಣೆ ಪದಾರ್ಥವೂ ಸೇರಿ ಬೇಕಾದ್ದನ್ನು ತಿನ್ನುತ್ತಿದ್ದರು. ಬೇಕಾದ ಕಡೆ ತಿರುಗಿ, ಬೇಕಾದ ನೀರು ಕುಡಿಯುತ್ತಿದ್ದರು. ನಾನು ಔಷಧ ಪ್ರಯೋಗಿಸಲು ಹೇಳಿದೆ. ಅವರು ಆಸಕ್ತಿ ತೋರಲಿಲ್ಲ. ಅವರ ಕಾಯಿಲೆ ಎರಡನೆಯ ಹಂತ ತಲುಪಿತು. ಆಗ ಅಲೋಪತಿ ವೈದ್ಯರಿಗೆ ತೋರಿಸಿದರು. ಆ ವೈದ್ಯರ ಸಲಹೆಯನ್ನೂ ಗಂಭೀರವಾಗಿ ಗಮನಿಸಿದಂತೆ ಕಾಣಲಿಲ್ಲ. ಕಾಯಿಲೆ ಮೂರನೆಯ ಹಂತ ತಲುಪಿತು. ಉತ್ತಮ ಆಸ್ಪತ್ರೆಯೊಂದಕ್ಕೆ ಸೇರಿಸಿದರು. ಹತ್ತು ಹದಿನೈದು ದಿನಗಳಲ್ಲಿ ಅವರ ಸ್ಥಿತಿ ವಿಷಮವಾಯಿತು. ಆಗ ಆ ರೋಗಿಯ ಚಿಕ್ಕಪ್ಪ ನನ್ನಲ್ಲಿಗೆ ಬಂದು ನಿಮ್ಮ ಔಷಧ ಕೊಡಿ ಎಂದು ಕೇಳಿದರು. ನಾನು ಸೌಮ್ಯವಾಗಿ ಹೇಳಿದೆ : ನನ್ನ

ಔಷಧಿ ನಿಮ್ಮ ರೋಗಿಯ ಸ್ಥಿತಿಯನ್ನು ಮುಟ್ಟಲಾರದು. ನನ್ನ ಔಷಧಿ ರಾಮಬಾಣ ಅಲ್ಲ ಎಂದೆ. ಮೂರೇ ದಿವಸದ ನಂತರ ಆ ರೋಗಿಯ ಹೆಣ ಮನೆಬಾಗಿಲಿಗೆ ಬಂತು. ನಾನು ತತ್ತರಿಸಿಹೋದೆ. ಬಡತನದಿಂದ ಮೇಲೆ ಬಂದವ, ಸಜ್ಜನ, ಸಹಕಾರಿ ಮನೋಭಾವದವ. ತಮ್ಮ ಜಾತಿಯ ಪ್ರೀತಿಯೊಂದನ್ನು ಬಿಟ್ಟರೆ ಉಳಿದಂತೆ ಸರ್ವರಿಗೂ ಪ್ರೀತಿಯಾಗಬಹುದಾದ ವ್ಯಕ್ತಿ. ಅನ್ಯಾಯವಾಗಿ ತನ್ನನ್ನು ತಾನೇ ಕಳೆದುಕೊಂಡ. ಆ ಸಾವು ನನ್ನನ್ನು ಇಂದಿಗೂ ಕಾಡುತ್ತಿದೆ. ಮಕ್ಕಳು ತಬ್ಬಲಿಗಳಾದರಲ್ಲ!

ನಾನು ಯಾಕೆ ಈ ರೋಗಿಗೆ ಔಷಧ ಕೊಡಲಿಲ್ಲ? ಜನಪದ ಔಷಧಿ ಮೂಲತಹ ಆಹಾರ. ಅದು ರಸಾಯನಿಕಗಳ ಸಾರದ ಸಿದ್ಧ ಉಂಡೆ ಅಲ್ಲ. ಅದು ಕಾಯಿಲೆಯನ್ನು ವಾಸಿಮಾಡುವುದು ನಿಧಾನ. ರೋಗಿ ಔಷಧಿ ಮತ್ತು ಆಹಾರವನ್ನು ರೋಗದ ಸೂಚನೆ ಕಂಡ ಕೂಡಲೆ ತೆಗೆದುಕೊಳ್ಳಲು ಶುರುಮಾಡಬೇಕು. ರೋಗ ಸಂಕೀರ್ಣ ಅಥವ ಉಲ್ಬಣಗೊಂಡಾಗ ಪರಿಹಾರ ಕಷ್ಟ ಸಾಧ್ಯ. ಆದ್ದರಿಂದಲೇ ಜನಪದ ಔಷಧ ಚಿಂತನೆ ಎಂದರೆ; ಮನುಷ್ಯನಲ್ಲಿ ರೋಗ ಮತ್ತು ಆರೋಗ್ಯ ಒಟ್ಟಿಗೆ ಇರುತ್ತವೆ. ಆರೋಗ್ಯ ಕೆಟ್ಟಂತೆ ರೋಗ ಬೆಳೆಯುತ್ತಾ ಹೋಗುತ್ತದೆ: ರೋಗ ಕೆಟ್ಟಂತೆ ಆರೋಗ್ಯ ವೃದ್ಧಿಸುತ್ತಾ ಹೋಗುತ್ತದೆ. ರೋಗ ಮತ್ತು ಆರೋಗ್ಯ ಒಟ್ಟಿಗೇ ದೇಹದಲ್ಲಿವೆ. ಅವುಗಳಲ್ಲಿ ಯಾವುದನ್ನು ಸಾಕಿ ಸಲಹುತ್ತೀರಿ ಎಂಬುದು ನಿಮ್ಮ ಆಯ್ಕೆ. ಜನಪದ ಸಮಾಜದಲ್ಲಿ ಬಹಳ ರೋಗ ರುಜಿನಗಳು ಇದ್ದವು ಎನ್ನುವ ಹಾಗೆಯೇ ಐದು-ಹತ್ತು ವರ್ಷಕ್ಕೊಮ್ಮೆ ಜ್ವರ ಬಂದವರೂ ಇದ್ದಾರೆ.

ಮುಂದಿನ ಜನಪದ ವೈದ್ಯ ಔಷಧಿ ಕೊಡಲು ಮುನ್ನುಗ್ಗಬಾರದು. ಔಷಧಿಯನ್ನೂ ರೋಗಿಯನ್ನೂ ಒಟ್ಟೊಟ್ಟಿಗೆ ಪರೀಕ್ಷೆಗೆ ಒಳಪಡಿಸಬೇಕು.

'ಕಾಮಾಲೆ ಬಡ್ಡಿಗೆ ಕಲಾಪತ್ತಿನ ಸೀರೆಯೇ?' ಎನ್ನುತ್ತದೆ ಗಾದೆ. ಅಂದರೆ ರೋಗಿಯನ್ನು ವೈದ್ಯನಿಗಿಂತಲೂ ಮೊದಲು ಸಮಾಜ ಗುರುತಿಸಿದೆ. ಆ ರೋಗದ ಲಕ್ಷಣಗಳನ್ನು ಹೇಳುತ್ತದೆ. ಔಷಧ ಕೊಡುವುದು ಮಾತ್ರ ವೈದ್ಯರು. ಜನಪದ ವೈದ್ಯ ಕಾಮಾಲೆಯನ್ನು ಮೂರು ಹಂತದಲ್ಲಿ ಗುರುತಿಸುತ್ತಾನೆ :

1. ದೇಹ ಪರೀಕ್ಷೆ

1. ರೋಗಿ ಕಣ್ಣುಗಳಲ್ಲಿ ಹಳದಿ ಛಾಯೆ ಇದೆಯೆ?
2. ಉಗುರುಗಳ ಮೇಲೆ ಹಳದಿ ಛಾಯೆ ಇದೆಯೆ?
3. ಊಟ ಸರಿಯಾಗಿ ಸೇರುತ್ತಿದೆಯೆ?
4. ಮುಖ ಬಿಳಿಚಿಕೊಂಡಂತೆ ಕಾಣುತ್ತಿದೆಯೆ?
5. ಹೊಟ್ಟೆ ಗಟ್ಟಿಯಾಗಿದೆಯೇ?

2. ನಡವಳಿಕೆ ಪರೀಕ್ಷೆ

1. ಸುಸ್ತು-ಸಂಕಟ ಆಗುತ್ತದೆಯೆ?
2. ಕಾಮಾಸಕ್ತಿ ಹೇಗಿದೆ?
3. ಮನೋಧರ್ಮ ಹೇಗಿದೆ?

3. ಬಾಹ್ಯ ಪರೀಕ್ಷೆ

1. ಹೊರಗಡೆ ಆಹಾರ, ನೀರು ತೆಗೆದುಕೊಳ್ಳಲಾಗಿದೆಯೆ?
2. ಅನ್ಯ ಹೆಣ್ಣಿನ ಸಂಗ ಮಾಡಲಾಗಿದೆಯೆ?
3. ಆಗದವರು ಏನಾದರೂ ತೊಂದರೆ ಮಾಡಿಸಿದ್ದಾರೆಯೆ?
4. ಕೈಮಸಿಗೆ ಎಂಬ ಮದ್ದನ್ನು ರೋಗಿಯ ಮೇಲೆ ಪ್ರಯೋಗಿಸಲಾಗಿದೆಯೆ?

ಪ್ರೇಮಿ ತನ್ನ ಪ್ರಿಯಕರನ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಸಾಕು ಈ ಕಾಯಿಲೆ ಗೊತ್ತಾಗಿಬಿಡುತ್ತದೆ. ಹೆಂಡತಿ ಗಂಡ ಸಹಭಾಗಿತ್ವ ಕ್ರಿಯೆಯಲ್ಲಿ ಹೇಗೆ ಭಾಗವಹಿಸುತ್ತಾರೆ ಎಂಬುದರಿಂದ ಈ ಕಾಯಿಲೆಯನ್ನು ಗುರುತಿಸಬಹುದು. ಮಾಲೀಕ ತನ್ನ ಕೆಲಸಗಾರ ಹೇಗೆ ಕೆಲಸಮಾಡುತ್ತಾನೆ ಎಂಬುದನ್ನು ಗಮನಿಸುವುದರ ಮೂಲಕ ಈ ರೋಗವನ್ನು ಗುರುತಿಸಬಹುದು. ಜನ ಈ ರೋಗಿ ನಮ್ಮೊಂದಿಗೆ ಹೇಗೆ ಮಾತನಾಡುತ್ತಾನೆ, ಹೇಗೆ ನಡೆದು ಬರುತ್ತಾನೆ, ಹೇಗೆ ಕೂತು ಏಳುತ್ತಾನೆ ಎನ್ನುವ ಮೂಲಕ ಅವನ ರೋಗವನ್ನು ಪತ್ತೆಹಚ್ಚಬಹುದು. ವಿರೋಧಿ ಈ ವ್ಯಕ್ತಿ ತಿಪ್ಪೆಮೇಲೆ ಹೋದಾಗ ಹೇಗೆ ಕೂತು ಹೇಗೆ ಮಲ-ಮೂತ್ರ ವಿಸರ್ಜಿಸುತ್ತಾನೆ ಎಂದು ನೋಡಿ ತಮಾಷೆಮಾಡುವ ಮೂಲಕ ಗುರುತಿಸಬಹುದು. ಮಕ್ಕಳು

ಮರಹತ್ತಿ ಹಣ್ಣು-ಕಾಯಿ ಕಿತ್ತುಕೊಡು ಎಂದು ಈತನನ್ನು ಪೀಡಿಸುವ ಮೂಲಕ -ಆತ ಆಗದು ಎನ್ನುವುದರ ಮೂಲಕ ಪತ್ತೆ ಹಚ್ಚಬಹುದು.

1. **ಜನಪದ ವೈದ್ಯ ಈ ಕಾಯಿಲೆಯನ್ನು**
   1. ರೋಗಿಯ ದೈಹಿಕ-ಮಾನಸಿಕ ಸ್ಥಿತಿ ನೋಡಿ
   2. ಉಗುರಿನ ಮೇಲಿನ ಹಳದಿ, ಕಣ್ಣಿನೊಳಗಣ ಹಳದಿಯಿಂದ
   3. ಆಹಾರಸೇವನೆ – ಮಣ್ಣಿನ ಕೆಲಸ ಮಾಡುವ ಸ್ಥಿತಿಯಿಂದ ಗುರುತಿಸುತ್ತಾನೆ.

2. ನೇರವಾಗಿ :
   1. ಅವನ ಅಂಗೈ ಮೇಲೆ ನುಗ್ಗೆಸೊಪ್ಪಿನ ರಸ ಬಿಟ್ಟು ಅದು ಬದಲಾಗುವ ಸ್ವರೂಪ ನೋಡಿ
   2. ಅವನು ಹೊರಹಾಕುವ ಮೂತ್ರದ ಬಣ್ಣವನ್ನು ನೋಡಿ –
   3. ಎಣ್ಣೆ-ಕಾರದ ವಿಶಿಷ್ಟ ಅಡಿಗೆ-ಪದಾರ್ಥಗಳನ್ನು ಅವನ ದೃಷ್ಟಿಗೆ ತರುವ ಮೂಲಕ.

ಹೊರಗೆ ಯಾರಾದರೂ ಊಟದ ಮೂಲಕ 'ಕೈವಿಷ' ಹಾಕಿರುವರೆ ಎಂದು ತಿಳಿಯಬಯಸುತ್ತಾನೆ. ಕೆಲವು ಕುಟುಂಬಗಳ ಹೆಂಗಸರು ಯಾವ ದ್ವೇಷವೂ ಇಲ್ಲದೆ ಸ್ವಪ್ರೇರಣೆಯಿಂದ ಹೊರಗಿನಿಂದ ಬಂದ ಅತಿಥಿಗೆ ಊಟದಲ್ಲಿ ಕೈವಿಷ ಹಾಕುತ್ತಾರಂತೆ. ಈ ಕೈವಿಷ ಎಂದರೆ ಕೆಲಪ್ರಾಣಿಗಳ ಮಜ್ಜ್ಯ ಅಥವ ಉಗುರುಗಳ ಮದ್ಯದಿಂದ ಸಂಗ್ರಹಿಸಿದ ಕಸ ಎಂದು ಹೇಳುತ್ತಾರೆ. ಹೀಗೆ ಕೈವಿಷ ಹಾಕುವುದರಿಂದ ತಮ್ಮ ಮನೆ ಉದ್ಧಾರವಾಗುತ್ತದೆ ಎಂಬ ನಂಬಿಕೆ ಇದೆಯಂತೆ. ಈ ಕೈವಿಷವನ್ನು ಭಿಕ್ಷುಕರಿಗೆ ಮತ್ತು ಮುದುಕರಿಗೆ ಹಾಕುವುದಿಲ್ಲ; ಯುವಕರು ಮತ್ತು ಮಕ್ಕಳಿಗೆ ಹಾಕುತ್ತಾರೆ. ಈ ಕೈವಿಷವನ್ನು ತೆಗೆಯುವ ಕೆಲ ವೃತ್ತಿನಿರತರೇ ಇರುತ್ತಾರೆ.

ಮೂಲತಹ ಕಾಮಾಲೆ ಒಂದು ಭಯಂಕರ ರೋಗ ಅಲ್ಲ. ಇದು ನೀರು ಮತ್ತು ಆಹಾರದಿಂದ ಬರುತ್ತದೆ ಎಂದು ಇಂಗ್ಲಿಷ್ ವೈದ್ಯರು ಹೇಳುತ್ತಾರೆ. ಜನಪದ ವೈದ್ಯರಿಗೆ ಈ ಮೂಲ ತಿಳಿಯದು. ಇವರು ಕಾಯಿಲೆ ಸ್ವಭಾವವನ್ನು ನೋಡಿ ಔಷಧ ಶುರುಮಾಡುತ್ತಾರೆ. ಔಷಧ ಕೂಡ ತುಂಬ ಸರಳ.

**ಮೊದಲ ಹಂತದಲ್ಲಿ :**

1. ಹದಿನೈದು ದಿನ ಮೂಲಂಗಿ ಸೊಪ್ಪಿನ ಎಣ್ಣೆಯಿಲ್ಲದ ಪಲ್ಯ ತಿಂದರೆ ಸಾಕು.
2. ಕಿರು ನೆಲ್ಲಿಗಿಡಗಳ ಸೊಪ್ಪನ್ನು ಹದಿನೈದು ದಿನ ತೊಳೆದು, ಹೊಸಕಿ ತಿಂದರೆ ಸಾಕು.

**ಎರಡನೆಯ ಹಂತ :** ತಲುಪಿದ್ದರೆ ಕಣ್ಣು-ಉಗುರಿನ ಮೇಲೆ ಹಳದಿ ಮೆತ್ತಿಕೊಂಡಂತಿದ್ದರೆ, ಸುಸ್ತು-ಸಂಕಟ, ಏಳಲಾರೆ-ಕೂರಲಾರೆ ಎಂಬ ಸ್ಥಿತಿಗೆ ಮುನ್ನಡೆಯುತ್ತಿದ್ದರೆ.

1. ಕರಿಬೇವಿನ ಸೊಪ್ಪಿನ ಕರಿಮಾದರಿ ಸೊಪ್ಪನ್ನು ಬೆಳಿಗ್ಗೆ ಎದ್ದು ಒಂದು ಹಿಡಿ ತೆಗೆದುಕೊಂಡು ಅದರ ರಸ ತೆಗೆದು ಹಸಿ ಹಸುವಿನ ಹಾಲಿನಲ್ಲಿ ಅಥವ ಕಾಯಿಸಿ ಕೆನೆ ತೆಗೆದ ಒಂದು ಲೋಟ ಹಾಲಿನಲ್ಲಿ ಸೇರಿಸಿಕೊಂಡು ಏಳು ದಿನಗಳು ತಿಂಡಿಗೆ ಮೊದಲು ಕುಡಿಯಬೇಕು. ಅಗತ್ಯಬಿದ್ದಲ್ಲಿ ಹದಿನಾಲ್ಕು ದಿನಗಳಿಗೆ ಮುಂದುವರಿಸಬೇಕು. ಊಟಕ್ಕೆ ಅಕ್ಕಿ ಅಥವ ಗೋಧಿಗಂಜಿ ಬಳಸಬೇಕು. ಯಾವ ಕಾರಣಕ್ಕೂ ಎಣ್ಣೆ ಪದಾರ್ಥಗಳನ್ನು ತಿನ್ನಬಾರದು. ಕಾರ ಪದಾರ್ಥಗಳನ್ನು ದೂರ ಇಡುವುದು ಒಳಿತು. ಸದಾ ವಿಶ್ರಾಂತಿಯಲ್ಲಿರಬೇಕು.

**ಮೂರನೇ ಹಂತ :** ಅಪಾಯಕಾರಿ ಹಂತ. ರೋಗಿಯ ಬೇಜವಾಬ್ದಾರಿಯಿಂದ ಆತ ಈ ಸ್ಥಿತಿ ತಲುಪಿರುತ್ತಾನೆ. ಅವನ ದೇಹ, ಕೈಕಾಲು, ಮುಖವೆಲ್ಲ ಊದಿಕೊಂಡಂತೆ ಇರುತ್ತದೆ. ನಡೆ-ನುಡಿ ಸುಸ್ತಾಗಿರುತ್ತವೆ. ಹೆಂಡತಿ ದೂರ ತಳ್ಳಲ್ಪಟ್ಟಿರುತ್ತಾಳೆ. ಆಹಾರದ ಬಗ್ಗೆ ನಿರಾಸಕ್ತಿ ಬೆಳೆದಿರುತ್ತದೆ. ಇದಕ್ಕೆಲ್ಲ ಆಗದವರು ಮಾಟ ಮಾಡಿಸಿದ್ದಾರೆ ಎಂದು ತಿಳಿಯುವುದೂ ಉಂಟು. ಇಂಥ ಸಂದರ್ಭದಲ್ಲಿ ರೋಗಿಗೆ ಮಿಶ್ರ ಅಥವ ಜಂಟಿ ಔಷಧಿಯನ್ನು ಕೊಡಲಾಗುತ್ತದೆ. ಕೆಲವರು ಸಸ್ಯ ಹಾಗೂ ಮಾಂಸಾಹಾರದ ಮೂಲಕ ಔಷಧ ಪ್ರಯೋಗ ಮಾಡುವುದೂ ಉಂಟು.

1. ಕಿರುನೆಲ್ಲಿ ಸೊಪ್ಪು ಮತ್ತು ಕರಿಬೇವಿನ ಸೊಪ್ಪಿನ ರಸವನ್ನು ಬೆಳಿಗ್ಗೆ ಮತ್ತು ಸಂಜೆ ಕುಡಿಸುವುದು.

2. ಬೇಟೆ ಹೂವಿನ ಕಷಾಯವನ್ನು ಮಾಡಿ ಕಾಯಿಸಿ ಕೆನೆ ತೆಗೆದ ತೆಳುಹಾಲಿನ ಮೂಲಕ ಕೊಡುವುದು.

3. ರೋಗಿ ಹಾಸಿಗೆಯ ಮೇಲೆ ಇರಬೇಕು. ತೆಳುಗಂಜಿ, ಬಿಸಿನೀರು ತೆಗೆದುಕೊಳ್ಳಬೇಕು.

4. ಕೆಲವು ವೈದ್ಯರು ಇಂಗ್ಲಿಷ್ ಔಷಧಿ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಾರೆ. ಇದು ಶುದ್ಧ ತಪ್ಪು. ಪರ–ವಿರೋಧದ ನೆಲೆಯಲ್ಲಿ ಔಷಧ ಪ್ರಯೋಗ ಆಗಬಾರದು. ಅದು ರೋಗಿಯ ರೋಗ ನಿವಾರಣೆಗೆ ಸಂಬಂಧಿಸಿರಬೇಕು.

ಕೆಲವರು ಬೇರೆ ಬೇರೆ ಥರದ ಔಷಧಿ ಕೊಡುತ್ತಾರೆ. ಹಾಲಿನಲ್ಲಿ, ಮೊಸರಿನಲ್ಲಿ ಎಲೆ ಔಷಧಿಯನ್ನು ನೀಡುತ್ತಾರೆ. ಈ ಕಾಯಿಲೆಗೆ ಔಷಧಿ ಕೊಡುವ ಖ್ಯಾತನಾಮರೆ ಇದ್ದಾರೆ. ಬಹುತೇಕ ಕಡೆಗಳಲ್ಲಿ ಕಾಯಿಲೆ ಗುಣವಾಗಿದೆ. ಇವರೆಲ್ಲರ ಜ್ಞಾನವನ್ನು ಸಂಗ್ರಹಿಸಿ, ಶೋಧಿಸಿ, ಪ್ರಯೋಗಕ್ಕೆ ಒಳಪಡಿಸುವುದು ಅಗತ್ಯವಾಗಿದೆ. ಇದರಿಂದ ಜನಪದ ವೈದ್ಯ ಬೆಳೆಯುವುದಲ್ಲದೆ, ಮನುಕುಲಕ್ಕೆ ಹೊಸ ಔಷಧಗಳು ದೊರೆತಂತಾಗುತ್ತದೆ. ಈ ಔಷಧಿಗಳು ಹೊಸ ಪರೀಕ್ಷೆಗೆ ಒಳಗಾಗಬೇಕೆನ್ನುವ ಕಾರಣಕ್ಕೆ ನಾನು ಪ್ರಯೋಗ ಮಾಡುತ್ತಿಲ್ಲ.

ಈಗ ನಮ್ಮ ಜನಪದ ವೈದ್ಯಪದ್ಧತಿ ಹಿಂದೆ ಬೀಳಬಾರದು. ತಾನೇ ಸ್ವತಂತ್ರ, ಸರ್ವಶ್ರೇಷ್ಠ ಎಂದು ಬೀಗಬಾರದು. ಬೇರೆ ಬೇರೆ ಔಷಧ ಪದ್ಧತಿಗಳೊಂದಿಗೆ ಇದೂ ಕೂಡ ಪ್ರಯೋಗ, ಪರಿಶೀಲನೆ, ಹೊಂದಾಣಿಕೆಗಳಿಗೆ ಒಳಗಾಗಬೇಕು. ಜನಪದ ವೈದ್ಯ, ಬಡವರ ವೈದ್ಯ; ಬಹುಸಂಖ್ಯಾತರ ವೈದ್ಯ. ಅದರ ಅಭಿವೃದ್ಧಿ ಮತ್ತೊಂದು ವಿಧದಲ್ಲಿ ಉದ್ಯಮಪತಿ ಔಷಧ ವ್ಯವಸ್ಥೆಯ ಶೋಷಣೆಯನ್ನು ಪ್ರತಿಭಟಿಸುವುದು ಕೂಡ ಆಗಿರುತ್ತದೆ. ಗಾಳಿ, ನೀರು, ಆಹಾರ ಮತ್ತು ಔಷಧಗಳು ಉದ್ಯಮಗಳಾಗುವುದು ಮನುಕುಲಕ್ಕೆ ಅಪಾಯಕಾರಿ. ಅವು ಮನುಷ್ಯನ ಸಾಮಾನ್ಯ ಆಹಾರದಂತಾಗಬೇಕು.

ಜನಪದ ವೈದ್ಯದ ಅಭಿವೃದ್ಧಿಯ ಸಂದರ್ಭದಲ್ಲಿ ಹೊಸದಾಗಿ ಆವಿಷ್ಕಾರಗೊಂಡಿರುವ ವೈದ್ಯವ್ಯವಸ್ಥೆಯನ್ನು ದೂರ ಇಡಲಾಗದು. ಈಗ ಇರುವ ಹಾಗೆ ಜನಪದ ವೈದ್ಯ ಎಲ್ಲ ಜನರ ಸಾಮಾನ್ಯ ಕಾಯಿಲೆಗಳಿಗೆ ಪರಿಹಾರವಾಗಬೇಕು. ಸೂಕ್ಷ್ಮ, ಸಂಕೀರ್ಣ ಹಾಗು ಅಪಾಯಕಾರಿ ಕಾಯಿಲೆಗಳಿಗೆ ಎಲ್ಲ ಮೂಲದಿಂದ ಪರಿಹಾರಶೋಧ ನಡೆಯುತ್ತಲೆ ಇರಬೇಕು.

* * *

# ೧೦. ಸರ್ಪಹುಣ್ಣು ಮತ್ತು ಜಾನಪದ

ಹಿ.ಗೂ. ದುಂಡ್ಯಪ್ಪ

**ಸರ್ಪಹುಣ್ಣಿಗೆ ಸ್ವತಃ ಚಿಕಿತ್ಸೆ ನೀಡುತ್ತಿರುವ ಲೇಖಕರು ಪಾರಂಪರಿಕ ವೈದ್ಯ ಪದ್ಧತಿಗೆ ಸಂಬಂಧಿಸಿದಂತೆ ಬಹಳ ಉಪಯುಕ್ತ ಮಾಹಿತಿಗಳನ್ನು ಲೇಖನದಲ್ಲಿ ಒದಗಿಸಿರುತ್ತಾರೆ.**

**–ಸಂ.**

ಮಾನವ ಕಾಡಿನಿಂದ ನಾಡಿಗೆ ಬರುವಾಗ ತನ್ನ ನಾಗರೀಕತೆ ಬೆಳೆದಂತೆ, ನಡೆ–ನುಡಿಗಳನ್ನು ನಾಜೂಕುಗೊಳಿಸಿಕೊಳ್ಳುತ್ತಾ ಬಂದ. ಮಾನವ ಕಾಡುಮೃಗಗಳೊಂದಿಗೆ ಜೀವಿಸುತ್ತಾ, ಹುಟ್ಟು ಸಾವಿನೊಂದಿಗೆ ಸೆಣಸುತ್ತಾ ನಡೆದ. ಬರುವ ಸಮಸ್ಯೆಗಳಿಗೆ ಮಾರ್ಗ ಹುಡುಕುತ್ತಾ ನಡೆದ. ಆ ದಾರಿಯಲ್ಲಿ ಹುಟ್ಟಿಕೊಂಡವುಗಳೆಲ್ಲವು ಜನಪದ ವಿದ್ಯೆಗಳಾಗಿ ಅರಳಿಕೊಂಡವು. ಅವುಗಳಲ್ಲಿ ಬಹುಪಾಲು ವಿದ್ಯೆಗಳು ನಾಗರೀಕತೆಗೊಂಡು ಶಿಷ್ಟ ವಿದ್ಯೆಗಳಾಗಿ ಶಾಸ್ತ್ರಮಟ್ಟಕ್ಕೆ ಏರಿದವು. ಇನ್ನು ಕೆಲವು ವಿದ್ಯೆಗಳು ಜನಪದರ ವಿದ್ಯೆಗಳಾಗಿಯೇ ಉಳಿದುಕೊಂಡವು. ಈ ಅಳಿದುಳಿದ ಜನಪದ ಕಲೆ, ವಿದ್ಯೆಗಳ ಮೂಲವನ್ನು ಅರಿತು ಅಭಿವೃದ್ಧಿಪಡಿಸಿದರೆ ಮನುಕುಲಕ್ಕೊಂದು ವರದಾನ ನೀಡಿದಂತಾಗುತ್ತದೆ. ಕಾಡುವ ಸಮಸ್ಯೆಗಳಿಗೊಂದು ಪರಿಹಾರ ಸಿಕ್ಕೀತು.

'ಸರ್ಪಹುಣ್ಣು' ಜನಪದ ವೈದ್ಯದಲ್ಲಿ ಬರುವ ರೋಗಗಳಲ್ಲಿ ಒಂದು. "ಸರ್ಪಹುಣ್ಣು" ಯಾವುದೋ ಒಂದು ವೈರಸ್, ಅಣುಜೀವಿಗಳಿಂದ ಬರುವ ಕಾಯಿಲೆ. ಕೆಲವು ವಾರಗಳಿದ್ದು ತನ್ನತಾನೆ ಹೋಗುತ್ತದೆ ಎಂದು ವೈದ್ಯರ ಅಭಿಪ್ರಾಯ. ಅದಕ್ಕೆ ಅವರಿಂದಲೂ ನೇರವಾದ ಔಷಧ ಇಲ್ಲವೆಂದು ಕಾಣುತ್ತದೆ. ಹೆಚ್ಚು ಬೆಲೆಬಾಳುವ ಔಷಧೋಪಚಾರಗಳಿಂದ ಗುಣಕಾಣದ ಸರ್ಪಹುಣ್ಣಿಗೆ ರೋಗಿಗಳು ನನ್ನಲ್ಲಿಗೆ ಚಿಕಿತ್ಸೆಗೆ ಬಂದುದುಂಟು. ಅವುಗಳನ್ನು ನಾನು ಗುಣಪಡಿಸಿದ್ದೇನೆ. ಈ ರೋಗ ಬಂದವರು ಇಂಗ್ಲೀಷ್ ಮತ್ತು ನಾಟಿ ಔಷಧಿಗಳನ್ನು ಉಪಯೋಗಿಸಿದ ರೋಗಿಗಳು ಪೂರ್ಣ ಗುಣಕಾರಿಯಾಗದೆ, ಒಳಜ್ವರ, ಸಂಕಟ, ಉರಿಗಳಿಂದ ಬಳಲುತ್ತಿರುತ್ತಾರೆ. ಅರೆಗಚ್ಚಾದಂತೆಯಾಗಿ, ಹುಣ್ಣಿನ ಗುಳ್ಳೆಗಳು ಗಾಯವಾಗಿ ಕಪ್ಪುಕಲೆಗಳಾಗಿರುತ್ತವೆ. ಇಂತಹ ರೋಗಿಗಳು ನನ್ನ ಚಿಕಿತ್ಸೆಯಿಂದ ಸ್ವಲ್ಪ ನಿಧಾನವಾಗಿ ಗುಣವಾಗಿರುತ್ತಾರೆ.

ಸರ್ಪಹುಣ್ಣು ಮನುಷ್ಯ ಶರೀರದ ಯಾವುದೇ ಅಂಗಗಳ ಹೊರ ಮೈಯಲ್ಲಿ ಕಾನಿಸಿಕೊಳ್ಳುತ್ತದೆ. ಕಾಣಿಸಿಕೊಂಡ ಸ್ಥಳದಲ್ಲಿ ಮೊದಲು ಚರ್ಮವು ಕೆಂಪಾಗಿ ನುಚ್ಚುಗುಳ್ಳೆಗಳು ಏಳುತ್ತವೆ. ನಂತರ ಸರ್ಪ ಹರಿದಂತೆ ಗುಳ್ಳೆಗಳು ಹುಟ್ಟುತ್ತಲೆ ಹೋಗುತ್ತಿರುತ್ತವೆ. ಅವು ಯಾವ ದಿಕ್ಕಿನಲ್ಲಿಯಾದರೂ ಚಲಿಸಬಹುದು. ಇಲ್ಲಾ, ಸ್ವಲ್ಪ ಅಂತರ ಬಿಟ್ಟು ಕಾಣಿಸಿಕೊಂಡು ಬೆಳೆಯುತ್ತಾ ಬಂದು ಮತ್ತೊಂದು ದಿಕ್ಕಿನಿಂದ ಬರುವ ಗುಳ್ಳೆಗಳನ್ನು ಕೂಡಿಕೊಳ್ಳಬಹುದು. ಮೊದಲು ಹುಟ್ಟಿದ ಕೆಂಪು ಗುಳ್ಳೆಗಳು ದೊಡ್ಡದಾಗುತ್ತ ಬೆಳೆದು ಬೆಳ್ಳಗಾಗಿ ನೀರು ತುಂಬಿ ಒಡೆಯುತ್ತವೆ. ಅವು ಹಲ್ಲಿ ಉಚ್ಚೆಹೊಯ್ದ ಗುಳ್ಳೆಗಳಂತೆ ಕಾಣಿಸುತ್ತವೆ. ಮುಂದೆ ಚಿಕ್ಕ ಚಿಕ್ಕ ಗುಳ್ಳೆಗಳ ರಾಶಿ ಬೆಳೆಯುತ್ತಾ ಹೋಗುತ್ತವೆ. ಅವು ಬೆಳೆದಂತೆಲ್ಲ ಜ್ವರ, ಉರಿ, ಸಂಕಟ ಹೆಚ್ಚಾಗಿ ತುಂಬ ಸುಸ್ತಾಗುತ್ತಾರೆ. ಎರಡು ಮೂರು ದಿನಕ್ಕೆ ಮೈಮೇಲೆ ತುಂಬಾ ಕಾಣಿಸಿಕೊಳ್ಳುತ್ತವೆ.

ಈ ಲಕ್ಷಣಗಳು ಕಾಣಿಸಿಕೊಂಡೆರೆ ಬಲ್ಲವರಿಂದ 'ಸರ್ಪಹುಣ್ಣು' ಎಂದು ತಿಳಿದು ನಮ್ಮಲ್ಲಿಗೆ ಬರೆಸಿಕೊಳ್ಳಲು ಬರುತ್ತಾರೆ. ಬರೆಸಿಕೊಳ್ಳುವುದು ಎಂದರೆ, ಅಂಥ ರೋಗಿಗಳಿಗೆ 'ಗರುಡ ರೇಖೆ' ಬರೆಯುವುದು ಎಂದರ್ಥ. ಈ ಪದ್ಧತಿ ಪೂರ್ವಕಾಲದಿಂದಲೂ ಬಂದದ್ದಾಗಿದೆ. ಆ ಲಕ್ಷಣಗಳನ್ನು ಕಂಡವರು ಗುರುವಾರ, ಭಾನುವಾರ ಹೋದರಾಯಿತು ಎಂದು ಕುಳಿತುಕೊಂಡರಾಗದು. ಆ ರೀತಿ ಬರುವವರು ಇದ್ದಾರೆ. ಗುರುವಾರ ಅಥವಾ ಭಾನುವಾರ ಎಂದು ಮೀನ ಮೇಷ ಮಾಡಿದರೆ ಆ ಅಂತರದ ಮೂರು ದಿನಗಳಲ್ಲಿ ತುಂಬ ಗುಳ್ಳೆಗಳಾಗಿ ರೋಗ ಉಲ್ಬಣವಾಗುತ್ತದೆ. ಅವರಿಗೇ ತೊಂದರೆಯಾಗುತ್ತದೆ. ಈ ಕಾಯಿಲೆ ಬೇಸಿಗೆಯಲ್ಲಿ ಬಂದರಂತೂ ಅವರ ನರಕ ಹೇಳತೀರದು. ಮೈಯಲ್ಲಿ ಜ್ವರ, ಉರಿ, ಸಂಕಟದೊಂದಿಗೆ, ಹೊರಗಿನ ಬಿಸಿಲ ಬೇಗೆ ಹೆಚ್ಚಿ ಉರುಳಾಡಿಬಿಡುತ್ತಾರೆ. ನಮ್ಮಲ್ಲಿಗೆ ಬಂದವರು ಇಲ್ಲಿ ಬಾಲವಿದೆ, ಇಲ್ಲಿ ಹೆಡೆ ಇದೆ, ಎಂದು ತೋರಿಸುತ್ತಾರೆ. ಇದು ಕೂಡಿಕೊಂಡರೆ ಸಾವು ಬರುತ್ತದೆ ಎಂದು ಭಯಗ್ರಸ್ತರಾಗಿರುತ್ತಾರೆ. "ಬಾಲವಿಲ್ಲ ಹೆಡೆನು ಇಲ್ಲ ಧೈರ್ಯವಾಗಿರಿ. ಬೇಗ ಬಂದಿದ್ದು ಒಳ್ಳೆಯದಾಯಿತು. ನಾನು ಬರೆದಿದ್ದೇನೆ ಗುಣವಾಗುತ್ತದೆ. ನೆಮ್ಮದಿಯಿಂದ ಹೋಗಿರಿ" ಎದು ಹೇಳಿ ಕಳಿಸುತ್ತೇನೆ. ಅದು ಮೈತುಂಬ ಸರ್ಪದಂತೆ ಸುತ್ತುವರಿಯುವುದರಿಂದ ಬಾಲ, ಹೆಡೆ ಎಂಬ ಕಲ್ಪನೆ ಜನರಲ್ಲಿ ಮನೆಮಾಡಿದೆ. ಬಲ್ಲಂತ 'ಡಾಕ್ಟರ್' ಇದು

ಸರ್ಪಹುಣ್ಣು ಬರೆಸಿಕೊಳ್ಳಿ ಎಂದು ಕಳಿಸುತ್ತಾರೆ. ನಮ್ಮಿಂದ ಆಗದುದನ್ನು ಆಗುವಲ್ಲಿಗೆ ಕಳಿಸುವುದು ಸೂಕ್ತವಲ್ಲವೆ?

"ಸರ್ಪಹುಣ್ಣು ಹೆಚ್ಚಾದರೆ ಸಾವು ಬರುತ್ತದೆ" ಎಂದು ಕೆಲವರಲ್ಲಿ ಭಯ ಮನೆಮಾಡಿದೆ. ಅದಕ್ಕೆ ಕಾರಣ ಇಷ್ಟೆ. ಇದನ್ನು ಬಹುದಿನಗಳ ವರೆಗೆ ಯಾವ ಚಿಕಿತ್ಸೆ, ಔಷಧೋಪಚಾರ ಮಾಡಿಸದೆ ಬಿಟ್ಟರೆ, ಜ್ವರ ಹೆಚ್ಚಾಗಿ ಸಾವಿಗೆ ಕಾರಣವಾಗಿರಬಹುದು.

ಸುಮಾರು ಮೂವತ್ತೈದು ವರುಷಗಳಿಂದ ಈ ರೋಗಕ್ಕೆ ಉಚಿತವಾಗಿ ಚಿಕಿತ್ಸೆ ನೀಡುತ್ತಾ ಬಂದಿದ್ದೇನೆ. ಪ್ರತಿದಿನ ಎರಡು-ಮೂರು ರೋಗಿಗಳು ಬರುತ್ತಾರೆ. ದಾವಣಗೆರೆ ಜಿಲ್ಲೆಯ 'ಹರಿಹರ' ನಗರ ನನ್ನ ಹುಟ್ಟೂರು. ಈ ಜಿಲ್ಲೆಯ ಸುತ್ತಮುತ್ತ ಹಾಗೂ ಅನೇಕ ಜಿಲ್ಲೆಗಳ ರೋಗಿಗಳು ಬರುತ್ತಾರೆ. ಬೆಂಗಳೂರು, ಪೂನ, ಮುಂಬಾಯಿಗಳಿಂದಲೂ ಬಂದಿದ್ದಾರೆ, ಬರುತ್ತಲಿದ್ದಾರೆ.

ನನ್ನಲ್ಲಿ ಬಂದ ಅನೇಕ ರೋಗಿಗಳು ಯಾರ್‍ಯಾರೋ ನೀಡಿದ ಔಷಧಿ ಫಲ ನೀಡದೆ, ಇಲ್ಲಿಗೆ ಬಂದು ತೋರಿಸಿದ್ದಾರೆ. ಆ ಔಷಧಿಗಳನ್ನು ನಿಲ್ಲಿಸಿ ನನ್ನ ಚಿಕಿತ್ಸೆಯನ್ನು ನೀಡಿದ್ದೇನೆ. ನೆಮ್ಮದಿಯಿಂದ ಹೋಗಲು ತಿಳಿಸಿದ್ದೇನೆ. ಇಲ್ಲಿಗೆ ಬಂದವರೆಲ್ಲರೂ ಗುಣಮುಖರಾಗಿದ್ದಾರೆ. ಮತ್ತೊಬ್ಬರನ್ನು ಕಳಿಸಿದ್ದಾರೆ. ಕೆಲವರು ಜ್ವರಕ್ಕೆ ಗುಳಿಗೆ, ಇಂಜೆಕ್ಷನ್ ಮಾಡಿಸಿಕೊಳ್ಳಲು ಬಯಸುತ್ತಾರೆ. ಮಾಡಿಸಿಕೊಳ್ಳಲಿ, ನನ್ನ ಚಿಕಿತ್ಸೆಗೇನು ಅಭ್ಯಂತರವಿಲ್ಲ. ಆದರೆ ಅದು ತಾತ್ಕಾಲಿಕ ಉಪಶಮನ ನೀಡುತ್ತದೆ ಅಷ್ಟೆ.

ಸರ್ಪಹುಣ್ಣಿಗೆ ಬರೆದ ಮೇಲೆ ಅವರಿಗೆ ಔಷಧಿ ಏನೂ ನೀಡುವುದಿಲ್ಲ. ಗುಳ್ಳೆ ಒಡೆದು, ನೀರು ಸೋರಿ ಗಾಯವಾಗುತ್ತದೆ. ಅದಕ್ಕೆ ತಾವರಿಕೆ ಅಥವಾ ತಂಗಟೆ ಹೂವು (ದೀಪಾವಳಿಯಲ್ಲಿ ಗುಜ್ಜವ್ವಗೆ ಸಿಗಿಸುವ ಹಳದಿ ಹೂವು)- ಅಥವಾ ಮೊಗ್ಗುಗಳನ್ನು ಹಂಚಿನಲ್ಲಿ ಹುರಿದು ಪುಡಿಮಾಡಿಟ್ಟುಕೊಂಡು ಆ ಗಾಯಕ್ಕೆ ಕೊಬ್ಬರಿ ಎಣ್ಣೆ ಹಚ್ಚಿ ಮೇಲೆ ಈ ಪುಡಿಯನ್ನು ಉದುರಿಸಲು ಹೇಳುತ್ತೇನೆ. ಅದು ಅಕ್ಕಳಗಟ್ಟಿ ಗಾಯ ಮಾಯುವವರೆಗೂ ಬಿಡುವುದಿಲ್ಲ. ಈ ಹೂವಿಗೆ ಕಲೆಯಾಗದಂತೆ ಮಾಯಿಸುವ ಗುಣವಿರಬೇಕು. ಇದು ಹಿಂದಿನವರು ಮಾಡುತ್ತಿದ್ದ

ಕ್ರಮ. ಈಗ ಆ ಹೂವು ಲಭಿಸುವುದು ಕಷ್ಟ. ಮಾಡುವುದು ಕಷ್ಟ. "ಯಾಸ್ಲೆಣ್ಣೆ', 'ಬರ್ನಲ್' ಗಳನ್ನೆ ಹಚ್ಚಲು ತಿಳಿಸುತ್ತೇನೆ. ಉರಿ ಸಂಕಟ ಇರುವುದರಿಂದ ಅದಕ್ಕೆ ಗಂಧ ತೇದು ಹಚ್ಚಲು ತಿಳಿಸುತ್ತಿದ್ದರು. ಅದು ಆರಿದ ಮೇಲೆ ಮೈ ಬಿಗಿಯಾಗುತ್ತದೆ. ಆದ್ದರಿಂದ ಆಯಿಂಟ್ಮೆಂಟ್ ಸೂಕ್ತ ಹಾಗೂ ಲಭ್ಯ ಇರುವುದರಿಂದ ಅದನ್ನೇ ತಿಳಿಸುತ್ತೇನೆ. ಅಲ್ಲದೆ ಈ ಆಯಿಂಟ್ಮೆಂಟ್‌ಗಳಿಗೆ ಮಂತ್ರಿಸಿ ಕೊಡುತ್ತೇನೆ. ಇದರಿಂದ ಬೇಗ ಗುಣಕಾರಿಗೆ ಸಹಕಾರವಾಗುತ್ತದೆ.

ಈ ರೋಗಕ್ಕೆ ಕೆಲವರು ನಾಟಿ ಔಷಧಿ ನೀಡುತ್ತಾರೆ. ಪಥೆ (ಪಥ್ಯ) ಹೇಳುತ್ತಾರೆ. ಬೇಗ ಗುಣವಾಗದೆ, ಪಥೆಯಿಂದ ಬಲು ಸುಸ್ತಾಗುತ್ತಾರೆ. ಕೆಲವರು ಕಾವಿ ಬಣ್ಣ ಮತ್ತು ಲಿಂಬೆ ಹಣ್ಣಿನ ರಸದಿಂದ ತೇದು ಮೈಗೆಲ್ಲ ಬಳಿಯುತ್ತಾರೆ. ಕೆಲವರು ಮೈ ತುಂಬ ದೊಡ್ಡ ಗರುಡನನ್ನೆ ಬರೆಯುತ್ತಾರೆ. ಇವುಗಳಿಂದ ಅಷ್ಟೊಂದು ಪರಿಣಾಮಕಾರಿಯಾಗದೆ ಮತ್ತೆ ನನ್ನಲ್ಲಿಗೆ ಬಂದವರು ಸಾಕಷ್ಟು ಜನರಿದ್ದಾರೆ. ಇವುಗಳಿಂದ ವಾಸಿಯಾಗಿದ್ದರೂ ಅರೆಬರೆ ವಾಸಿಯಾದಂತೆ ಕಾಣುತ್ತದೆ. ಒಳಜ್ವರ ಹಾಗೆ ಇರುತ್ತದೆ. ಹುಣ್ಣಿನ ಗುಳ್ಳೆಗಳು ಕಪ್ಪಗೆ ಕಲೆಯಾಗಿ ಉಳಿದುಕೊಳ್ಳುತ್ತವೆ. ಮತ್ತೆ ಎಂದಾದರೂ ಮರುಕಳಿಸಬಹುದು. ಇಂತಹ ರೋಗಿಗಳು ಬಂದಿದ್ದಾರೆ. ಅವರಿಗೆ ತುಂಬ ದಿನಗಳ ನಂತರ ಅದರ ಪ್ರಭಾವ ನಿಧಾನವಾಗಿ ಕುಗ್ಗುತ್ತದೆ. ಪದೇ ಪದೇ ಬರೆಸುತ್ತಿರಬೇಕಾಗುತ್ತದೆ.

ನಮ್ಮ ತರಹ ಗರುಡ ರೇಖೆಯನ್ನು ದೂರರಿಂದ ಬರೆಯುವುದು ಅಪರೂಪ. ಅದರ ಲಕ್ಷಣಗಳನ್ನು ತಿಳಿದು, ಅವರಿಂದ ಸ್ವಲ್ಪ ದೂರ ನಿಂತು ಯಾವುದಾದರೂ ಒಂದು ಕಡ್ಡಿಯಿಂದ ಒಮ್ಮನದಿಂಧ ಗರುಡ ರೇಖೆಯನ್ನು ಗರುಡನ ಧ್ಯಾನದೊಂದಿಗೆ ಬರೆಯುವುದು. ಅದರಿಂದ ಗುಣವಾಗುವುದು ಅದ್ಭುತವಲ್ಲವೆ? ಬಹುಶಃ ಸಂಕಲ್ಪ ಮತ್ತು ಏಕಾಗ್ರತೆಯಿಂದ ಹೊರಟ ವಿಶ್ವಶಕ್ತಿ ನಮ್ಮ ಬೆರಳುಗಳ ಮುಖಾಂತರ, ನೋಟಗಳ ಮುಖಾಂತರ ಗರುಡ ರೇಖೆಯ ರೂಪವಾಗಿ ಚಲಿಸಿ ಸರ್ಪಹುಣ್ಣಿನ ಪ್ರಭಾವವನ್ನು ಹೀನಗೊಳಿಸಬಹುದು. ವಿದ್ಯುತ್ತನ್ನು ಬೇರೆ ಬೇರೆ ರೂಪಗಳಲ್ಲಿ ಬಳಸುವಂತೆ ವಿಶ್ವಶಕ್ತಿಯನ್ನು ಅನೇಕ ರೀತಿಯಲ್ಲಿ ಬಳಸಿಕೊಳ್ಳಬಹುದು. ಮನಸ್ಸು ಮತ್ತು ಶಕ್ತಿಗೆ ಯಾವುದೂ ಎದುರಲ್ಲ. ಯಾವ ವಿದ್ಯೆಯಾಗಲೀ ಕರಗತವಾಗಿರಬೇಕು, ಸಿದ್ಧಿಯಾಗಿರಬೇಕು.

## ಚಿಕಿತ್ಸೆ ನೀಡುವ ಪದ್ಧತಿ :

ಸರ್ಪಹುಣ್ಣು ಆದವರಿಗೆ ಗುಳ್ಳೆಗಳ ಸಮೂಹ ಇಲ್ಲದ ಸ್ಥಳಗಳ ಸುತ್ತಲು ಮತ್ತು ಶರೀರದ ಸುತ್ತಲು ಆ ಗುಳ್ಳೆಗಳಿಗೆ ಎದುರುಮುಖವಾಗಿ ಗರುಡ ರೇಖೆಗಳನ್ನು ಬರೆಯುತ್ತಾ ಹೋಗುತ್ತೇನೆ. ಬರೆದ ನಂತರ "ಹೋಗುತ್ತದೆ ಹೋಗಿ" ಎಂದು ತಿಳಿಸುತ್ತೇನೆ. ಇದು ವಾಕ್ ಸಿದ್ಧಿಯ ಶಕ್ತಿಯ ಪ್ರಭಾವದಿಂದಲೂ ಗುಣಮುಖಕ್ಕೆ ದಾರಿದೀಪವಾಗಬಹುದು. ನಂತರ ಅವರಿಗೆ "ಮನಸ್ಸಿನಲ್ಲಿ ಯಾವ ಭಯವನ್ನು ಇಟ್ಟುಕೊಳ್ಳಬೇಡಿರಿ, ಗುಣವಾಗುತ್ತದೆ" ಎಂದು ಧೈರ್ಯತುಂಬುತ್ತೇನೆ. ಗರುಡ ರೇಖೆ ಬರೆದ ಅರ್ಧ ಗಂಟೆಯಿಂದ ಈ ಕಾಯಿಲೆಯ ಇಳಿಮುಖದ ಲಕ್ಷಣಗಳು ಪ್ರಾರಂಭವಾಗುತ್ತವೆ. ಸ್ವಲ್ಪ ಸ್ವಲ್ಪವಾಗಿ ಜ್ವರ, ಇಳಿಮುಖವಾದಂತೆ, ಕೆಂಪಗಿದ್ದ ಗುಳ್ಳೆಗಳ ಮಧ್ಯಭಾಗವು ಕಪ್ಪಾಗಿ ಚಟ್ಟುಹಿಡಿದಂತೆ ಕಾಣಿಸುತ್ತದೆ. ಸುಮಾರಾಗಿ ಈ ಹುಣ್ಣು ಎಷ್ಟು ದಿನದ್ದು ಎಂದು ನೋಡಿದಾಕ್ಷಣವೆ ದಿನದಿನಕ್ಕೆ, ಹೇಗೆ ಬಂದಿತೋ ಹಾಗೆ ಇಳಿಮುಖವಾಗುತ್ತ ಹಿಂದೆ ಸರಿಯುತ್ತದೆ. ಇದು ಕೂಡಿದರೆ ಸಾಯುತ್ತೇವೆ ಎಂಬ ಭಯ ಉಂಟು ಅವರಿಗೆ. ಅಂದರೆ ಅಷ್ಟೊತ್ತಿಗೆ ಜ್ವರ ಹೆಚ್ಚಿರುತ್ತದೆ. ಮತ್ತು ಮಾನಸಿಕ ಭಯ ತುಂಬಿರುತ್ತದೆ. ಎಲ್ಲವನ್ನು ಬಿಡಿಸಿ ಧೈರ್ಯ ಹೇಳುತ್ತೇನೆ. ಕೆಲವರಿಗೆ ಬೇಗ ಗುಣಕಾರಿಯಾಗುತ್ತದೆ. ಕೆಲವರಿಗೆ ಒಂದೆರಡು ಸಾರಿ ಬರೆದಾಗ ಗುಣವಾಗುತ್ತದೆ.

ನನಗೆ ಈ ವಿದ್ಯೆಯನ್ನು ಕಲಿಸಿದ ಗುರು ಹರಿಹರದ ಹಳ್ಳದಕೇರಿಯ ಹೆಸರಾಂತ ಚಿತ್ರಗಾರ ಜೋಗಪ್ಪರ ಪತಿಯಪ್ಪ. ಇವರ ಚಿತ್ರಕಲೆ, ದೇವರ ವಿಗ್ರಹ, ಚಿತ್ರರಾಮಾಯಣ; ಈ ನೆಲದ ಸುತ್ತ ಪ್ರಸಿದ್ಧ ಪಡೆದವುಗಳು. ಅಪರೂಪದ ಕಲಾವಿದ. ದೈವೀಭಕ್ತ. ಇವರು 1971ರಲ್ಲಿ ದೈವಾಧೀನರಾದರು. ಇವರ ಮಗಳು ಭೀಮವ್ವ ಅವರ ನಂತರ ಈ ಸರ್ಪಹುಣ್ಣಿಗೆ ಬರೆಯುತ್ತಾರೆ. ನಾನು ಸುಮಾರು 35 ವರುಷಗಳಿಂದಲೂ ಈ ಚಿಕಿತ್ಸೆ ನೀಡುತ್ತ ಬಂದಿದ್ದೇನೆ. ಅವರು ಕಲಿಸಿದ್ದು ಅಲ್ಪ. ನಾನು ಅದನ್ನು ಅಭಿವೃದ್ಧಿಗೊಳಿಸಿದ್ದು ತುಂಬ. ಅವರು ಮೂರು ಸಾರಿ ಬರೆಯುತ್ತಿದ್ದರು. ಬರವಣಿಗೆಯಲ್ಲಿ ತೀಕ್ಷ್ಣಗೊಳಿಸಿ ಒಂದೇ ಸಾರಿಗೆ ದಿಗ್ಬಂಧಿಸಬಹುದು. ಇದಕ್ಕೆ ಕಾರಣ ಏಕಾಗ್ರಚಿತ್ತತೆ ಮತ್ತು ಶರೀರದ ತುಂಬ ಹೆಚ್ಚು ಗರುಡ ರೇಖೆಗಳನ್ನು ಪ್ರತಿಮೂಡಿಸುವುದರಿಂದ ಗುಣಕಾರಿಗೆ ಸಹಾಯಕವಾಗಿದೆ.

ಇಲ್ಲಿಗೆ ಬರಲು ಸಾಧ್ಯವಾಗದ ವ್ಯಕ್ತಿಗಳಿಗೆ ಉದಾ : ಬಾಣಂತಿಯರಿಗೆ, ವೃದ್ಧರಿಗೆ, ಪತಿಯಪ್ಪನವರು ಗರುಡ ಪಕ್ಷಿಯ ಚಿಕ್ಕ ಚಿಕ್ಕ ಚಿತ್ರಗಳನ್ನು ಬಿಡಿಸಿ ಸರ್ಪಹುಣ್ಣಿಗೆ ಸುತ್ತ ಅಂಟಿಸಲು ತಿಳಿಸುತ್ತಿದ್ದರು. ನಾನು ಇಲ್ಲಿಂದಲೇ ಹುಣ್ಣಾದವರಿಗೆ ಬರೆಯುತ್ತೇನೆ. ನಮ್ಮಲ್ಲಿಗೆ ಮತ್ತೆ ಬರಲು ಆಗದವರಿಗೆ ಇಲ್ಲಿಂದಲೇ ಅವರಿಗೆ ಮತ್ತೆ ಮತ್ತೆ ಬರೆಯುತ್ತಿರುತ್ತೇವೆ. ಫೋಟೋ ಥೇರಪಿ ಇದ್ದಂತೆ. ಯಾವುದಕ್ಕೂ ಮುಖ್ಯ ಕಾರಣ ಮನಸ್ಸು ಮತ್ತು ಸಂಕಲ್ಪಶಕ್ತಿ ಇದ್ದರೆ ಏನು ಬೇಕಾದರೂ ಸಾಧಿಸಬಹುದು.

ಮನೋನಿಗ್ರಹದಿಂದ ಗುಣವಾಗಲು ನೀಡಿದ ಚಿಕಿತ್ಸೆಗೆ ವಿರುದ್ಧವಾಗಿ ಹೆಚ್ಚಿಸುವ ಅಥವಾ ಉಲ್ಬಣಿಸುವ, ನೀಡಿದ ಚಿಕಿತ್ಸೆಯನ್ನು ಮರಳಿ ಪಡೆಯುವ ಅಥವಾ ಅಳಿಸುವ ಶಕ್ತಿ ಇರುತ್ತದೆ. ಹಾಗೆ ಮಾಡಬಾರದು, ಮಾಡುವುದೂ ಇಲ್ಲ. ಜನಕಲ್ಯಾಣಕ್ಕೆ ಮಾತ್ರ ಉಪಯೋಗಿಸಬೇಕು. ಅದು ಧರ್ಮ. ಯಾವ ವಿಕಾರ ಬುದ್ಧಿಗಳೂ ಬರಬಾರದು. ದುರಾಶೆ, ದುರ್ಬುದ್ಧಿಗಳೂ ಬರಬಾರದು. ದುರಾಶೆ, ದುರ್ಬುದ್ಧಿಯಿಂದ ವಿದ್ಯೆಯ ಶಕ್ತಿ ಕುಗ್ಗುತ್ತದೆ. ಇದನ್ನು ಹೇಳುವ ಉದ್ದೇಶ, ಪುರಾತನ ವಿದ್ಯೆಗಳ ಶಕ್ತಿ ಸ್ವರೂಪದ ಅರಿವು ತಿಳಿದಿರಲಿ ಎಂದು. ಇವೆಲ್ಲ ನನ್ನ ಗುರು ಹೇಳಿಕೊಟ್ಟಿದ್ದಲ್ಲ. ನನ್ನ ಅಧ್ಯಯನ, ಅನುಭವದ ಫಲ. ಹಾಗೆಂದು ಪ್ರಯೋಗಿಸಿದ್ದಲ್ಲ. ಅರಿವಿನ ಮೂಲಕ ಅರಿತಿದ್ದು.

ನಾನು ನೀಡುವ ಗರುಡ ರೇಖೆಯನ್ನು ಒಂದು ಬ್ಯಾಟರಿ ಬೆಳಕಿನ ಮುಖಾಂತರ ರೋಗಿಯ ಶರೀರದ ತುಂಬ ಚಿತ್ರಗಳನ್ನು ಬಿಡುವುದರಿಂದಲೂ ಗುಣಕಾರಿ ಸಾಧ್ಯ ಉಂಟು. ಇವು ನನ್ನ ಹೊಸ ಪ್ರಯೋಗಗಳಾಗಿವೆ. ಅಲ್ಲದೆ ಅನುಮಾನಾಸ್ಪದ ಸರ್ಪಹುಣ್ಣಿನ ಚರ್ಮರೋಗಗಳಿಗೆ ಪ್ರಯೋಗಿಸಿ ನೋಡಿದ್ದೇನೆ, ಕೆಲವು ಗುಣ ಕಂಡಿವೆ.

## ಒಂದು ಚಿಂತನೆ :

ಮನೆ ಕಟ್ಟಲು ಆಯ ಮುಖ್ಯ. ಆಯ ತಪ್ಪಿದರೆ, ಹಾನಿ. ಅಂದರೆ ಈ ಆಯಕ್ಕೆ ಶಕ್ತಿ ಇದೆ ಎಂದರ್ಥ ಅಲ್ಲವೆ? ಆಯ, ಹಸ್ತ ಸಾಮುದ್ರಿಕೆ, ರಂಗ, ರಂಗವಲ್ಲಿ, ತ್ರಿಕೋನ, ಶ್ರೀಚಕ್ರ, ಯಂತ್ರ, ಮಂತ್ರ ಮುಂತಾದವಕ್ಕೆ ಒಂದು ಶಕ್ತಿ ಇದೆ. ಅದು ವಿಶ್ವಶಕ್ತಿಯೊಂದಿಗೆ ಸೇರಿ ಮಹಾಶಕ್ತಿಯಾಗಿ ನಾವು ಬಳಸಿದಂತೆ

ಫಲ ನೀಡುತ್ತದೆ. ಈ ಎಲ್ಲ ವಿದ್ಯೆಗಳನ್ನು ನಮ್ಮ ಪೂರ್ವಿಕರು ಮಾಡಿಹೋಗಿದ್ದಾರೆ. ನಮಗೆ ಅವುಗಳ ಅರಿವಿಲ್ಲ. ಅರಿಯುವ ಶಕ್ತಿ ಇಲ್ಲ. ಬರಿ ವಿದೇಶೀಯರ ಅನುಕರಣೆ ಮಾಡುತ್ತ ತಲೆದೂಗುತ್ತ ಕಾಲ ಕಳೆಯುತ್ತಿದ್ದೇವೆ.

**ನಮ್ಮ ಭಾರತೀಯ ವಿದ್ಯೆಗಳ ವಿಶ್ವವಿದ್ಯಾನಿಲಯ ಒಂದನ್ನು ಸ್ಥಾಪಿಸಿ ಈ ವಿದ್ಯೆಗಳನ್ನು ಅಭಿವೃದ್ಧಿಗೊಳಿಸಿ ಬಳಸಿಕೊಳ್ಳಬೇಕು. ಈ ವಿದ್ಯೆಯ ಗ್ರಂಥಗಳು, ಪಂಡಿತರು, ಅನುಭವಿಗಳು ಕಾಲವಾಗುವ ಮುನ್ನ ಈ ಕಾರ್ಯ ನಡೆಯದೇ ಹೋದರೆ ನಮ್ಮ ಪೂರ್ವಿಕರು ನೀಡಿದ ಅಮೂಲ್ಯ ಕೊಡುಗೆಯನ್ನು ಕಳೆದುಕೊಳ್ಳುತ್ತೇವೆ.**

**ಪಥ್ಯ :**

ಬಂದ ರೋಗಿಗಳು ಮಾಂಸ ತಿನ್ನಬಹುದೆ? ಧೂಮಪಾನ ಮಾಡಬಹುದೆ? ಎಂದೆಲ್ಲ ಕೇಳುತ್ತಾರೆ. ಇವು ಉಷ್ಣಕಾರಕವಾದುದರಿಂದ ಬಿಡುವುದು ಒಳ್ಳೆಯದು. ಊಟದಲ್ಲಿ ಯಾವ ಪಥ್ಯ ಇಲ್ಲ. ಹಾಸಿಗೆ ಪಥ್ಯ ಮಾಡಿ, ಸ್ನಾನ ಮಾಡಿ ಎಂದು ಹೇಳುತ್ತೇವೆ.

ಈ ರೋಗ ಸಾಮಾನ್ಯವಾಗಿ ಬೇಸಿಗೆ, ಮಳೆ, ಚಳಿ ಕಾಲಗಳ ಮಧ್ಯ ಭಾಗದಲ್ಲಿ ಹೆಚ್ಚಿಗೆ ಕಾಣಿಸುತ್ತದೆ. ನಮ್ಮ ಗುರುಗಳು ಇವುಗಳ ಮಾಹಿತಿ ನೀಡಿಲ್ಲ. ಪದೇ ಪದೇ ಈ ಕಾಯಿಲೆ ಕಾಣಿಸಿದರೆ ಏಡ್ಸ್ ನ ಒಂದು ಲಕ್ಷಣ ಎಂದೂ ಹೇಳುತ್ತಾರೆ. "ನಿಮ್ಮ ಕೈಗುಣ ಚೆನ್ನಾಗಿದೆ. ನೀವೇ ಬರೆಯಬೇಕು" ಎಂದು ನಾನು ಬರುವವರೆಗೂ ಕಾದು ಬರೆಸಿಕೊಂಡು ಹೋಗುತ್ತಾರೆ. ಕೈಗುಣ ಎಂದರೆ ಏಕಾಗ್ರತೆಯ ಮಾನಸಿಕ ಶಕ್ತಿಯಿಂದ ಆಗುವ ಗುಣಕಾರಿಯಾಗಿರುತ್ತದೆ. ಈಗಿನ "ರೇಖೀ" ಪದ್ಧತಿ ಇದ್ದಂತೆ. ಯಾವ ಹೊಸ ಆವಿಷ್ಕಾರಗಳು ಹುಟ್ಟಿಕೊಂಡರೂ ನಮ್ಮ ಹಿರಿಯರು ಎಲ್ಲವನ್ನು ಅಳವಡಿಸಿಕೊಂಡ ವಿದ್ಯೆಗಳು ಆಗಿದ್ದುವು. ಅವು ತುಂಬ ಶಕ್ತಿಯುತವಾಗಿ ಪರಿಪೂರ್ಣವಾಗಿದ್ದವು. ಅವು ಬೆಳಕಿಗೆ ಬಾರದೆ ಇಂದು ಹಾಳಾಗಿವೆ.

ನನ್ನ ಸ್ನೇಹಿತರೊಬ್ಬರ ಮನೆಯ ಪಕ್ಕದಲ್ಲಿ ಮಾರ್ವಾಡಿ ಜನಾಂಗದವರು ವಾಸವಾಗಿದ್ದರು. ಅವರ ಸುಮಾರು 8 ವರುಷದ ಮಗಳಿಗೆ ತಲೆ ತುಂಬ ಗಾಯಗಳಾಗಿ ಗಿಜಿಗಿಜಿ ಎನ್ನುತ್ತಿತ್ತು. ಕೂದಲೆಲ್ಲ ಉದುರಿ ಹೋಗಿದ್ದವು. ಎಲ್ಲಿಯು ವಾಸಿಯಾಗದೆ ತಮ್ಮಲ್ಲಿಗೆ ಕರೆಸಿಕೊಂಡಿದ್ದರು. ಇದನ್ನು ಅರಿತ ನನ್ನ ಸ್ನೇಹಿತರು ನಿಮ್ಮ ಚಿಕಿತ್ಸೆ ಮಾಡಿನೋಡಿ ಎಂದು ಪ್ರೇರೇಪಿಸಿದರು. ಅಂತೆಯೇ ಎರಡು ದಿನಕ್ಕೊಮ್ಮೆ ಒಂದುವಾರ ಗರುಡ ರೇಖೆಯನ್ನು ಬರೆದೆ. ಮೇಲೆ ವಿಭೂತಿ

ಹಚ್ಚಲು ತಿಳಿಸಿದೆ. ಸುಮಾರು 15–20 ದಿನಗಳಲ್ಲಿ ಗಾಯವು ಮಾದು, ಕ್ರಮೇಣ ಕೂದಲು ಕಾಣಿಸಿಕೊಂಡವು. ಎಲ್ಲರಿಗೂ ತುಂಬ ಆಶ್ಚರ್ಯವಾಯಿತು. ಈ ಹುಡುಗಿಯ ಪುಣ್ಯವೆಂದು ಹರಸಿದೆವು.

ಒಬ್ಬಿಬ್ಬರು ರೋಗಿಗಳಿಗೆ ತಲೆ, ಕಣ್ಣು, ಬಾಯಿ ಯಾವುದೂ ಗೊತ್ತಾಗುತ್ತಿರಲಿಲ್ಲ. ಗುಳ್ಳೆಗಳಾಗಿ ಸಾಯುವ ಸ್ಥಿತಿಯಲ್ಲಿದ್ದರು. ಈ ಚಿಕಿತ್ಸೆಯಿಂದ ಒಂದೆರಡು ವಾರದಲ್ಲೇ ಗುಣವಾದರು. ಇಂತಹ ಅನೇಕ ಘಟನೆಗಳು ಆಗಿಹೋಗಿವೆ. ಶರೀರದ ರೋಗ–ನಿರೋಧಕ ಶಕ್ತಿ ಈ ವಿದ್ಯೆಗೆ ಇರುವುದಾದರೆ, ಇದನ್ನು ಸಂಪೂರ್ಣ ಮನೋಶಕ್ತಿಗೆ ಅಳವಡಿಸಿ ಪ್ರಯೋಗಿಸಿದರೆ ಅನ್ಯ ಕಾಯಿಲೆಗಳನ್ನು ಗುಣಪಡಿಸಬಾರದೇಕೆ?

ಈ ವಿದ್ಯೆಯ ಗಂಧವೆ ಗೊತ್ತಿಲ್ಲದವರು "ನಾನು ಬರೆಯುತ್ತೇನೆ" ಎಂದು ಬರೆದು ದುಡ್ಡು ಮಾಡುವವರಿದ್ದಾರೆ. ಹೆಚ್ಚು ಮಾಡಿಕೊಂಡು ನನ್ನಲ್ಲಿ ಬರೆಸಿಕೊಂಡವರಿದ್ದಾರೆ. ನಾಲ್ಕು ಮಂದಿಗೆ ಉಪಕಾರವಾದೀತು ಎಂದು ಅದರ್ಶಕ್ಕೆ ಬಿದ್ದು ಅನ್ಯರಿಗೆ ಕಲಿಸಿದರೆ ಅದನ್ನೆ ಹಣಕ್ಕಾಗಿ ಬಳಸಿಕೊಳ್ಳುತ್ತಾರೆ. ಹಾಗೆಂದು ಹಣ ಪಡೆಯದೆ ಹೋದರೆ ವಿದ್ಯೆಗೂ ಮರ್ಯಾದೆ ಇರುವುದಿಲ್ಲ. ನಾವು ಎಷ್ಟೋ ದೊಡ್ಡ ಡಾಕ್ಟರ್ ಹತ್ತಿರ ತೋರಿಸಿದ್ದೇವೆ, ನಿಮ್ಮಿಂದ ಅದು ಸಾಧ್ಯವೆ ಎಂದು ತಾತ್ಸಾರ ಮಾಡುತ್ತಾರೆ. ತಿಳಿದವರು ಇಲ್ಲಿಗೆ ಬರುವಾಗ ಅಡಿಕೆ ಎಲೆ, ಊದಿನಕಡ್ಡಿ, ಬಾಳೆಹಣ್ಣು, ದಕ್ಷಿಣೆ ತರುವುದು ಸಂಪ್ರದಾಯ. ಆ ವಿದ್ಯೆಗೆ ಗೌರವ. ಇವುಗಳನ್ನು ಅವರವರ ಆರ್ಥಿಕ ಹಿನ್ನೆಲೆಯಲ್ಲಿ ಹಿತ ಮಿತವಾಗಿ ಬಳಸುವುದು ಮುಖ್ಯ. ದೇವರು ದಿಂಡರು, ಪಾಪ ಪುಣ್ಯ ಎಂಬ ಭಾವನೆಯಲ್ಲಿ ಅವರ ಕಾಯಿಲೆ ಗುಣಕಾರಿಯಾಗುವತ್ತ ಸಹಕಾರಿಯಾಗುವ ಉದ್ದೇಶ ಮುಖ್ಯವಾಗಿದ್ದರೆ, ಎಲ್ಲರಿಗೂ ಕ್ಷೇಮ ಅಲ್ಲವೆ?

ತಮ್ಮ ಪ್ರತಿಷ್ಠೆಗೆ ಮತ್ತು ಹಣದ ಆಶೆಗೆ ಈ ವಿದ್ಯೆಯನ್ನು ಕಲಿಸಿರೆಂದು ಗಂಟುಬಿದ್ದವರಿಗೆ ಕಲಿಸಿಲ್ಲ. ಮಕ್ಕಳಿಗೆ ಕಲಿಸಿದ್ದೇನೆ. ನಾನಿಲ್ಲದಾಗ ಅವರು ಬರೆಯುತ್ತಾರೆ. ಕಲಿಯುವುದಕ್ಕೂ ಯೋಗ್ಯತೆ ಬೇಕು. ಇಲ್ಲದಿದ್ದರೆ ಅರ್ಥ ಕಳೆದುಕೊಳ್ಳುತ್ತದೆ.

"ಕದರಮಂಡಗಿಯಲ್ಲಿ ಸುಮಾರು 90 ವರ್ಷದ ಪುಟ್ಟಪ್ಪ ಎಂಬ ಆಯುರ್ವೇದ ಪಂಡಿತರು ಇದ್ದರು. 6–7 ವರುಷಗಳ ಹಿಂದೆ ತೀರಿಹೋದರು. ಅವರ ಮನೆಯಲ್ಲಿ ಒಳಬಾಗಿಲಿಗೆ ಒಂದು ದೊಡ್ಡದಾದ ಪಕ್ಷಿಯ ಕೊಕ್ಕನ್ನು ನೇತುಹಾಕಿದ್ದಾರೆ.

ಅವರಿಗೂ ನಮಗೂ ತುಂಬ ಆತ್ಮೀಯತೆ. ಅದರ ಬಗ್ಗೆ ವಿಚಾರಿಸಲಾಗಿ, ಅದು ರಾಮ ಪಕ್ಷಿಯ ಕೊಕ್ಕು ಎಂದು ತಿಳಿಸಿದರು. ಅದನ್ನು ನೋಡಿದರೆ ಅದರ ಗಾತ್ರ ಅರಿವಾಗುತ್ತದೆ. ಅಂಥ ಪಕ್ಷಿಗಳ ಸಂತತಿ ಕಳೆದುಕೊಂಡ ಖೇದ ಮನಸ್ಸಿಗೆ ಬರುತ್ತದೆ.

ಆ ಊರಿನ ಸಮೀಪದ ಹೊಲದಲ್ಲಿ ಇರುವ ಮರಕ್ಕೆ ಆ ಎರಡು ಪಕ್ಷಿಗಳು ಎಲ್ಲಿಂದಲೋ ಹಾರಿಬಂದು ಕೆಲವು ದಿನ ಇದ್ದು ಹೋಗುತ್ತಿದ್ದವಂತೆ. ಅವುಗಳಿಗೆ ಯಾರಾದರು ಬೆರಳುಮಾಡಿ ತೋರಿಸಿದರೆ ಸಾಕು, ತಕ್ಷಣವೇ ವೇಗವಾಗಿ ಹಾರಿಬಂದು ಅವರ ಹೊಟ್ಟೆ ಬಗೆದು ಕರುಳನ್ನು ಕಿತ್ತುಕೊಂಡು ಹೋಗುತ್ತಿದ್ದವಂತೆ. ಹೀಗಿರಲು ಅವು ಬರುವುದಕ್ಕೆ ಮುಂಚಿತವಾಗಿ ಕಿಡಿಗೇಡಿ ಜನರು ಆ ಮರದ ಎದುರಿಗೆ ಗುಂಡಿ ತೋಡಿ ಮೇಲೆ ಸೊಪ್ಪು ಹಾಕಿ ಅನುಮಾನ ಬರದಂತೆ ಅದರಲ್ಲಿ ಗನ್ನು ತೂರಿಸಿಕೊಂಡು ಬೇಟೆಯಾಡಿದರಂತೆ. ಇವರ ಮನೆಯಲ್ಲಿ ಇರುವ ಕೊಕ್ಕು ಒಂದು ಪಕ್ಷಿಯದು. ಅವರಿಂದ ಬೇಡಿ ತಂದದ್ದು. ಇದು ಇದ್ದರೆ ಸುತ್ತೆಡಬಲ ಯಾವ ಹಾವುಗಳೂ ಸುಳಿಯುವುದಿಲ್ಲವತೆ. ಸರ್ಪ ಹುಣ್ಣಿಗೆ ಇದರಿಂದ ಮುಟ್ಟಿಸುತ್ತಿದ್ದರಂತೆ. ಇಷ್ಟು ಪ್ರಬಲವಾದ ಈ ರಾಮಪಕ್ಷಿ ಇಂದು ನಾಶವಾಗಿದೆ. ಕೆರೆ, ಹೊಳೆ ಹತ್ತಿರ ಆಕಾಶದಲ್ಲಿ ಸುಳಿವ ಒಂದು ಪಕ್ಷಿಯನ್ನು ನೋಡಿರಬಹುದು. ಅದರ ಮೈ ಕಂದು ಬಣ್ಣದ್ದು. ಕುತ್ತಿಗೆ ಮಾತ್ರ ಬೆಳ್ಳಗಿರುತ್ತದೆ. ಇದು ದಾಸಪಕ್ಷಿಯಂತೆ. ಇದು ಹಾವನ್ನು ಹಿಡಿದು ನುಂಗುತ್ತದೆ. ಇದರ ನೆರಳು ಬಿದ್ದರೆ ಸಾಕು ಹಾವು ರಾವಿಕೊಳ್ಳುತ್ತವೆ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಗಿಡಗ ಸಣ್ಣದಿದ್ದರೂ ಎಷ್ಟೊಂದು ಬಲಶಾಲಿ. ಅಂದಮೇಲೆ ಆ ಗರುಡ ಪಕ್ಷಿ ಹೇಗೆ ಇದ್ದಿರಬಹುದು? ಅದರ ಹೆಸರು ಎತ್ತಿದರೆ ಹಾವು ಸತ್ತಂತೆ. ಅಂದ ಮೇಲೆ ಅದರ ಗರುಡಗೆರೆಗೆ ಶಕ್ತಿ ಇರಬಹುದು. ಅದರ ನೆರಳಿಗೆ ಹಾವು ಹೆದರಿದರೆ, ಅದಕ್ಕೆ ಸಾಮ್ಯವಿರುವ ಸರ್ಪಹುಣ್ಣಿಗೂ ಈ ಗರುಡ ರೇಖೆಗೂ ಸಂಬಂಧವಿರಬಹುದು ಅಲ್ಲವೆ?

ಹೊಲಮನೆಗಳಲ್ಲಿ ಹಾವಿನ ಕಾಟ ಇರುವವರಿಗೆ, ಹಾವನ್ನು ಮೆಟ್ಟಿ ಕೊಕ್ಕಿನಲ್ಲಿ ಕಚ್ಚಿಕೊಂಡು ಹಾರುತ್ತಿರುವ ಗರುಡನ ಚಿತ್ರ ಬರೆದು ಕೊಡುತ್ತೇನೆ. ಅದನ್ನು ಗೋಡೆಗೆ ನೇತುಹಾಕಿದರೆ ಸುತ್ತೆಲ್ಲಿಯೂ ಹಾವುಗಳು ಸುಳಿಯುವುದಿಲ್ಲ. ಈ ಚಿತ್ರಗಳನ್ನು ಎಷ್ಟೋ ಜನ ಬರೆಸಿಕೊಂಡಿದ್ದಾರೆ. ಇಂತಹವುಗಳ ಸೂಕ್ಷ್ಮ ವಿಚಾರಗಳನ್ನು ಗಮನಿಸಿ, ಭಾರತೀಯ ವಿಶೇಷ ವಿದ್ಯೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಅವುಗಳ ಪ್ರಯೋಜನ ಪಡೆದುಕೊಳ್ಳುವುದು ಸೂಕ್ತವಲ್ಲವೆ?

* * *

# ೧೧. ಕಾಲರಾ ಮತ್ತು ಜಾನಪದ

ಡಾ| ವೈ.ಸಿ.ಭಾನುಮತಿ

**ಕಾಲರಾ ರೋಗಕ್ಕೆ ಸಂಬಂಧಪಟ್ಟ ಜಾನಪದೀಯ ಆಚರಣೆಗಳು ಮತ್ತು ವೈದ್ಯವಿಧಾನವನ್ನು ಲೇಖನವು ದಾಖಲಿಸುತ್ತದೆ.**

**–ಸಂ.**

ನೀರಿನ ನೇರ ಸಂಪರ್ಕದಿಂದ ಉಂಟಾಗುವ ರೋಗಗಳಲ್ಲಿ ಕಾಲರಾ ಕೂಡ ಒಂದು. ಇದು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಆಗಾಗ ಕಾಣಿಸಿಕೊಳ್ಳುವುದುಂಟು. ಗ್ರಾಮೀಣ ಭಾಗದಲ್ಲಿ ಕಸಕಡ್ಡಿಯನ್ನು ಸಿಕ್ಕಿದ ಕಡೆ ಬಿಸಾಡುವುದರಿಂದ ನೊಣಗಳು ಉತ್ಪತ್ತಿಯಾಗಿ ಅವು ರೋಗ ವ್ಯಾಪಿಸಲು ಕಾರಣವಾಗುತ್ತವೆ. ರೋಗಾಣು ರೋಗಿಯ ಮಲದಲ್ಲಿ ನೆಲೆ ಪಡೆದಿರುತ್ತದೆ. ರೋಗಿ ಬಯಲಿನಲ್ಲಿ ಮಲವಿಸರ್ಜನೆ ಮಾಡುವುದರಿಂದ ರೋಗಾಣುಗಳು ಆಕಸ್ಮಿಕವಾಗಿ ನೀರು, ಆಹಾರ, ತರಕಾರಿ ಮೂಲಕ ಮನುಷ್ಯನ ದೇಹ ಹೊಕ್ಕು ಆರೋಗ್ಯವಂತನನ್ನು ರೋಗಿಯಾಗಿಸುತ್ತದೆ. ಈ ರೋಗ ಹರಡುವ ಸೂಕ್ಷ್ಮರೋಗಾಣುಗಳನ್ನು ವೈದ್ಯ ವಿಜ್ಞಾನದಲ್ಲಿ 'ವಿಬ್ರಿಯೋ ಕಾಲರಾ' ಎಂದು ಗುರುತಿಸಲಾಗಿದೆ. ಇದು ದೇಹವನ್ನು ಸೇರಿದ ಬಳಿಕ ರೋಗ ಪ್ರಕಟಗೊಳ್ಳಲು 36 ರಿಂದ 48 ಗಂಟೆಗಳ ಕಾಲ ಬೇಕಾಗುತ್ತದೆ. ರೋಗಿಗೆ ಮೇಲಿಂದ ಮೇಲೆ ವಾಂತಿ ಭೇದಿಯಾಗಲು ಪ್ರಾರಂಭವಾಗುತ್ತದೆ. ಇದು ನಿಯಂತ್ರಣಕ್ಕೆ ಬಾರದಿದ್ದರೆ ರೋಗಿಯ ಸಾವು ನಿಶ್ಚಿತವೆಂದು ವೈದ್ಯವಿಜ್ಞಾನ ತಿಳಿಸುತ್ತದೆ.

ಕಾಲರಾ ಸಾವಿರಾರು ವರ್ಷಗಳಿಂದ ಇರುವಂಥ ರೋಗವಲ್ಲ. ಹೊರದೇಶಗಳಿಂದ ಬಂದ ರೋಗ. ಹಾಗಾಗಿ ಜನಪದದಲ್ಲಾಗಲಿ, ಆಯುರ್ವೇದದಲ್ಲಾಗಲಿ ಇದಕ್ಕೆ ಮನೆಮದ್ದು ಸೂಚಿಸಿಲ್ಲ. ಈ ರೋಗ 1820 ರಿಂದ ಅನೇಕ ಬಾರಿ ಕಾಣಿಸಿಕೊಂಡಿರುವುದನ್ನು ವೈದ್ಯಕೀಯ ದಾಖಲೆಗಳು ಉಲ್ಲೇಖಿಸುತ್ತವೆ. ಆದರೆ ಮೈಸೂರು ಭಾಗದಲ್ಲಿ ಈ ರೋಗ 1818ರಲ್ಲಿಯೇ ತಲೆದೋರಿತ್ತೆಂದು ಶಾಸನಾಧಾರದಿಂದ ಖಚಿತವಾಗಿ ಹೇಳಬಹುದು. ಈ ಶಾಸನವು ಮಂಡ್ಯಜಿಲ್ಲೆ ಪಾಂಡವಪುರ ತಾಲ್ಲೂಕು ಕನ್ನಂಬಾಡಿಯ ಮಹಾಲಕ್ಷ್ಮೀ ದೇವಾಲಯದ ಎರಡನೇ ಬಾಗಿಲಿಗೆ ಉತ್ತರ ಭಾಗದ ಗೋಡೆಯ ಕಲ್ಲಿನ ಮೇಲಿದ್ದು

ಇದರ ಕಾಲ ಕ್ರಿ.ಶ. 1818. ಇದು ಕಾಲರಾ ಕುರಿತ ಅಧಿಕೃತ ದಾಖಲೆಯಾಗಿದೆ. ಮೊದಲ ಬಾರಿಗೆ ಈ ರೋಗವನ್ನು ಕಂಡಾಗ ಜನಸಮುದಾಯದಲ್ಲಿ ಉಂಟಾದ ತಲ್ಲಣ ತಳಮಳಗಳನ್ನು ಶಾಸನದ ಮೂಲಕ ಅರಿಯಬಹುದಾಗಿದ್ದು ಅದರ ಪಠ್ಯ ಇಂತಿವೆ – "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೭೪೦ನೇ ಸಂದ ವರ್ತಮಾನವಾದ ಬಹುಧಾನ್ಯನಾಮ ಸಂವತ್ಸರದ ಮಾರ್ಗಶಿರ ಶುದ್ಧ 6 ಗುರುವಾರದಲ್ಲು ಶ್ರೀಮದ್ರಾಜಾಧಿರಾಜ ಪ್ರಚಂಡ ಪ್ರತಾಪ ವೀರ ನರಪತಿ ಕೃಷ್ಣರಾಜ ವಡೆಯರವರು ಮೈಸೂರು ನಗರದಲ್ಲಿ ದಿವ್ಯ ಸಿಂಹಾಸನಾರೂಢರಾಗಿ ಪೃಥ್ವಿ ಸಾಮ್ರಾಜ್ಯಂಗೈಯುತಿರಲು ಅಷ್ಟಾದಶಪೀಠದಲ್ಲಿ ಮುಖ್ಯಪೀಠಸ್ಥರಾದ ಕೊಲ್ಲಾಪುರೀ ಮಹಾಲಕ್ಷ್ಮಿ ಅಮ್ಮನವರು ಸಹ ಶೀಮೆವಳೆಗೆ ಮಹೇಶ್ವರಿ ಉಪದ್ರದಿಂದ ವಾಂತಿಭ್ರಾಂತಿಯಾಗಿ ಜನರು ಮೃತವಾಗುತ್ತ ಯಿದ್ದಲ್ಲು ಈ ಉತ್ಪಾತರೋಗ ನಿವತ್ಯರ್ಥವಾಗಿ ಈ ಕಣ್ವಪುರಿ ಕ್ಷೇತ್ರದಲ್ಲಿ ಇದ್ದಂಥಾ ನಾಲ್ಕನೇ ವರ್ನದಲ್ಲಿ ಗಂಗಡಿಕಾರರಲ್ಲಿ ಜನಿಸಿದ ಬೋಗೇಗೌಡನ ಪೌತ್ರನಾದ ಮರಿನಂಜೇಗೌಡನ ಪುತ್ರನಾದ ಬೋಗೇಗೌಡನ ಪತ್ನಿ ತಿಮ್ಮಮ್ಮನ ಪುತ್ರಿಯಾದ ನಂಜಮ್ಮ ಎಂಬ ಕರ್ನಿಕೆಯ ಮೇಲೆ ಶ್ರೀ ಅಮ್ಮನವರು ಆವಿರ್ಭವಿಸಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ನಾಲ್ಕು ವರ್ನದಲ್ಲು ಮನಸಾಭೀಷ್ಟಗಳು ಆಗಿ ರೋಗಾದ್ಯುಪದ್ರವಗಳು ಪರಿಹಾರವಾದ್ದರಿಂದ ಶೀಮೆಗಳ ಮೇಲೆ ಬಂದ ಕಾಣಿಕೆಯಲ್ಲಿ ನಂಜಯ್ಯನು ಯೀ ಕನ್ನಂಬಾಡಿ ಗ್ರಾಮ ಮಧ್ಯದಲ್ಲಿ ನೂತನವಾಗಿ ದೇವಸ್ಥಾನವನ್ನು ಕಟ್ಟಿಸಿ ಅವತಾರಭೇದವಾಗಿ ಭೂತಗಣಕ್ಕೆ ಅಧಿಷ್ಠಾನದೇವತೆಯಾದ ಮಹಾಕಾಳಿ ಅಮ್ಮನವರು ಮಹಾಲಕ್ಷ್ಮಿ ದೇವಿ ಅಮ್ಮನವರು ಸರಸ್ವತಿ ಅಮ್ಮನವರು ಪರಿಹಾರ ಸಮೇತವಾಗಿ ಪ್ರತಿಷ್ಠೆ ಮಾಡಿಯಿಸಿದೆ" ಎಂದಿದೆ.* ವಾಂತಿ ಭೇದಿಯಿಂದ ಅನೇಕರು ಸತ್ತಾಗ ಈಗಿನ ಕನ್ನಂಬಾಡಿ ಪ್ರದೇಶದಲ್ಲಿದ್ದಂಥ ಗಂಗಡಿಕಾರ ಸಮುದಾಯದ ಬೋಗೇಗೌಡನ ಮರಿಮಗನೂ ಮರಿನಂಜೇಗೌಡನ ಮಗನೂ ಆದ ಬೋಗೇಗೌಡನ ಮಗಳು ನಂಜಮ್ಮ ಎಂಬ ಕನ್ಯೆಯ ಮೇಲೆ ದೇವಿಯ ಆವೇಶ ಉಂಟಾದದ್ದು, ಆಗ ಎಲ್ಲ ಜಾತಿಯವರು ದೇವಿಯ ಅಭೀಷ್ಟಗಳನ್ನು ಪೂರೈಸಿದ್ದು, ರೋಗ ಪರಿಹಾರಾರ್ಥವಾಗಿ ಭಕ್ತರು ಕೊಟ್ಟ ಕಾಣಿಕೆಯನ್ನು ಕೂಡಿಸಿ ನಂಜಯ್ಯನು ನೂತನ ದೇವಾಲಯ ನಿರ್ಮಿಸಿ ಮಹಾಕಾಳಿ ಮಹಾಲಕ್ಷ್ಮಿ ಮತ್ತು ಸರಸ್ವತಿಯ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದ್ದನ್ನು ಮೇಲಿನ ಶಾಸನ ತಿಳಿಸುತ್ತದೆ. ಕಾಲರಾ ಕುರಿತ ಜನಪದರ ಪರಿಕಲ್ಪನೆ ಇಲ್ಲಿ ಸ್ಪಷ್ಟವಾಗಿ ಪಡಿಮೂಡಿದೆ.

ಜನಪದರು ಯಾವುದೇ ಸೋಂಕು ರೋಗವನ್ನು ಗ್ರಹಿಸುವ ರೀತಿ ಭಿನ್ನ. ಇದಕ್ಕೆ ಕಾಲರಾ ಕೂಡ ಹೊರತಲ್ಲ. ಇವರ ಪ್ರಕಾರ ಇದು ದೇವರ ಅವಕೃಪೆ. ಅಮ್ಮನ ಕಾಟವೇ ಆಗಿದೆ. ಹಾಗಾಗಿ ಸಿಡುಬು, ಪ್ಲೇಗ್ ಮೊದಲಾದ ರೋಗಗಳು ಕಾಣಿಸಿಕೊಂಡಾಗ ಹೇಗೆ ದೇವಿಯನ್ನು ತೃಪ್ತಿಗೊಳಿಸಲು ಯತ್ನಿಸುತ್ತಾರೋ ಹಾಗೆ ಕಾಲರಾ ಸಂದರ್ಭದಲ್ಲಿಯೂ ಕೆಲವೊಂದು ಆಚರಣೆಗಳು ರೂಢಿಯಲ್ಲಿವೆ. ಪ್ಲೇಗ್ ಬಂದಾಗ ಮಾರಮ್ಮನನ್ನು ಪ್ಲೇಗ್ ಮಾರಮ್ಮ ಎಂದು ಕರೆದು ಪೂಜಿಸುವ ರೀತಿಯಲ್ಲಿ ಕಾಲರಾ ಬಂದಾಗ 'ಕಾಲರದಮ್ಮ' ಎಂದು ಮಾರಮ್ಮನನ್ನು ಪೂಜಿಸುವುದುಂಟು. ನಾಗಮಂಗಲದ ಕಡೆ ರೋಗಿಗೆ ಸೀತಾಳ ಸಿಡುಬು ಬಂದಾಗ ಬೇವಿನ ಸೊಪ್ಪು ಕೊಡುವಂತೆ ಕಾಲರಾ ರೋಗಿಗೂ ಬೇವಿನ ಚಿಗುರು ಅರೆದು ಹಸುವಿನ ಮಜ್ಜಿಗೆಗೆ ಹಾಕಿ ಕುಡಿಸುವುದುಂಟು. ರೋಗ ಪ್ರಕಟವಾಗಿ ಸಾವು ನೋವು ಸಂಭವಿಸಿದರೆ ಊರಿಗೆ ಊರೇ ಸುಂಕದಮ್ಮನ ಹಬ್ಬಕ್ಕೆ ತಯಾರಿ ನಡೆಸುತ್ತದೆ. 'ಸೋಂಕುರೋಗದ ಅಮ್ಮ' ಎಂಬುದೇ ವಾಡಿಕೆಯಲ್ಲಿ 'ಸುಂಕದಮ್ಮ' ಎಂದಾಗಿದೆ. ಈ ಹಬ್ಬವನ್ನು ಸೋಂಕುರೋಗಗಳು ಉಂಟಾದಾಗ ತಪ್ಪದೇ ಆಚರಿಸುತ್ತಾರೆ. ಉಳಿದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಹನ್ನೆರಡು ವರ್ಷಕ್ಕೊಮ್ಮೆ ಈ ಹಬ್ಬ ನಡೆಯುವುದಿದೆ. ಕೆಲವು ಕಡೆ ಮಾರಮ್ಮನಿಗೆ ತಂಬಿಟ್ಟಿನ ಆರತಿ ತೆಗೆದುಕೊಂಡು ಹೋಗಿ ಎತ್ತುತ್ತಾರೆ. ತಂಬಿಟ್ಟಿನಲ್ಲಿರುವ ಅಕ್ಕಿ ಫಲವಂತಿಕೆಯ ಸಂಕೇತ. ಈ ಆಶಯದಿಂದಲೂ, ಇದನ್ನು ಸ್ತ್ರೀದೇವತೆಗೆ ಅರ್ಪಿಸುತ್ತಿರಬಹುದು. ಸುಂಕದಮ್ಮನ ಹಬ್ಬ ಮಾಡುವವರು ಮಣ್ಣಿನಲ್ಲಿ ಹೆಣ್ಣು ರೂಪದ ಪ್ರತಿಮೆಮಾಡಿ, ಅದನ್ನು ಸುಂಕದಮ್ಮ ಎಂದು ಮೊರದ ಮೇಲೆ ಪ್ರತಿಷ್ಠೆಮಾಡಿ ಪೊದೆಯಿರುವ ಮರದ ಕೆಳಗೆ ಇಡುತ್ತಾರೆ. ದೇವಿಗೆ ಕೆಂಪುಕಣಿಗಲೆ ಶ್ರೇಷ್ಠವೆಂಬ ಭಾವನೆ ಇರುವುದರಿಂದ ಕೆಂಪು ಹೂವು ಇಟ್ಟು ಪೂಜಿಸುವರು. ಪ್ರತಿ ಮನೆಯಿಂದ ಕುಕ್ಕೆಯಲ್ಲಿ 'ಮಡೆ' ತಂದು ದೇವರ ಸಮ್ಮುಖದಲ್ಲಿ ಅಕ್ಕಿ ಬೆಲ್ಲ ಹಾಕಿ ಅನ್ನ ಮಾಡಿ ದೇವರಿಗೆ ಎಡೆಯಿಟ್ಟು ಪೂಜಿಸುವರು. ಅನಂತರ ಊಟ ಮಾಡುವರು.

ಕಾಲರದಮ್ಮ ಬೇವಿನ ಮರದಲ್ಲಿ ವಾಸಿಸುವಳೆಂಬ ಪ್ರತೀತಿ ಜನಪದರಲ್ಲಿದೆ. ಹಾಗಾಗಿ ಮಂಡ್ಯಜಿಲ್ಲೆ ಪಾಂಡವಪುರ ಭಾಗದಲ್ಲಿ ಊರಿನಲ್ಲಿ ಕಾಲರಾ ಕಾಣಿಸಿಕೊಂಡಾಗ ಹಲಸಿನಕಾಯಿ ಬೇಯಿಸಿ ಪದಾರ್ಥ ಮಾಡಿ ಇದರೊಂದಿಗೆ ರಾಗಿ ಸೇವಗೆ ಹುರುಳಿ ಸಾರು ಮಾಡಿ ಮೊರದಲ್ಲಿ ಎಡೆಹಾಕಿ ಬೇವಿನಮರದ

ಕೆಳಗೆ ಮೊರದ ಸಹಿತ ಇಟ್ಟುಬರುವರು. ಈ ಎಡೆಯನ್ನು ಮಕ್ಕಳು ಹಿಡಿಯುವಂತಿಲ್ಲ. ರೋಗ ಹಿಡಿದುಕೊಳ್ಳಬಹುದೆಂಬ ಭಯ ಇದೆ. ಹಾಗಾಗಿ ವೃದ್ಧೆಯರು ಎಡೆ ತೆಗೆದುಕೊಂಡು ಹೋಗಿ ಇಟ್ಟುಬರುತ್ತಾರೆ.

ಮೈಸೂರು ಭಾಗದಲ್ಲಿ ಕಾಲರಾ ಕಾಣಿಸಿಕೊಂಡಾಗ ನಾಲ್ಕು ಆಣೆ (25 ಪೈಸೆ ನಾಣ್ಯ) ಪಾವಲಿಯನ್ನು ಬಟ್ಟೆಯಲ್ಲಿ ಕಟ್ಟಿ ಮಾರಮ್ಮನಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಅನಂತರ ಮಾರಮ್ಮನಿಗೆ ಪೂಜೆಮಾಡಿಸಿಕೊಂಡು ಬರುವರು. ಅಮ್ಮನಿಗೆ 'ತಂಪು ತೆಗೆದುಕೊಂಡು ಹೋಗುವುದು' ಎಂದು ಎಳನೀರಿನ ಮೇಲೆ ಬೇವಿನ ಕಡ್ಡಿಗಳನ್ನು ಸಿಕ್ಕಿಸಿ ಮಾರಮ್ಮನ ಗುಡಿಗೆ ಕೊಂಡೊಯ್ದು ಪೂಜಿಸಿಕೊಂಡು ತರುತ್ತಾರೆ. ಕೆಲವು ಕಡೆ ರೋಗ ಕಾಣಿಸಿದ ಬಳಿಕ ಊರೆಲ್ಲ 'ಸಾರು' ಹಾಕಿಸುತ್ತಾರೆ. ಎಲ್ಲರೂ ತಂತಮ್ಮ ಮನೆ ಮಠಗಳನ್ನು ಶುಚಿಗೊಳಿಸಿಕೊಂಡು ಮಾರಮ್ಮನನ್ನು ಪೂಜಿಸಿ ಬೇವು ಮತ್ತು ಅರಳಿ ಮರದ ಕೆಳಗೆ ಎಡೆಹಾಕುತ್ತಾರೆ. ಈ ಎಡೆಗೆ ಮಾಂಸಾಹಾರ ನಿಷಿದ್ಧ. ಮಾಂಸಾಹಾರಕ್ಕೆ ನೊಣಗಳು ಹೆಚ್ಚುವುದರಿಂದ ರೋಗ ಹರಡುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಸ್ಯಾಹಾರವನ್ನೇ ಇಟ್ಟುಕೊಳ್ಳಲಾಗಿದೆ. ಶುಚಿತ್ವಕ್ಕೆ ಪ್ರಾಶಸ್ತ್ಯ ನೀಡುವ ಇಂಥ ಆಚರಣೆಗಳು ಪರೋಕ್ಷವಾಗಿ ರೋಗನಿರ್ಮೂಲನೆಗೆ ಅನುವುಮಾಡಿಕೊಡುತ್ತವೆ.

ಲಂಬಾಣಿಗಳು ಕಾಲರಾ ಅಥವಾ ಸಿಡುಬು ರೋಗಕ್ಕೆ 'ಆಯೀ' ಎಂದು ಕರೆಯುತ್ತಾರೆ. 'ಆಯೀ' ಎಂದರೆ ಅಮ್ಮ. ಇವರಲ್ಲಿಯೂ ಈ ರೋಗ ಬಂದಾಗ ಮಾರಮ್ಮನಿಗೆ ಎಳನೀರು ಬೇವಿನಸೊಪ್ಪು ಅರ್ಪಿಸುತ್ತಾರೆ.

ಚಾಮರಾಜನಗರ ಜಿಲ್ಲೆಯ ಕೆಲವು ದಲಿತ ಸಮುದಾಯದಲ್ಲಿ ದೊಡ್ಡಮ್ಮ ತಾಯಿ ಮತ್ತು ಮಂಟೆಸ್ವಾಮಿಯನ್ನು ಪೂಜಿಸಿ ಬೀದಿಬೀದಿಯಲ್ಲಿ ಉತ್ಸವ ಮಾಡುತ್ತಾರೆ. ಇವರು ಊರಿನ ರಕ್ಷಕ ದೇವತೆಗಳು. ಈ ಸಂದರ್ಭದಲ್ಲಿ ಪಾರ್ವತಿದೇವರ ಗುಡ್ಡರು, ಮಾದೇಶ್ವರ ದೇವರ ಗುಡ್ಡರು ಕಂಡಾಯ ಹೊತ್ತು ಸಂಚರಿಸುವರು. ತಮ್ಮಡಿಗಳು ರೋಗವನ್ನು ಹೊರಗೆ ಅಟ್ಟುವ ರೀತಿಯಲ್ಲಿ ಜೋರಾಗಿ ಕೂಗುತ್ತ ಕೇಳುಗರಲ್ಲಿ ಭಯ ಮೂಡಿಸುವರು. ಮನೆಗಳಲ್ಲಿ 'ಮಡಕೆ ಇಕ್ಕುವುದು' ಎಂದು ಮನೆ ಶುಚಿಗೊಳಿಸಿ ಹಳೆಯದನ್ನೆಲ್ಲ ಹೊರಹಾಕಿ ಹೊಸಮಡಕೆ ಇಟ್ಟು ಪುನರಾರಂಭಿಸುತ್ತಾರೆ. 'ಮಡಕೆ ತೆಗೆಯುವ' ಸಂದರ್ಭದಲ್ಲಿ ದಾಸಯ್ಯನನ್ನು

ಕರೆಸಿ ಮನೆಗೆ ಪುಣ್ಯಾರ್ಚನೆ ಮಾಡಿಸುವುದುಂಟು.

ಮೈಸೂರಿನ ಅಶೋಕಪುರಂ ಭಾಗದ ದಲಿತರದಲ್ಲಿ ಕಾಲರಾ ಬಂದಾಗ ರೋಗಿಯ ಮನೆಯವರು ಮಾರಮ್ಮನಿಗೆ ಮೊಸರನ್ನದ ಎಡೆ ಇಡುತ್ತಾರೆ. ಈ ಮೊಸರನ್ನವನ್ನು ತುಂಬ ನಿಷ್ಠೆಯಿಂದ ತಯಾರಿಸುತ್ತಾರೆ. ಇದನ್ನು ತಯಾರಿಸುವಾಗ ಮಾತನಾಡಬಾರದು. ಮಾರಮ್ಮನಿಗೆ ಎಡೆಯಿಟ್ಟ ಬಳಿಕ ಹಿಂದಿರುಗಿ ನೋಡಬಾರದು ಎಂಬ ನಿಯಮಗಳಿವೆ. ಆರ್ಥಿಕವಾಗಿ ಸಬಲರಾದವರು ಕಪ್ಪು ಕೋಳಿಯನ್ನು ಮಾರಮ್ಮನ ದೇವಸ್ಥಾನಕ್ಕೆ ಕೊಂಡೊಯ್ದು ಅಲ್ಲಿಯೇ ಊಟ ಮಾಡಿ ಬರುತ್ತಾರೆ. ಮಾಡಿದ ಅಡುಗೆ ಉಳಿದರೂ ಮನೆಗೆ ತೆಗೆದುಕೊಂಡು ಹೋಗುವಂತಿಲ್ಲ. ಮೇಲಿನ ಆಚರಣೆಗಳು ಸಾಧ್ಯವಾಗದಿದ್ದವರು ಮನೆಯಲ್ಲಿಯೇ 'ಸೀ ಬೇಳೆ ಸಾರು' ತಯಾರಿಸಿ ದೇವರಿಗೆ ಎಡೆಯಿಟ್ಟು ಊಟಮಾಡುತ್ತಾರೆ.

ಜನಪದರು ಕಾಲರಾ ರೋಗಕ್ಕೆ ತಮ್ಮದೇ ಆದ ನಾಟಿ ಔಷಧಿಗಳನ್ನು ಕಂಡುಕೊಳ್ಳಲಾಗಿಲ್ಲ. ಆದುದರಿಂದ ದೇವರಿಗೆ ಮೊರೆಹೋಗುತ್ತಾರೆ. ಹಾಗಾಗಿ ರೋಗ ಆವರಿಸಿರುವುದನ್ನು ಹೊರಹಾಕಲು ರೋಗಿಗೆ ದೃಷ್ಟಿತೆಗೆಯುವುದು, ಕಪ್ಪುಕೆಂಪು ನೀರುಮಾಡಿ ಕೆಂಡಹಾಕಿ ನೀವಾಳಿಸಿ ಮೂರು ದಾರಿ ಕೂಡಿದ ಕಡೆ ಚೆಲ್ಲುವುದು ಮೊದಲಾದುವನ್ನು ಮಾಡುವುದುಂಟು.

ಮೇಲೆ ಉಕ್ತವಾದ ಆಚರಣೆಗಳನ್ನು ಗಮನಿಸಿದಾಗ ಕಾಲರಾರೋಗಕ್ಕೆ ಶುಚಿತ್ವವೇ ಪ್ರಥಮಚಿಕಿತ್ಸೆ ಎಂಬ ಅಂಶ ಜನಪದರಿಗೆ ಇದ್ದಿತೆಂದು ಊಹಿಸಬಹುದು. ಹಾಗಾಗಿ ಆಚರಣೆಯ ಮೂಲಕ ದೇವರ ಹೆಸರಿನಲ್ಲಿ ಶುಚಿತ್ವವನ್ನು ನೈರ್ಮಲ್ಯವನ್ನು ಕಾಪಾಡಿಕೊಂಡು ಬಂದಂತೆ ತೋರುತ್ತದೆ. ಕಾಲರಾ ಬಂದಾಗ ಗ್ರಾಮದೇವತೆ ಅದರಲ್ಲೂ ಸ್ತ್ರೀ ದೇವತೆಗೆ ಮೊರೆಯಿಡುವುದು ಈ ದೇವತೆಗಿರುವ ಅಪರಿಮಿತ ಶಕ್ತಿಯನ್ನು ನಿರೂಪಿಸುತ್ತದೆ ಮತ್ತು ಜನಪದರು ಮಾತೃಮೂಲ ಕುಟುಂಬದಿಂದ ಬಂದುದರ ಸಂಕೇತವೆನ್ನಬಹುದು.

ಕಾಲರಾರೋಗದ ಭೀಕರತೆ, ಆತ್ಯಂತಿಕವಾಗಿ ಅದು ಮನುಷ್ಯನ ಪ್ರಾಣಕ್ಕೆ ಸಂಚಕಾರ ಒಡ್ಡುವುದನ್ನು ಕಂಡು ಇದಕ್ಕೆ 'ದೊಡ್ಡರೋಗ' ಎಂದೂ ಕರೆಯುವುದಿದೆ. ಈ ಹಿನ್ನೆಲೆಯಲ್ಲಿ ಜನಪದರು ಈ ರೋಗವನ್ನು ಬೈಗುಳದಲ್ಲಿ ಬಳಸಿಕೊಂಡಿರಬೇಕು. ಮನುಷ್ಯ ಕುಪಿತನಾದಾಗ ತನಗೆ ವಿಪತ್ತು ಒಡ್ಡಿದ ಅಥವಾ ತನಗೆ ಎದುರಾಡುವ

ವ್ಯಕ್ತಿಯನ್ನು ನೋಡಲಿಚ್ಚಿಸದಿರುವುದು ಸಾಮಾನ್ಯ. ರೋಷದ ಅತಿರೇಕದ ಸ್ಥಿತಿಯಲ್ಲಿ ತನಗಾಗದ ವ್ಯಕ್ತಿ ಕಣ್ಮರೆಯಾಗಲೆದು ಬಯಸುವುದೂ ಉಂಟು. ಹಾಗಾಗಿ ಹಳ್ಳಿಗಾಡಿನಲ್ಲಿ ಜಗಳವಾದಾಗ –

'ನಿನಗೆ ವಾಂತ್‌ಭೇದಿ ಬರ'
'ನಿನಗೆ ವಾಂತ್‌ಭೇದಿ ತಗಲ'
'ನಿನಗೆ ವಾಂತ್‌ಭೇದಿ ಬಂದ್
ವಾಲಾಡ್‌ಕೊಂಡ್ ಹೊತ್ಕೊಂಡ್ ಹೋಗ'
ನಿನಗೆ ವಾಂತ್‌ಭೇದಿ ಬಂದು ಸಾಯ'
'ನಿನಗೆ ಹಿಂದು ಮುಂದು ಬರ'

ಎಂದು ಬೈಯುವುದನ್ನು ಕಾಣಬಹುದು. ಈ ರೋಗ ಆರೋಗ್ಯವಂತನನ್ನು ಕೆಲವೇ ಗಂಟೆಗಳಲ್ಲಿ ಬಲಿತೆಗೆದುಕೊಳ್ಳುವ ಪರಿ ಮನುಷ್ಯನನ್ನು ಭಯವಿಹ್ವಲನನ್ನಾಗಿ ಮಾಡಿದೆ. ಈ ಕಾರಣವಾಗಿ ಇದನ್ನು ದೇವರಕಾಟವೆಂದು ತಿಳಿದು ದೇವರನ್ನು ಪ್ರಸನ್ನಗೊಳಿಸಲು ಯತ್ನಿಸುವುದು ಆದಿಮಾನವನ ಬದುಕಿನ ಪಳೆಯುಳಿಕೆ ಎನ್ನಬಹುದು.

**ಅಡಿ ಟಿಪ್ಪಣಿ** :

* ಎಪಿಗ್ರಾಫಿಯ ಕರ್ನಾಟಕ (ಸಂಪುಟ ಆರು) ; ಪುಟ 132; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

# ೧೨. ಮಲೇರಿಯಾ ಮತ್ತು ಜಾನಪದ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಮಲೇರಿಯಾ ರೋಗಕ್ಕೆ ಸಿದ್ಧೌಷಧಿಯನ್ನು ಆಧುನಿಕ ವೈದ್ಯವಿಜ್ಞಾನವು ಪರಿಶೋಧಿಸುವ ಮೊದಲೇ ಬುಡಕಟ್ಟು ಜನರು ಅರಿತಿದ್ದರು; ಬಳಸುತ್ತಿದ್ದರು ಎಂಬುದನ್ನು ಲೇಖನವು ದಾಖಲುಮಾಡುತ್ತದೆ.

–ಸಂ.

'ರೋಗ ಮನುಷ್ಯರಿಗೆ ಬಾರದೆ ಮರಕ್ಕೆ ಬರುತ್ತದೆಯೆ' ಇದು ಜನಜನಿತವಾದ ನುಡಿ. ಇಂದು ಮರಗಳಿಗೂ ರೋಗ ಬರುತ್ತಿರುವುದನ್ನು ನೋಡಿದವರು, ಕೇಳಿದವರು ಕೂಡ ರೂಢಿಬದ್ಧವಾದ ಈ ಮಾತನ್ನು ಬಳಸುತ್ತಲೇ ಇದ್ದಾರೆ. ರೋಗದಿಂದ ನರಳುತ್ತಿರುವವರನ್ನು, ಆತಂಕಗೊಂಡಿರುವ ಸಂಬಂಧಿಕರನ್ನು ಮಾನಸಿಕವಾಗಿ ದುರ್ಬಲರಾಗದಂತೆ ಸಾಂತ್ವನಗೊಳಿಸಲು ಜನಪದರು ಕಂಡುಕೊಂಡ ನುಡಿಮಾರ್ಗವಿದು. ಮನಃಶಾಸ್ತ್ರದ ಅರಿವಿಲ್ಲದಿದ್ದರೂ ರೋಗದಿಂದ ಉಂಟಾಗಬಹುದಾದ 'ಜೀವಭಯ'ದ ಮಾನಸಿಕ ಕೊರಗಿನಿಂದ ರೋಗಿಯನ್ನು, ಸಂಬಂಧಿಕರನ್ನು ಮುಕ್ತಗೊಳಿಸುವ ಪ್ರಯತ್ನ ಈ ಮಾತುಗಳಲ್ಲಿದೆ. ಇಂಥ ಮಾತುಗಳಿಗೆ ಎಂದಿಗೂ ಮುಪ್ಪು ಬಾರದು.

ಕೆಲವರು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಕ್ಕನುಸಾರವಾಗಿ ರೋಗಗಳು ಬರುತ್ತವೆಂದು ಹೇಳುವರು. ಮತ್ತೆ ಕೆಲವರು ರೋಗಗಳಿಗೆ ದೈವದ ಮುನಿಸು ಕಾರಣವೆಂದು ಬಲವಾಗಿ ನಂಬಿಕೊಂಡು ಬಂದಿದ್ದಾರೆ. ಅಂಥವರು ರೋಗ ಪ್ರಸರಣ ಮಾಡುವ ಶಕ್ತಿದೇವತೆಗಳೆ ರೋಗ ನಿವಾರಣೆಯನ್ನು ಮಾಡುತ್ತವೆಂದು ಹೇಳುತ್ತಾರೆ.

ಜನಪದರು ತಮ್ಮ ರೋಗ ನಿವಾರಣೆಗಾಗಿ ದೇವರಿಗೆ 'ಮೀಸಲು' ಕಟ್ಟುವುದು, 'ಹರಕೆ' ಮಾಡಿಕೊಳ್ಳುವುದು ಸರ್ವೇಸಾಮಾನ್ಯ. ಈಗಲೂ ಈ ಪದ್ಧತಿ ಅಲ್ಲಲ್ಲಿ ಕಾಣಬಹುದು. ಅದರ ಜೊತೆಗೆ ಜನಪದರು ತಲೆಮಾರಿನಿಂದ ತಲೆಮಾರಿಗೆ ತಾವು ಕಂಡುಕೊಂಡು ಬಂದಿರುವ ನಾರು, ಬೇರು, ಸೊಪ್ಪು ಮೊದಲಾದ ವಸ್ತುಗಳಿಂದ ಮದ್ದು (ಔಷಧಿ) ಮಾಡಿ ರೋಗನಿವಾರಣೆಗೆ ಬಳಸುತ್ತಾರೆ. ಬಹುತೇಕ 'ನಾಟಿವೈದ್ಯರು' ಈ ಮದ್ದಿಗೆ ಬಳಸುವ ವಸ್ತುಗಳನ್ನು ಬಹಿರಂಗಗೊಳಿಸುವುದಿಲ್ಲ.

ಹಾಗೆ ಇತರರಿಗೆ ಹೇಳಿದರೆ ಅವು ರೋಗನಿವಾರಕ ಕಾರ್ಯವನ್ನು ನಿರ್ವಹಿಸುವುದಿಲ್ಲವೆಂದು ಹೇಳುತ್ತಾರೆ. ಅಂದರೆ 'ನಾಟಿವೈದ್ಯ' ರೊಬ್ಬರನ್ನು ಕೇಳಿದಾಗ, "ಹಾಗೇನಿಲ್ಲ; ನಾರು ಬೇರು ಸೊಪ್ಪುಗಳು ಯಾವುದೆಂದು ಹೇಳಿದರೆ ಅವುಗಳ ಬಗ್ಗೆ ತಾತ್ಸಾರ ಮನೋಭಾವ ಮೂಡುತ್ತದೆ. ಆದ್ದರಿಂದ ಅವರಲ್ಲಿ ಆತ್ಮವಿಶ್ವಾಸ ಕುಂದಿ ರೋಗ ನಿವಾರಣೆಯಾಗುವ ಸಾಧ್ಯತೆ ಕಡಮೆಯಾಗುತ್ತದೆ. ಅಲ್ಲದೆ ಅವುಗಳನ್ನು ಸಮತೋಲನವಾಗಿ ನಿರ್ದಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು. ಆದರೆ ಅವನ್ನು ಬೇಕಾಬಿಟ್ಟಿ ಬಳಸಿಕೊಳ್ಳುವುದರಿಂದ ಹಾನಿಕಾರಕ ಪರಿಣಾಮಗಳು ಉಂಟಾಗುತ್ತವೆ. ಈ ಎಲ್ಲ ಕಾರಣಗಳಿಂದ ' ಮುಚ್ಚುಮರೆ (ರಹಸ್ಯ) ವನ್ನು ಕಾಪಾಡುತ್ತೇವೆ" ಎಂದು ತಿಳಿಸಿದರು.

ಮಲೇರಿಯಾ ರೋಗವು ನೀರು ನಿಲ್ಲುವ ಕೆರೆಕಟ್ಟೆ, ಗದ್ದೆ ಮೊದಲಾದ ನೀರಿನ ತಾಣಗಳ ಮೇಲೆ ಬೀಸಿಬರುವ ಅಹಿತಕರವಾದ ಗಾಳಿಯ ಸೇವೆಯಿಂದ ಬರುತ್ತದೆಂದು ಜನಪದರು ನಂಬಿಕೊಂಡು ಬಂದಿದ್ದಾರೆ. ಬಹುಶಃ ಸುತ್ತಮುತ್ತ ಕೆರೆಕಟ್ಟೆ ಗದ್ದೆಬಯಲು ಇರುವ ಸ್ಥಳದಲ್ಲಿ ವಾಸಿಸುವ ಜನರಲ್ಲಿ ಈ ರೋಗ ಹೆಚ್ಚಾಗಿ ಕಂಡುಬರುವುದರಿಂದ ಈ ನಂಬಿಕೆ ಹುಟ್ಟಿ ಬೆಳೆಯಲು ಸಾಧ್ಯವಾಗಿದೆ. ವಾಸ್ತವವಾಗಿ ಕೆಟ್ಟ ಗಾಳಿಗಿಂತ ಹೆಚ್ಚಾಗಿ ಈ ನೀರಿನ ತಾಣಗಳು ರೋಗ ಉಂಟುಮಾಡಲು ನೆರವಾಗುತ್ತವೆ. 'ಮಲೆನಾಡಿನ ಮಂದಿಯಲ್ಲಿ ಮಲೇರಿಯಾ ಜಾಸ್ತಿ' ಎಂದು ಜನರು ಅಭಿಪ್ರಾಯಪಡುತ್ತಾರೆ.

ಮೊದಲಿಗೆ ಚಳಿಜ್ವರ ಕಾಣಿಸಿಕೊಳ್ಳುತ್ತದೆ. ನಂತರ ದಿನ ಬಿಟ್ಟು ದಿನ ಅಥವಾ ಮೂರು ದಿನಕ್ಕೊಮ್ಮೆ ಜ್ವರ ಬರುತ್ತಿರುತ್ತದೆ. ಇದರಿಂದ ರೋಗಿಯಲ್ಲಿ ಸುಸ್ತು, ಸಂಕಟ, ತಲೆಸುತ್ತು, ಹೊಟ್ಟೆನೋವು ಕಾಣಿಸಿಕೊಳ್ಳುತ್ತದೆ. ಇದು ಮಲೇರಿಯಾ ರೋಗಿಯ ಲಕ್ಷಣ. ಇಂದಿಗೂ ಈ ರೋಗವು ಸೊಳ್ಳೆ ಕಚ್ಚುವುದರಿಂದ ಬರುತ್ತದೆಂದು ಜನಪದರು ಹೇಳುವುದುಂಟು.

ಮೊದಲ ದಿನ ಜ್ವರ ಕಾಣಿಸಿಕೊಂಡು ರೋಗಿಗೆ ಬಿಸಿನೀರಿನಲ್ಲಿ ತಲೆಸ್ನಾನ ಮಾಡಿಸಿ, ಬಿಸಿಬಿಸಿಯಾದ ಊಟ ಬಡಿಸಿ, ಬಿಸಿನೀರು ಕುಡಿಸಿ, ಮೈ ತುಂಬಾ ಬೆಚ್ಚಗೆ ಮಲಗಿ ನಿದ್ರೆ ಮಾಡಲು ಹೇಳುತ್ತಾರೆ. ಇದರಿಂದ ಮೈಯಾಗಿನ ಕೆಟ್ಟ ನೀರೆಲ್ಲ ಬಸಿದು ಬೆವರಿನ ರೂಪದಲ್ಲಿ ಹೊರಬರುತ್ತದೆಂದು ಜನಪದರ ನಂಬಿಕೆ.

ಕಾಕತಾಳೀಯವೆಂಬಂತೆ ಈ ಜ್ವರ ದಿನ ಬಿಟ್ಟು ದಿನ ಬರುವುದರಿಂದ ಮಾರನೆಯ ದಿನ ಆ ರೋಗಿಯು ಸ್ವಲ್ಪ ಸುಧಾರಿಸಿಕೊಂಡಂತೆ, ಜ್ವರ ಕೂಡ ಬಿಟ್ಟಿರುತ್ತದೆ. ಆದರೆ ಮೂರನೆಯ ದಿನ ಮತ್ತೆ ಜ್ವರ ಕಾಣಿಸಿಕೊಂಡಾಗ "ದಿನ ಬಿಟ್ಟು ದಿನ ಜ್ವರ ಬರ್ತದೆ, ಯಾವುದೊ ಕೆಟ್ಟ ಜಾಗದಲ್ಲಿ ಹೆದರ್ಕೊಂಡಿದ್ದಾನೆ" ಎಂದು ಹೇಳುತ್ತಾ ಪೂಜಾರಿ, ಮಾಂತ್ರಿಕನಿಂದ ಯಂತ್ರ, ಮಂತ್ರ ಹಾಕಿಸುತ್ತಾರೆ.

ಇದಕ್ಕೆಲ್ಲ ಮಲೇರಿಯಾ ರೋಗ ನಿವಾರಣೆಯಾಗದು. ಆಗ ಜ್ವರದ ಮರ್ಮ ತಿಳಿದು, ಬೇವಿನ ಮರದ ಹಸಿ ಚಕ್ಕೆಯನ್ನು ಕೆತ್ತಿಕೊಂಡು ಬಂದು ಪಾತ್ರೆಯಲ್ಲಿ ಹಾಕಿ, ಅಗತ್ಯಕ್ಕೆ ತಕ್ಕಂತೆ ನೀರು ಸುರಿದು ಒಲೆಯ ಮೇಲಿರಿಸಿ ಚೆನ್ನಾಗಿ ಕುದಿಸಿ, ಕುದಿಸಿದ ಬೇವಿನ ಚಕ್ಕೆಯ ಸಾರ ನೀರಿಗಿಳಿದು ಕಷಾಯವಾದಾಗ ಅದನ್ನು ಒಂದು ಲೋಟಕ್ಕೆ ಸೇರಿಸಿಕೊಂಡು ರೋಗಿಗೆ ಕುಡಿಸುತ್ತಾರೆ. ಬೇವು ರೋಗ ನಿರೋಧಕ ಎಂಬುದನ್ನು ಅದರ ಕಹಿ ಗುಣದಿಂದಲೇ ಅವರು ಪರಂಪರಾಗತವಾಗಿ ಕಂಡುಕೊಂಡಿದ್ದಾರೆ.

ಬಹಳ ಹಿಂದಿನ ಕಾಲದಲ್ಲಿ ಮಲೇರಿಯಾ ರೋಗವು ಭಯಾನಕ ಹಾಗೂ ಮಾರಣಾಂತಿಕ ರೋಗಗಳಲ್ಲೊಂದೆಂದು ತಿಳಿಯಲಾಗಿತ್ತು ಆದರೆ ಇದರ ನಿವಾರಣೆಗೆ 'ಕ್ವಿನೈನ್' (ಅತಿ ಕಹಿಯಾದ ಮದ್ದು) ಕಂಡುಹಿಡಿದದ್ದು ವೈದ್ಯ ಪ್ರಪಂಚದ ಬಹು ಮಹತ್ತರವಾದ ಸಾಧನೆ. ಕುತೂಹಲದ ಸಂಗತಿಯೆಂದರೆ ಅದು ದಕ್ಷಿಣ ಅಮೆರಿಕದ ಜನಪದರು ಉಪಯೋಗಿಸುತ್ತಿದ್ದ ಸಂಪ್ರದಾಯ ಚಿಕಿತ್ಸೆಯಾಗಿತ್ತು.

Medical Historians have noted that the use of quinine for treatment of malaria was a traditonal remedy used by the natives of South America before it came to the attention of Europeans.

-Keneth W. Clarke,
Marry W. Clarke,
introducing Folklore. P-82

(ಉದ್ಧೃತ : 'ಕರ್ನಾಟಕ ಜನಪದ ವೈದ್ಯ' ಪ್ರಸ್ತಾವನೆ - ಸಂ: ಮಳಲಿ ವಸಂತಕುಮಾರ)

ಈ ರೋಗವು ಸೊಳ್ಳೆಯಿಂದ ಬರುತ್ತದೆಂದು ತಿಳಿದುಕೊಂಡಿರುವ ಜನಪದರು ಸಂಜೆಯಾದ ಕೂಡಲೆ ಬಾಂತಲೆಯಲ್ಲಿ ಒಂದೆರಡು ಕೆಂಡ ಹಾಕಿ ಅದರ ಮೇಲೆ ಬೇವಿನ ತೊಗಟೆ, ಚಕ್ಕೆಗಳನ್ನು ಹಾಕಿ ಮನೆಯ ಪರಿಸರದಲ್ಲಿ ಹೊಗೆ ಹಬ್ಬಿಸಿ ಸೊಳ್ಳೆಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾರೆ.

ವೈಜ್ಞಾನಿಕ ವೈದ್ಯಪದ್ಧತಿ ಬಳಕೆಗೆ ಬಂದ ನಂತರ ಜನಪದ ವೈದ್ಯ ಮೊದಲಿನಂತೆ ಪ್ರಾಧಾನ್ಯತೆಯನ್ನು ಪಡೆದುಕೊಂಡಿಲ್ಲ. ಆದರೂ ಕೆಲವು ರೋಗಗಳು 'ನಾಟಿವೈದ್ಯ' ದಿಂದ ಬೇಗನೆ ಗುಣವಾಗುತ್ತದೆಂದು ಬಲ್ಲವರು ಹೇಳುತ್ತಾರೆ. ನಾಟಿ ವೈದ್ಯದಲ್ಲಿ ಬಳಸುವ ನಾರು ಬೇರು ಸೊಪ್ಪುಗಳಲ್ಲಿರುವ ರೋಗ ನಿವಾರಕ ಶಕ್ತಿಯನ್ನು ಯಾರೂ ಅಲ್ಲಗಳೆಯಬಾರದು. ಆದರೆ ಎಲ್ಲದಕ್ಕೂ ಒಂದೇ ಮಂತ್ರದಂತೆ ಇದನ್ನು ಬಳಸಲಾಗದು. 'ಅರಿತು ಬಳಸಬೇಕು'.

* * *

# ೧೩. ನರರೋಗ ಮತ್ತು ಜಾನಪದ

ಡಾ। ಸಿ.ಆರ್. ಚಂದ್ರಶೇಖರ್

ನರದೌರ್ಬಲ್ಯಗಳಂದ ಸಂಭವಿಸುವ ನರಸಂಬಂಧಿ ರೋಗಗಳಿಗೆ ಜನಪದರು ಮಾಟ-ಮಂತ್ರಗಳಿಗೆ ಮೊರೆಹೋಗದೆ ಸೂಕ್ತ ವೈದ್ಯರನ್ನು ಕಾಣುವುದು ಸರಿಯಾದ ಕ್ರಮ ಎನ್ನುವ ತಿಳುವಳಿಕೆಯನ್ನು ಲೇಖಕರು ನೀಡಿದ್ದಾರೆ.

–ಸಂ.

ಹುಚ್ಚು, ಮೂರ್ಛೆರೋಗ, ಲಕ್ವ ಇತ್ಯಾದಿ ಮನೋರೋಗ-ನರರೋಗಗಳು ಪುರಾತನ ಕಾಲದಿಂದಲೂ ಮನುಷ್ಯನನ್ನು ಕಾಡುತ್ತಿವೆ. ಅದುವರೆಗೂ ಚೆನ್ನಾಗಿದ್ದ ವ್ಯಕ್ತಿಗೆ ಈ ರೋಗಗಳು ದಿಢೀರನೆ ಕಾಣಿಸಿಕೊಳ್ಳಬಹುದು. ರೋಗಿಯ ನರಳಿಕೆ, ಅಸಹಾಯಕತೆ, ಮನೆಯವರನ್ನು ಕಂಗೆಡಿಸುತ್ತವೆ. ಐವತ್ತು ವರ್ಷಗಳ ಹಿಂದೆ, ಈ ಕಾಯಿಲೆಗಳು ಏಕೆ ಬರುತ್ತವೆ ಎಂಬುದಕ್ಕೆ ವೈಜ್ಞಾನಿಕ ವಿವರಣೆಗಳು ಇರಲಿಲ್ಲ. ಇವೆಲ್ಲ ಒಂದು ಬಗೆಯ ನಿಗೂಢ ರೋಗಗಳಾಗಿದ್ದವು. ಪರಿಣಾಮಕಾರೀ ಚಿಕಿತ್ಸೆಗಳೂ ಇರಲಿಲ್ಲ. ಹೀಗಾಗಿ ಈ ಕಾಯಿಲೆಗಳ ಹೆಸರು ಕೇಳಿದರೆ ಜನ ಹೆದರುತ್ತಿದ್ದರು. ಇವು ಬರಲು ಏನು ಕಾರಣ ಮತ್ತು ಇವುಗಳ ಚಿಕಿತ್ಸೆ ಬಗ್ಗೆ ಒಂದೊಂದು ದೇಶದಲ್ಲಿ ಒಂದೊಂದು ರೀತಿಯ ನಂಬಿಕೆಗಳಿದ್ದವು. ನಮ್ಮಲ್ಲಿದ್ದ, ಈಗಲೂ ಇರುವ ಜನಪದ ನಂಬಿಕೆಗಳು ಹಲವಾರು.

### 1. ಪಾಪ ಕರ್ಮ ಫಲ

ಕರ್ಮ ಸಿದ್ಧಾಂತದ ಪ್ರಕಾರ, ನಾವು ಮಾಡಿದ ಕೆಲಸಗಳಿಗೆ ಫಲ ಇದ್ದೇ ಇರುತ್ತದೆ. ಒಳ್ಳೆಯ ಕೆಲಸಕ್ಕೆ ಒಳ್ಳೆ ಫಲವಾದರೆ, ಕೆಟ್ಟ ಕೆಲಸಗಳಿಗೆ ಕೆಟ್ಟಫಲ. ಹುಚ್ಚು, ಬೆಪ್ಪು, ಮೊಲ್ಲಾಗರ, ಲಕ್ವ ಇವೆಲ್ಲ ಇಂತಹ ಕೆಟ್ಟ ಕೆಲಸಗಳ ಫಲ ಎಂದು ಜನ ನಂಬುತ್ತಾರೆ. ಈ ರೋಗಿಗಳನ್ನು ಕೆಟ್ಟವರಂತೆಯೇ ಕಾಣುತ್ತಾರೆ. ಕರ್ಮಫಲ ಅನುಭವಿಸಲಿ ಎಂದು ತಿರಸ್ಕಾರ ಮಾಡುತ್ತಾರೆ.

### 2. ಕೋಪಗೊಂಡ ದೇವ-ದೇವತೆಗಳ ಶಾಪ :

ದುರ್ಗೆಯ ವಿವಿಧ ಅವತಾರಗಳಾದ ಕಾಳಿ, ಮಾರಿ, ಚೌಡಿ, ಚಾಮುಂಡಿ, ಇಂತಹ ಶಕ್ತಿದೇವತೆಗಳಿಗೆ ಕೋಪ ಬಂದರೆ, ಅವರಿಗೆ ಕುರಿಕೋಳಿ ಕೋಣಗಳ ಬಲಿ ಕೊಡದಿದ್ದರೆ, ಜನರಿಗೆ ಕೇಡು, ಕಾಯಿಲೆ, ಕಸಾಲೆ ಬರುತ್ತವೆ.

**3. ಮಾಟ ಮಂತ್ರ :**

ಅತೀಂದ್ರಿಯ ದುಷ್ಟ ಶಕ್ತಿಗಳಿಂದ ಈ ರೋಗಗಳು ಬರುತ್ತವೆ. ಮಾಟ ಮಾಡುವುದು, ಮಂತ್ರ ಹೇಳಿ ಬಲಿ ಕೊಟ್ಟು ದುಷ್ಟಶಕ್ತಿಗಳನ್ನು ಆಹ್ವಾನಿಸಿ ತನ್ಮೂಲಕ ವ್ಯಕ್ತಿಗೆ ಹುಚ್ಚು, ಮೊಲ್ಲಾಗರದಂತಹ ಕಾಯಿಲೆ ಬರಿಸುವುದು, ಮಾಟ ಮಂತ್ರ ಮಾಡುವವರಿಗೆ ಗೊತ್ತು ಎಂದು ಜನ ನಂಬುತ್ತಾರೆ. ವ್ಯಕ್ತಿಯ ಬಟ್ಟೆ, ಕೂದಲು, ಉಗುರು, ಮೂತ್ರ, ವೀರ್ಯ, ಋತುಸ್ರಾವವನ್ನು ಸಂಗ್ರಹಿಸಿ, ಅದನ್ನು ಒಂದು ಗೊಂಬೆಗೆ ಕಟ್ಟಿ ಮೊಳೆ ಜಡಿದು, ಅಮಾವಾಸ್ಯೆಯ ರಾತ್ರಿ ಸ್ಮಶಾನಕ್ಕೆ ಹೋಗಿ, ಮಂತ್ರಪಠಿಸಿ, ದುಷ್ಟಶಕ್ತಿಯನ್ನು ಕರೆದು, ಆ ಬೊಂಬೆಯನ್ನು ಭೂಮಿಯೊಳಗೆ ಹೂತುಹಾಕುತ್ತಾರೆ. ಎಲ್ಲಿಯವರೆಗೆ ಆ ಬೊಂಬೆ ಭೂಮಿಯೊಳಗಿರುತ್ತದೋ, ಅಲ್ಲಿಯವರೆಗೆ ಆ ವ್ಯಕ್ತಿಗೆ ಈ ಕಾಯಿಲೆಗಳು ಕಾಡುತ್ತವೆ. ಲಕ್ವ ಹೊಡೆದು ಕೊನೆಗೆ ಸಾಯಲೂಬಹುದು ಎಂದು ಹೇಳುತ್ತಾರೆ.

**4. ಅತೃಪ್ತ ಮತ್ತು ಅತಿಕಾಮ**

'ವಯಸ್ಸು ಮೀರಿತು, ಮದುವೆ ಆಗಿಲ್ಲ, ಅತೃಪ್ತ ಕಾಮ ನೆತ್ತಿಗೇರಿದೆ. ಅವನಿಗೆ ಅತಿಕಾಮ, ಎಷ್ಟು ಅನುಭವಿಸಿದರೂ ಸಾಲದು. ಈ ಅತಿಕಾಮ ನೆತ್ತಿಗೇರಿದೆ. ಬುದ್ಧಿ ಭ್ರಮಣೆಯಾಗಿದೆ. ಇನ್ನೇನಾಗಲು ಸಾಧ್ಯ'. ಇದು ಇನ್ನೊಂದು ಸಾಮಾನ್ಯ ನಂಬಿಕೆ.

**5. ಮದ್ದೀಡು ಹಾಕಿದ್ದಾರೆ :**

'ಹುಚ್ಚೇ, ಬುದ್ಧಿಭ್ರಮಣೆಯೇ, ಲಕ್ವ ಹೊಡೆದಿದೆಯೇ? ಹಾಗಾದರೆ ಯಾರೋ ಮದ್ದುಹಾಕಿದ್ದಾರೆ. ಹೋಗಿ ತೆಗೆಸಿ' ಎಂದು ಸಲಹೆ ನೀಡುವವರು ನಮ್ಮಲ್ಲಿ ಬೇಕಾದಷ್ಟು ಜನರಿದ್ದಾರೆ. ಏನೀ ಮದ್ದೀಡು? ಹಾವ್ರಾಣಿ, ಅಂಟೇಗೊದ್ದ, ಸ್ತ್ರೀಯ ಋತುಸ್ರಾವ, ನಾರುಬೇರು ಸೇರಿಸಿ ಕೊಳೆಸಿ, ಅದರಿಂದ ಈ ವಿಷಮದ್ದನ್ನು ತಯಾರಿಸುವರಂತೆ. ಅದನ್ನು ಊಟದಲ್ಲಿ ಹಾಕುವರಂತೆ. ಜಠರಕ್ಕೆ ಹೋದ ಈ ಮದ್ದು, ಜೀರ್ಣವಾಗುವುದೇ ಇಲ್ಲವಂತೆ! ಆರು ತಿಂಗಳಾದ ಮೇಲೆ ಅದರ ಮೇಲೆ ಕೂದಲು ಬೆಳೆಯುವುದಂತೆ. ವ್ಯಕ್ತಿಗೆ ಬಗೆಬಗೆಯ, ವಿಚಿತ್ರ ಮತ್ತು ದೀರ್ಘಕಾಲ ಕಾಡಿಸುವ ರೋಗಗಳು ಕಾಣಿಸಿಕೊಳ್ಳುತ್ತವೆ. ಕೊನೆಗೆ

ಸಾಯಲೂಬಹುದು. ಮದ್ದು ತೆಗೆಸಿದರೆ, ಬದುಕುತ್ತಾನೆ ಎನ್ನುತ್ತಾರೆ. ಮದ್ದು ತೆಗೆಯುವ ಎಕ್ಸ್‌ಪರ್ಟ್‌ಗಳೂ ಅಲ್ಲಲ್ಲಿ ಇದ್ದಾರೆ. ರೋಗಿಗೆ ವಾಂತಿಮಾಡಿಸಿ, ತಾವು ಮೊದಲೇ ತಯಾರಿಸಿಟ್ಟುಕೊಂಡ ಮದ್ದಿನ ಗುಳಿಗೆಯನ್ನು ಅದರಲ್ಲಿ ಹಾಕಿ, ನೋಡಿ ಒಳಗಿದ್ದ ಮದ್ದು ಹೊರ ಬಂತು ಎಂದು ಹೇಳುತ್ತಾರೆ.

**6. ಅತಿಯಾದ ಪಿತ್ತ, ಶೀತದಿಂದ ಕಾಯಿಲೆ ಬರುತ್ತದೆ**

ಅತಿ ಶೀತವಾಗಿಬಿಟ್ಟರೆ ಲಕ್ವ ಹೊಡೆಯುತ್ತದೆ. ಪಿತ್ತ ಹೆಚ್ಚಾದರೆ ಬುದ್ಧಿ ಭ್ರಮಣೆಯಾಗುತ್ತದೆ ಎಂದು ಜನ ನಂಬುತ್ತಾರೆ. ಇದೆಲ್ಲ ಕೆಲವು ಹೆಚ್ಚು ಶೀತದ, ಪಿತ್ತದ ಆಹಾರ ಪದಾರ್ಥಗಳನ್ನು ತಿಂದರೆ ಆಗುತ್ತದೆ ಎಂದು ಹೇಳುತ್ತಾರೆ. ಜೊತೆಗೆ ಸಿಮೆಂಟ್ ನೆಲ ಶೀತ, ಅಮೃತ ಶಿಲೆ ಶೀತ ಎಂದೂ ನಂಬುತ್ತಾರೆ.

**7. ಕೆಟ್ಟ ಕಣ್ಣು, ಮತ್ಸರ, ಕೇಡು ಬಯಸುವವರು :**

ಕೆಲವರಿಗೆ ಇತರರ ಪ್ರಗತಿ, ಅಭ್ಯುದಯವನ್ನು ಕಂಡರೆ ಹೊಟ್ಟೆಉರಿ. ತಮ್ಮಗಿಲ್ಲದ್ದು ಇತರರಿಗೆ ಸಿಕ್ಕರೆ ಮತ್ಸರ. ತಾವು ಕಷ್ಟದಲ್ಲಿದ್ದು, ಇತರರು ಸುಖಪಟ್ಟರೆ, ಮನಸ್ಸಿಗೆ ನೋವು. ಇಂತಹವರು ಚೆನ್ನಾಗಿರುವವರ ಮೇಲೆ ತಮ್ಮ ಕೆಟ್ಟ ದೃಷ್ಟಿಯನ್ನು ಬೀರುತ್ತಾರೆ. ಕೆಡುಕಾಗಲಿ-ಇವರಿಗೆ ಮೊಲ್ಲಾಗರ ಬರಲಿ, ಹುಚ್ಚು ಹಿಡಿಯಲಿ ಎಂದು ಹಾರೈಸುತ್ತಾರಂತೆ. ತತ್ಪರಿಣಾಮವಾಗಿ ಈ ರೋಗ ಕಾಣಿಸಿಕೊಳ್ಳುತ್ತದಂತೆ!

**8. ಗ್ರಹಗತಿ ಸರಿ ಇಲ್ಲ :**

ಶನಿಗ್ರಹ ಕಂಡರೆ ಜನರಿಗೆ ಎಲ್ಲಿಲ್ಲದ ಹೆದರಿಕೆ. ಜನ್ಮಕುಂಡಲಿಯ ಕೆಲವು ಸ್ಥಾನಗಳಲ್ಲಿ ಈ ಗ್ರಹ ಕಾಣಿಸಿಕೊಂಡರೆ ಬರಬಾರದ ಕಷ್ಟ ಕಾಯಿಲೆಗಳು ಬರುತ್ತವಂತೆ. ಶನಿ ಏಳೂವರೆ ವರ್ಷ ಬಿಡದೆ ಕಾಡುತ್ತಾನಂತೆ. ಶನಿ ಕ್ರೂರವಾಗಿರುವುದರ ಜೊತೆಗೆ ಇತರ ಗ್ರಹಗಳ ಚಲನೆಯೂ ಸರಿ ಇಲ್ಲವಾದರೆ, ವ್ಯಕ್ತಿಯನ್ನು ದೇವರೂ ಕಾಪಾಡಲಾರನಂತೆ.

**9. ವಂಶಪಾರಂಪರ್ಯ :**

ಮೂರ್ಛೆ, ಹುಚ್ಚು ವಂಶಪಾರಂಪರ್ಯವಾಗಿ ಬರುತ್ತವೆ. ತಂದೆ/ತಾತನಿಗಿದ್ದರೆ, ಮಗನಿಗೆ, ಮೊಮ್ಮಗನಿಗೆ; ತಾಯಿ ಅಜ್ಜಿ ದೊಡ್ಡಮ್ಮನಿಗಿದ್ದರೆ, ಮಗಳಿಗೆ ಬರುತ್ತದೆ.

ಆದ್ದರಿಂದ ಇಂತಹ ವಂಶದವರೊಂದಿಗೆ, ಸಂಬಂಧವನ್ನಿಟ್ಟುಕೊಳ್ಳಬಾರದು ಎಂದು ತಿಳಿಯುತ್ತಾರೆ. ಆ ಮನೆತನದವರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ.

**ಚಿಕಿತ್ಸಾ ಕ್ರಮಗಳು :**

ನಮ್ಮ ಸಮಾಜದಲ್ಲಿ ಮೂರ್ಛೆ ರೋಗಿಗಳಿಗೆ, ಲಕ್ವ ಪೀಡಿತರಿಗೆ, ಹುಚ್ಚು ಹಿಡಿದವರಿಗೆ ಏನು ಚಿಕಿತ್ಸೆ ಕೊಡಿಸುತ್ತಾರೆ? ಈ ರೋಗಿಗಳನ್ನು ಹೇಗೆ ನಡೆಸಿಕೊಳ್ಳುತ್ತಾರೆ?

1. ಬರೆಹಾಕುವುದು : ಗಾಜಿನ ಬಳೆ, ಕಬ್ಬಿಣದ ತುಂಡನ್ನು ಚೆನ್ನಾಗಿ ಕಾಯಿಸಿ, ಮೂರ್ಛೆ ರೋಗವಿರುವ ಮಗುವಿನ ಹೊಕ್ಕಳ ಸುತ್ತಾ ಬರೆಹಾಕುತ್ತಾರೆ. ತೋಳು, ಮುಖದ ಮೇಲೆ ಬರೆಎಳೆಯುತ್ತಾರೆ.
2. ಮೂರ್ಛೆ ರೋಗದ ಸೆಳೆವು ಬಂದಾಗ, ಕೈಗೆ ಕಬ್ಬಿಣದ ಬೀಗದ ಕೈ ಅಥವಾ ಯಾವುದೇ ಲೋಹದ ವಸ್ತುವನ್ನಿಡುತ್ತಾರೆ. ಇದರಿಂದ ಸೆಳೆವು ನಿಲ್ಲುತ್ತದೆ ಎಂದು ನಂಬುತ್ತಾರೆ.
3. ಕಣ್ಣಿಗೆ ಹಸಿರು ಔಷಧವನ್ನು ಬಿಡುತ್ತಾರೆ.
4. ಲಕ್ವ ರೋಗಿಗೆ ಪಾರಿವಾಳ ಹಕ್ಕಿಯ ರಕ್ತವನ್ನು ಬಳಿಯುತ್ತಾರೆ. ಅದರ ಮಾಂಸವನ್ನು ತಿನ್ನಿಸುತ್ತಾರೆ.
5. ಲಕ್ವ ರೋಗಿಯ ದೇಹವನ್ನು ಶಾಖದಲ್ಲಿರಿಸಲು, ಶೀತವನ್ನು ಹೋಗಲಾಡಿಸಲು, ಒಣಹುಲ್ಲಿನ ಮೇಲೆ ಮಲಗಿಸುತ್ತಾರೆ. ಶೀತ ಪದಾರ್ಥಗಳನ್ನು ತಿನ್ನಗೊಡುವುದಿಲ್ಲ. ತಲೆಗೆ ಎಣ್ಣೆ ಹಚ್ಚುವಂತಿಲ್ಲ. ಹುರುಳೀಕಟ್ಟಿನ ಸಾರಿನ ಅನ್ನವನ್ನು ತಿನ್ನಿಸುತ್ತಾರೆ.
6. ಹುಚ್ಚು ರೋಗಿಯನ್ನು ಕೊಠಡಿಯಲ್ಲಿ ಕೂಡಿಹಾಕುತ್ತಾರೆ. ಸರಪಳಿಯಿಂದ ಬಿಗಿಯುತ್ತಾರೆ.
7. ಪೂಜೆ, ಹರಕೆ, ಬಲಿ ಕೊಡುವುದು: ಮನೆದೇವರಿಗೆ, ಊರದೇವತೆಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಹರಕೆ ಕಟ್ಟುತ್ತಾರೆ. ಕೋಳಿ–ಕುರಿ, ಕೋಣಗಳನ್ನು ಬಲಿಕೊಡುತ್ತಾರೆ.
8. ಭೂತೋಚ್ಚಾಟನೆ–ಪ್ರತಿಮಾಟ–ಮಂತ್ರ : ಮಂತ್ರವಾದಿಯಿ ಕೈಯಲ್ಲಿ, ಭೂತ ಬಿಡಿಸುತ್ತಾರೆ. ಪ್ರತಿಮಾಟ–ಮಂತ್ರ ದಿಗ್ಬಂಧನಗಳನ್ನು ಮಾಡಿಸುತ್ತಾರೆ. ಮಾಟ

ಮಾಡಲು ಬಳಸಿದ ಗೊಂಬೆ, ಮೂಳೆ, ನಿಂಬೆ ಇತ್ಯಾದಿ ವಸ್ತುಗಳನ್ನು ಹುಡುಕಿ ತೆಗೆದು ಸುಟ್ಟುಹಾಕುತ್ತಾರೆ.

9. ಮೂರು ದಾರಿ ಸೇರುವ ಸ್ಥಳದಲ್ಲಿ ಮೊಟ್ಟೆ ಒಡೆಯುತ್ತಾರೆ. ಕೆಟ್ಟ ಶಕ್ತಿಯನ್ನು ನಿವಾಳಿಸಿ ತೆಗೆದು, ಅದನ್ನು ಅಲ್ಲಿ ಬಿಡುತ್ತಾರೆ. ಯಾರಾದರೂ ಅದನ್ನು ದಾಟಿದರೆ, ತುಳಿದರೆ, ಕೆಟ್ಟಶಕ್ತಿ ಅವರನ್ನು ಹಿಡಿದು, ಹಿಂದಿನ ರೋಗಿಗಳಿಗೆ ಲಾಭವಾಗುತ್ತದೆ. ಆತ ಅಥವಾ ಆಕೆ ರೋಗಮುಕ್ತನಾಗುತ್ತಾನೆಂದು ಜನ ನಂಬುತ್ತಾರೆ.

10. ಮದುವೆ ಮಾಡಿದರೆ ಹುಚ್ಚು ವಾಸಿಯಾಗುತ್ತದೆ ಎಂದು ನಂಬಿ, ಸುಳ್ಳು ಹೇಳಿ, ಮೋಸಮಾಡಿ, ಹಣ ಆಸ್ತಿಯ ಆಮಿಷ ತೋರಿಸಿ ಮನೋರೋಗಿಗೆ ಮದುವೆಮಾಡಿಬಿಡುತ್ತಾರೆ.

11. ಸ್ವಾಮಿ, ಬಾಬಾ, ಮಹಾಮಹಿಮರ ಸ್ಪರ್ಶ, ಆಶೀರ್ವಾದಗಳಿಂದ ಈ ಎಲ್ಲ ಕಾಯಿಲೆಗಳು ಮಾಯವಾಗಬಲ್ಲವು ಎಂದು ನಂಬಿ, ಅಂಥವರ ಕಾಲಿಗೆ ಬೀಳುತ್ತಾರೆ.

12. ಏನೂ ಮಾಡಲು ಸಾಧ್ಯವಿಲ್ಲ ; ಹುಚ್ಚು ಮೊಲ್ಲಾಗರ, ಲಕ್ವ ಇವು ವಾಸಿಯಾಗುವುದಿಲ್ಲ. ಇವಕ್ಕೆ ಔಷಧಿ ಇಲ್ಲ. ಅನುಭವಿಸಬೇಕು ಎಂಬ ಹತಾಶೆ ಜನರಲ್ಲಿ ಕಾಣುತ್ತದೆ.

**ಈ ಕಾಯಿಲೆಗಳು ಬರಲು ವಾಸ್ತವಿಕ ಮತ್ತು ವೈಜ್ಞಾನಿಕ ಕಾರಣಗಳು**

**ಮೂರ್ಛೆರೋಗ :** ಮಿದುಳಿನ ನರಕೋಶಗಳಲ್ಲಿ ದಿಢೀರನೆ ಕಾಣಿಸಿಕೊಳ್ಳುವ ವಿದ್ಯುತ್ ಚಟುವಟಿಕೆಗಳೇ ಫಿಟ್ಸ್ ಬರಲು ಕಾರಣವಾಗುತ್ತವೆ. ಮಿದುಳಿನ ರಚನೆಯಲ್ಲಿ ಏನೂ ಬದಲಾವಣೆ ಇರುವುದಿಲ್ಲ. ಈ ಅಸಹಜ ವಿದ್ಯುತ್ ಬದಲಾವಣೆಗೆ ಶೇಖಡ 10 ರಷ್ಟು ಪ್ರಕರಣಗಳಲ್ಲಿ ಆನುವಂಶಿಕ ಅಂಶಗಳು ಕಾರಣವಾಗಬಹುದು. ಅಂದರೆ ಶೇಖಡ 10ರಷ್ಟು ಮೂರ್ಛೆರೋಗಿಗಳಲ್ಲಿ ಈ ರೋಗ ಅವರಿಗೆ ಆನುವಂಶಿಕವಾಗಿ ಬಂದಿರುತ್ತದೆ. ಉಳಿದ 90 ರಷ್ಟು ರೋಗಿಗಳಲ್ಲಿ ಆನುವಂಶಿಕತೆಯ ಪಾತ್ರ ಇಲ್ಲ.

20 ವರ್ಷ ವಯಸ್ಸಿನ ನಂತರ ಮೊದಲ ಬಾರಿಗೆ ಫಿಟ್ಸ್ ಬಂದರೆ ಆ ರೋಗಿಯಲ್ಲಿ, ಈ ಫಿಟ್ಸ್ ಮಿದುಳಿದ ರೋಗಗಳ ಒಂದು ಲಕ್ಷಣವಾಗಿರುವ

ಸಾಧ್ಯತೆ ಇರುತ್ತದೆ. ಸೋಂಕು, ರಕ್ತಸ್ರಾವ, ಗೆಡ್ಡೆ, ನರಕೋಶಗಳು ನಶಿಸುವ ರೋಗ, ಇತ್ಯಾದಿ.

ಒಟ್ಟಿನಲ್ಲಿ ಮೂರ್ಛೆರೋಗ, ಮಿದುಳಿನ ನರಕೋಶಗಳ ಕಾಯಿಲೆ, ಮಿದುಳಿನ ರೋಗದ ಲಕ್ಷಣ ಎಂಬುದನ್ನು ಗಮನಿಸಿ.

**ಲಕ್ವ** : ಮಿದುಳಿದ ಪ್ರಧಾನ ಮಸ್ತಿಷ್ಕದ ಮುಂಭಾಗದ ಚಲನ ಕ್ಷೇತ್ರ – ದೇಹದ ಚಲನೆಯನ್ನು ನಿಯಂತ್ರಿಸುತ್ತದೆ. ಎಡಮಿದುಳು ದೇಹದ ಬಲಭಾಗದ ಚಲನೆಯನ್ನೂ, ಬಲಮಿದುಳು ದೇಹದ ಎಡಭಾಗದ ಚಲನೆಯನ್ನೂ ನಿಯಂತ್ರಿಸುತ್ತದೆ. ಈ ಚಲನಕ್ಷೇತ್ರದಲ್ಲಿ ರಕ್ತಸ್ರಾವವಾಗುವುದು, ರಕ್ತನಾಳ ಕಟ್ಟಿಕೊಂಡು ಆ ಭಾಗಕ್ಕೆ ರಕ್ತ ಪೂರೈಕೆಯಾಗದಿರುವುದು ಹಾಗೂ ಈ ಭಾಗದಲ್ಲಿ ಗೆಡ್ಡೆ ಬೆಳೆದುಕೊಳ್ಳುವುದು 'ಲಕ್ವ'ಗೆ ಕಾರಣ. ಅಧಿಕ ರಕ್ತ ಒತ್ತಡವಿರುವವರಲ್ಲಿ, ಸಿಹಿಮೂತ್ರ ರೋಗಿಗಳಲ್ಲಿ ರಕ್ತಸ್ರಾವವಾಗುವುದು. ರಕ್ತನಾಳ ಕಟ್ಟಿಕೊಳ್ಳುವುದು ಸಾಮಾನ್ಯ. ರಕ್ತನಾಳದ ಬುಡ್ಡೆ (ಅನ್ಯೂರಿಸಂ) ಇದ್ದು ಇದು ಒಡೆದು ರಕ್ತಸ್ರಾವವಾಗಬಹುದು. ಶರೀರದ ಬೇರೆ ಭಾಗಗಳಲ್ಲಿ ತೆರೆದ ಗಾಯದಿಂದ ಉಂಟಾದ ರಕ್ತ ಹೆಪ್ಪಿನ ಚೂರು ಅಥವಾ ಕೊಬ್ಬಿನ ಚೂರು ಮಿದುಳಿಗೆ ಬಂದು, ಚಲನಕ್ಷೇತ್ರಕ್ಕೆ ರಕ್ತ ಪೂರೈಸುವ ರಕ್ತನಾಳವನ್ನು ಬಂದ್ ಮಾಡಬಹುದು.

ಲಕ್ವ ಥಟ್ಟನೆ ಕಾಣಿಸಿಕೊಂಡರೆ ರಕ್ತಸ್ರಾವ ಅಥವಾ ರಕ್ತನಾಳ ಬಂದ್ ಆಗಿದ್ದೇ ಕಾರಣವೆಂತಲೂ, ನಿಧಾನವಾಗಿ ಬಂದರೆ, ಮಿದುಳಿನ ಗೆಡ್ಡೆಯೇ ಕಾರಣವೆಂತಲೂ ಊಹಿಸಬಹುದು.

ಅಂದರೆ ಲಕ್ವ ಒಂದು ರೋಗ ಲಕ್ಷಣ. ಮಿದುಳಿನ ಚಲನಕ್ಷೇತ್ರಕ್ಕೆ ಹಾನಿಯಾದುದರ ಪರಿಣಾಮ ಎಂದು ಅರ್ಥ.

**ಹುಚ್ಚು** : ಮಿದುಳಿನ ನರಕೋಶಗಳಲ್ಲಿ ನರವಾಹಕಗಳಾದ ಡೋಪಮಿನ್, ಸೆರೋಟೋನಿನ್, ನಾರ್‌ಎಪಿನೆಫ್ರಿನ್, ಅಸಿಟೈಲ್ ಕೋಲಿನ್ಗಳ ಉತ್ಪತ್ತಿಯ ಪ್ರಮಾಣ ಮತ್ತು ಕಾರ್ಯಶೀಲತೆ ಏರುಪೇರಾಗುವುದೇ ಹುಚ್ಚು ಕಾಣಿಸಿಕೊಳ್ಳಲು ಕಾರಣ. ಕೆಲವರಲ್ಲಿ ಮಿದುಳಿನ ಮುಂಭಾಗಕ್ಕೆ, ಮುಂಭಾಗದ ತುದಿಗೆ ಹಾನಿ ಯುಂಟಾಗುವುದರಿಂದಲೂ 'ಹುಚ್ಚು' (ORGANIC PHYCHOSIS) ಬರಲು

ಕಾರಣವಾಗಬಹುದು. ಶೇಕಡಾ 10 ರಷ್ಟು ಪ್ರಕರಣಗಳಲ್ಲಿ ಮಾತ್ರ ಹುಚ್ಚು ಆನುವಂಶಿಕ. ಉಳಿದ 90ರಷ್ಟು ಪ್ರಕರಣಗಳಲ್ಲಿ ಮಿದುಳಿನಲ್ಲಾದ ರಾಸಾಯನಿಕ ಬದಲಾವಣೆಗಳು, ಕಷ್ಟ-ನಷ್ಟ, ನೋವು ನಿರಾಶೆ, ಮಾನಸಿಕ ಚಿಂತೆ, ಕ್ಲೇಶ, ಅಹಿತಕರ ಪರಿಸರ, ವಿವಿಧ ಮಾನಸಿಕ ರೋಗಗಳಿಗೆ ಕಾರಣವಾಗುತ್ತವೆ ಎಂಬುದನ್ನು ಎಲ್ಲರೂ ಗಮನಿಸಬೇಕು. ಆದ್ದರಿಂದ ಹುಚ್ಚು ಕೂಡ ಮಿದುಳಿನ ಕಾಯಿಲೆಯೇ!

**ಚಿಕಿತ್ಸೆ**

ಈ ಎಲ್ಲ ಕಾಯಿಲೆಗಳಿಗೂ ಈಗ ಪರಿಣಾಮಕಾರಿ ಔಷಧಿಗಳು ಮತ್ತು ಚಿಕಿತ್ಸೆಗಳಿವೆ. ರೋಗ ಪ್ರಾರಂಭವಾಗುತ್ತಿದ್ದಂತೆಯೇ ಚಿಕಿತ್ಸೆಯನ್ನು ಪ್ರಾರಂಭಿಸಿದರೆ, ಕಾಯಿಲೆ ಬೇಗ ಮತ್ತು ಸಂಪೂರ್ಣವಾಗಿ ಹತೋಟಿಗೆ ಬರುತ್ತದೆ.

**ಮೂರ್ಛೆರೋಗ** : ಫೀನೋಬಾರ್ಬಿ-ಟೋನ್, ಫೆನಿಟಾಯಿನ್, ಕಾರ್ಬಮಜೆಪಿನ್, ಸೋಡಿಯಂ ವಾಲ್ಪ್ರೋಯೇಟ್ ಇತ್ಯಾದಿ ಔಷಧಿಗಳಲ್ಲಿ ಒಂದನ್ನು ಕ್ರಮವಾಗಿ, ಪ್ರತಿನಿತ್ಯ ಐದು ವರ್ಷಗಳ ಕಾಲ ನೀಡಬೇಕು. ಔಷಧಿಯ ಪ್ರಮಾಣವನ್ನು ವೈದ್ಯರು ನಿರ್ಧರಿಸುತ್ತಾರೆ. ಇವೆಲ್ಲ ಸುರಕ್ಷಿತವಾದ ಔಷಧಿಗಳು.

**ಲಕ್ವ** : ಲಕ್ವಕ್ಕೆ ಕಾರಣವಾದ ಸಿಹಿಮೂತ್ರ ರೋಗ, ಅಧಿಕ ರಕ್ತ ಒತ್ತಡವನ್ನು ಹತೋಟಿಗೆ ತರುವುದು ಮುಖ್ಯ. ಮತ್ತೊಮ್ಮೆ ರಕ್ತಸ್ರಾವವಾಗದಂತೆ, ರಕ್ತನಾಳ ಬಂದ್ ಆಗದಂತೆ ಮಾಡುವ ಔಷಧಿಗಳನ್ನು ಕೊಡಲಾಗುತ್ತದೆ. ನಿಷ್ಕ್ರಿಯಗೊಂಡ ಕೈಕಾಲುಗಳಿಗೆ, ಕೊಬ್ಬರಿ ಎಣ್ಣೆ ಹಚ್ಚಿ ಮಸಾಜ್ ಮಾಡುವುದು, ಆ ಕೈ ಕಾಲುಗಳನ್ನು ಆಡಿಸಲು ಉಪಯೋಗಿಸಲು ತರಬೇತಿ ನೀಡುವುದು ಇನ್ನೂ ಮುಖ್ಯ. ಇದನ್ನು ಫಿಸಿಯೋಥೆರಪಿ ಎನ್ನುತ್ತಾರೆ. ಇದನ್ನು ಹಲವಾರು ತಿಂಗಳುಗಳು ಅಥವಾ ಇನ್ನೂ ಹೆಚ್ಚಿನ ಅವಧಿಯಲ್ಲಿ ನೀಡಬೇಕು. ಮಾತು ನಿಂತುಹೋಗಿದ್ದರೆ, ವಾಗ್ದೋಷ ಚಿಕಿತ್ಸಕರಲ್ಲಿಗೆ ಹೋಗಿ, ಮಾತನಾಡುವ ತರಬೇತಿ (speech therapy) ಪಡೆಯಬೇಕು.

**ಹುಚ್ಚು ರೋಗ** : ಈಗ ಒಳ್ಳೆಯ ಪರಿಣಾಮಕಾರಿಯಾದ, ಹತ್ತಾರು ಬಗೆಯ ಔಷಧಿಗಳು ಲಭ್ಯವಿವೆ. ಮಾತ್ರೆ, ಸೂಜಿಮದ್ದು ಮತ್ತು ದ್ರವರೂಪದಲ್ಲಿ ಔಷಧಿಯನ್ನು ನೀಡಬಹುದು. ಔಷಧಿಗಳ ಜೊತೆಗೆ, ವಿದ್ಯುತ್ ಕಂಪನ ಚಿಕಿತ್ಸೆ, ಆಪ್ತಸಲಹೆ

ಸಮಾಧಾನ, ಉದ್ಯೋಗ ಮಾಡಲು ತರಬೇತಿ, ಗೌರವದಿಂದ ಬದುಕುವ ಅವಕಾಶಗಳಿಂದ, ಹುಚ್ಚು ರೋಗಿಗಳು ಸಂಪೂರ್ಣ ಗುಮುಖರಾಗಲು ಸಾಧ್ಯವಿದೆ.

ಎಷ್ಟು ಬೇಗ ಔಷಧೋಪಚಾರವನ್ನು ಪ್ರಾರಂಭಿಸಿದರೆ, ಅಷ್ಟು ಒಳ್ಳೆಯದು. ಔಷಧಿಯನ್ನು ದೀರ್ಘಕಾಲ ನೀಡಬೇಕಾಗುತ್ತದೆ.

ಈಗ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮನೋವೈದ್ಯರಿದ್ದಾರೆ. ಯಾವುದೇ ಎಂ.ಬಿ.ಬಿ.ಎಸ್. ವೈದ್ಯರು, ಮೂರ್ಛೆರೋಗಕ್ಕೆ ಲಕ್ವಕ್ಕೆ ಔಷಧಿ-ಸಲಹೆಗಳನ್ನು ನೀಡಬಲ್ಲರು.

ಆದ್ದರಿಂದ ಈ ಯಾವುದೇ ಕಾಯಿಲೆ ಬಂದಾಗ, ಜನರಲ್ಲಿ ಹೋಗದೆ, ಮಂತ್ರವಾದಿ, ದೇವಸ್ಥಾನ, ದರ್ಗಾ, ಚರ್ಚು ಎಂದು ತಿರುಗದೆ, ನೇರವಾಗಿ ತರಬೇತಿ ಪಡೆದ ವೈದ್ಯರನ್ನು ಕಾಣುವುದೇ ಜಾಣತನ. ಈ ಕಾಯಿಲೆಗಳನ್ನು ಸೂಕ್ತವಾದ ಚಿಕಿತ್ಸಾ ಉಪಚಾರಗಳಿಂದ ಗುಣಪಡಿಸಬಹುದು.

* * *

# ೧೪. ಜನಪದ ವೈದ್ಯ – ಎರಡು ವಿಶಿಷ್ಟ ವಿಧಾನಗಳು

**ಬಿ.ಕೆ. ರೆಡ್ಡಿ**

**ಜನಪದ ವೈದ್ಯದಲ್ಲಿ ಗಿಡಮೂಲಿಕೆಗಳ ಬಳಕೆ ಸರ್ವಸಾಮಾನ್ಯ ; ಜೊತೆಗೆ ಅನೇಕ ಜೀವಜಂತುಗಳೂ ಔಷಧಗಳಾಗಿ ಪರಿಣಮಿಸಬಹುದು ಎಂಬುದನ್ನು ಕಂಡುಕೊಂಡ ನಮ್ಮ ನಾಟಿ ವೈದ್ಯರು ಅನೇಕ ವಿಚಾರಗಳಲ್ಲಿ ತಜ್ಞ ವೈದ್ಯರಿಗೇ ಸವಲಾಗುತ್ತಾರೆ. ಮಕ್ಕಳ ಕಾಯಿಲೆಗಳಿಗೆ ಎರಡು ವಿಶಿಷ್ಟ ಜಾತಿಯ ಹುಳುಗಳನ್ನು ಬಳಸುವ ವಿಧಾನವನ್ನು ಇಲ್ಲಿ ಹೇಳಲಾಗಿದೆ.**

**–ಸಂ.**

ಶಿಶುಗಳಿಗೆ ಸೋಂಕುವ ತುರಿಕೆ, ನೆಗಡಿ, ಕೆಮ್ಮು, ಉದರಶೂಲೆ, ಬಾಯಿಹುಣ್ಣು, ವಾಂತಿ–ಭೇದಿ, ಕಜ್ಜಿ ಮುಂತಾದ ಕಾಯಿಲೆಗಳಿಗೆ ತುಳಸಿ, ತೊಂಡೆ, ತುಂಬೆಸೊಪ್ಪು, ಕಾಳುಮೆಣಸು, ಶುಂಠಿ, ವೀಳ್ಯದೆಲೆ, ಓಮುಕಾಳು, ಜೀರಿಗೆ, ಜೇನು, ಬೆಳ್ಳುಳ್ಳಿ, ಆಡುಸೋಗೆ ಎಲೆ ಮತ್ತು ವಿವಿಧ ಮೂಲಿಕೆಗಳನ್ನು ಕಷಾಯ ರೂಪದಲ್ಲೋ ಇಲ್ಲವೇ ಲೇಪರೂಪದಲ್ಲೋ ಬಳಸುತ್ತಾರೆ. ಆದರೆ ಹುಳುಗಳ್ನು ಪರಿಣಾಮಕಾರಿ ಶಿಶುವೈದ್ಯಕ್ಕೆ ಇಂದೂ ಬಳಸುತ್ತಿರುವ ಎರಡು ವಿಧಾನಗಳು ಬಹು ವಿಶಿಷ್ಟವಾಗಿವೆ.

## 1. ಮುಟ್ಟುದಾಸ

"ಮುಟ್ಟುದಾಸನ ಕಟ್ಟಿದ್ರೆ ಮುಟ್ಟುಚಟ್ಟು ಮಾಯ" ಎಂಬ ಗಾದೆಯಲ್ಲಿ ಈ ಹುಳು, ವಾಂತಿ–ಭೇದಿಯ ಶಿಶು ಕಾಯಿಲೆಗೆ ಬಹು ಪರಯೋಜನಕಾರಿಯಾದ ಔಷಧರೂಪದಲ್ಲಿ ಪ್ರಯೋಗಿಸಲ್ಪಡುತ್ತಿರುವದು ತಿಳಿದುಬರುತ್ತದೆ. ಇದನ್ನು 'ಮುಟ್ಟುದಾಸನಹುಳು' ಎಂದೂ ಕರೆಯುತ್ತಾರೆ. ಸುಮಾರು ಒಂದರಿಂದ ಒಂದೂವರೆ ಅಂಗುಲದಷ್ಟು ಉದ್ದವಿರುವ ಇದು ಜಾಲಿ, ಕಾರೆ ಮುಂತಾದ ಕಂಟಿಗಳಲ್ಲಿ ಗೂಡುಕಟ್ಟಿಕೊಂಡಿರುತ್ತದೆ. ಗೂಡಿನ ರಚನಾ ನೈಪುಣ್ಯವಂತೂ ಅಚ್ಚರಿಗೊಳಿಸುತ್ತದೆ. ತನಗಿಂತ ಉದ್ದನೆಯ ಜಾಲಿಮುಳ್ಳುಗಳನ್ನು (ಮುಳ್ಳಿನ ಗಾತ್ರದ ಕಡ್ಡಿಗಳನ್ನೂ ಸಹ) ಸಮನಾಗಿ ಕತ್ತರಿಸಿ, ಮುಳ್ಳಿನ ತುದಿಗಳನ್ನು ಕೆಳಗೆ ಮಾಡಿ, ಸಣ್ಣ ಬೀಡಿ ಕಟ್ಟಿನ ಆಕಾರದ ಗೂಡನ್ನು ಟೊಂಗೆಯಲ್ಲಿ ತೂಗಾಡುವಂತೆ ಹೆಣೆದುಕೊಂಡು ಅಡಗಿರುತ್ತದೆ. ತಾಯಿಯನ್ನುಳಿದು, ಮುಟ್ಟಾದ ಅನ್ಯ ಸ್ತ್ರೀಯರು ಹಾಲುಣ್ಣುವ ಮಕ್ಕಳನ್ನು ಮುಟ್ಟಿದರೆ ಮಕ್ಕಳಿಗೆ ವಾಂತಿ–ಭೇದಿ ಹಾಗೂ

ಆತಂಕಕಾರಿಯಾದ ಕಾಯಿಲೆಗಳು (ಮುಟ್ಟುಚಟ್ಟು) ಕಾಡಿಸುತ್ತದೆ–ಎಂಬ ನಂಬಿಕೆ ಗ್ರಾಮೀಣರಲ್ಲಿದೆ. ಅಂಥ ಮಕ್ಕಳ ಕಾಯಿಲೆಗೆ ಸಿದ್ಧೌಷಧವಾಗಿ 'ಮುಟ್ಟುದಾಸ' ಹುಳ್ಳುವನ್ನು ಬಳಸುತ್ತಾರೆ. ಇದರ ಪ್ರಯೋಗವು ಬಹು ಸರಳವೂ ವಿಶಿಷ್ಟವೂ ಆಗಿದೆ. ಹುಳುವಿಗೆ ತೊಂದರೆಯಾಗದಂತೆ ಜೀವಂತ ಹುಳುವಿನ ಗೂಡಿಗೆ ದಾರಪೋಣಿಸಿ, ಅದನ್ನು ಕಾಯಿಲೆಗ್ರಸ್ತ ಮಗುವಿನ ಕೊರಳಿಗೆ ಕಟ್ಟುತ್ತಾರೆ. ಬಯಲಿನ ಗಾಳಿಯಲ್ಲಿ ಹಾಯಾಗಿ ಟೊಂಗೆಯಲ್ಲಿ ತೂಗಾಡುತ್ತಿದ್ದ 'ಮುಟ್ಟುದಾಸ' ಹುಳು, ಮೈಶಾಖಕ್ಕೊಳಗಾಗಿ, ಗೂಡನ್ನು ಕೊರೆದುಕೊಂಡು ಹೊರಬಂದು, ಮಗುವಿನ ಕೊರಳು, ಎದೆಯನ್ನು 'ಚುಚ್ಚುಮದ್ದಿ"ನಂತೆ ಕಚ್ಚುತ್ತದೆ. ಮಗು ಚಿಟ್ಟನೆ ಚೀರಿ, ಉಸಿರು ಕಟ್ಟುವಂತೆ ಅತ್ತರೂ ಹುಳು ಮೂರು ನಾಲ್ಕು ಬಾರಿ ಕಚ್ಚುವವರೆಗೂ ಮಗುವಿನ ಕೊರಳಿನಿಂದ ಅದನ್ನು ಬಿಚ್ಚುವುದಿಲ್ಲ. ಕಚ್ಚಿಸಿಕೊಂಡ ಮಗುವಿನ ಕಾಯಿಲೆ ಕ್ರಮೇಣ ನಿವಾರಣೆಯಾಗಿಬಿಡುತ್ತದಂತೆ! 'ಮುಟ್ಟುಚಟ್ಟಿ' ನಿಂದಾಗಿ ಮಕ್ಕಳ ಕಾಯಿಲೆಯನ್ನು ರಾಮಬಾಣದಂತೆ ನಿವಾರಿಸುವ ಈ ಹುಳುವಿಗೆ 'ಮುಟ್ಟುದಾಸ' ಎಂಬ ಹೆಸರು ಬಂದಿರುವುದಾಗಿ ಗ್ರಾಮೀಣರು ಹೇಳುತ್ತಾರೆ. ಆದರೆ, ಈ ಹುಳುವಿನ ಮೂಲ ಹೆಸರು "ಮುಟ್ಟುದೋಷದ ಹುಳು" ಎಂದಿದ್ದಿರಬೇಕು.

## 2. ಹುತ್ತದ ಹಣ್ಣು

ಶಿಶುರೋಗ ನಿವಾರಣೆಗೆ "ಮುಟ್ಟುದೋಷದ ಹುಳು" ವನ್ನು ಮಗುವಿನ ಶರೀರದ ಮೇಲೆ ಪ್ರಯೋಗಿಸಿದರೆ, 'ಹುತ್ತದ ಹಣ್ಣ'ನ್ನು ಉದರ ಸೇರುವಂತೆ ಬಳಸುತ್ತಾರೆ. 'ಹುತ್ತದ್ಹಣ್ಣು ತಿಂದ್ರ ಹತ್ತಿಂಡಿ ತುಪ್ಪ ಕುಡ್ದಂಗೆ' ಎಂಬ ಗಾಗೆ ಈ ಹುಳುವಿನ ವಿಶಿಷ್ಟ ಸತ್ವವನ್ನು ಸಮರ್ಥಿಸುವಂತಿದೆ.

ಹಾವಿನ ಹುತ್ತದಲ್ಲಿ ಮಾತ್ರ ಲಭ್ಯವಾಗುವ, ಒಂದರಿಂದ ಎರಡು ಅಂಗುಲದವರೆಗೆ ಉದ್ದವಿರುವ, ಬೆರಳುಗಾತ್ರದ, ಬಂಗಾರ ಬಣ್ಣದ ಹುಳುವಿಗೆ 'ಹುತ್ತದ ಹಣ್ಣು' ಎಂದು ನಾಟಿವೈದ್ಯರು ಹೆಸರಿಸಿದ್ದಾರೆ. 'ಹುತ್ತದ ಹಣ್ಣು ಹುಳು' ಎನ್ನುವುದಕ್ಕಿಂತ 'ಹುತ್ತದ ಹಣ್ಣು' ಎಂದು ಮೂಲದ ಹೆಸರನ್ನು ಒಡೆಯದೆ ಕರೆದರೆ ಈ ವಿಶಿಷ್ಟ ಹುಳುವಿಗೆ ಗೌರವ ಕೊಟ್ಟಂತಾಗುತ್ತದೆ ಹಾಗೂ ಔಷಧರೂಪದಲ್ಲಿ ಬಹುಬೇಗ ನಾಟುತ್ತದೆ ಎಂಬ ನಂಬಿಕೆಯುಂಟು. ಶಿಶು ಬೆಳವಣಿಗೆಗೆ ಅವಶ್ಯಕವಾಗಿ ಬೇಕಾದ ಪೌಷ್ಟಿಕಾಂಶಗಳ ಕೊರತೆಯಿಂದ ಅನೇಕ ಕಾಯಿಲೆಗಳಿಗೆ ತುತ್ತಾಗಿ

ನಿಶ್ಯಕ್ತಿಯಿಂದ ಕೊರಗುತ್ತಿರುವ ಅಸಂಖ್ಯ ಮಕ್ಕಳನ್ನು ಗ್ರಾಮೀಣ ಸಮಾಜದಲ್ಲಿ ಕಾಣಬಹುದು. ಹೀಗೆ ಕುಂಠಿತ ಬೆಳವಣಿಗೆಯಿಂದ ಕೊರಗುತ್ತಿರುವ ತಮ್ಮ ಮಕ್ಕಳಿಗೆ 'ಬಾಲಗ್ರಹ ಪೀಡೆ' ಬಡಿದುಕೊಂಡಿದೆ ಎಂದು 'ಅಂತ್ರ' 'ಮಂತ್ರ' ಗಳಿಗೆ ಮಾರುಹೋಗುವವರೂ ಸಾಕಷ್ಟು ಜನರಿದ್ದಾರೆ. ದೇವರು ದಿಂಡರ ಕಾಟವೆಂದು ಹರಕೆ ಹೊತ್ತುಕೊಳ್ಳುವವರೂ ಇಲ್ಲದಿಲ್ಲ. ಮತ್ತೆ ಕೆಲವರು ಏನೆಲ್ಲಾ ಪ್ರಯತ್ನಮಾಡಿ 'ಹುತ್ತದ ಹಣ್ಣನ್ನು' ಹುಡುಕಿ ತಂದು ನಿಶ್ಯಕ್ತ ಮಕ್ಕಳಿಗೆ ಶಕ್ತಿವರ್ಧಕವನ್ನಾಗಿ ಉಪಯೋಗಿಸುತ್ತಿರುವುದರಿಂದಲೇ ಈ ಜನಪದ ವೈದ್ಯವಿಧಾನ ಇಂದೂ ಉಳಿದುಕೊಂಡಿದೆ. (ಹುತ್ತದ ಹಣ್ಣನ್ನು ಮಾರಿ ಜೀವನ ನಡೆಸುವವರೂ ಇದ್ದಾರೆ.)

ಯಾವ ವಿದೇಶೀಯ ಚಿಕಿತ್ಸೆಗಳಿಂದಲೂ ಪರಿಹಾರವಾಗದ ನಿಶ್ಯಕ್ತಿಯಿಂದ ತಲೆದೋರುವ ಮಕ್ಕಳ ಕಾಯಿಲೆಗಳು 'ಹುತ್ತದ ಹಣ್ಣಿನ' ಉಪಯೋಗದಿಂದ ಶೀಘ್ರ ಗುಣವಾಗಿಬಿಡುತ್ತವೆಯಂತೆ! ಇದನ್ನು ಬಳಸುವ ವಿಧಾನವೂ ಸುಲಭವಾದುದು. ಎಲಬುಗಳಿಲ್ಲದ, ಬೆಣ್ಣೆಯಂತೆ ಮೃದುವಾದ ಹುಳುವನ್ನು ತುಪ್ಪದಲ್ಲಿ ಹುರಿದರೆ ಕರಿದ ಸಂಡಿಗೆಯಂತಾಗುತ್ತದೆ. "ತುಪ್ಪಾಗೆ ಕರ್ದ ಸಂಡಿಗೆ, ತಿನ್ನಪ್ಪಾ ಜಾಣ್ಮರಿ" ಎಂದು ಕೊಟ್ಟರೆ ಯಾವ ಶಂಕೆಯೂ ಇಲ್ಲದೆ ಮಕ್ಕಳು ತಿಂದುಬಿಡುತ್ತವೆ. ಮಾಂಸಾಹಾರಿಗಳು ಮಾಂಸದ ಅಡಿಗೆಯಲ್ಲಿ ಬೇಯಿಸಿ ತಿನ್ನಿಸುವುದುಂಟು. ಹೀಗೆ ಆಹಾರರೂಪದಲ್ಲಿ ನಿಶ್ಯಕ್ತಿಯಿಂದ ಕೊರಗುತ್ತಿರುವ ಮಕ್ಕಳ ದೇಹ ಸೇರಿದ 'ಹುತ್ತದ ಹಣ್ಣು' ರೋಗನಿವಾರಕ ಮದ್ದಾಗಿ, ಪರಿಣಾಮಕಾರಿಯಾದ ಶಕ್ತಿವರ್ಧಕವಾಗಿ ಮಕ್ಕಳಲ್ಲಿ ಶಕ್ತಿ ಮತ್ತು ಲವಲವಿಕೆಯನ್ನು ತುಂಬುತ್ತದೆ. (ಯಾವ ಚಿಕಿತ್ಸೆಗೂ ಗುಣವಾಗದ ನಿಶ್ಯಕ್ತಿಗೆ ವಯಸ್ಕರೂ ಇದನ್ನು ಉಪಯೋಗಿಸುತ್ತಾರೆ.

ಶಿಶು ವೈದ್ಯಕ್ಕೆ ಸಂಬಂಧಪಟ್ಟ ಈ ಎರಡು ವಿಧನಗಳು ಇಪ್ಪತ್ತನೆಯ ಶತಮಾನದ ಅಂಚಿನಲ್ಲಿರುವ ನಮ್ಮ ವಿಜ್ಞಾನಮಯ ಕಣ್ಣಿಗೆ ಬಹು ವಿಚಿತ್ರವೆಂಬಂತೆ ಕಾಣಬಹುದು. ಆದರೆ, ಮಕ್ಕಳ ಕಾಯಿಲೆಗಳೆಂದೇ ಹೆಚ್ಚು ಹೆಸರುವಾಸಿಯಾಗಿರುವ ವಾಂತಿ-ಭೇದಿಯನ್ನು ಗುಣಪಡಿಸುವಂಥ ಯಾವ ವಿಶಿಷ್ಟಾಂಶ 'ಮುಟ್ಟುದಾಸ' ನಲ್ಲಿದೆ? ನಿಶ್ಯಕ್ತಿಯನ್ನು ದೂರಮಾಡಿ ಶಕ್ತಿಯನ್ನು ತುಂಬುವ 'ಹುತ್ತದ ಹಣ್ಣಿ' ನಲ್ಲಿರುವ ಸತ್ವಾಂಶಗಳಾವುವು? ಎಂಬುದನ್ನು ಆಧುನಿಕ ವೈದ್ಯಕೀಯ ಪ್ರಯೋಗಗಳಿಂದ ಸಂಶೋಧಿಸಿದರೆ, ಅತ್ಯುಪಯುಕ್ತವಾದ ಅನೇಕ ರಹಸ್ಯಗಳು ಬೆಳಕಿಗೆ ಬರಬಹುದು.

* * *

# ೧೫. ದೃಷ್ಟಿ - ದೂರಾದೀತ

**ಕು|| ಶಕುಂತಲಾ ದಡೇದ**

**ಎಲ್ಲರ ಕಣ್ಣೂ ಒಳ್ಳೆಯದಲ್ಲ. ಮಗು ರಚ್ಚೆ ಹಿಡಿದರೆ, ಉಂಡನಂತರ ಹೊಟ್ಟೆನೋವು ಬಂದರೆ, ಹಸು ಮೆಲಕುಹಾಕದೆ ನಿಂತರೆ ಮತ್ತು ಹಾಲು ಕರೆಯಲು ಕೊಡದಿದ್ದರೆ ದೃಷ್ಟಿಯಾಗಿದೆ ಅನ್ನುವುದು ನಮ್ಮ ಜನಪದರ ಒಂದು ನಂಬಿಕೆ. ಚೆನ್ನಾಗಿ ಬೆಳೆದ ಬೆಳೆಗೆ ಕೆಟ್ಟ ಕಣ್ಣು ತಾಕೀತೆಂದು ಸುಣ್ಣ ಬಳಿದ ಮಡಿಕೆಯನ್ನು ಇಡುವ ವಾಡಿಕೆಯೂ ಉಂಟು.**

**-ಸಂ.**

ಭಾರತೀಯ ಸಂಸ್ಕೃತಿಯಲ್ಲಿ ಬೆಳೆದು ಬಂದ ನಾವು ಹಲವಾರು ರೀತಿಯ ನಂಬಿಕೆಗಳಿಗೆ ಬಲವಾಗಿ ಅಂಟಿಕೊಂಡಿದ್ದೇವೆ. ನಾವು ಎಷ್ಟೇ ಯಾಂತ್ರಿಕತೆಯನ್ನು ಹೊಂದಿದ್ದೇವೆ ಎಂದು ತಿಳಿದುಕೊಂಡರೂ ನಮಗರಿಯದಂತೆಯೇ ಹಲವಾರು ನಂಬಿಕೆಗಳಿಗೆ ಮೊರೆಹೊಕ್ಕಿರುತ್ತೇವೆ. ಅವುಗಳಿಂದ ನಾವು ಕೆಲವೊಮ್ಮೆ ಪ್ರತ್ಯಕ್ಷ ಪ್ರತಿಫಲವನ್ನು ಇನ್ನೂ ಕೆಲವು ಸಾರಿ ಸಮಾಧಾನ ಮತ್ತು ಮಾನಸಿಕ ತೃಪ್ತಿಯನ್ನು ಹೊಂದಿರುತ್ತೇವೆ.

ಮಕ್ಕಳಿಗಾಗಲಿ, ಮುದುಕರಿಗಾಗಲಿ, ದನಕರುಗಳಿಗಾಗಲಿ, ಮನೆಮಾರುಗಳಿಗಾಗಲಿ, ಹೊಸವಸ್ತುಗಳಿಗಾಗಲಿ ಇವು ಶೃಂಗಾರಗೊಂಡಾಗ ಇಲ್ಲವೆ ಸಹಜವಾಗಿಯೇ ಸುಂದರವಾಗಿ ಕಾಣುತ್ತಿದ್ದರೆ ಅವುಗಳನ್ನು ಯಾರಾದರೂ ಕೆಟ್ಟ ಕಣ್ಣು ಇದ್ದವರು ದಿಟ್ಟಿಸಿ ನೋಡಿದಾಗ ದೃಷ್ಟಿಯಾಗುತ್ತದೆ. ಇದರಿಂದ ವಸ್ತುಗಳ, ಮನುಷ್ಯರ, ಪ್ರಾಣಿಗಳ ಮೇಲೆ ದುಷ್ಪರಿಣಾಮವಾಗುವುದು. ಜೀವಂತ ಪ್ರಾಣಿಗಳಾದರೆ ಜ್ವರಬರುವುದು. ಮೈತುಂಬ ಗುಳ್ಳೆಗಳುಂಟಾಗುವುದು ಹಾಗೂ ಇನ್ನಿತರ ದೈಹಿಕ ತೊಂದರೆಗಳುಂಟಾಗುತ್ತವೆ. ಇನ್ನು ವಸ್ತುಗಳಾದರೆ ಸೀಳುತ್ತವೆ, ಸಿಡಿದು ಒಡೆಯುತ್ತವೆ. ವಿಕಾರ ರೂಪವನ್ನು ತಾಳಬಹುದು.

ಈ ರೀತಿ ದೃಷ್ಟಿಯ ಹಾವಳಿಗೆ ಸಿಲುಕಿಕೊಂಡು ಬಳಲುವ ಮಕ್ಕಳಿಗೆ, ಪ್ರಾಣಿಗಳಿಗೆ, ವಸ್ತುಗಳಿಗೆ ಅವುಗಳ ಅನಿಷ್ಟವನ್ನು ದೂರೀಕರಿಸಲು ಪ್ರಯತ್ನಿಸುತ್ತಾರೆ. ಕೆಲವೊಂದು ವೈಜ್ಞಾನಿಕ ಕಾರಣಗಳಿಂದ ಕೂಡಿದ ವಿಧಿನಿಯಮಗಳಿದ್ದು, ಹೆಚ್ಚಿನ ಸಂಖ್ಯೆಯ ವಿಧಿನಿಯಮಗಳು ಕೇವಲ ನಂಬಿಕೆಯ ಅಚಲಶ್ರದ್ದೆಯ ಮೇಲೆ ನಿಂತಿವೆ.

ಮಗುವು ಚಂಡಿಹಿಡಿದು ಒಂದೇ ಸಮನೆ ಕಿಟಾರನೆ ಕಿರುಚುತ್ತಾ ಮನೆಯವರೆಲ್ಲರೂ ಸಮಾಧಾನಪಡಿಸಿದರೂ ಅಳು ನಿಲ್ಲಿಸದೇ ಇದ್ದಾಗ, ಇಂತಹ ಕೆಲವು ಉಪಾಯಗಳನ್ನು ಅಜ್ಜಿಯರು ಹೇಳಿಕೊಟ್ಟಾಗ ಅವುಗಳನ್ನು ಮಾಡಲೇಬೇಕಾಗುತ್ತದೆ. ಆಗ ಸಧ್ಯದ ದುಸ್ಥಿತಿಯಿಂದ ಪಾರಾಗಿ ತೃಪ್ತಿಕರ ಸಮಾಧನವನ್ನು ಕಂಡುಕೊಳ್ಳುತ್ತೇವೆ.

ದೃಷ್ಟಿಯನ್ನು ದೂರಿಕರಿಸುವ ನಿವಾರಣೋಪಾಯಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು– 1. ಮಾನವನಿಗೆ ಸಂಬಂಧಪಟ್ಟಂತೆ 2. ಪ್ರಾಣಿಗಳಿಗೆ ಸಂಬಂಧಿಸಿದಂತೆ 3. ಇತರ ವಸ್ತುಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ರೀತಿಯಲ್ಲಿ ಈ ವಿಧಿನಿಯಮಗಳು ಆಚರಿಸಲ್ಪಡುತ್ತವೆ.

**ಮಾನವರಿಗೆ ಸಂಬಂಧಪಟ್ಟಂತೆ :**

ಇದರಲ್ಲಿ ಕೆಲವೊಂದು ಮಕ್ಕಳಿಗೆ, ಕೆಲವೊಂದು ದೊಡ್ಡವರಿಗೆ ಎಂದು ಸೀಮಿತವಾಗಿದ್ದು ಅವುಗಳನ್ನು ಈ ಮುಂದಿನಂತೆ ವಿವರಿಸಬಹುದು.

## ನಿವಾಳಿಸುವುದು

**ಉಪ್ಪು :**

ಇದನ್ನು ಮಕ್ಕಳಿಗೆ ಮತ್ತು ದೊಡ್ಡವರಿಗೆ ಇಬ್ಬರಿಗೂ ಮಾಡುತ್ತಾರೆ. ಉಪ್ಪನ್ನು ಮೂರು ಬೆಳ್ಳಿಗೆ ಸಿಗುವಷ್ಟನ್ನು ತೆಗೆದುಕೊಂಡು ದೃಷ್ಟಿಯಾದವರನ್ನು ಎದುರಿಗೆ ಕೂಡ್ರಿಸಿಕೊಂಡು ಮೂರು ಸಾರಿ ಮಾತನಾಡದೆ ಅವರ ತಲೆಯಿಂದ ನೆಲದವರೆಗೆ ಉಪ್ಪನ್ನು ನಿವಾಳಿಸಿ ಉರಿಯುತ್ತಿರುವ ಒಲೆಯಲ್ಲಿ ಒಗೆಯಬೇಕು. ಉಪ್ಪು ಚಟಪಟನೆ ಸಿಡಿದಾಗ ಕೆಟ್ಟದೃಷ್ಟಿಯು ಬೆಂಕಿಯಲ್ಲಿ ಸಿಡಿದುಹೋಯ್ತು ಎನ್ನುತ್ತಾರೆ.

**ಸಾಸಿವೆ :**

ಮೂರು ಬೆಳ್ಳಿಗೆ ಸಿಗುವಷ್ಟು ಸಾಸಿವೆಯನ್ನು ತೆಗೆದುಕೊಂಡು ಮಾತನಾಡದೆ ದೃಷ್ಟಿಯಾದವರು ಮಕ್ಕಳಿರಲಿ ಮುದುಕರಿರಲಿ ಅವರ ಮುಖದ ಮೇಲೆ ಇಳಿಸಿ ಉರಿಯುತ್ತಿರುವ ಒಲೆಯಲ್ಲಿ ಹಾಕಬೇಕು. ನಂತರ ಮುಖಕ್ಕೆ ಥೂ ಥೂ ಎಂದು ಉಗುಳಬೇಕು.

**ಬೆಂಕಿ :**

ಊಟಕ್ಕೆ ಕುಳಿತಾಗ ವಾಂತಿ ಬರುತ್ತಿದ್ದರೆ, ತಿಂದ ಅನ್ನ ದಕ್ಕದಿದ್ದರೆ (ಪಚನವಾಗದಿದ್ದರೆ) ಊಟದಲ್ಲಿಯ ಕೊನೆಯ ಒಂದು ತುತ್ತನ್ನು ತಾಟಿನಲ್ಲಿ

ಬಿಟ್ಟು ಕೈ ತೊಳೆಯಬೇಕು. ಒಂದು ವಾಟಿಯಲ್ಲಿ ಮೂರು ಬೆಂಕಿಯ ಕೆಂಡಗಳನ್ನು ಹಾಕಿ ಮೂರು ಸಾರಿ ದೃಷ್ಟಿಯಾದವರ ಮುಖ ಮತ್ತು ಹೊಟ್ಟೆಯ ಮೇಲೆ ನಿವಾಳಿಸಿ ತಾಟಿನಲ್ಲಿ ಡಬ್ಬಹಾಕಬೇಕು. ಬೆಂಕಿಕೆಂಡದ ಬದಲಾಗಿ ಮೂರು ಉರಿಯುತ್ತಿರುವ ಹಾಳಿಯ ಚೂರುಗಳನ್ನು ಉಪಯೋಗಿಸಬಹುದು. ತಾಟಿನಲ್ಲಿ ಡಬ್ಬಹಾಕಿದ ವಾಟಿಯನ್ನು ದಾಟಿ ತಿರುಗಿ ನೋಡದೆ ಹೋಗಬೇಕು. ಡಬ್ಬ ಹಾಕಿದ ವಾಟಿಯು ತೆಗೆದ ಕೂಡಲೇ ಬಂದರೆ ದೃಷ್ಟಿಯಾಗಿಲ್ಲವೆಂದೂ, ಅದನ್ನು ಗುದ್ದಾಡಿ ತೆಗೆದರೆ ದೃಷ್ಟಿಯಾಗಿದೆ ಎಂದೂ ನಂಬಿಕೆ.

**ಮಣ್ಣು:**

ಮೂರು ಹಾದಿಗಳು ಕೂಡುವಲ್ಲಿಯ ಒಂದು ಹಿಡಿ ಮಣ್ಣನ್ನು ಮಾತನಾಡದೆ ತೆಗೆದುಕೊಂಡು ಬಂದು ಮುಖದ ಮೇಲೆ ಮೂರು ಸಾರಿ ಇಳುವಿ ಉರಿಯುತ್ತಿರುವ ಒಲೆಯಲ್ಲಿ ಒಗೆಯಬೇಕು.

**ಮೆಣಸಿನಕಾಯಿ :**

ಒಂದೆರಡು ಕೆಂಪು ಒಣಗಿದ ಮೆಣಸಿನಕಾಯಿಗಳೊಂದಿಗೆ ಮೂರು ಕಸಬರಿಗೆ ಕಡ್ಡಿಯನ್ನು ಸೇರಿಸಿಕೊಂಡು ಮುಖದ ಮೇಲೆ ಮೂರು ಸಾರಿ ನಿವಾಳಿಸಿ ಉರಿಯುವ ಒಲೆಯಲ್ಲಿ ಹಾಕಬೇಕು. ಆಗ ದೃಷ್ಟಿಯಾಗಿದ್ದರೆ ಮೆಣಸಿನ ಕಾಯಿ ಒಲೆಯಲ್ಲಿ ಹಾಕಿದ್ದರೂ ಘಾಟವೇ ಬರುವುದಿಲ್ಲ. ಇಲ್ಲದಿದ್ದರೆ ಘಾಟು ಹಿಡಿಯುತ್ತದೆ.

**ಕಾಲು :**

ಚೊಚ್ಚಲು ಹುಟ್ಟಿದವರು ತಮ್ಮ ಎಡಗಾಲನ್ನು ಮಕ್ಕಳ ಮುಖದ ಮೇಲೆ ಇಳಿಸಿ ನೆಲಕ್ಕೆ ಮೂರು ಸಾರೆ ಬಡಿಯಬೇಕು. ಅಂಗಾಲಿನ ಮಣ್ಣನ್ನು ತಿಲಕದಂತೆ ಹಚ್ಚಬೇಕು.

**ಓಕಳಿ :**

ಅರ್ಧವಾಟಗಿ ನೀರಿನಲ್ಲಿ ಅರಿಷಿಣಕುಂಕುಮ ಹಾಕಿ ಓಕಳಿಮಾಡಿ ಅದನ್ನು ಮುಖದ ಮೇಲೆ ಮೂರು ಸಾರೆ ನಿವಾಳಿಸಿ ಮೂರು ದಾರಿ ಕೂಡುವಲ್ಲಿ ಸುರಿಯಬೇಕು.

**ಪಾದರಕ್ಷೆ :**

ವಯಸ್ಸಾಗಿ ಬಹಳ ದಿವಸ ಸುಖದಿಂದ ಬಾಳಿ ಸತ್ತವರ ಕಾಲಿನ

ಪಾದರಕ್ಷೆಗಳಿದ್ದರೆ ಅವುಗಳನ್ನು ಮಕ್ಕಳ ಮುಖದ ಮೇಲೆ ನಿವಾಳಿಸುವುದುಂಟು. ಕೆಲವು ಕಡೆಗೆ ಸೋದರಮಾವನ ಕಾಲಿನ ಪಾದರಕ್ಷೆಗಳನ್ನು ನಿವಾಳಿಸುವುದುಂಟು.

**ಎಣ್ಣೆ :**

ಒಂದು ಬಟ್ಟಲದಲ್ಲಿ ಸ್ವಲ್ಪ ಒಳ್ಳೆಣ್ಣೆಯನ್ನು ತೆಗೆದುಕೊಂಡು ಅದನ್ನು ಮೂರು ಸಾರಿ ಮುಖದ ಮೇಲೆ ಇಳುವಿ ಅದರಲ್ಲಿ ದೃಷ್ಟಿಯಾದವರು ಮುಖವನ್ನ ನೋಡಿಕೊಂಡ ನಂತರ ಅದನ್ನು ಹನುಮಂತ ದೇವರ ಗುಡಿಯ ದೀಪಕ್ಕೆ ಹಾಕಿ ಬರುವರು.

**ಗೊಂಬಿ :**

ಅರಳೆಯಿಂದ ಒಂದು ಸಣ್ಣ ಗೊಂಬಿಯನ್ನು ಮಾಡಿ ಅದನ್ನ ಮಗುವಿನ ಮುಖದ ಮೇಲೆ ಮೂರು ಸಾರಿ ಇಳಿಸಿ ಅಲ್ಲಿಯೇ ಇದ್ದ ಗೋಡೆಗೆ ಅಂಟಿಸಿ ಕಡ್ಡಿ ಕೊರೆದು ಹಚ್ಚಿ ಸುಡಬೇಕು.

**ಹಣ್ಣು :**

ಬಾಳೆ ಹಣ್ಣು ಅಥವಾ ಲಿಂಬೇಹಣ್ಣು (ಸಮುಷ್ಟವಾಗಿ ಬೆಳೆದಂಥವು) ಗಳನ್ನು ತೆಗೆದುಕೊಂಡು ಮಕ್ಕಳ ಮುಖದ ಮೇಲೆ ನಿವಾಳಿಸಿ ಮೂರು ಸಂಜೆಯ ಹೊತ್ತಿನಲ್ಲಿ ಮೂರು ಹಾದಿ ಕೂಡುವಲ್ಲಿ ಇಟ್ಟುಬರಬೇಕು.

**ತೊಗರಿಬೇಳೆ :**

ಮಾತನಾಡದೆ ಒಂದು ಮುಷ್ಟಿಯಲ್ಲಿ ತೊಗರಿಬೇಳೆಯನ್ನು ತೆಗೆದುಕೊಂಡು ಮೂರು ಸಾರಿ ಮುಖದ ಮೇಲೆ ಇಳಿಸಿ ಉರಿಯುತ್ತಿರುವ ಒಲೆಯಲ್ಲಿ ಹಾಕಬೇಕು.

**ಕಸಬರಿಗೆ :**

ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದು ಬಂದಾಗ ನಾಲ್ಕು ಜನರ ದೃಷ್ಟಿತಾಗಿರುತ್ತದೆ ಎಂದು ಅವರು ಮನೆಯಲ್ಲಿ ಒಳಗೆ ಬರುತ್ತಲೆ ಕಸಬರಿಗೆಯನ್ನು ನಿವಾಳಿಸಿ ಹೊಸ್ತಿಲ ಹೊರಗೆ ಸುಡುತ್ತಾರೆ.

**ಸೆರಗು :**

ಮಕ್ಕಳು ನಿತ್ಯವೂ ಹಲವಾರು ಬಗೆಯ ಹೊಸ ಆಟಪಾಠ ಮಾಡುವದರಿಂದ

ಸಹಜವಾಗಿ ಅವುಗಳಿಗೆ ದೃಷ್ಟಿತಾಕಿರುತ್ತದೆ ಎಂದು ನಿತ್ಯವೂ ದೃಷ್ಟಿತೆಗೆಯುವುದುಂಟು. ಮಕ್ಕಳು ಮಲಗಿದ ನಂತರ ತಾಯಿಯಾಗಲಿ ಬೇರೆ ಯಾರೇ ಮುತ್ತೈದೆಯರಾಗಲಿ ತಮ್ಮ ಸೀರೆಯ ಸೆರಗನ್ನು ಮಗುವಿನ ಮೇಲೆ ಎಳೆಯಬೇಕು.

**ಗಡಿಗೆ :**

ದೊಡ್ಡವರೆ ಇರಲಿ ಚಿಕ್ಕವರೆ ಇರಲಿ ರಾತ್ರಿ ಊಟ ಮಾಡುವಾಗ ತಾವು ತಿನ್ನುವ ಪ್ರತಿಯೊಂದು ಪದಾರ್ಥಗಳ ಒಂದೊಂದು ತುತ್ತನ್ನು ಹೊಸಗಡಿಗೆಯೊಂದರಲ್ಲಿ ಹಾಕಿ, ಮರುದಿವಸ ಮುಂಜಾನೆ ಇನ್ನೂ ಸೂರ್ಯೋದಯಕ್ಕೆ ಪೂರ್ವದಲ್ಲಿ ದೃಷ್ಟಿಯಾದವರನ್ನು ಎಬ್ಬಿಸಿ ಸೂರ್ಯನಿಗೆ ಎದುರಾಗುವ ದಿಕ್ಕಿಗೆ ಕೂಡ್ರಿಸಿ ಮುಖದ ಮೇಲೆ ಅದನ್ನು ಮೂರು ಸಾರಿ ಇಳಿಸಬೇಕು. ನಂತರ ಗಡಿಗೆಯನ್ನು ಮೂರು ಹಾದಿ ಕೂಡುವಲ್ಲಿ ಇಟ್ಟು ಅದನ್ನು ಹಿಂತಿರುಗಿ ನೋಡದೆಯೇ ಬರಬೇಕು.

**ವೀಳ್ಯದೆಲೆ :**

ಶೃಂಗಾರಮಾಡಿಕೊಂಡು ಮದುವೆಯ ಹಂದರದಲ್ಲಾಗಲಿ ಆರತಿಯ ಕಾರಣದಲ್ಲಾಗಲಿ ಮಾಡಿಸಿಒಳ್ಳುವವರು ಕುಳಿತಾಗ ಮೊದಲಿಗೆ ಆರತಿ ಎತ್ತುವ ಮುತ್ತೈದೆಯು ಬಂದು ವೀಳ್ಯೆದೆಲೆಯನ್ನು ತೆಗೆದುಕೊಂಡು ಅದಕ್ಕೆ ಮೂರು ರಂಧ್ರ ಮಾಡಿ ಅದನ್ನು ಮೂರು ಪದರಾಗಿ ಮಡಿಚಿ ಅವರ ಮುಖಕ್ಕೆ ನಿವಾಳಿಸಿ ಅಲ್ಲಿಯೇ ಇದ್ದ ಆರತಿಗೆ ಹಿಡಿದು ಸುಡುವರು. ದೃಷ್ಟಿಯಾಗಿದ್ದರೆ ಅದು ಚಟಚಟ ಸಿಡಿಯುವುದು. ಇಲ್ಲದಿದ್ದರೆ ಎಲೆ ಸಿಡಿಯುವುದಿಲ್ಲ.

**ಬಾನದ ಆರತಿ :**

ತೊಟ್ಟಿಲು ಬಟ್ಟಿಲು ನಿಬ್ಬಣದಲ್ಲಿ, ಬೀಗರ ನಿಬ್ಬಣವನ್ನು ಇದಿರುಗೊಂಡಾಗ ಮುಂತಾದ ಸಂದರ್ಭದಲ್ಲಿ ಊರತುಂಬ ಮೆರವಣಿಗೆಯನ್ನು ಮಾಡಿಕೊಂಡು ಮನೆಯ ಬಾಗಿಲಿಗೆ ಬಂದಾಗ ಬಾನದ ಆರತಿಯಿಂದ ದೃಷ್ಟಿ ತೆಗೆಯುತ್ತಾರೆ. ಬಾನದ ಆರತಿ ಎಂದರೆ ಅನ್ನಮೊಸರು ಕೂಡಿಸಿ ಕಲಸಿ ಅದನ್ನು ಆರತಿಮಾಡಿ ಅದರಲ್ಲಿ ತುಪ್ಪ ಅಥವಾ ಎಣ್ಣೆಯ ದೀಪ ಹಚ್ಚಿರುತ್ತಾರೆ. ಹೊಸ್ತಿಲ ಹೊರಗೆ ನಿಲ್ಲಿಸಿ ಈ ದೃಷ್ಟಿಯನ್ನು ತೆಗೆದು ಒಳಗೆ ತೆಗೆದುಕೊಳ್ಳುವರು. ಎರಡು ಆರತಿಗಳನ್ನು

ಮಾಡಿರುತ್ತಾರೆ. ಎಡಗೈಯಿಂದ ಬೆಳಗಿದ್ದನ್ನು ಹೊಸ್ತಿಲ ಬಲಕ್ಕೆ, ಬಲಗೈಯಿಂದ ಬೆಳಗಿದ್ದನ್ನು ಹೊಸ್ತಿಲ ಎಡಕ್ಕೆ ಇಡುವರು.

**ಸುಣ್ಣದ ಓಕಳಿ :**

ಮಕ್ಕಳಿಗೆ ದೃಷ್ಟಿಯಾದಾಗ ಸ್ವಲ್ಪ ಸುಣ್ಣ ಮತ್ತು ಅರಿಷಿಣವನ್ನು ತುಂಬಿದ ಕೊಡದಲ್ಲಿಯ ನೀರಿನಲ್ಲಿ ಕಲಸಿ ಮುಖದ ಮೇಲೆ ಮೂರು ಸಾರಿ ಇಳುವಿ, ಮೂರು ಬೀದಿ ಕೂಡುವಲ್ಲಿ ಮೂರು ಸಂಜೆಯ ಹೊತ್ತಿನಲ್ಲಿ ಸುರುವಿ, ತಿರುಗಿ ನೋಡದೆ ಬರಬೇಕು.

**ಮೊಲೆ ಹಾಲು :**

ಮೊಲೆಕುಡಿಯುತ್ತಿರುವ ಮಕ್ಕಳಿಗೆ ದೃಷ್ಟಿಯಾಗಿದ್ದರೆ ಒಂದು ಕಬ್ಬಿಣದ ಸೌಟಿನಲ್ಲಿ ಮೊಲೆಹಾಲನ್ನು ತುಂಬಿಕೊಂಡು ಆ ಸೌಟಿಗೆ ಕರಿ, ಬಿಳಿ, ಕೆಂಪು ಮೂರು ಬಣ್ಣದ ದಾರಗಳನ್ನು ಸುತ್ತಬೇಕು. ನಂತರ ಮಗುವಿನ ಮುಖದ ಮೇಲೆ ಮೂರು ಸಾರಿ ಇಳುವಿ ಉರಿಯುತ್ತಿರುವ ಒಲೆಯಲ್ಲಿ ಸೌಟನ್ನು ಹಾಲು ಉಕ್ಕುವವರೆಗೆ ಇಡಬೇಕು. ದೃಷ್ಟಿಯಾಗಿದ್ದರೆ ಹಾಲು ಉಕ್ಕಿದರೂ ದಾರ ಸುಡುವದಿಲ್ಲ. ಇದು ಅನೇಕ ಗರತಿಯರಿಗೆ ಬಂದ ಅನುಭವವಾಗಿದೆ.

**ಹೊಲೆಯರ ಕಸಬರಿಗೆ :**

ಅಂಗಳ ಹುಡುಗುವ ಹೊಲೆಯರು ಬಂದು ತಮ್ಮ ಕಸಬರಿಗೆಯಿಂದ ದೃಷ್ಟಿಯಾದವರಿಗೆ ಬೆಳಿಗ್ಗೆ ಎದ್ದು ಮುಖ ತೊಳೆಯುವ ಮುನ್ನವೇ ಮೂರು ಸಾರಿ ಮುಖದ ಮೇಲೆ ಇಳುವಿಸಬೇಕು.

**ಊಟ :**

ದೃಷ್ಟಿಯಾದವರು ತಿನ್ನುವ ಪ್ರತಿಯೊಂದು ಪದಾರ್ಥಗಳನ್ನು ಒಂದು ತಾಮ್ರದ ಬಿಂದಿಗೆಯಲ್ಲಿ ಹಾಕಿ ಊಟಮಾಡಿದ ತಾಟಿನಲ್ಲಿ ಅದನ್ನು ಡಬ್ಬಹಾಕಬೇಕು. ನಂತರ ಒಂದು ಮೊಳ ಉದ್ದದ ದಂಟಿನ ತುಂಡಿಗೆ ಅದರ ಎರಡೂ ಬದಿಗೂ ಕರಿ ಅರಿವೆಯನ್ನು ಸುತ್ತಿ ಒಳ್ಳೆಣ್ಣೆಯಲ್ಲಿ ಅದ್ದಿ ಅದನ್ನು ಬಿಂದಿಗೆಯ ಮೇಲೆ ಇಟ್ಟು ಉರಿಹಚ್ಚಬೇಕು. ನಂತರ ತಾಟು ಸಮೇತ ಬಿಂದಿಗೆಯನ್ನು ಎತ್ತಿ ದೃಷ್ಟಿಯಾದವರ ತಲೆಯಿಂದ ಪಾದದವರೆಗೆ ಮೂರು ಸಾರಿ ಮಾತನಾಡದೆ ಇಳುವಬೇಕು.

**ತತ್ತಿ :**

ಶೃಂಗಾರ ಮಾಡಿಕೊಂಡು ಮಕ್ಕಳನ್ನು ಹೊತ್ತುಮುಳುಗುವಾಗ ಹೊರಗೆ ತಿರುಗಾಡಿಸಿ ಬಂದರೆ ಮನುಷ್ಯರ ಕಣ್ಣಲ್ಲದೆ ಇನ್ನಿತರ "ಗಾಳಿ" ಮುಂತಾದವುಗಳ ದೃಷ್ಟಿಬಿದ್ದು, ಮಗು ಮನೆಗೆ ಬಂದು ಒಂದೇ ಸಮನೆ ಅಳುತ್ತಿದ್ದರೆ ಆಹುತಿಯೆಂದು ಕೋಳಿ ತತ್ತಿಯನ್ನು ಇಳಿಸಿ ತಾವು ಅಡ್ಡಾಡಲು ಹೋದ ಜಾಗಕ್ಕೆ ಇಟ್ಟು ಬರುವರು.

**ತೆಂಗಿನ ಕಾಯಿ :**

ಮದುವೆ, ಮುಂಜಿನ, ಕುಬುಸ, ಋತುಮತಿಯರಾದಲ್ಲಿ, ಹುಟ್ಟುಹಬ್ಬ ಮುಂತಾದ ಆರತಿಯ ಸಂದರ್ಭಗಳು ಮುಗಿದು ಅವರನ್ನು ಹಸೆಮಣೆಯಿಂದ ಎಬ್ಬಿಸಿದ ನಂತರ ಒಂದು ತೆಂಗಿನಕಾಯಿಯನ್ನು ಎಡಗೈಯಿಂದ ಮೂರು ಸಾರಿ ಇಳುವಿ ಹೊರಗಿನ ಹೊಸ್ತಿಲಿಗೆ ಬಿಸಾಕಿ ಒಂದೇ ಪೆಟ್ಟಿಗೆ ಒಡೆಯುವಂತೆ ಒಗೆಯುವುದು. ಕೂಡಿದ ಮಕ್ಕಳು ಆರಿಸಿಕೊಂಡು ತಿನ್ನುವರು. ಮನೆಯವರು ತಿನ್ನುವುದಿಲ್ಲ.

**ಮಣಿ ಕಟ್ಟುವುದು :**

ಸಧೃಡವಾಗಿ ಗುಂಡುಗುಂಡಾಗಿರುವ ಮಕ್ಕಳಿಗೆ ದೃಷ್ಟಿ ತಗಲದೆ ಇರಲೆಂದು ಕೊರಳಲ್ಲಿ, ಕೈಯಲ್ಲಿ ಮತ್ತು ಉಡದಾರದಲ್ಲಿ ದೃಷ್ಟಿಮಣಿಗಳನ್ನು ಕಟ್ಟುವರು.

**ಕಪ್ಪು ಹಚ್ಚುವುದು :**

ಮಕ್ಕಳಿಗೆ ದೃಷ್ಟಿಯಾಗಬಾರದೆಂದು ಗಲ್ಲಕ್ಕೆ, ಹಣೆಗೆ ಗದ್ದಕ್ಕೆ, ಅಂಗಾಲಿಗೆ ಕೊಡಿಗೆಯಿಂದ ಕಪ್ಪುಚುಕ್ಕೆಯನ್ನು ಇಡುವರು. ಇದರಿಂದ ಮಕ್ಕಳ ಮುಖದ ಸೌಂದರ್ಯ ಹೆಚ್ಚಿದರು ಇವುಗಳಿಗೆ 'ದೃಷ್ಟಿಯ ಚಿಕ್ಕೆ' ಗಳೆಂದು ಹೆಸರು.

## ಪ್ರಾಣಿಗಳಿಗೆ ಸಂಬಂಧಪಟ್ಟಂತೆ :

ಪಂಚಲೋಹದಿಂದ ಮಾಡಿಸಿದ ಸರಪಳಿಯಿಂದ ಸಾಕುಪ್ರಾಣಿಗಳನ್ನು ಕಟ್ಟುವುದು, ಕಪ್ಪು ಕೆಂಪು ಬಿಳುಪು ಬಣ್ಣದ ನೂಲನ್ನು ಸೇರಿಸಿ 'ಕಣ್ಣಿ' (ಕಟ್ಟುವ ಹಗ್ಗ) ಮಾಡಿ ಕಟ್ಟುವುದು, ಕಪ್ಪುದಾರದ ಹಗ್ಗವನ್ನು ಪ್ರಾಣಿಗಳ ಕೊರಳಿಗೆ ಮತ್ತು ಕಾಲಿಗೆ ಕಟ್ಟುವುದು ಮೊದಲಾದವುಗಳಿಂದ ಪ್ರಾಣಿಗಳಿಗೆ ದೃಷ್ಟಿಯಾಗುವುದನ್ನು ತಡೆಗಟ್ಟುವರು. ದೃಷ್ಟಿಯಾದ ಪ್ರಾಣಿಗೆ ಕೋಳಿಯನ್ನು ನೀವಳಿಸಿ ಕಟುಕನಿಗೆ ಕೊಡುವುದರಿಂದ ದೃಷ್ಟಿಯನ್ನು ನಿವಾರಿಸುವರು.

**ವಸ್ತುಗಳಿಗೆ ಸಂಬಂಧಿಸಿದಂತೆ :**

ಹೊಸ ಮನೆಗೆ ಗೊಂಬೆ ಮತ್ತು ಹಳೆ ಚಪ್ಪಲಿ ಕಟ್ಟುವುದು, ಹೊಸ ಯಂತ್ರವಾಹನಗಳಿಗೆ ದಾರದಿಂದ ಪೋಣಿಸಿದ ನಿಂಬೆಹಣ್ಣು ಮತ್ತು ಹಸಿರು ಮೆಣಸಿನಕಾಯಿಗಳನ್ನು ಕಟ್ಟುವುದು, ಇತರ ಹೊಸ ವಸ್ತುಗಳಿಗೆ ಕೇರು ಮತ್ತು ಬಜೆಯ ಬೇರನ್ನು (ತಲಾ ಮೂರು) ಪೋಣಿಸಿ ಹೊಸ ವಸ್ತುಗಳ ಮೂರು ಕಡೆಗಳಲ್ಲಿ ಕಟ್ಟುವುದು– ಇವೇ ಮೊದಲಾದ ವಿಧಾನಗಳಿಂದ ಇತರ ವಸ್ತುಗಳ ದೃಷ್ಟಿ ನಿವಾರಿಸಬಹುದು.

(ಹೀಗೆ ದೃಷ್ಟಿಯನ್ನು ತೆಗೆಯುವಲ್ಲಿ ಆಯಾ ವಸ್ತು, ಪ್ರಾಣಿ, ಮನುಷ್ಯರಿಗೆ ಸಂಬಂಧಿಸಿದಂತೆ ವಿವಿಧ ರೀತಿಗಳುಂಟು. ಈ ರೀತಿಗಳು ಪ್ರದೇಶದಿಂದ ಪ್ರದೇಶಕ್ಕೆ ಪೂರ್ಣ ಮತ್ತು ಅಲ್ಪ ವ್ಯತ್ಯಾಸವನ್ನು ಹೊಂದಿರುತ್ತವೆ. ಪ್ರಸ್ತುತ ಲೇಖನದಲ್ಲಿ ಹೇಳಲಾದ ವಿಧಿ ವಿಧಾನಗಳು ಉತ್ತರ ಕರ್ನಾಟಕದ ಧಾರವಾಡ, ಬಿಜಾಪುರ, ಬೆಳಗಾವಿ ಜಿಲ್ಲೆಗಳಿಗೆ ಸಂಬಂಧಪಟ್ಟಿವೆ.)

* * *

# ೧೬. ಹಳ್ಳಿ ವೈದ್ಯ

ಎಂ.ಜಿ. ಹೆಗ್ಡೆ

**ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬರುವ ಕೆಲವು ರೋಗಗಳಿಗೆ ಜನಪದರು ಕಂಡುಕೊಂಡಿರುವ ಚಿಕಿತ್ಸಾವಿಧಾನ ಮತ್ತು ಅದಕ್ಕಾಗಿ ಬಳಸುವ ಸಾಮಗ್ರಿಗಳ ಮಾಹಿತಿಯನ್ನು ಈ ಲೇಖನ ನೀಡುತ್ತದೆ.**

**–ಸಂ.**

**ಕಡಿದ ಗಾಯಕ್ಕೆ :**

ಒಂದು ಸಲಕ್ಕೆ ಸುಮಾರು 4–6 ಆರತಿ ಕುಡಿ (ಒಂದು ಜಾತಿಯ ವನಸ್ಪತಿ ಎಲೆ. ಇದು ಉತ್ತರ ಕನ್ನಡದ ಸಿರ್ಸಿ ಸಿದ್ದಾಪುರಗಳ ಹಳ್ಳಿಗಳಲ್ಲಿ ಬೆಳೆಯುವುದು) ಯನ್ನು ತಂದು ಒಣಗಿಸಿ (ಗರಿಗರಿ ಆಗುವ ಹಾಗೆ) ನಂತರ ನುಣ್ಣಗೆ ಪುಡಿ ಮಾಡಿ, ಅದಕ್ಕೆ ಒಂದು ಚಿಟಿಕೆಯಷ್ಟು ಕಾಳುಮೆಣಸಿನ ಪುಡಿಯನ್ನು ಕೂಡಿಸಿ, ಆ ಪುಡಿಯೊಂದಿಗೆ ಗಾಯಕ್ಕೆ ಹಚ್ಚಿದರೆ ಕೂಡಲೇ ಗುಣಮುಖವಾಗುವುದು.

**ಸುಟ್ಟ ಗಾಯಕ್ಕೆ :**

ಬೇಕಾಗುವ ಸಾಮಾನು–ನಿರ್ವಿಷದ ಸಪ್ಪು (ರಿದಂಗ್ಲು) ಕೊಬ್ಬರಿ ಎಣ್ಣೆ, ಕರ್ಪೂರ, ಓಂ ಕಾಳು.

ತಯಾರಿಸುವ ವಿಧಾನ : ಒಂದು ಸೇರು ಕೊಬ್ಬರಿ ಎಣ್ಣೆಗೆ 5 ಎಲೆ, ಒಂದು ತೊಲೆ ಕರ್ಪೂರ, ಓಂ ಕಾಳು ಅರ್ಧ ತೊಲೆ ಇವುಗಳನ್ನು ಒಂದು ಪಾತ್ರೆಯಲ್ಲಿ ಕೂಡಿಸಿ ಹಾಕಿ ಕಿ ಒಲೆಯ ಮೇಲಿಟ್ಟು ಗೊಜಗುಡಿಬೇಕು. ನಂತರ ಒಲೆಯ ಮೇಲಿಂದ ಪಾತ್ರೆಯನ್ನು ಇಳಿಸಿಟ್ಟು, ಅದು ತಣ್ಣಗಾದ ನಂತರ ಒಂದು ಬಾಟ್ಲಿಯಲ್ಲಿ ಹಾಕಿ ಇಟ್ಟುಕೊಂಡರೆ ಸುಟ್ಟು ಗಾಯವಾದಾಗ ಆ ಜಾಗಕ್ಕೆ ಈ ಎಣ್ಣೆಯನ್ನು ಹಚ್ಚುವುದರಿಂದ ಗಾಯ ಬೇಗ ಗುಣವಾಗುವುದು.

**ತದ್ದಿಗೆ :**

(Ring worm) ತೆಂಗಿನ ಕಾಯಿಯ ಗರಟೆಯನ್ನು ಒಂದು ಬಟ್ಟಲಲ್ಲಿಟ್ಟು ಸುಡಬೇಕು. ಸುಡುವಾಗ ಆ ಗರಟೆಯಿಂದ ಒಂದು ತರಹದ ಎಣ್ಣೆ (ಹಗಣ) ಬಟ್ಟಲಲ್ಲಿ ಬೀಳುವುದು. ಅದನ್ನು ತದ್ದಾದ ಜಾಗಕ್ಕೆ ಹಚ್ಚಿದರೆ ಈ ಅಂಟುರೋಗ ಕಡಿಮೆ ಆಗುವುದು.

**ಹೊಟ್ಟು ತುರಿ :**

ತೊರಿಕೆ ಬಳ್ಳಿಯ ಬೇರನ್ನು ಕಿತ್ತು ತಂದು ಆಕಳ ಹಾಲಲ್ಲಿ ಬೀಸಿ, ಆ ರಸವನ್ನು ದಿನಕ್ಕೆ ಎರಡು ಬಾರಿ ಒಂದೊಂದು ಸೇರಿನಷ್ಟು ಕುಡಿಯಲು ಕೊಟ್ಟರೆ ಈ ರೋಗ ಗುಣವಾಗುವುದು.

**ಕಜ್ಜಿಗೆ :**

ಕರಿಬಾಳೆಯ ಒಣಗಿದ ಎಲೆಯನ್ನು ತಂದು ಸುಟ್ಟು ಅದರ ಬೂದಿಯನ್ನು ತಾಮ್ರದ ಬಟ್ಟಲಲ್ಲಿ ಹಾಕಿ ಕೊಬ್ಬರಿ ಎಣ್ಣೆಯಲ್ಲಿ ಮಿಶ್ರಣಮಾಡಿ ಸ್ನಾನಕ್ಕೆ ಒಂದೆರಡು ತಾಸು ಮಂಚಿತವಾಗಿ ಇಡೀ ದೇಹದ ಭಾಗಕ್ಕೂ ಹಚ್ಚಿಕೊಂಡು ನಂತರ ಸ್ನಾನ ಮಾಡಬೇಕು. ಇದೇ ರೀತಿ 4–6 ದಿವಸ ತಪ್ಪದೇ ಮಾಡಿದರೆ ಕಜ್ಜಿ ಇಲ್ಲವಾಗುವುದು.

**ಇಶ್ಪು ತಾಗಿದರೆ :**

(ಮೈಯೆಲ್ಲಾ ದಡಿ ಆಗುವುದು) ದಾಸಪತ್ರೆಯ ಗಿಡದ ಬೇರನ್ನು (ಹಸಿ) ಲಿಂಬೇ ರಸದಲ್ಲಿ ತೇದು ಮೈಗೆ ಹಚ್ಚಿದರೆ ಕಡಿಮೆ ಆಗುವುದು.

**ಅಜೀರ್ಣ–ವಾಂತಿ :**

ಜೀರಿಗೆ ಮತ್ತು ಗಂಧವನ್ನು ಸಮಪ್ರಮಾಣದಲ್ಲಿ ಕೂಡಿಸಿ ತೇದು ಒಂದು ಸೇರು ನೀರಿಗೆ ಹಾಕಿ ಕುಡಿಯಬೇಕು.

**ನಾಲಿಗೆಯ ಅಗ್ರಕ್ಕೆ :**

ಪಚ್ಚೆ ತೆನೆಯ ಗಿಡದ ಬೇರನ್ನು ನಿಂಬೇ ಹಣ್ಣಿನ ರಸದಲ್ಲಿ ತೇದು ನಾಲಿಗೆಗೆ ಹಚ್ಚಬೇಕು.

**ಕಪ್ಪು ಅಗ್ರಕ್ಕೆ :**

ಪರಿಗೆ ಗಿಡದ ಬೇರನ್ನು ನಿಂಬೇ ಹಣ್ಣಿನ ರಸದಲ್ಲಿ ತೇದು 8 ದಿವಸ ಹೊಟ್ಟೆಗೆ ತೆಗೆದು (ಕುಡಿಬೇಕು)ಕೊಳ್ಳಬೇಕು.

**ಮುಟ್ಟಿನ ದೋಷಕ್ಕೆ :**

ರಾತ್ರಿ ಒಂದು ಹಿಡಿ ಎಳ್ಳನ್ನು 3 ತೊಲ ಬೆಲ್ಲದೊಡನೆ ಕಲಸಿ ಚೆನ್ನಾಗಿ

ಅಗಿದು ತಿನ್ನಬೇಕು ಅಥವಾ ಕಷಾಯಮಾಡಿ ಬೆಲ್ಲ ಸೇರಿಸಿ ಕುಡಿಯಬೇಕು. ಆಗ ಮುಟ್ಟು ನಿಲ್ಲುವುದು.

ಮೂರು ತೊಲೆಯಷ್ಟು ತೆಂಗಿನ ಬೇರನ್ನು ಆಕಳ ಹಾಲಿನಲ್ಲಿ ಅರೆದು ಏಳು ದಿನಸ ದಿನಕ್ಕೆ ಎರಡು ಬಾರಿ ಕುಡಿಯುವುದರಿಂದ ಕನ್ಯೆಯರು ಋತುಮತಿಗಳಾಗುತ್ತಾರೆ.

**ಸರ್ಪ ಕಚ್ಚಿದಾಗ :**

(ಪ್ರಥಮ ಚಿಕಿತ್ಸೆ) ಅಕ್ಕತಂಗಿರ (ಪಪ್ಪಾಯಿ) ಕಾಯ ಹೋಳನ್ನು ಮಾಡಿ ಸರ್ಪ ಕಚ್ಚಿದ ಗಾಯಕ್ಕೆ (ಗಾಯವನ್ನು ಸ್ವಲ್ಪ ದೊಡ್ಡಮಾಡಿಕೊಂಡರೆ ಉತ್ತಮ) ವಿಷ ಪೂರ್ಣ ಹೋಗುವವರೆಗೆ ಒತ್ತಿಹಿಡಿಯುತ್ತ ಇರಬೇಕು. ವಿಷ ಇದ್ದಾಗ ಗಾಯಕ್ಕೆ ಹಿಡಿದ ಹೋಳು ಹಸಿರಾಗುವುದು. ವಿಷಯ ಹೋದಮೇಲೆ ಹೋಳಿನ ಬಣ್ಣ ಹಸಿರಾಗದೆ ಬಿಳಿಯಾಗಿಯೇ ಇರುವುದು.

(ಮೇಲೆ ಹೇಳಿದ ಔಷಧಿಗಳಲ್ಲಿ ಸೂಚಿಸಿರುವ ಎಲ್ಲಾ ವನಸ್ಪತಿಗಳು ಇಂದೂ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ, ಯಲ್ಲಾಪುರಗಳ ಅಡವಿಗಳಲ್ಲಿ ಸಿಗುತ್ತವೆ.)

* * *

# ೧೭. ಪ್ರಸೂತಿ ಜಾನಪದ : ಮಾಸ ಸಂಸ್ಕಾರ

ಡಾ। ಎಸ್.ಪಿ. ಪದ್ಮಪ್ರಸಾದ್

**ಬದುಕಿನ ಪ್ರತಿಯೊಂದು ಕ್ರಿಯೆಯಲ್ಲೂ ಜಾನಪದ ತನ್ನ ಪ್ರಭಾವವನ್ನು ಬೀರಿದೆ. ಜಾನಪದ ಇಲ್ಲದ ಕ್ಷೇತ್ರವೇ ಇಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಇದರ ಪಾತ್ರ ಹಿರಿದು. ಇಂಥವುಗಳಲ್ಲಿ "ಪ್ರಸೂತಿ ಜಾನಪದ"ವೂ ಒಂದು. "ಮಾಸ ಸಂಸ್ಕಾರ"ಕ್ಕೆ ಸಂಬಂಧಿಸಿದಂತೆ ಕೆಲವು ಸ್ವಾರಸ್ಯಕರ ಅಂಶಗಳತ್ತ ಲೇಖಕರು ಇಲ್ಲಿ ಗಮನ ಸೆಳೆದಿದ್ದಾರೆ.**

**–ಸಂ.**

ಮಹಿಳೆ ಮಗುವಿಗೆ ಜನ್ಮವಿತ್ತ ಕೆಲವೇ ಕ್ಷಣಗಳಲ್ಲೇ ಅಲ್ಲಿನವರೆಗೂ ಮಗುವಿಗೆ ಗರ್ಭಕೋಶದಲ್ಲಿ ರಕ್ಷಣೆ ಕೊಟ್ಟಿದ್ದ, ಈ ಕಾರಣಕ್ಕಾಗಿಯೇ ರೂಪುಗೊಂಡು ಬೆಳೆದಿದ್ದ ಹಲವು ತೆರನ ಅಂಗಾಂಶಗಳೂ (Placenta) ಹೊಕ್ಕಳಬಳ್ಳಿ (umbelical cord) ಯೂ ಹೊರಬೀಳುವವಷ್ಟೇ. ಇದನ್ನು 'ಕಸ' ಎಂದು ಮಲೆನಾಡಿನ ಕೆಲಭಾಗಗಳಲ್ಲಿಯೂ, 'ಮಾಸ' (ಮಾಂಸ–ಎಂಬುದರ ಅಪಭ್ರಂಶ) ಎಂದು ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿಯೂ ಕರೆಯುತ್ತಾರೆ.

ಈ 'ಹೆರಿಗೆ ಕಸ' ಪೂರ್ಣ ಅನುಪಯುಕ್ತವಸ್ತು. (ವಿದೇಶಗಳಲ್ಲಿ ಕೆಲವೆಡೆ ಇದರಿಂದ ಆಹಾರ ವಸ್ತುವನ್ನು ತಯಾರಿಸಿ ತಿನ್ನುತ್ತಾರಂತೆ). ಇದನ್ನು ಮನೆಯಿಂದ ಆಚೆ ಸಾಗಿಸಬೇಕು. ಆದರೆ ಸುಮ್ಮನೆ ಎಸೆದುಬಿಡುವಂತಿಲ್ಲ. ನಾಯಿಗಳು ಅದನ್ನು ಎಳೆದಾಡಿ ತಿನ್ನುವುವೆಂಬುದು ಒಂದು ಕಾರಣವಾದರೆ, ಅಷ್ಟು ದಿವಸ ಮಗುವನ್ನು ಸಂರಕ್ಷಿಸಿದ್ದ ಆ ವಸ್ತುವನ್ನು ಹಾಗೇ ಎಸೆದುಬಿಡುವುದು ಕೃತಘ್ನತೆಯಾಗುವುದೆಂಬುದೂ ಇನ್ನೊಂದು ಕಾರಣ. ಶವವನ್ನು ವಿಧಿಬದ್ಧವಾಗಿ ಸಂಸ್ಕರಿಸುವಂತೆ ಇದನ್ನು ಮಾಡಬೇಕು ಎಂಬ ಭಾವನೆ ಮನುಷ್ಯರಲ್ಲಿ ಕೆಲಸ ಮಾಡಿರುವಂತೆ ಕಾಣುತ್ತದೆ.

ಇದರ ಪರಿಣಾಮವಾಗಿ ಈ 'ಮಾಸ'ದ ಸಂಸ್ಕಾರದಲ್ಲಿ ಹಲವಾರು ಸಂಪ್ರದಾಯಗಳೇ ನಾಡಿನುದ್ದಗಲದಲ್ಲಿ ಬೆಳೆದುಬಂದಿರುವುದು ಕಾಣುತ್ತದೆ. ಇವುಗಳನ್ನು ತುಲನಾತ್ಮಕವಾಗಿ ಅಭ್ಯಸಿಸುತ್ತಾ ಹೋಗುವುದು ಒಂದು ಸ್ವಾರಸ್ಯಕರ ಅನುಭವ. ವಿವಿಧ ಜನಾಂಗಗಳ ಹಲವು ನಂಬಿಕೆಗಳು ಇದರಿಂದ ವ್ಯಕ್ತವಾಗುತ್ತವೆ.

ಕರ್ನಾಟಕದ ಎಲ್ಲ ಪ್ರದೇಶಗಳ ಜನರೂ ಈ ಮಾಸ ಸಂಸ್ಕಾರದ ವಿಷಯದಲ್ಲಿ ಒಂದು ಅಂಶವನ್ನಂತೂ ಒಪ್ಪಿಕೊಂಡಿರುವಂತೆ ಕಾಣುತ್ತದೆ. 'ಇದನ್ನು ಹಾಗೆಯೇ

ಬೇಕಾಬಿಟ್ಟಿಯಾಗಿ ಒಗೆಯಬಾರದು ಎಂಬುದು. ಹಾಗೆ ಒಗೆದರೆ ಅದು ನೋಡಲು ತುಂಬಾ ಅಸಹ್ಯವಾಗಿ ಕಾಣುವುದೂ ಕೂಡಾ ಈ ಭಾವನೆ ಬೆಳೆಯಲು ಒಂದು ಪ್ರಬಲ ಕಾರಣವಾಗಿರಬಹುದು. (ಇದಕ್ಕೆ ವಿರುದ್ಧವಾಗಿ ದೊರೆತಿರುವ ಒಂದೇ ಒಂದು ಅಪವಾದದಂಥ ಉದಾಹರಣೆ ಎಂದರೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಒಕ್ಕಲಿಗರದ್ದು. ಅವರಲ್ಲಿ ಈ ಮಾಸವನ್ನು ಸೀಗೆಬಳ್ಳಿಯ ಮೇಲೆ ಎಸೆದುಬಿಡುವ ಸಂಪ್ರದಾಯವಿದೆಯಂತೆ) ಆದ್ದರಿಂದಲೇ ಈ ನಾಡಿನ ಬಹುತೇಕ ಎಲ್ಲ ಭಾಗಗಳ ಜನರೂ (ಕರಾವಳಿ, ಹಳೇ ಮೈಸೂರು ಹಾಗೂ ಉತ್ತರ ಕರ್ನಾಟಕ ಪ್ರದೇಶಗಳು) ಈ ಹೆರಿಗೆ ಕಸವನ್ನು ನೆಲದಲ್ಲಿ ಕುಣಿ ತೋಡಿ ಹೂಳುತ್ತಾರೆ.

ಆದರೆ–ಎಲ್ಲಿ ಹೂಳುತ್ತಾರೆ? ಹೂಳುವ ಮುನ್ನ ಏನು ಮಾಡುತ್ತಾರೆ? ಈ ಕುರಿತ ನಂಬಿಕೆಗಳೇನು? ಇತ್ಯಾದಿಗಳನ್ನು ವಿಶ್ಲೇಷಿಸಿದಾಗ ಮಾತ್ರ ಜನಾಂಗದಿಂದ ಜನಾಂಗಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಹಲವಾರು ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಕೆಲವು ಉದಾಹರಣೆಗಳನ್ನು ನೋಡೋಣ.

## 1. ದಕ್ಷಿಣ ಕನ್ನಡ ಜಿಲ್ಲೆ :

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಈ ಸಂಸ್ಕಾರದ ಬಗ್ಗೆ ವಿಶೇಷ ಆದರವೇನೂ ಇರುವಂತಿಲ್ಲ. ಪ್ರಾಣಿಗಳ ಬಾಯಿಗೆ ಇದು ಸಿಕ್ಕಬಾರದೆಂಬ ಕಾರಣದಿಂದಾಗಿಯೇ ಒಂದು ಮಡಿಕೆಯಲ್ಲಿ ಇದನ್ನು ಹಾಕಿ ಹಿತ್ತಲಲ್ಲಿ ಹೂತುಬಿಡುತ್ತಾರೆ. ಹೀಗೆ ಹೂಳುವ ಮುನ್ನ ಬೇರಾವುದೇ ವಿಧಿಗಳನ್ನು ನಡೆಸುವು ಅಷ್ಟಾಗಿ ರೂಢಿಯಲ್ಲಿಲ್ಲ. ಈ ಕುರಿತ ಉಲ್ಲೇಖನಾರ್ಹ ನಂಬಿಕೆಗಳೂ ಇರುವಂತಿಲ್ಲ.

## 2. ಧಾರವಾಡ ಜಿಲ್ಲೆ :

ಹೀಗೆ ಹಿತ್ತಲಲ್ಲಿ ಹೂಳುವ ಪದ್ಧತಿ ಧಾರವಾಡ ಜಿಲ್ಲೆಯಲ್ಲಿ ಪ್ರಚಲಿತವಿದೆ. ಸೊಂಟದೆತ್ತರದ ತಗ್ಗುತೋಡಿ, ಅಲ್ಲಿ ಈ ಮಾಸವನ್ನು ಇರಿಸಿದ ಹೊಸ ಮಡಿಕೆಯನ್ನು ಹೂಳುವರು. ಈ ಮಡಿಕೆಯಲ್ಲಿ ಮಾಸನ್ನು ಹಾಕುವ ಮೊದಲು ಐದು ವಿಧದ ಧಾನ್ಯವನ್ನೂ (ಅಕ್ಕಿ, ಜೋಳ, ಗೋಧಿ, ಕಡಲೆ, ಅಲಸಂದಿ– ಸಾಮಾನ್ಯವಾಗಿ) ಒಂದು ನಾಣ್ಯವನ್ನೂ ಹಾಕುತ್ತಾರೆ. ಧಾನ್ಯಗಳು ಇಡೀ ಕಾಳುಗಳಾಗಿರಬೇಕು. ಒಡೆದ ಬೇಳೆಗಳಾಗಿರಬಾರದು. ಇವನ್ನೆಲ್ಲಾ ಮುಚ್ಚಿ ಅದನ್ನು ಹಿತ್ತಲಿನಲ್ಲಿ ತೋಡಿದ ಗುಂಡಿಯಲ್ಲಿರಿಸಿ ಚೆನ್ನಾಗಿ ಮಣ್ಣು ಮುಚ್ಚುತ್ತಾರೆ.

ಆಕಳು ಅಥವಾ ಎಮ್ಮೆ ಈದಿದ್ದು ಅದರ ಕಸವನ್ನು ವಿತರಿಸಬೇಕಾದಾಗ ಕೊಟ್ಟಿಗೆಯಲ್ಲಿಯೇ, ಆಯಾ ಜಾತಿಯ ಪ್ರಾಣಿಗಳನ್ನು ಕಟ್ಟುವ ಕಡೆ ಅದನ್ನು ಹೂಳುತ್ತಾರೆ.

ಧಾರವಾಡ ಜಿಲ್ಲೆಯ ಬಹುತೇಕ ಎಲ್ಲ ಜಾತಿಗಳವರೂ ಇದೇ ವಿಧಾನ ಅನುಸರಿಸುತ್ತಾರೆ.

## 3. ಬಿಜಾಪುರ ಜಿಲ್ಲೆ :

ಧಾರವಾಡಕ್ಕಿಂತ ತುಸು ಭಿನ್ನರೀತಿಯ ಆಚರಣೆ ಬಿಜಾಪುರ ಜಿಲ್ಲೆಯ ಇಳ್‌ಕಲ್ ಹಾಗೂ ಆಸುಪಾಸಿನ ಪ್ರದೇಶಗಳಲ್ಲಿದೆ. ಇಲ್ಲಿ ಮುಖ್ಯರಾಗಿರುವ ದೇವಾಂಗರು ಹಾಗೂ ಲಿಂಗಾಯಿತರಲ್ಲಿ ಹೆಚ್ಚೂ ಕಡಿಮೆ ಸಮಾನವಾದ ರೀತಿಯಲ್ಲೇ ಈ 'ಮಾಸ ಸಂಸ್ಕಾರ' ನಡೆಯುತ್ತದೆ. ಅದೆಂದರೆ ಈ ಮಾಸವನ್ನು ಮನೆಯ ತಲೆಬಾಗಿಲಿನ ಹೊಸಿಲಿನ ಎಡಕ್ಕೆ ಹೂಳುವುದು. (ಅಲ್ಲಿ ತಗ್ಗುತೋಡಲು ಅನನುಕೂಲತೆ ಇದ್ದರೆ ಮಾತ್ರ ಮನೆಯ ಆವರಣದಲ್ಲೇ ಇನ್ನೊಂದೆಡೆ ಹೂಳಲಾಗುವುದು). ಆ ಮಡಿಕೆಗೆ ನಾಲ್ಕೈದು ಸಣ್ಣ ತಾಮ್ರದ ಹಾಗೂ ಬೆಳ್ಳಿಯ ಚೂರುಗಳನ್ನು ಹಾಕುತ್ತಾರೆ. ಇದೇ ಜಿಲ್ಲೆಯ ಬೀಳಗಿ ತಾಲ್ಲೂಕಿನ ಕೆಲ ಜನಾಂಗಗಳವರು ಮಾಸವನ್ನು ತಿಪ್ಪೆಯಲ್ಲಿ ಹೂಳುತ್ತಾರೆ.

## 4. ಬಳ್ಳಾರಿ ಜಿಲ್ಲೆ :

ಹೊಸ ಮಡಿಕೆಯಲ್ಲಿ ಮಾಸಹಾಕಿ ಪೂಜೆಮಾಡಿ ಬಾಗಿಲಾಚೆಗೆ ಹೂಳುವುದು. ಹೆಣ್ಣಾದರೆ ಒಂದು ಕಡೆ, ಗಂಡಾದರೆ ಇನ್ನೊಂದು ಕಡೆ ಎಂದು ನಿರ್ದಿಷ್ಟ ದಿಶಾನಿರ್ದೇಶನವೂ ಉಂಟು.

## 5. ಉತ್ತರ ಕನ್ನಡ ಜಿಲ್ಲೆ :

ಮಾಸವನ್ನು ಮನೆಯ ಬಳಿಯಲ್ಲೇ ಹೂಳಬೇಕೆಂಬ ರೂಢಿ ಬಳ್ಳಾರಿ, ಬಿಜಾಪುರ ಜಿಲ್ಲೆಗಳಲ್ಲಿದ್ದರೆ, ಅದೇ ರೀತಿಯ ರೂಢಿಯನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೇಕೆ ಮಾಡಬೇಕೆಂಬ ಬಗ್ಗೆ ವಿವರಣೆಯೂ ಲಭ್ಯವಿದೆ.

ಈ ಜಿಲ್ಲೆಯ ಬಹುತೇಕ ಭಾಗಗಳಲ್ಲಿ, ಸಾಮಾನ್ಯವಾಗಿ ಎಲ್ಲ ಜನಾಂಗದವರೂ ಮಾಸ ಸಂಸ್ಕಾರದ ಬಗ್ಗೆ ಬಹುಮಟ್ಟಿಗೆ ಹೊಸ ಮಡಿಕೆಯಲ್ಲಿ ಹಾಕಿ ಮನೆಯ ಸೂರಿನಡಿಯಲ್ಲೇ ಎಲ್ಲಾದರೊಂದೆಡೆ ಹೂಳುವುದು. ಸೂರಿನ ಆಚೆಗೆ, ಅಂದರೆ–

ಅಂಗಳ ಅಥವಾ ಹಿತ್ತಲಲ್ಲಿ ಅದನ್ನು ಹೂಳಲೇಬಾರದು. ಯಾಕೆ?

"ಯಾಕೆ ಅಂದರೆ, ಹಾಗೆ ಹೂತು ಅದರ ಮೇಲೆ ಗಿಡ ಬೆಳೆದರೆ ಆ ಗಿಡದ ಬೇರು ಈ ಮಾಸವನ್ನು ಛಿದ್ರಗೊಳಿಸಿ ಒಳಗೆ ಇಳಿದಷ್ಟೂ ಆ ವಂಶಕ್ಕೆ ಮಕ್ಕಳ ಫಲ ಆಗದು. ಅಥವಾ ಇರುವ ಮಕ್ಕಳು ದೂರ ದೂರ ಹೋಗುತ್ತಾರೆ. ಆ ಜಾಗದಲ್ಲಿ ಮುಳ್ಳು ಕಂಟಿ ಬೆಳೆದರಂತೂ ಮುಗಿದೇ ಹೋಯಿತು. ಆ ವಂಶದಲ್ಲಿ ಮುಂದೆ ಮಕ್ಕಳಾಗೋದೇ ಇಲ್ಲ. ಇದು ಇಲ್ಲಿ ಜಾನಪದರು ಕೊಡುವ ವಿವರಣೆ.

ಮಾಸವನ್ನು ಮಡಿಕೆಯಲ್ಲಿ ಹಾಕುವ ಮೊದಲು ಅದರಲ್ಲಿ ಅರಿಷಿಣ ಕುಂಕುಮ ಹೂ ವೀಳ್ಯದೆಲೆ ಅಡಿಕೆ ಹಾಗೂ ಒಂದು ನಾಣ್ಯ ಹಾಕುತ್ತಾರೆ. ಹೂತ ನಂತರವೂ ಆ ಸ್ಥಳದ ಮೇಲೆ ಇವನ್ನೇ ಹಾಕಿ ಊದಿನಕಡ್ಡಿ ಹಚ್ಚಿಟ್ಟು ಬರುತ್ತಾರೆ.

ಹೀಗೆ ಸಂಸ್ಕಾರ ಮಾಡಿದ ಬಳಿಕ, ಅದು ಹೆಣ್ಣು ಮಗುವಾಗಿದ್ದರೆ ಹನ್ನೊಂದನೇ ದಿನವೂ, ಗಂಡು ಮಗುವಾಗಿದ್ದರೆ ಹನ್ನೆರಡನೇ ದಿನವೂ ಸೂತಕ ಕಳೆದುಕೊಂಡ ಬಾಣಂತಿ ಆ ಜಾಗಕ್ಕೆ ಎಡೆ ಇಟ್ಟು ಪೂಜೆ ಮಾಡುತ್ತಾಳೆ. ಆ ಎಡೆ ಮಡುವಾಳ್ತಿಗೆ ಮೀಸಲು. ಈ ಎಡೆಯ ಜೊತೆಗೆ ಒಂದು ಮೊರದಲ್ಲಿ ಅಕ್ಕಿ ಹಾಗೂ ಸ್ವಲ್ಪ ಹಣವನ್ನು ವೀಳೇದೆಲೆಯೊಂದಿಗೆ ಇಟ್ಟು ಆಕೆಗೆ ಕೊಡಬೇಕು. (ಮಡುವಾಳಗಿತ್ತಿ ಆ ಮನೆಯ ಅರಿವೆಗಳನ್ನು ಸ್ವಚ್ಛಮಾಡುವದಲ್ಲದೆ, ಬಾಣಂತಿ-ಮಗುವಿಗೆ ನೀರೆರೆಯುವ ಕೆಲಸವನ್ನೂ ಮಾಡುವುದರಿಂದ ಈ ಸತ್ಕಾರವಿರಬೇಕು)

## 6. ಶಿವಮೊಗ್ಗ ಜಿಲ್ಲೆ :

ಬಿಜಾಪುರ ಹಾಗೂ ಉತ್ತರಕನ್ನಡ ಜಿಲ್ಲೆಯ ಆಚರಣೆಯ ಮುಖ್ಯ ಆಶಯಗಳನ್ನೂ ಗರ್ಭೀಕರಿಸಿಕೊಂಡ ಪದ್ಧತಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ಹಾಗೂ ಹೊನ್ನಾಳಿಯಂತಹ ಬಯಲು ಸೀಮೆಯ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಇಲ್ಲಿನ ಕೃಷಿಕ ಕುಟುಂಬಗಳಲ್ಲಿ ಈ ಮಾಸವನ್ನು ತುಂಬ ಗೌರವದಿಂದ ಸಂಸ್ಕರಿಸಲಾಗುತ್ತದೆ. ಇತರೆಡೆಗಳಲ್ಲಿಯಂತೆ ಇವರೂ ಅದನ್ನು ಹೊಸ ಮಡಿಕೆಯಲ್ಲಿ ತುಂಬುತ್ತಾರೆ. ಬಳಿಕ ಸುಮಂಗಲಿಯರು ಅದಕ್ಕೆ ಪೂಜೆಮಾಡುತ್ತಾರೆ. ನಂತರ, ಗಂಡುಮಗುವಿನದಾದರೆ ಆ ಮಾಸದ ಮಡಿಕೆಯನ್ನು ತಿಪ್ಪೆಯಲ್ಲಿ ಗುಂಡಿ ತೆಗೆದು ಹೂಳುತ್ತಾರೆ.

ಸರಿ, ಈ ಭೇದ ಯಾಕೆ?

ಅವರ ಸಮಝಾಯಿಷಿ ಹೀಗೆ... "ಮನೆಗೆ ಹಾಲು ಹೈನವೇ ಮೂಲ. ಅದರಿಂದಲೇ ಆರೋಗ್ಯ, ಐಶ್ವರ್ಯ, ಉತ್ತಮ ಆಹಾರ ಕೂಡ. ಅದನ್ನು ನೋಡಿಕೊಳ್ಳಬೇಕಾದವನು ಗಂಡು ಮಗ. ಆದ್ದರಿಂದಲೇ ಆ ಜಾಗ ಅವನಿಗೆ."

"ಹೆಣ್ಣಿಗ್ಯಾಕೆ ತಿಪ್ಪೆ? ಅವಳು ಕೀಳೆಂದೇ"

"ನಿಮ್ಮಂಥ ಉಲ್ಟಾ ವಿಚಾರವಂತರೆಲ್ಲ ಹೀಗೇ ಆಲೋಚಿಸೋದು. ಅಲ್ರೀ ತಿಪ್ಪೆ ಗೊಬ್ಬರ ಇಲ್ದೆ ಬೆಳೆ ಆಗ್ತದೇನ್ರೀ? ಫಲ ಸಮೃದ್ಧಿಗೆ ಅದು ತುಂಬಾ ಅಗತ್ಯ ಅಲ್ವೇನ್ರೀ? ಅದೇ ರೀತಿ ವಂಶಾಭಿವೃದ್ಧಿಗೆ ಹೆಣ್ಣು. ಅವಳಿಲ್ಲದೆ ವಂಶದ ಬೆಳವಣಿಗೆ ಎಲ್ಲಿ? ಅದಕ್ಕೆ ಆ ಜಾಗ ಅವಳಿಗೆ".

## 7. ಚಿತ್ರದುರ್ಗ ಜಿಲ್ಲೆ :

ಇಲ್ಲಿನ ಹೊಸದುರ್ಗ ಪ್ರದೇಶದಲ್ಲಿ ಮಾಸವನ್ನು ಹೊಸ ಮಡಿಕೆಯಲ್ಲಿ ಹಾಕಿ, ಮನೆಯಿಂದ ದೂರ ಕೊಂಡೊಯ್ದು ಹೂತು, ಅದರ ಮೇಲೆ ಅರಿಶಿನ ಕುಂಕುಮ ಹಾಕುತ್ತಾರೆ. ಆದರೆ ಹೂಳುವ ಮುನ್ನ ಆ ಹೊಂಡದಲ್ಲಿ ಎಲೆ ಅಡಿಕೆ, ಅರಿಶಿನ ಕುಂಕು, ಹೂ, ಬಾಳೆಹಣ್ಣು ಹಾಗೂ ಒಂದು ಪಾವಲಿಯನ್ನು ಹಾಕುತ್ತಾರೆ.

ಹೀಗೆ ಮಾಸ ಸಂಸ್ಕಾರದಲ್ಲಿ ತೀರ ಸಾಮಾನ್ಯ ದೃಷ್ಟಿಯಿಂದ ಹಿಡಿದು ಪವಿತ್ರತೆ, ಸಾಂಕೇತಿಕತೆ ವರೆಗಿನ ಹಲವು ಅರ್ಥ ಪರಂಪರೆಯ ಪದ್ಧತಿಗಳು ಈ ನಾಡಿನಲ್ಲಿ ಬೆಳೆದುಬಂದಿವೆ. ಈ ಕ್ರಿಯೆಯನ್ನು ಕುರಿತಂತೆ ಒಂದು ಪಾವಿತ್ರ್ಯತೆ, ಗಂಭೀರತೆಗಳು ಕ್ರಮೇಣ ಬೆಳೆದುಬಂದಿರುವಂತೆ ತೋರುತ್ತದೆ. ಪ್ರಾಣಿಗಳಿಗೆ ಸಿಕ್ಕದಂತೆ ರಕ್ಷಿಸುವ ದಕ್ಷಿಣ ಕನ್ನಡ ಜಿಲ್ಲೆಯ ಏಕೈಕ ಉದ್ದೇಶ ಧಾರವಾಡ ಜಿಲ್ಲೆಯಲ್ಲಿ ಇನ್ನಷ್ಟು ಬೆಳೆದು 'ಅದೂ ತುಸು ಪಾವಿತ್ರ್ಯ ಹೊಂದಿದೆ' ಎಂಬ ಭಾವನೆ ಬೆಳೆಸಿದೆ. ಇದರ ಪರಿಣಾಮವಾಗಿ ಅಲ್ಲಿ ಆ ಮಡಿಕೆಗೆ ತುಸು ಧಾನ್ಯ ಹಾಗೂ ದಕ್ಷಿಣೆಯ ಸಮರ್ಪಣೆಯಾಗಿದೆ. ಇನ್ನೂ ಉತ್ತರಕ್ಕೆ ಹೋದಂತೆ ಈ ಪಾವಿತ್ರ್ಯ ಇನ್ನೂ ಹೆಚ್ಚಿ 'ಅದನ್ನು ಮನೆಯ ಸಮೀಪವೇ ಹೂಳಬೇಕು, ಅದರ 'ಶಾಂತನಿದ್ರೆ'ಗೆ ಯಾವ ಭಂಗವೂ ಆಗಬಾರದು' ಎಂಬಂತಹ ಸುಪ್ತ ಭಾವನೆಯಿಂದ ರೂಪುಗೊಂಡಂತಹ ಹೊಸ್ತಿಲ ಪಕ್ಕ ಹೂಳುವ ಪದ್ಧತಿಗೆ ಎಡೆಮಾಡಿದೆ. ಧಾರವಾಡದಿಂದ ದಕ್ಷಿಣಕ್ಕಿರುವ, ಅಂಥದೇ ಭೌಗೋಳಿಕ ವಾತಾವರಣ ಹೊಂದಿರುವ ಶಿವಮೊಗ್ಗ ಜಿಲ್ಲೆಯ ಪ್ರದೇಶಗಳಲ್ಲಿಯೂ ಈ 'ಪವಿತ್ರ ಭಾವನೆ' ಇನ್ನೂ ಚೆನ್ನಾಗಿ ಬೆಳೆದು ಪೂಜೆ

ಮಾಡಿದ ಬಳಿಕ ಹೂಳುವ, ಅದಕ್ಕೆ ಸಾಂಕೇತಿಕತೆ ಪ್ರದಾನ ಮಾಡುವ ಮಟ್ಟಕ್ಕೆ ಹೋಗಿದೆ. ಮಲೆನಾಡಿನ ವಾತಾವರಣ ಹೊಂದಿದ್ದೂ ಪ್ರತ್ಯೇಕವಾಗಿ ಉಳಿದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಪವಿತ್ರತೆ ತೀರಾ ವಿಶಿಷ್ಟ ರೀತಿಯಲ್ಲೇ ಬೆಳೆದು ಸೂತಕ ಕಳೆದು ಪವಿತ್ರಳಾದ ಬಳಿಕ ಆ ತಾಯಿ ಅಷ್ಟು ದಿನ ತನ್ನ ಮಗುವನ್ನು ಸಂರಕ್ಷಿಸಿ ತನ್ನ ಯಶಸ್ವೀ ತಾಯ್ತನಕ್ಕೆ ಕಾರಣವಾದ ಆ ವಸ್ತುವನ್ನು ಪೂಜಿಸಿ ಎಡೆ ಅರ್ಪಿಸುವಷ್ಟರ ಮಟ್ಟಿಗೆ ಬೆಳೆದಿದೆ.

'ಹೆರಿಗೆ ಕಸ' ವನ್ನು ಗುಂಡಿತೋಡಿ ಹೂಳುವುದು ಭಾರತದಲ್ಲಿ ಎಲ್ಲಾ ಕಡೆಯೂ ಹಿಂದಿನಿಂದಲೂ ರೂಢಿಯಲ್ಲಿದ್ದಂತೆ ಕಾಣುತ್ತದೆ. ಸಂಸ್ಕೃತ ಕಾವ್ಯಗಳಲ್ಲಿಯೂ ಇಂಥ ಉಲ್ಲೇಖಗಳು ಸಿಗುತ್ತವೆ. ಉದಾಹರಣೆಗೆ : ಸಕಲ ಕೀರ್ತಿ ಹಾಗೂ ಜಯಾನಂದ ಎಂಬ ಇಬ್ಬರು ಕವಿಗಳು ಬರೆದಿರುವ "ಧನ್ಯಕುಮಾರ ಚರಿತೆ" ಎಂಬ ಒಂದೇ ಹೆಸರಿನ ಎರಡು ಜೈನಕಾವ್ಯಗಳಲ್ಲಿಯೂ ಆ ಕಥಾನಾಯಕ ಹುಟ್ಟಿದಾಗ ನಾಭಿಛೇದನ ಮಾಡಿ ಹೂತಿಡಲು ನೆಲ ಅಗೆದಾಗ ಅಲ್ಲಿ ನಿಧಿ ಸಿಕ್ಕಿತೆಂಬ ಮಾತು ಬರುತ್ತದೆ.

ಈ ಬದುಕಿನಲ್ಲಿ ತಪ್ಪದೇ ನಡೆಯುವ ಸಾವಿರಾರು ಕ್ರಿಯೆಗಳ ಪೈಕಿ ಒಂದೊಂದರ ವಿಸ್ತೃತ ಅಧ್ಯಯನ ಎಷ್ಟು ತಲೆ ತಿನ್ನಬಲ್ಲದು! ಎಷ್ಟೊಂದು ಸ್ವಾರಸ್ಯಗಳನ್ನು ತೆರೆದು ತೋರಬಲ್ಲದು!

## ವಕ್ತೃಗಳು

1. ಶ್ರೀಮತಿ ಪದ್ಮಾವತಮ್ಮ ಕೋಂ. ಮಲ್ಲಿನಾಥ ಇಂದ್ರ, 50, ಮಂಕಿ ಬಸ್ತಿ, ಹೊನ್ನಾವರ ತಾಲ್ಲೂಕು (ಉ.ಕ.)
2. ಶ್ರೀಮತಿ ನಿರ್ಮಲ ಪ್ರಸಾದ್, 34, ಹೊಸದುರ್ಗ.
3. ಶ್ರೀಮತಿ ಕಲಾವತಮ್ಮ ಬಾ. ಬಿಚ್ಚಲ, 62, ಇಳಕಲ್ (ಬಿಜಾಪುರ).
4. ಶ್ರೀ ಹ.ಕ. ರಾಜೇಗೌಡ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
5. ಶ್ರೀಮತಿ ಸಾವಿತ್ರಮ್ಮ ಆದಪ್ಪ ಬಿಜ್ಜಲ, 60, ಇಳಕಲ್.
6. ದಿ॥ ಶ್ರೀಮತಿ ಪುಟ್ಟಮ್ಮ ಗ್ಯಾನಮತಿ, (70) ಗಾಂಧಿಬಜಾರ್, ಶಿವಮೊಗ್ಗ.
7. ಶ್ರೀ ಸಿದ್ದಯ್ಯ ಹಿರೇಮಠ. 52, ಶಿವಮೊಗ್ಗ.

## ೧೮. ಕೈಮದ್ದು ಹಾಕುವುದು : ಎಷ್ಟು ನಿಜ?

ಡಾ|| ಸಿ. ಆರ್. ಚಂದ್ರಶೇಖರ್

**ಕೈಮದ್ದು ಹಾಕುವ ಬಗ್ಗೆ ನಮ್ಮ ಹಳ್ಳಿಗಳಲ್ಲಿ ಹತ್ತಾರು ಬಗೆಯ ಕತೆಗಳಿವೆ, ನಂಬಿಕೆಗಳಿವೆ. ವೈಜ್ಞಾನಿಕವಾಗಿ ಇವೆಷ್ಟು ಸತ್ಯ ಅನ್ನುವುದನ್ನು ಇಲ್ಲಿ ವಿವೇಚಿಸಲಾಗಿದೆ. ಇದೊಂದು ಮನೋವೈಜ್ಞಾನಿಕ ವಿಶ್ಲೇಷಣೆ.**

**–ಸಂ.**

ನಮ್ಮ ಹಳ್ಳಿಗಳಲ್ಲಿ, ಸಣ್ಣಪಟ್ಟಣಗಳಲ್ಲಿ ಜನ ಮದ್ದು ಹಾಕುವುದರ ಬಗ್ಗೆ ಮಾತಾಡುತ್ತಿರುತ್ತಾರೆ. ಚೆನ್ನಾಗಿ ಆರೋಗ್ಯವಾಗಿದ್ದು, ಸಂತೋಷದಿಂದ ಇದ್ದ ವ್ಯಕ್ತಿಯೊಬ್ಬ ಅಸ್ಪಷ್ಟ ಅಥವಾ ಅವ್ಯಕ್ತ ಕಾರಣಗಳಿಂದ ಅಥವಾ ಕಾರಣವಿಲ್ಲದೆಯೇ ಅನಾರೋಗ್ಯ ಪೀಡಿತನಾದರೆ; ನಿರ್ದಿಷ್ಟ ರೋಗ ಲಕ್ಷ್ಯಣವಿಲ್ಲದೆ ಬರೀ ಸುಸ್ತು, ಸಂಕಟ, ಹಸಿವಿಲ್ಲದಿರುವುದು, ಅಜೀರ್ಣ, ನಿದ್ರಾಹೀನತೆ, ಮಂಕುತನ ಆವರಿಸಿ ಯಾವ ಚಟುವಟಿಕೆಯಲ್ಲೂ ಆಸಕ್ತಿವಹಿಸದಿರುವುದು, ಕೆಲಸ ಮಾಡಲು ತ್ರಾಣವಿಲ್ಲದಿರುವುದು, ತೂಕ ಕಳೆದುಕೊಂಡು ಸಣ್ಣಗಾಗುವುದು, ಮುಖ ನಿಸ್ತೇಜನವಾಗುವುದು. ಲೈಂಗಿಕ ದುರ್ಬಲತೆ ಅಥವಾ ಷಂಡತನ ಬರುವುದು, ಮಕ್ಕಳಾಗದಿರುವುದು, ಮಾತು ವರ್ತನೆ ವಿಚಿತ್ರವಾಗುವುದು, ಬುದ್ಧಿಭ್ರಮಣೆಯಾಗುವುದು, ನೆನಪು ಬುದ್ಧಿ ಅಳಿದು ಮತಿಹೀನವಾಗುವುದು, ಮನೆಬಿಟ್ಟು ಹೋಗಿ ಅಲೆದಾಡುವುದು ಇತ್ಯಾದಿ ತೊಂದರೆಗಳಿಂದ ಬಳಲತೊಡಗಿದರೆ, ಕೂಡಲೇ ಈ ವ್ಯಕ್ತಿಗೆ ಯಾರೋ ಮದ್ದು ಹಾಕಿದ್ದಾರೆ ಎಂಬ ನಿರ್ಧಾರಕ್ಕೆ ಬರುತ್ತಾರೆ. ಅದನ್ನು ತೆಗೆಸಲು ಪ್ರಯತ್ನಪಡುತ್ತಾರೆ.

ಸಾಮಾನ್ಯವಾಗಿ ಒಂದು ಹಳ್ಳಿಯಲ್ಲಿ ಅಥವಾ ಒಂದು ಊರಿನಲ್ಲಿ "ಇವರು ಮದ್ದು ಹಾಕುತ್ತಾರೆ" ಎಂದು ಕೆಲವರನ್ನು ಹೆಸರಿಸಲಾಗುತ್ತದೆ. ಅಥವಾ ಅನುಮಾನವನ್ನು ವ್ಯಕ್ತಪಡಿಸಲಾಗುತ್ತದೆ. ಸಾಧಾರಣವಾಗಿ ಮಧ್ಯವಯಸ್ಸಿನ ಮಹಿಳೆಯರು, ಅದರಲ್ಲೂ ವಿಧವೆಯರು ಈ ಕಳಂಕವನ್ನು ಹೊತ್ತುಕೊಂಡಿರುತ್ತಾರೆ. ಈ ಹೆಂಗಸು ಸಾಮಾನ್ಯವಾಗಿ ಬೇರೆ ದೃಷ್ಟಿಯಿಂದಲೂ ಒಳ್ಳೆಯವರಲ್ಲ ಎನ್ನಲಾಗುತ್ತದೆ. ಅವರು ತಮ್ಮ ಗಂಡಂದಿರು ಮತ್ತು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಅವರು ಕುಹಕಿಗಳು, ಜಗಳಗಂಟಿಗಳು, ಅಸೂಯಪರರು,

ಆದರೆ ತೋರಿಕೆಗೆ ನಗು ನಗುತ್ತಾ ಸಕ್ಕರೆಯಂತಹ ಮಾತನಾಡುತ್ತಾ ಜನರನ್ನು ಆಕರ್ಷಿಸುತ್ತಾರೆ; ಮೋಡಿ ಹಾಕುತ್ತಾರೆ ಎಂದು ಹೇಳಲಾಗುತ್ತದೆ. ಅವರಿಗೆ ಮರುಳಾದ ವ್ಯಕ್ತಿ ಅವರ ಮುಂದಿನ ಬಲಿಪಶುವಾಗುತ್ತಾನೆ ಎನ್ನಲಾಗುತ್ತದೆ.

ಕೈಮದ್ದು ಮಾಡುವುದೊಂದು ದುಷ್ಟವಿದ್ಯೆ. ಇದನ್ನು ಕೆಲವರು ಕಲಿತುಕೊಳ್ಳುತ್ತಾರೆ. ಒಮ್ಮೆ ಕಲಿತ ಮೇಲೆ, ಅವಧಿಗೊಂದಾವರ್ತಿ ಅವರು ಯಾರಿಗಾದರೂ ಮದ್ದು ಹಾಕಲೇಬೇಕು. ಅದೊಂದು ಚಟವಾಗಿ ಪರಿಣಮಿಸುತ್ತದೆ. ಅಲ್ಲದೆ ಹಾಗೆ ಹಾಕದೇ ಹೋದರೆ ಅವರು ಮಾನಸಿಕವಾಗಿ ಹಿಂಸೆ ಪಡುವುದಲ್ಲದೆ, ಅವರಿಗೆ ತಿನ್ನುವ ಅನ್ನದಲ್ಲಿ ಹುಳುಗಳು ಕಾಣಿಸಿಕೊಳ್ಳುತ್ತವೆ. ತಟ್ಟೆಯಲ್ಲಿರುವ ಆಹಾರ ಮಲಮೂತ್ರವಾಗಿ ಪರಿವರ್ತಿತವಾಗುತ್ತದಂತೆ. ಹೀಗಾಗಿ ಆ ಅವಧಿ ಬಂದಾಗ ಯಾರಿಗಾದರೂ, ಯಾರೂ ಸಿಕ್ಕದಿದ್ದರೆ ಕೊನೆಗೆ ತಮ್ಮ ಮನೆಯವರಿಗೇ ಮದ್ದು ಹಾಕಿಬಿಡುತ್ತಾರೆ ಎನ್ನಲಾಗುತ್ತದೆ. ಆದುದರಿಂದ ಬಹುಪಾಲು ಪ್ರಕರಣಗಳಲ್ಲಿ ಯಾವ ದುರುದ್ದೇಶವಿಲ್ಲದೆ ತಮ್ಮ ತೀಟೆಯನ್ನು ತೀರಿಸಿಕೊಳ್ಳುವ ಒಂದೇ ಉದ್ದೇಶದಿಂದ ಹೊಸಬರಿಗೆ, ಅಮಾಯಕರಿಗೆ, ಬಂಧು-ಮಿತ್ರರಿಗೆ ಮದ್ದು ಹಾಕುತ್ತಾರೆ. ಉಳಿದ ಪ್ರಕರಣಗಳಲ್ಲಿ ಜನ ತಮಗೆ ಆಗದೆ ಇದ್ದವರು, ಶತ್ರುಗಳಿಗೆ ಕಿರುಕುಳಕೊಡಲು, ಕೇಡುಂಟುಮಾಡಲು ಮದ್ದುಹಾಕುವವರನ್ನು ಬಳಸಿಕೊಳ್ಳುತ್ತಾರೆ. ಹಣ ಮತ್ತಿತರ ಬಗೆಯ ಶುಲ್ಕವನ್ನು ಕೊಟ್ಟು ತಮಗೆ ಬೇಕಾದ ವ್ಯಕ್ತಿಗೆ ಮದ್ದುಹಾಕಲು ಪ್ರಚೋದಿಸುತ್ತಾರೆ. ಅಥವಾ ಮದ್ದಿನ ಗುಳಿಗೆಯನ್ನು ಅವರಿಂದ ಪಡೆದು ತಾವೇ ಆ ವ್ಯಕ್ತಿಗೆ ತಿನ್ನಿಸುತ್ತಾರೆ.

ಈ ಮದ್ದನ್ನು ಹೇಗೆ ತಯಾರಿಸುತ್ತಾರೆ ಎನುವುದಕ್ಕೆ ಜನ ಹೇಳುವ ಕಥೆ ಕೇಳುವವರ ಮನಸ್ಸಿನಲ್ಲಿ ಜಿಗುಪ್ಸೆ, ಅಸಹ್ಯವಾಕರಿಕೆಯನ್ನು ಹುಟ್ಟಿಸುತ್ತದೆ. ಇಷ್ಟೊಂದು ಕೆಟ್ಟರೀತಿಯಲ್ಲಿ ತಯಾರಾಗುವ ಮದ್ದು ಸಹಜವಾಗಿ ಕೇಡನ್ನುಂಟುಮಾಡುತ್ತದೆ ಎಂಬ ಭಯವನ್ನು ಬಿತ್ತುವುದರಲ್ಲಿ ಸಫಲವಾಗುತ್ತದೆ. ಹಲ್ಲಿ, ಅಂಟಗೊದ್ದ, ಹಾವುರಾಣಿ ಇತ್ಯಾದಿ ಸರೀಸೃಪಗಳನ್ನು ಕೊಂದು ಅವುಗಳ ದೇಹವನ್ನು ನೇತುಹಾಕುತ್ತಾರಂತೆ. ಅವುಗಳ ದೇಹ ಕೊಳೆತು, ಅವುಗಳಿಗೆ ಹುಳುಬಿದ್ದು, ಒಂದು ಬಗೆಯ ಲೋಳೆಯಂತಹ ದ್ರವ ತೊಟ್ಟಿಕ್ಕತೊಡಗುತ್ತದಂತೆ. ಅದನ್ನು ಸಂಗ್ರಹಿಸಿ ಅದಕ್ಕೆ ಕೆಲವು ವಿಷಯುಕ್ತ ಬೇರು ಎಲೆಗಳ ಪುಡಿ ಮತ್ತು ಕೆಲವು ಸಲ ಹೆಣ್ಣಿನ ಋತು ಸ್ರಾವದ ರಕ್ತವನ್ನು ಸೇರಿಸಿ ಮದ್ದನ್ನು ತಯಾರಿಸುತ್ತಾರಂತೆ.

ಸಣ್ಣ ಸಣ್ಣ ಗುಳಿಗೆ ಮಾಡಿ ಇಟ್ಟುಕೊಳ್ಳುತ್ತಾರೆ. ಅಂತಹ ಒಂದು ಗುಳಿಗೆಯನ್ನು ಅನ್ನದಲ್ಲೋ ಹಿಟ್ಟಿನಲ್ಲೋ ಇತರ ತಿಂಡಿ ಪದಾರ್ಥದಲ್ಲೋ ಹುದುಗಿಸಿ ತಿನ್ನಲು ಕೊಡುತ್ತಾರೆ. ಮದ್ದು, ಆ ಅಹಾರವನ್ನು ತಿಂದ ವ್ಯಕ್ತಿಯ ಜಠರವನ್ನು ಸೇರುತ್ತದೆ. ಅಲ್ಲೇ ಅದು ಖಾಯಂ ಆಗಿ ಉಳಿಯುತ್ತದಂತೆ. ಜಠರದ ಜೀರ್ಣರಸಗಳು ಅದನ್ನು ಜೀರ್ಣಿಸಲಾರವಂತೆ. ಉಳಿದ ಆಹಾರ ಪದಾರ್ಥಗಳು ಸಾಗಿ ಕರುಳಿಗೆ ಹೋದರೂ ಇದು ಜಠರ ಬಿಟ್ಟು ಕದಲುವುದಿಲ್ಲವಂತೆ. ಜಠರದಲ್ಲಿದ್ದುಕೊಂಡು ವ್ಯಕ್ತಿಯ ಆರೋಗ್ಯ ದಿನ ಕ್ರಮೇಣ ನಶಿಸುವಂತೆ ಮಾಡುತ್ತದೆ. ಕ್ರಮೇಣ ಮದ್ದು ಹಳೆಯದಾದಂತೆ ಅದರಲ್ಲಿ ಕೂದಲುಗಳು ಕಾಣಿಸಿಕೊಳ್ಳುತ್ತವಂತೆ. ಅಷ್ಟು ಹೊತ್ತಿಗೆ ವ್ಯಕ್ತಿಯ ಆರೋಗ್ಯ ಸಾಕಷ್ಟು ಹಳತಾಗಿರುತ್ತದೆ. ಕೂದಲುಗಳು ಬೆಳೆದು ಕೊನೆಗೆ ಒಂದು ಕೂದಲಿನ ಉಂಡೆಯಾಗುತ್ತದೆ. ಅಲ್ಲಿಯವರೆಗೆ ಅದನ್ನು ತೆಗೆಯದೆ ಬಿಟ್ಟರೆ ವ್ಯಕ್ತಿಗೆ ಸಾವು ಶತಸಿದ್ಧ ಎನ್ನಲಾಗುತ್ತದೆ.

ಮದ್ದೀಡಿನಿಂದ ಉಂಟಾದ ಈ ತೊಂದರೆಗಳಿಗೆ ವೈದ್ಯರು ಏನೂ ಮಾಡಲಾರರು. ಅವರು ಮಾತ್ರೆ, ಟಾನಿಕ್, ಇನ್‌ಜಕ್ಷನ್‌ಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ನಂಬಲಾಗುತ್ತದೆ. ಮದ್ದೀಡಿಗೆ ಇರುವ ಒಂದೇ ಒಂದು ಚಿಕಿತ್ಸೆ ಎಂದರೆ ಅದನ್ನು ಹೊರತೆಗೆಯುವುದು. ಮದ್ದೀಡನ್ನು ಹೊರತೆಗೆಯುವುದು ಒಂದು ವಿದ್ಯೆ. ಈ ವಿದ್ಯೆ ವಂಶಪಾರಂಪರ್ಯವಾಗಿ ತಂದೆಯಿಂದ ಮಗನಿಗೆ ಬರುತ್ತದೆ. ಅಥವಾ ಗುರುವು ಮನಸ್ಸಿಟ್ಟು ಶಿಷ್ಯನಿಗೆ ಗುಟ್ಟಾಗಿ ಬೋಧಿಸಿ ಕಲಿಸುವ ವಿದ್ಯೆ ಎನ್ನಲಾಗುತ್ತದೆ. ಈ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದಾರೆ, ಮದ್ದನ್ನು ತೆಗೆಯುತ್ತಾರೆ ಎಂದು ಹೇಳಲಾಗುವ ವ್ಯಕ್ತಿಗಳು ಅಲ್ಲಲ್ಲಿ ಇರುತ್ತಾರೆ. ಅವರು ತಮಗೆ ಮಾತ್ರ ಗೊತ್ತಿರುವ ಸಾಂಪ್ರದಾಯಿಕ ಔಷಧವನ್ನು ಒಂದು ದ್ರವದೊಂದಿಗೆ ಮಿಶ್ರಮಾಡಿ ರೋಗಿಗೆ ಕುಡಿಸುತ್ತಾರೆ. ಒಡನೆಯೇ ವಾಂತಿಯಾಗುತ್ತದೆ. ವಾಂತಿಯಲ್ಲಿ ಮದ್ದು ಬೀಳುತ್ತದೆ. ಕೆಲವು ಸಲ ಒಂದೇ ಸಲಕ್ಕೆ ಎಲ್ಲಾ ಮದ್ದು ಹೊರಬಂದುಬಿಡುತ್ತದೆ. ಕೆಲವು ಸಲ ಹಾಗೆ ಬರುವುದಿಲ್ಲ. ಅಲ್ಪ ಸ್ವಲ್ಪ ಉಳಿದುಕೊಂಡು ರೋಗಿ ಗುಣಮುಖನಾಗುವುದಿಲ್ಲ. ಆಗ ಮತ್ತೊಮ್ಮೆ ಮದ್ದು ತೆಗೆಸುವ ಔಷಧ ಕುಡಿಸಬೇಕಾಗುತ್ತದೆ. ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡುವ ಒಂದು ವಿಚಿತ್ರ ಸಂಗತಿ ಎಂದರೆ, ಮದ್ದನ್ನು ಯಾವ ಆಹಾರ ಪದಾರ್ಥದಲ್ಲಿಟ್ಟು ತಿನ್ನಿಸಿರುತ್ತಾರೋ ಆ ಆಹಾರ ಪದಾರ್ಥದ

ತುಣುಕೆಗಳು ಮದ್ದಿಗೆ ಅಂಟಿಕೊಂಡಿರುವುದರಿಂದ ಜಠರ ರಸ ಅವುಗಳ ಮೇಲೆ ಯಾವ ಪರಿಣಾಮವನ್ನೂ ಮಾಡುವುದಿಲ್ಲವಂತೆ. ತಿಂದು ಹಲವು ದಿನಗಳಾಗಿರಲಿ, ತಿಂಗಳುಗಳಾಗಿರಲಿ, ವರ್ಷವಾಗಿರಲಿ ಹೊರ ಬಂದಾಗ, ತಿಂದಾಗ ಯಾವ ಸ್ಥಿತಿಯಲ್ಲಿದ್ದವೋ ಹಾಗೇ ಇರುತ್ತವಂತೆ. ಅನ್ನದ ಅಗುಳು, ರಾಗಿ–ಗೋಧಿಹಿಟ್ಟು, ಉಪ್ಪಿಟ್ಟಿನ ಕಣಗಳು ಇತ್ಯಾದಿ ಹೊಚ್ಚ ಹೊಸದಾಗಿರುತ್ತವೆ ಎನ್ನುವುದನ್ನು ಗಮನಿಸಿ. ಮದ್ದಿನ ಮೇಲೆ ಕೂದಲು ಬೆಳೆದುಕೊಂಡರೆ ಮದ್ದು ಹಳೆಯದು ಎಂದು ಅರ್ಥೈಸಲಾಗುತ್ತದೆ.

ಇದು ಮದ್ದುಹಾಕುವ ಮತ್ತು ತೆಗೆಯುವ ಕಥೆ. ನಂಬುವವರ ಮನಸ್ಸಿನಲ್ಲಿ ಭಯ, ಭೀತಿಯನ್ನು ಬಿತ್ತಿ ನಡುಗಿಸುವ ಕಥೆ. ಇದು ಎಷ್ಟರ ಮಟ್ಟಿಗೆ ನಿಜ; ಇದನ್ನು ನಂಬಬಹುದೇ? ಮದ್ದುಹಾಕಿದ್ದಾರೆ ಎನ್ನುವ ಅವಧಿಯಲ್ಲಿ ಕಾಣಿಸಿಕೊಳ್ಳುವ ತೊಂದರೆಗಳು ಹೇಗೆ ಬರುತ್ತವೆ? ಮದ್ದು ತೆಗೆಸಿದರೆ ಈ ಚಿಹ್ನೆಗಳೆಲ್ಲಾ ಎಲ್ಲಾ ಕೇಸುಗಳಲ್ಲಿ ಮಾಯವಾಗುತ್ತವೆಯೆ? ಕೆಲವು ಕೇಸುಗಳಲ್ಲಿ ಇದರಿಂದ ವಾಸಿಯಾದರೆ, ಅದು ಹೇಗೆ ಸಾಧ್ಯವಾಗುತ್ತದೆ? ವಾಸಿಯಾಗದಿದ್ದರೆ ಆ ದುರದೃಷ್ಟ ವ್ಯಕ್ತಿಗಳಿಗೆ ಏನಾಗುತ್ತದೆ; ಅವರು ಏನು ಮಾಡಬೇಕು? ಈ ಇಡೀ ವಿದ್ಯಮಾನಕ್ಕೆ ವೈಜ್ಞಾನಿಕ ವಿವರಣೆ ಏನಾದರೂ ಇದೆಯೆ? ವೈದ್ಯರು, ವಿಜ್ಞಾನಿಗಳು ಏನು ಹೇಳುತ್ತಾರೆ? ಇದೆಲ್ಲಾ ಬರೀ ಬುರಡೆ, ನಮ್ಮಲ್ಲಿರುವ ನೂರಾರು ಮೂಢನಂಬಿಕೆಗಳಲ್ಲಿ ಇದೂ ಒಂದು ಎಂದು ಸುಮ್ಮನಾಗಿ ಬಿಡೋಣವೇ– ಇತ್ಯಾದಿ ಹಲವು ಹನ್ನೊಂದು ಪ್ರಶ್ನೆಗಳು ಆಲೋಚಿಸಬಲ್ಲವರ ಮತ್ತು ಸತ್ಯನ್ವೇಷಣೆ ಮಾಡಬಯಸುವವರ ಮನಸ್ಸನ್ನು ಕಾಡುತ್ತದೆ.

ಮದ್ದೀಡು ಹಾಕುವ ವಿದ್ಯಮಾನದಲ್ಲಿ ಮೇಲ್ನೋಟಕ್ಕೆ ಕೆಲವು ಅಸಂಗತ, ಅಸಂಭವ ಹಾಗೂ ಅಸಾಧ್ಯವೆನಿಸುವ ವಿಚಾರವನ್ನು ಕಾಣಬಹುದಾಗಿದೆ.

**1. ಜಠರವನ್ನು ಸೇರಿದ ಮದ್ದು ದಿನಗಟ್ಟಲೆ ಜೀರ್ಣವಾಗದೆ, ಕರುಳಿಗೆ ಸಾಗಿ ಹೋಗದೇ ಜಠರದಲ್ಲೇ ಖಾಯಂ ಆಗಿ ಉಳಿಯುವುದು** : ಇದು ಸಾಮಾನ್ಯವಾಗಿ ಸಾಧ್ಯವೇ ಇಲ್ಲ. ನಾವು ಸೇವಿಸುವ ಆಹಾರ ನೇರವಾಗಿ ಜಠರವನ್ನು ಸೇರುತ್ತದೆ. ಜಠರ ಖಾಲಿ ಇದ್ದರೆ, ನಾವು ಸೇವಿಸುವ ಹಾಲು, ಹಣ್ಣಿನ ರಸದಂತಹ ದ್ರವ ಪದಾರ್ಥ ನೇರವಾಗಿ ಜಠರದಲ್ಲಿ ಉಳಿಯದೆ ಸಣ್ಣ ಕರುಳನ್ನು ಸೇರುತ್ತದೆ. ತೆಳುವಾದ ಅಥವಾ ಗಟ್ಟಿ ಪದಾರ್ಥ ಜಠರದಲ್ಲಿ ಉಳಿಯುತ್ತದೆ. ಜಠರದ

ಒಳಪರೆಯು ಸಹಸ್ರಾರು ಗ್ರಂಥಿಗಳ ನೆರವಿನಿಂದ ಜೀರ್ಣರಸವನ್ನು ಉತ್ಪಾದಿಸುತ್ತದೆ. ಈ ರಸದಲ್ಲಿ ಹೈಡ್ರೋಕ್ಲೋರಿಕ್ ಆಮ್ಲ, ಪೆಪ್ಸಿನ್, ಲೋಳೆ ಇತ್ಯಾದಿ ಇರುತ್ತದೆ. ಈ ರಸದ ಉತ್ಪತ್ತಿಯನ್ನು ವೇಗಸ್ ಎಂಬ ನರ ನಿಯಂತ್ರಿಸುತ್ತದೆ. ಮನುಷ್ಯನಲ್ಲಿ ಘಂಟೆಗೆ ಹತ್ತರಿಂದ ಅರವತ್ತು ಮಿಲಿ ಲೀಟರ್‌ನಷ್ಟು ಜೀರ್ಣರಸ ಉತ್ಪತ್ತಿಯಾಗುತ್ತದೆ. ಈ ರಸ ನಾವು ತಿಂದ ಆಹಾರವನ್ನು ಪಾಯಸದಂತೆ ಮಾಡಿ ಕರುಳಿಗೆ ಹೋಗಲು ಅನುವುಮಾಡಿಕೊಡುತ್ತದೆ. ಸಾಮಾನ್ಯವಾಗಿ ಆಹಾರ ಸೇವಿಸಿದ ಮೂರು-ನಾಲ್ಕು ಘಂಟೆಗಳಲ್ಲಿ ಆಹಾರವು ಜಠರವನ್ನು ಬಿಟ್ಟು ಕರುಳಿಗೆ ತಳ್ಳಲ್ಪಡುತ್ತದೆ. ಎಂಥದೇ ಆಹಾರವಾಗಲೀ ಗರಿಷ್ಟ ಎಂದರೆ ಆರು ಗಂಟೆಯ ನಂತರ ಜಠರದಲ್ಲಿ ಉಳಿಯಲು ಅವಕಾಶವೇ ಇಲ್ಲ. ಜಠರಕ್ಕೆ ಖಾಯಿಲೆ ಬಂದಾಗ, ಅದರ ಮತ್ತು ಕರುಳಿನ ನಡುವಣ ಮಾರ್ಗ ಕಿರಿದಾಗಿ ಹುಟ್ಟಿಕೊಂಡಾಗ ಆಹಾರ ಜಠರದಲ್ಲಿ ಉಳಿಯಲಾರಂಭಿಸುತ್ತದೆ. ನೋವು, ವಾಕರಿಕೆ, ವಾಂತಿ ಶುರುವಾಗುತ್ತದೆ. (ಪೈಲೋರಿಕ್ ಸ್ಟೆನೋಸಿಸ್) ಮದ್ದೀಡು ಜಠರದ ಶಕ್ತಿಯನ್ನು ಕುಂದಿಸುತ್ತದೆ, ವೇಗಸ್ ನರದ ಕಾರ್ಯಕ್ಕೆ ಅಡ್ಡಿಮಾಡುತ್ತದೆ ಅಥವಾ ಮಾರ್ಗವನ್ನು ಕಿರಿದುಕೊಳಿಸುತ್ತದೆ ಎಂದುಕೊಂಡರೆ, ಮದ್ದಿನೊಂದಿಗೆ ಇಡೀ ಆಹಾರವೇ ಜಠರದಲ್ಲಿ ಉಳಿಯಬೇಕು. ಮದ್ದು ಮಾತ್ರ ಉಳಿದು ಉಳಿದ ಆಹಾರ ಕರುಳಿಗೆ ಸಾಗುತ್ತದೆ ಎಂದರೆ ಹೇಗಾದೀತು? ಜಠರದಲ್ಲಿರುವ ಹೈಡ್ರೋಕ್ಲೋರಿಕ್ ಆಮ್ಲ ಹಾಗೂ ಪೆಪ್ಸಿನ್ ಮದ್ದಿನ ಮೇಲೆ ಅದಕ್ಕಂಟದ ಆಹಾರ ಕಣಗಳ ಮೇಲೆ ಪ್ರಭಾವ ಬೀರುವುದಿಲ್ಲ. ಅವನ್ನು ಜೀರ್ಣಿಸುವುದಿಲ್ಲ ಎಂಬುದು ಅಸಂಭವ. ಮಕ್ಕಳು ಆಕಸ್ಮಿಕವಾಗಿ ನುಂಗಿದ ನಾಣ್ಯ, ಮಣಿ, ಗೋಲಿ, ಗುಂಡಿಗಳು ಮಾರನೇ ದಿನ ಕಕ್ಕಸ್ಸಿನಲ್ಲಿ ಬಿದ್ದುಹೋಗುವುದು ಸಾಮಾನ್ಯ ಸಂಗತಿ. ಆದ್ದರಿಂದ ಜೀರ್ಣವಾಗದ ಸಣ್ಣ ವಸ್ತು ಜಠರದಲ್ಲಿ ಉಳಿಯುತ್ತದೆ ಎನ್ನುವುದು ಅಸಂಗತ. ಅಪರೂಪಕ್ಕೆ ವ್ಯಕ್ತಿ ಜಠರದಲ್ಲಿ ಹುಟ್ಟಿದಂದಿನಿಂದ ಬರುವ ನ್ಯೂನತೆ-ಚೀಲ ಅಥವಾ ಕೊಂಬು (ಪೌಚ್/ಡೈವರ್ಟಿಕುಲ) ಇದ್ದರೆ, ಅದರೊಳಗೆ ಸೇರಿದ ವಸ್ತು ಸ್ವಲ್ಪ ದಿನ ಅಲ್ಲೇ ಇರಲು ಸಾಧ್ಯವಿಲ್ಲ. ಆಗ ಕೂಡ ಅದಕ್ಕೆ ಸೋಂಕಾಗಿ, ಇಲ್ಲವೇ ಚೀಲ ಕಟ್ಟಿಕೊಂಡು ಜಠರದ ತುರ್ತುಸ್ಥಿತಿಯುಂಟಾಗುತ್ತದೆ. ಮದ್ದೀಡಿಗೆ ಒಳಗಾದವರಿಗೆಲ್ಲಾ ಈ ನ್ಯೂನತೆ ಇರಲು ಸಾಧ್ಯವಿಲ್ಲ.

**2. ಮದ್ದಿನ ಮೇಲೆ ಕೂದಲು ಬೆಳೆದುಕೊಳ್ಳುವುದು :** ಇದೊಂದು ಅಪದ್ಧ. ಕೂದಲು ಹುಟ್ಟಲು ಬೆಳೆಯಲು ನಮ್ಮ ಚರ್ಮದಲ್ಲಿ ಬಹು ಕ್ಲಿಷ್ಟವಾದ ವ್ಯವಸ್ಥೆ

ಇದೆ. ಈ ವ್ಯವಸ್ಥೆ (ರಕ್ತ ಪೂರೈಕೆ, ನರತಂತು ಜಾಲ ಇತ್ಯಾದಿ) ಇಲ್ಲದೆ ಬೇರೆಡೆ ಬೇರೆ ವಸ್ತುಗಳ ಮೇಲೆ ಕೂದಲು ಬೆಳೆಯುವುದನ್ನು ಊಹಿಸಲೂ ಸಾಧ್ಯವಿಲ್ಲ. ಆಹಾರ, ಪ್ರಾಣೀಜನ್ಯ ವಸ್ತುವಿನ ಮೇಲೆ ಬೂಸ್ಟು ಬೆಳೆಯುತ್ತದೆ ಅಥವಾ ಬ್ಯಾಕ್ಟರಿಯಾಗಳು ಬೆಳೆಯಬಲ್ಲವು ಅಷ್ಟೇ.

"ಹಾಗಾದರೆ ಮದ್ದು ತೆಗೆಯುವವನು, ಔಷಧ ಕೊಟ್ಟು ವಾಂತಿಯಲ್ಲಿ ಮದ್ದು ಬೀಳಿಸುತ್ತಾನಲ್ಲಾ ! ಅದೆಲ್ಲಿಂದ ಬಂತು? ರೋಗಿಯ ಜಠರದಿಂದ ಬರಲಿಲ್ಲವೇ? ನಾವೇ ಕಣ್ಣಾರೆ ನೋಡಿದೆವಲ್ಲಾ ಅವನು ವಾಂತಿಮಾಡಿದ್ದನ್ನು ಎಂದು ನೀವು ಹೇಳಬಹುದು. ಹೌದು ನೀವು ನೋಡಿದ್ದು ರೋಗಿ ವಾಂತಿಮಾಡಿದ್ದನ್ನು. ಆದರೆ ವಾಂತಿಯೊಳಗೆ ಮದ್ದು ಎಲ್ಲಿಂದ ಬಂತು ಎಂಬುದನ್ನು ನೀವು ನೋಡಲಿಲ್ಲ. ವಾಂತಿಯಲ್ಲೆ ಬಂತು ಎಂದು ತೆಗೆಯುವವನು ಹೇಳಿದ, ತೋರಿಸಿದ. ನೀವು ನಂಬಿದಿರಿ; ಇತರರೂ ನಂಬಿದರು. ವಾಂತಿಯಲ್ಲಿ ಮದ್ದು ಬೀಳುವಂತೆ ಮಾಡುವುದು ಮದ್ದು ತೆಗೆಯುವವನ ಕೈವಾಡ ಎಂದರೆ ಖಂಡಿತ ನೀವು ಹುಬ್ಬೇರಿಸುತ್ತೀರಿ. ಅವನು ಮಾಡುವುದಿಷ್ಟೆ. ಅಸಹ್ಯ ಹುಟ್ಟಿಸುವ ಅಥವಾ ವಾಂತಿಮಾಡಿಸುವ ದ್ರವವನ್ನು ರೋಗಿಗೆ ಕುಡಿಯಲು ಕೊಡುತ್ತಾನೆ. ವಾಂತಿಯಾಗುತ್ತದೆ. ಅವನು ಮದ್ದು ಎಂದು ಹೇಳಲಾದ ಗುಳಿಗೆಗಳನ್ನು ಮೊದಲು ತಯಾರು ಮಾಡಿಟ್ಟುಕೊಂಡಿರುತ್ತಾನೆ. ವಾಂತಿ ಮಾಡಿಸುವ ಗಡಿಬಿಡಿಯಲ್ಲಿ ಇತರರ ಕಣ್ಣು ತಪ್ಪಿಸಿ ಕ್ಷಣಾರ್ಧದಲ್ಲಿ ವಾಂತಿಯಲ್ಲಿ ಹಾಕುತ್ತಾನೆ. ಬಳಿಕ ಇದೋ ನೋಡಿ ಎಂದು ತೆಗೆದು ತೋರಿಸುತ್ತಾನೆ.

ಅನ್ನದ ಅಗುಳನ್ನೋ ರಾಗಿಹಿಟ್ಟನ್ನೋ ಉಪ್ಪಿಟ್ಟಿನ ಕಣಗಳನ್ನೋ ಅಂಟಿಸಿರುತ್ತಾನೆ. ಅವನ್ನು ತೋರಿಸಿ ರೋಗಿ ಯಾವಾಗ ಯಾರ ಮನೆಯಲ್ಲಿ ಅದನ್ನು ತಿಂದ ಎಂಬುದನ್ನು ಊಹಿಸಲು ರೋಗಿಯ ಮನೆಯವರಿಗೇ ಬಿಡುತ್ತಾನೆ. ಅವು ಜೀರ್ಣವಾಗದೇ ಅತ್ಯಂತ ಹೊಸದಂತಿರುವ ಗುಟ್ಟು ಇದೇ.

ಮದ್ದುತೆಗೆಯುವವನು ತನ್ನ ಔಷಧವನ್ನು ಕೊಟ್ಟು, ಹೋಗಿ ಇದನ್ನು ತಿಂದು ಮದ್ದು ಹೊರಬರಿಸಿಕೊಳ್ಳಿ ಎಂದು ಕಳುಹಿಸುವುದಿಲ್ಲ. ತಾನೇ ಅಥವಾ ತನ್ನ ಸಹಚರರೇ ಔಷಧ ಕೊಟ್ಟು ತಮ್ಮೆದುರೇ ವಾಂತಿಮಾಡಿಸುವದರ ರಹಸ್ಯ ಇದೆ.

" ಹಾಗಾದರೆ ನಮ್ಮ ಸಂಬಂಧಿಯೊಬ್ಬನಿಗೆ ಖಾಯಿಲೆ ಆಗಿತ್ತು. ಮದ್ದು ತೆಗೆಸಿದ ಮೇಲೆ ವಾಸಿಯಾಯಿತಲ್ಲ, ಅದಕ್ಕೇನಂತೀರಿ" ಎಂದು ನೀವು ಖಂಡಿತ ಪ್ರಶ್ನಿಸುತ್ತೀರಿ. ಹೌದು ನೀವು ನೋಡಿದಂತೆ ಅವನಿಗೆ ವಾಸಿಯಾಗಿದ್ದು ನಿಜ. ಆದರೆ ಅದಾಗಿದ್ದು ಖಾಯಿಲೆಗೆ ಕಾರಣವಾಗಿದ್ದ ಮದ್ದು ಹೊರಬಂದಿತು ಎಂಬುದರಿಂದ ಅಲ್ಲ. "ಮದ್ದು ಹೊರಬಂದಿತು, ಇನ್ನು ಭಯವಿಲ್ಲ, ನಾನು ಗೆದ್ದೆ, ಉಳಿದುಕೊಂಡೆ, ಇನ್ನು ಚೆನ್ನಾಗುತ್ತೇನೆ" ಎಂಬ ನಿಮ್ಮ ಸಂಬಂಧಿಯ ಆತ್ಮವಿಶ್ವಾಸ ಮತ್ತು ಮಾನಸಿಕ ನೆಮ್ಮದಿ ಆತ ವಾಸಿಯಾಗುವಂತೆ ಮಾಡಿತು. ಸಹಜವಾದ ವೈಪರೀತ್ಯದಿಂದಲೋ ಅಥವಾ ಸೇವಿಸುವ ಆಹಾರ ವ್ಯತ್ಯಾಸದಿಂದಲೋ ಆರೋಗ್ಯ ಕಡಿಮೆ ಆಗಿ ಅಥವಾ ಅಲ್ಪವುಟ್ಟದ ಸೋಂಕಿನಿಂದಲೋ (ಸಬ್ ಕ್ಲಿನಿಕಲ್ ಇನ್ ಫೆಕ್ಷನ್ ; ಕಡಿಮೆ ರೋಗಾಣುಗಳು ಶರೀರದ ಮೇಲೆ ದಾಳಿ ಮಾಡಿದಾಗ ಶರೀರದ ನಿರೋಧಕ ಶಕ್ತಿ ಸಾಧಾರಣವಾಗಿದ್ದಾಗ ರೋಗ ಲಕ್ಷಣಗಳು ಪ್ರಕಟಗೊಳ್ಳುವುದಿಲ್ಲ. ಆದರೆ ದೇಹ ಸ್ವಲ್ಪ ಘಾಸಿಗೊಳ್ಳುತ್ತದೆ) ಹಸಿವು ಕಡಿಮೆಯಾಗಿ ಸುಸ್ತು ಸಂಕಟ ಕಾಣಿಸಿಕೊಳ್ಳುತ್ತದೆ. ಖಾಯಿಲೆಯ ನಿರ್ದಿಷ್ಟ ಚಿನ್ಹೆಗಳಿರುವುದರಿಂದ ರೋಗಿಯಂತೆ ಮನೆಯವರೂ ವೈದ್ಯರೂ ಗೊಂದಲಕ್ಕೀಡಾಗುತ್ತಾರೆ. ಆಗ ಯಾರಾದರೂ ಇದು ಮದ್ದೀಡಿನ ಪ್ರಭಾವ ಎಂದರೆ, ಹೆದರಿದವನ ಮೇಲೆ ಹಾವೆಸೆದಂತಾಗುತ್ತದೆ. ಆತಂಕ ಭಯದಿಂದ ಶರೀರದ ಸಹಜಕ್ರಿಯೆಗಳು ಅಸ್ತವ್ಯಸ್ತವಾಗುತ್ತವೆ. ತೊಂದರೆಗಳು ಮತ್ತಷ್ಟು ಜಾಸ್ತಿಯಾಗುತ್ತದೆ. ಆಗ ಮದ್ದು ತೆಗೆಯುವವನು ವಾಂತಿಮಾಡಿಸಿ ಮದ್ದು ಹೊರ ಬಂತು ಇನ್ನು ಭಯವಿಲ್ಲ ಎಂದಾಗ, ರೋಗಿಯನ್ನು ಮೆಟ್ಟಿಕೊಂಡಿದ್ದ ರೋಗದ ಭೀತಿ ನಿವಾರಣೆ ಆಗಿ ಆತ ಚೇತರಿಸಿಕೊಳ್ಳುತ್ತಾನೆ. ಜೊತೆಗೆ ಮದ್ದು ತೆಗೆಯುವವನು ಕೊಟ್ಟ ಭರವಸೆ, ರೋಗಿಯು 'ನನಗಿನ್ನು ವಾಸಿಯಾಗುತ್ತದೆ' ಎಂಬ ಸ್ವಸೂಚನೆ ಮೆದುಳಿನ ಮೇಲೆ ಪರಿಣಾಮ ಬೀರಿ, ತೀಕ್ಷ್ಣ ನೋವು ನಿವಾರಕ ರಾಸಾಯನಿಕ ವಸ್ತು 'ಎಂಡಾರ್ಫಿನ್' ಮಿದುಳಿನಲ್ಲಿ ಉತ್ಪತ್ತಿಯಾಗುತ್ತದೆ. ಆದರಿಂದ ರೋಗಿಯ ತೊಂದರೆಗಳು ಕಡಿಮೆಯಾಗುತ್ತವೆ.

ನಮ್ಮ ಗ್ರಾಮಾತರ ಪ್ರದೇಶಗಳಲ್ಲಿ ಬಹುಪಾಲು ಮಾನಸಿಕ ಖಾಯಿಲೆಗಳಿಗೆ ಮದ್ದು, ಮಾಟವೇ ಕಾರಣ ಎಂದು ನಂಬಲಾಗುತ್ತದೆ. ಮಾನಸಿಕ ಖಾಯಿಲೆ ಬರಲು ಕಾರಣವೇನು ಎಂದು ತಿಳಿಯದ ಜನಸಾಮಾನ್ಯರು ಸಹಜವಾಗಿ,

ಅದುವರೆಗೆ ಚೆನ್ನಾಗಿದ್ದ ವ್ಯಕ್ತಿ ಪರಿಸರದಲ್ಲಿ ಯಾವ ಕಷ್ಟನಷ್ಟವಿಲ್ಲದಿದ್ದರೂ ಮನೋರೋಗಕ್ಕೆ ತುತ್ತಾಗುವುದನ್ನು ಕಂಡು, ಇದಕ್ಕೆ ಮದ್ದು ಮಾಟ ದೆವ್ವ ಭೂತಗಳೇ ಕಾರಣ ಎಂದು ತರ್ಕಿಸುತ್ತಾರೆ. ಮಾನಸಿಕ ಖಾಯಿಲೆ ಶುರುವಾಗಿ ಸಾಕಷ್ಟು ಕಾಲ ಕಳೆದನಂತರ ಮಾನಸಿಕ ಆಸ್ಪತ್ರೆಗೆ ರೋಗಿಯನ್ನು ಕರೆತರುವ ಪ್ರತಿಯೊಂದು ರೋಗಿಯ ಮನೆಯವರನ್ನು ಖಾಯಿಲೆಯ ಪ್ರಾರಂಭದಲ್ಲಿ ನೀವು ಏನು ಮಾಡಿದಿರಿ ಎಂದು ವಿಚಾರಿಸಿದರೆ ಅವರು ಸ್ವಾಮಿ ನಮಗೆ ಇದು ಖಾಯಿಲೆ ಅಂತ ಗೊತ್ತಾಗ್ಲಿಲ್ಲ. ನೋಡಿದವರು ಇದು ಮದ್ದು ಮಾಟದಿಂದ ಆದದ್ದು ಎಂದರು. ನಾವು ಹತ್ತಾರು ಕಡೆ ಹೋಗಿ ಮದ್ದು ತೆಗೆಸ್ದೋ, ಮಂತ್ರ ಹಾಕಿಸ್ದೋ, ಪೂಜೆ ಮಾಡಿಸ್ದೋ. ಹಣ ಖರ್ಚು ಮಾಡಿದ್ದೇ ಲಾಭ ಆಯ್ತು. ಕೊನೆಗೆ ಯಾರೋ ಬುದ್ಧಿವಂತರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಂದರು. ಇದೂ ಒಂದು ಪ್ರಯತ್ನ ಮಾಡೇ ಬಿಡೋಣ ಅಂತ ಬಂದೆವು ಎಂದು ಉತ್ತರಿಸುತ್ತಾರೆ.

.... ಹೀಗೆ ಜನಸಾಮಾನ್ಯರು ನಾನಾ ಬಗೆಯ ಮಾನಸಿಕ ಖಾಯಿಲೆಗಳು ಬಂದಾಗ ಅವು ಬಂದದ್ದು ಮದ್ದೀಡಿನಿಂದ ಅಥವಾ ಮಾಟ ಮಂತ್ರದಿಂದ ಎಂದು ನಂಬುವುದು ಕಂಡುಬರುತ್ತದೆ. ಮಾನಸಿಕ ಖಾಯಿಲೆಗಳು ಬರಲು ಮಿದುಳಿನ ಕಾರ್ಯಶೀಲತೆಯಲ್ಲಿನ ಏರುಪೇರೇ ಕಾರಣ ಎಂದು ಗೊತ್ತಿಲ್ಲದಿರುವುದೇ ಈ ನಂಬಿಕೆಗೆ ಕಾರಣ.

ಆದ್ದರಿಂದ "ಇವರಿಗೆ ಮದ್ದು ಹಾಕಿದ್ದಾರೆ, ಇವರು ಮಾಟ, ಮದ್ದು, ಮಂತ್ರಕ್ಕೆ ಬಲಿಯಾದವರು" ಎಂಬ ವ್ಯಕ್ತಿಗಳನ್ನು ಪರೀಕ್ಷಿಸಿದರೆ, ಅವರಲ್ಲಿ ಹೆಚ್ಚಿನ ಪಾಲಿನ ಮಂದಿ ಹಲವು ಬಗೆಯ ಮಾನಸಿಕ ಖಾಯಿಲೆಗಳಿಂದ (ಖಿನ್ನತೆ, ಇಚ್ಚಿತ್ತ ವಿಕಲತೆ, ಉನ್ಮಾದ ಬೇನೆ, ಆತಂಕ, ಮತಿಹೀನ ಸ್ಥಿತಿ ಇತ್ಯಾದಿ) ಅಥವಾ ಅಸ್ಪಷ್ಟ ಶಾರೀರಿಕ ಖಾಯಿಲೆಗಳಿಂದ ಬಳಲುತ್ತಿದ್ದು, ಅವರು ಅನುಭವಿಸುತ್ತಿರುವ ತೊಂದರೆಗಳು ಈ ಖಾಯಿಲೆಗಳಿಂದುಂಟಾದುವು ಎಂದು ಗೊತ್ತಾಗುತ್ತದೆ. ಆತಂಕ, ಭಯ, ಭೀತಿಯಿಂದ ಈ ತೊಂದರೆಗಳು ಜಾಸ್ತಿಯಾಗಿರುತ್ತವೆ.

ಆದುದರಿಂದ ಮದ್ದೀಡು ಹಾಕುವ ವಿದ್ಯಮಾನವು ನಿಜ; ನಂಬಬಹುದು ಎನ್ನುವುದಕ್ಕೆ ವೈಜ್ಞಾನಿಕ ಆಧಾರಗಳು ಸಿಗುವುದಿಲ್ಲ. ಹೆಚ್ಚಿನ ಪ್ರಕರಣಗಳಲ್ಲಿ ಜನ ಇತರ ಖಾಯಿಲೆಗಳನ್ನೇ ಮುಖ್ಯವಾಗಿ ಮಾನಸಿಕ ಖಾಯಿಲೆಗಳನ್ನು ಮತ್ತು ಅಸ್ಪಷ್ಟ ಶಾರೀರಿಕ ಖಾಯಿಲೆಗಳನ್ನು ಮದ್ದೀಡಿನ ಪರಿಣಾಮ ಎಂದು ತಪ್ಪಾಗಿ

ಗುರ್ತಿಸುವುದನ್ನು ಕಾಣುತ್ತೇವೆ. ಪ್ರಚಲಿತವಾಗಿರುವ ರೀತಿಯಲ್ಲಿ ಮದ್ದು ಜಠರದಲ್ಲೇ ಉಳಿದುಕೊಂಡು ಕೆಟ್ಟ ಪರಿಣಾಮವನ್ನು ಬೀರುತ್ತದೆ ಎನ್ನುವುದು, ನಮ್ಮ ದೇಹ ಕೆಲಸಮಾಡುವ ರೀತಿಯನ್ನು ನೋಡಿದರೆ ಮತ್ತು ಶರೀರಶಾಸ್ತ್ರದ ಪ್ರಕಾರ ಅಸಂಭವ. ಮದ್ದುತೆಗೆಯುವುದು ಒಂದು ವ್ಯವಸ್ಥಿತ ನಾಟಕ. ಮದ್ದು ತೆಗೆಯುವವನು ತನ್ನ ಕೈವಾಡದಿಂದ, ಹೇಳಿಕೆ ಭರವಸೆಗಳಿಂದ, ರೋಗಿಯ ಮೇಲೆ ಒತ್ತಡ ತಂದು, ಮದ್ದುತೆಗೆಯಲಾಯಿತು ಎಂದು ಮಾನಸಿಕವಾಗಿ ನಂಬಿಸಿ, ಅದರಲ್ಲಿ ಯಶಸ್ವಿಯಾಗುತ್ತಾನೆ. ನಂಬಿಕೆ, ನಿರೀಕ್ಷೆ, ಆತಂಕ, ಭಯದಿಂದ ತೊಂದರೆಗೀಡಾದ ಕೆಲವರು ಇದರಿಂದ ಗುಣಹೊಂದುತ್ತಾರೆ. ಅದಕ್ಕೆ ಪ್ರಚಾರಸಿಗುತ್ತದೆ. ನಿಜವಾದ ಖಾಯಿಲೆ ಇರುವವರು ಒಬ್ಬರಿಂದ ಇನ್ನೊಬ್ಬರಲ್ಲಿಗೆ ಹೋಗುತ್ತಾ, ಮದ್ದು ತೆಗೆಸಿ, ಗುಣಮಾಡಿಕೊಳ್ಳಲು ವಿಫಲ ಪ್ರಯತ್ನ ಮಾಡುತ್ತಾರೆ. ತಮ್ಮ ಹಣ, ಕಾಲವನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ. ಖಾಯಿಲೆ ಉಲ್ಬಣಗೊಳ್ಳುತ್ತದೆ.

ಅಂದ ಬಳಿಕ ಯಾರಾದರೂ ಮದ್ದುಹಾಕಿದ್ದಾರೆ ಎಂದರೆ ಸುಲಭವಾಗಿ ನಂಬಿಬಿಡಬೇಡಿ. ಮದ್ದುಹಾಕಲಾಗಿದೆ ಎನ್ನಲಾದ ವ್ಯಕ್ತಿಗೆ ಏನೇನು ತೊಂದರೆಗಳಿದ್ದಾವೆ ಎಂದು ವಿಚಾರಿಸಿ, ಒಳ್ಳೆಯ ವೈದ್ಯರಿಗೆ ಅಥವಾ ಮನೋವೈದ್ಯರಿಗೆ ತೋರಿಸಿ ಅವರ ಸಲಹೆ ಚಿಕಿತ್ಸೆಯನ್ನು ಕೊಡಿಸಿ. ವೃಥಾ ಆತಂಕ–ಭಯಗಳಿಗೆ ಈಡಾಗಬೇಡಿ. ವೈಜ್ಞಾನಿಕ ಮನೋಭಾವನೆಯನ್ನು ನಿಲುವನ್ನು ರೂಢಿಸಿಕೊಳ್ಳಿ.

* * *

# ೧೯. ಕೈಮದ್ದಿನ ಕುರಿತು ಇನ್ನಷ್ಟು ಮಾಹಿತಿಗಳು

ಡಾ॥ ಎಸ್.ಜಿ. ಹೆಗಡೆ

ಕೈಮದ್ದಿನ ಕುರಿತು ಬಹುಶಃ ನಮ್ಮ ರಾಜ್ಯದಲ್ಲೆಲ್ಲಾ ಒಂದೇ ರೀತಿಯ ಕಲ್ಪನೆ, ನಡೆದುಕೊಂಡು ಬಂದ ರೂಡಿ, ಕೈಮದ್ದು ತಯಾರಿಸುವ ವಿಧಾನಗಳ ಕುರಿತು ಇರುವ ಕಥೆಗಳು ಒಂದೇ ರೀತಿಯದಿದ್ದುದರಿಂದ ಇದಕ್ಕೇನಾದರೂ ಸತ್ಯಾಂಶದ ಹಿನ್ನೆಲೆ ಇದೆಯೇನೋ ಎಂಬಷ್ಟು ಮಟ್ಟಿಗಿನ ವ್ಯಾಪಕವಾದ ಭಾವನೆ ಜನತೆಯಲ್ಲಿ ತುಂಬಿದೆ. ಮಲೆನಾಡಿನಲ್ಲಂತೂ ಹೊರಗಿನಿಂದ ಬರುವ ನೌಕರಾದಿಯಾಗಿ ಯಾರೇ ಬರಲಿ ಬರುವಾಗಲೇ ಬಸ್ಸಿನಲ್ಲಿಯೋ ಇನ್ನಿತರ ಕಡೆಗಳಲ್ಲಿಯೋ ಇಂಥ ಊರಿನ ಇಂಥ ಮನೆಯಲ್ಲಿ ಮದ್ದು ಹಾಕುತ್ತಾರೆಂಬ ಮಾಹಿತಿಯನ್ನು ಪಡೆದೇ ಬರುವುದು. ಸ್ಥಳೀಯರಿಂದಲೇ ಅವರಿಗೆ ತಿಳಿಯುವುದು. ಆ ಕುರಿತು ಜನತೆಯಲ್ಲಿ ಹುದುಗಿರುವ ಅಳಿಸಲಾಗದ ಭಾವನೆ ಭೀತಿಯ ದ್ಯೋತಕ. ಸಾಮಾನ್ಯ ಜನರಂತೆ ಕಲಿತ ಜನ ನೌಕರಿವರ್ಗ ವಿಜ್ಞಾನ ಪದವೀಧರರಾದಿಯಾಗಿ ಹಿಂದೆ ಮುಂದೆ ವಿಚಾರಿಸದೆ ವೈಜ್ಞಾನಿಕವಗಿ ವಿಮರ್ಶಿಸದೇ ನಂಬುವುದು ಒಂದು ದುರ್ದೈವದ ಸಂಗತಿ. ವಿಮರ್ಶೆಯು ಒರೆಗಲ್ಲಿಗೆ ಹಚ್ಚಿದಾದ ಸತ್ಯಾಂಶವೇನೂ ಕಂಡುಬರುತ್ತಿಲ್ಲವಾದರೂ ರೋಗಿಗಳಿಗೆ ಈ ಕುರಿತು ಎಷ್ಟೇ ತಿಳಿವಳಿಕೆ ನೀಡಿದಾಗಲೂ ನಮ್ಮೆದುರು ಅವರು ಒಪ್ಪಿಕೊಂಡರೂ ಅವರಲ್ಲಿಯ ಭಾವನೆಯನ್ನು ಅಳಿಸಲಾಗುವುದಿಲ್ಲ. ಆ ಭಾವನೆ ಮತ್ತು ಭೀತಿ ಮುಕ್ತನಾದವನನ್ನು ನಾನು ಇದುವರೆಗೂ ನೋಡಿಲ್ಲ. ಕೈಮದ್ದಿಗೆ ವಾಂತಿಮಾಡಿಸಿಕೊಂಡ ಮೇಲೆಯೇ ಅವರಿಗೆ ಸಮಾಧಾನ. ಕುತ್ತಿಗೆಗೆ ಬೇರು ಕಟ್ಟಿಸಿಕೊಂಡ ಮೇಲೆಯೇ ಅವರಿಗೆ ನೆಮ್ಮದಿ.

ಆದರೆ ಇತರ ಕಡೆಗಳಲ್ಲಿ ಹೇಗೋ ಮಲೆನಾಡಿನಲ್ಲಿ ಮಾತ್ರ ಕೈಮದ್ದಿಗೆ ಚಿಕಿತ್ಸೆ ನೀಡುವ ಪರಂಪರೆಯಿಂದ ಬಂದ ಕೆಲವು ಮನೆತನಗಳೇ ಇದ್ದು ಅದೊಂದು ಸೇವಾಭಾವನೆಯಿಂದ ಮಾಡುತ್ತಿದ್ದಾರೆಯೇ ವಿನಃ ಜನರನ್ನು ವಂಚಿಸುವ ಹಾಗೂ ಅದರಿಂದ ಹಣಗಳಿಸುವ ಉದ್ದೇಶ ಅವರದಲ್ಲ. ಹೆಮ್ಮೆಯೊಂದನ್ನು ಬಿಟ್ಟರೆ ಇನ್ನಾವ ಪ್ರಯೋಜನವೂ ಅವರಿಗಿಲ್ಲ. ಅಲ್ಲದೆ ಅವರು ಕೊಡುವ ಔಷಧಿ ಏಕೆ ಕೊಡುತ್ತಾರೆ? ಅದು ಹೇಗೆ ಪ್ರಯೋಜನಕಾರಿ ಎಂಬುದು ಕೂಡ ಅವರಿಗೆ ತಿಳಿಯದು. ಅವರು ಕೂಡ ಕೈಮದ್ದನ್ನು ನಂಬುವ ಜನರೇ ಆಗಿರುತ್ತಾರೆ.

ಇನ್ನು ಮಲೆನಾಡಿನಲ್ಲಿ ಸಾಮಾನ್ಯವಾಗಿ ವೈದ್ಯರ ತಿಳುವಳಿಕೆಗೆ ಅಷ್ಟಾಗಿ ನಿಲುಕದ. ಆದರೆ ಅಷ್ಟಾಗಿ ಅಪಾಯಕಾರಿಯಲ್ಲದ ಕೆಲ ಲಕ್ಷಣಗಳಿಂದ ಕೂಡಿದ ರೋಗಿಗಳು ಒಂದು ಕಡೆ ನಿಯಮಿತ ಕಾಲದವರೆಗೆ ಚಿಕಿತ್ಸೆ ಮಾಡದೇ ನಾಲ್ಕಾರು ಡಾಕ್ಟರುಗಳನ್ನೋ ನೋಡಿ. ಗಿಡಮೂಲಿಕೆ ಔಷಧಿಗಳನ್ನೋ ನಡೆಸಿ ಗುಣಕಾಣದಾಗ. ಮದ್ದು ಎಂದು ಯಾರಾದರೂ ಹೇಳಿದಾಗ. ಆ ರೋಗಿ ಮದ್ದಿನ ಭ್ರಮೆಗೆ ಬೀಳುತ್ತಾನೆ. ಸಾಮಾನ್ಯವಾಗಿ ಇದಕ್ಕೆ ಚಿಕಿತ್ಸೆ ನೀಡುವ ವೈದ್ಯರುಗಳು ಬಳಸುವ ವನಸ್ಪತಿಯನ್ನು ಹೇಳುವುದಿಲ್ಲವಾದರೂ ಒಂದು ಮೂಲದಿಂದ ದೊರೆತ ಮಾಹಿತಿಯಂತೆ ಸುಗ್ಗೆ ಸೊಪ್ಪು ಅಥವಾ ಮದ್ದಾಲೆ ಗಿಡ ಎಂದು ಕರೆಯಲ್ಪಡುವ ಗಿಡದ ಎಳೆ ಎಲೆಯನ್ನು ಹಾಲಿನಲ್ಲಿ ಚೆನ್ನಾಗಿ ಅರೆದು ಕೊಡುತ್ತಾನೆ. ಇದನ್ನು ಕುಡಿದ ಕೆಲವೇ ನಿಮಿಷಗಳಲ್ಲಿ ವಾಂತಿಯಾಗುತ್ತದೆ. ಅಮಾಶಯಕ್ಕೆ ಸೇರಿದ ಹಾಲಿನ ಮಿಶ್ರಣದ ಈ ಸೊಪ್ಪು ಜಠರದ ಪೆಪ್ಸಿನ್ ಎಮಿಲಾಸ್ಸಿನ್ ಇನ್ನುಮುಂತಾದ ಅಂತ್ರರಸದೊಂದಿಗೆ ಕೂಡಿದಾಗ ಗಟ್ಟಿಯಾಗಿ ಜಠರವು ಅದನ್ನು ಇಟ್ಟುಕೊಳ್ಳಲಾಗದೇ ಹೊರಹಾಕುತ್ತದೆ. ಪೂರ್ಣ ಖಾಲಿಯಾಗುವವರೆಗೂ ವಾಂತಿಯಾಗುತ್ತದೆ. ಈ ವಾಂತಿಯಲ್ಲಿ ವಿರೂಪಗೊಂಡ ಈ ವಸ್ತುಗಳು ಚಿತ್ರವಿಚಿತ್ರವಾಗಿ ಕಂಡುಬಂದು ರೋಗಿಗೆ ಸ್ವಲ್ಪ ಮಟ್ಟಿನ ನೆಮ್ಮದಿ ನೀಡುತ್ತದೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಅನೀಮಿಯಾ ಕೊಕ್ಕೆ ಹುಳದ ಸಂಸರ್ಗ ಇನ್ನೂ ಮೊದಲ ಹಂತದಲ್ಲಿರುವ ಉದರ ಶೂಲೆಗಳಲ್ಲಿ ಕೆಲವೊಮ್ಮೆ ಆನಶಂಕೆಯೆಂದು ಕರೆಯುವ ರೋಗಗಳ ಪ್ರಾರಂಭಿಕ ಲಕ್ಷಣಗಳಿಗೂ ನೂರಕ್ಕೆ ನೂರು ಸಾಮ್ಯವಿರುವುದರಿಂದ ಕೊನೆಗೂ ಮೇಲಿನ ಈ ಮೂರರಲ್ಲಿ ಒಂದು ಖಾಯಿಲೆಗೆ ಯೋಗ್ಯ ಚಿಕಿತ್ಸೆ ಮಾಡಿದಾಗ ಖಾಯಿಲೆ ವಾಸಿಯಾಗುವುದೇ ವಿನಃ ಕೇವಲ ವಾಂತಿಮಾಡಿಸುವುದರಿಂದ ಗುಣವಾದುದನ್ನು ನಾನು ನೋಡಿಲ್ಲ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಡಾ॥ ಚಂದ್ರಶೇಖರ ಅವರು ಉಲ್ಲೇಖಿಸಿದಂತೆ ಈ ಕಾರಣಕ್ಕಾಗಿ ಮಾನಸಿಕ ತಜ್ಞರನ್ನು ಭೇಟಿ ಮಾಡುವ ಸಂದರ್ಭವಾಗಲೀ ಮಿದುಳಿನ ಇನ್ನಾವುದೇ ವಿಕಾರಗಳಾಗಲೀ ಈ ರೀತಿಯ ಲಕ್ಷಣಗಳಿಂದ ಆದದ್ದು ಕಡಿಮೆ. ರೋಗಿ ಕಳವಳದಿಂದ ಕಂಗಾಲಾಗಿ ಹಲವಾರು ಡಾಕ್ಟರುಗಳ ಕಡೆಗೆ ಎಡತಾಕುತ್ತಾನೆ ವಿನಃ ಮನೋರೋಗಿಯಾದದ್ದು ಕಡಿಮೆ.

ಇನ್ನು ಮದ್ದುಹಾಕುವುದು ನಿಜವೆಂದು ರೋಗಿಯನ್ನು ನಂಬಿಸಿ ವೈದ್ಯರಿಂದ ವಾಂತಿಮಾಡಿಸಿ ನಂತರ ಉಂಟಾಗುವ ಅಶಕ್ತ ನಿಸ್ತೇಜತನಕ್ಕೆ ತಾನು ಔಷಧಿ ಮಾಡಿ ವಾಸಿಮಾಡುತ್ತೇನೆಂದು ಹೇಳಿ ಅವರ ಮನಸ್ಸಿನ ಭ್ರಮೆಯನ್ನು ವಾಂತಿಯಿಂದ ಹೋಗಲಾಡಿಸಿ ನಂತರ ಯೋಗ್ಯ ಚಿಕಿತ್ಸೆಯನ್ನು ನೀಡಿ ದುಡ್ಡು ದೋಚುವ ಜಾಣ ವೈದ್ಯರನ್ನೂ ನಾನು ನೋಡಿದ್ದೇನೆ. ಕನ್ನಡ ಮಾತೃಭಾಷೆಯಲ್ಲದ ಕೆಲ ತಜ್ಞ ವೈದ್ಯರು ಕೂಡ ಫುಡ್ ಪಾಯ್ಸನ್‌ನಿಂದ ಉಂಟಾದ ಲಕ್ಷಣಗಳಲ್ಲಿ ಆಹಾರ ವಿಷವೆಂದು ರೋಗಿಗೆ ಹೇಳಿ ಅವರು ಅದು ಕೈಮದ್ದು ಎಂದು ತಿಳಿದು ಉಂಟಾದ ಅವಾಂತರಗಳು ಸಾಕಷ್ಟು ಇವೆ. ಇವೆಲ್ಲಕ್ಕೆ ಹಿನ್ನೆಲೆಯಾಗಿ ಹತ್ತಾರು ದಶಕಗಳ ಹಿಂದೆ ನಡೆದ ಕೆಲ ನೈಜ ಘಟನೆಗಳನ್ನು ಕೇಳಿದಾಗ ಯಾರೊಬ್ಬರ ಏಳಿಗೆಯನ್ನು ಸಹಿಸದಾದಾಗ, ದ್ವೇಷ ಉಂಟಾದಾಗ ಅಥವಾ ಇನ್ನಿತರ ಹತ್ತಿಕ್ಕುವ ಉದ್ದೇಶ ಹೊಂದಿದಾಗ ಅಂಥವರ ಮನೆಯಲ್ಲಿ ಊಟಮಾಡಿದ ಯಾವನೇ ವ್ಯಕ್ತಿಗೆ ಕಾಕತಾಳೀಯವಾಗಿ ವಾಂತಿ ಅಥವಾ ಇನ್ನಾವುದೇ ತೊಂದರೆಯುಂಟಾದಾಗ ಹಬ್ಬಿಸಿದ ಸುದ್ದಿ ಕಥೆಯಾಗಿ ಮಾರ್ಪಟ್ಟು ಅದರಿಂದ ನರಳಿದ ಕುಟುಂಬಗಳ, ಮುಗ್ಧ ರೋಗಿಗಳ ಸಂಖ್ಯೆ ಕಡಿಮೆ ಏನಿಲ್ಲ. ಇದೂ ಒಂದು ರೀತಿಯ ಸಾಮಾಜಿಕ ಶೋಷಣೆಯ ಹಿನ್ನೆಲೆಯ ಪಿಡುಗಾಗಿದ್ದು, ಅಜ್ಞಾನ, ವೈಜ್ಞಾನಿಕವಾಗಿ ವಿಚಾರಿಸುವ ಪ್ರವೃತ್ತಿಯ ಅಭಾವಗಳೇ ಕಾರಣವಾಗಿದ್ದು, ಈ ಕುರಿತು ಕೂಡ ವ್ಯಾಪಕವಾದ ಪ್ರಚಾರ ಮಾಧ್ಯಮಗಳಿಂದ ಪ್ರಚಾರಮಾಡಿ ನಿರ್ಮೂಲಗೊಳಿಸಬೇಕಾದ ಸಾಮಾಜಿಕ ಖಾಯಿಲೆಯಾಗಿದೆ ಎಂಬುದು ಮಾತ್ರ ನಿಸ್ಸಂದೇಹ.

* * *

# ೨೦. ಕೈಮದ್ದು : ನನ್ನ ಪರಿವೀಕ್ಷಣೆಯಲ್ಲಿ ಕಂಡಂತೆ

**ಎ.ಎನ್. ಶಿವರಾಮು**

ಜಾನಪದ ಜಗತ್ತು (5–1) ಪತ್ರಿಕೆಯ ಜನವರಿ–ಜೂನ್ 1984 ಡಿಸೆಂಬರ್ ಸಂಚಿಕೆಯಲ್ಲಿ ಡಾ॥ ಸಿ.ಆರ್. ಚಂದ್ರಶೇಖರ್ ಅವರು ಕೈಮದ್ದು ಹಾಕುವುದು ಎಷ್ಟು ನಿಜ ಎಂಬ ವಿಷಯವಾಗಿ ಚರ್ಚಿಸುತ್ತಾ ವೈಜ್ಞಾನಿಕ ಕಾರಣಗಳನ್ನು ಹೇಳುವುದರ ಮೂಲಕ ಇದೊಂದು ಭ್ರಮೆ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ; ಇರಬಹುದು. ಆದರೆ ಕೈಮದ್ದು ಹಾಕಿದ್ದಾರೆಂದು ನಂಬುವುದು ಸುಳ್ಳು, ಇದು ಕೇವಲ ಭ್ರಮೆ ಎಂದು ನಿರ್ಣಾಯಕವಾಗಿ ಹೇಳುವುದು ಕಷ್ಟ ಎನಿಸುತ್ತದೆ. ಲೇಖಕರು ಹೇಳಿರುವಂತೆ ಇದೊಂದು ಮಾನಸಿಕ ಭ್ರಮೆಯಾಗಿದ್ದು ಕೈಮದ್ದು ತೆಗೆಯುವ ನಾಟಕವಾಡಿದಲ್ಲಿ, ನಾನಿನ್ನು ಹುಶಾರಾಗುತ್ತೇನೆ ಎಂಬ ನಂಬಿಕೆಯಿಂದ ವಯಸ್ಕ ರೋಗಿ ಗುಣಮುಖವಾಗಬಹುದು. ಆದರೆ ಈ ಬಗ್ಗೆ ಏನನ್ನೂ ಯೋಚಿಸದಂತಹ ಚಿಕ್ಕ ಮಕ್ಕಳೂ ಹುಶಾರಾಗುತ್ತವಲ್ಲ! ಇದಕ್ಕೇನನ್ನುವುದು?

ಕೈಮದ್ದು ಹಾಕುವ ಸಂದರ್ಭ, ಹಾಕುವವರ ಸಂಪ್ರದಾಯ, ನಂಬಿಕೆ, ಅದನ್ನು ತಯಾರಿಸುವ ಮತ್ತು ಹಾಕುವ ಬಗೆ ಇತ್ಯಾದಿಗಳನ್ನೆಲ್ಲಾ ಲೇಖಕರು ಹೇಳಿದ್ದರೂ ಇನ್ನೂ ಕೆಲವಾರು ವಿಷಯಗಳನ್ನು ಇವರು ಗಮನಿಸಿಲ್ಲ. ಆದರೂ ಒಂದು ಜನಪದ ವೈದ್ಯೋಪಚಾರ ಪದ್ಧತಿಯ ವೈಜ್ಞಾನಿಕ ಅಧ್ಯಯನ ಇಲ್ಲಿ ನಡೆದಿದೆ ಎಂಬುದು ಸಂತೋಷದ ವಿಷಯ.

ಡಾ॥ ಚಂದ್ರಶೇಖರ್ ಅವರು ಕೈಮದ್ದು ತಯಾರಿಸಿಕೊಳ್ಳಲು ಹಲ್ಲಿ, ಅಂತೆಗೊದ್ದ, ಹಾವುರಾಣಿಗಳನ್ನ ಉಪಯೋಗಿಸುತ್ತಾರೆ ಎಂದಿದ್ದಾರೆ. ಆದರೆ ಕೈಮಸಗು ಅಥವಾ ಕೈಮದ್ದಿನ ತಯಾರಿಕೆಗೆ ಈ ಯಾವನ್ನೂ ಉಪಯೋಗಿಸುವಂತೆ ಕಂಡುಬರುವುದಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತಿನ 'ಕರ್ನಾಟಕ ಜನಪದ ವೈದ್ಯ ಕೋಶ' ಕ್ಕೆ ಮಾಹಿತಿ ಸಂಗ್ರಹಕ್ಕಾಗಿ ನಾನು ಮಂಡ್ಯ ಜಿಲ್ಲೆಯಲ್ಲಿ ನಡೆಸಿದ ಪರಿವೀಕ್ಷಣೆಯಲ್ಲಿ ನನ್ನ ಗಮನಕ್ಕೆ ಬಂದ ಈ ಕೈಮಸಗಿಗೆ ಸಂಬಂಧಿಸಿದ ಕೆಲವು ವಿಷಯಗಳು ಹೀಗಿವೆ: ಪರಿಸರಕ್ಕೆ ತಕ್ಕಂತೆ ಬಣ್ಣ ಬದಲಾಯಿಸಿಕೊಳ್ಳುವ ಆದರೆ ಸಾಮಾನ್ಯವಾಗಿ ಹಸಿರು ಬಣ್ಣದಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುವ ಸುರುಳಿಯಾದ ಬಾಲವುಳ್ಳ ಓತಿಕ್ಯಾತ (ಅಂತೆಗೊದ್ದ) ನನ್ನು ಹೋಲುವ ಗೋಸುಂಬೆ ಅಥವಾ ಊಸರವಳ್ಳಿ ಎಂಬ

ಪ್ರಾಣಿಯನ್ನು ಕೊಂದು ಲೇಖಕರು ಹೇಳಿರುವ ವಿಧನದಲ್ಲಿ ಕೈಮದ್ದು ತಯಾರಿಸಿಕೊಳ್ಳುತ್ತಾರೆ. ಆದರೆ ಕೈಮಸಗಿಗೆ ವಿಷಯುಕ್ತ ಬೇರು, ಎಲೆಗಳ ಪುಡಿ, ಹೆಣ್ಣಿನ ಋತುಸ್ರಾವದ ರಕ್ತ ಇತ್ಯಾದಿಗಳನ್ನು ಸೇರಿಸುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಮದ್ದು ಇಡುವಾಗ ಊಟ, ತಿಂಡಿಯಲ್ಲಿ ಒಂದು ಉಂಡೆ ಮಾಡಿ ಅದನ್ನು ಸೇರಿಸಿ ಒಂದು ಪಂಕ್ತಿಯ ಜನರಲ್ಲಿ ಯಾರಿಗೆ ಮದ್ದು ಹಾಕಬೇಕೊ ಅವರ ಹೆಸರು ಹೇಳಿ ಬಡಿಸಿದರೆ ಆ ವ್ಯಕ್ತಿಯ ತಟ್ಟೆಗೇ ಈ ಮದ್ದು ಬೀಳುತ್ತದೆ ಎಂದು ಹೇಳುತ್ತಾರೆ. ಈ ಕೈಮದ್ದು ದ್ರವರೂಪದಲ್ಲಿ ಇರುವುದರಿಂದ ಊಟಮಾಡುವಾಗ ಕಾಣುವುದಿಲ್ಲ.

ಕೈಮದ್ದು ಹಾಕಿರುವುದು ನಿಜ ಎಂದು ತಿಳಿಯುವುದಕ್ಕೆ ಕೆಲವು ಕ್ರಮಗಳನ್ನು ಅನುಸರಿಸುತ್ತಾರೆ. ಅವೆಂದರೆ, ರೋಗಿಯು ಬೆಳಗ್ಗೆ ಎದ್ದ ತಕ್ಷಣ ನೀರು ಮುಟ್ಟುವುದಕ್ಕೆ ಮೊದಲು ಅವನ ಅಂಗೈಮೇಲೆ ನುಗ್ಗೆ ಸೊಪ್ಪಿನ ರಸ ಹಿಂಡದರೆ ಅದು ಹೆತ್ತುಕೊಳ್ಳುತ್ತದೆ. ಬೆಳ್ಳಿ ನಾಣ್ಯವನ್ನು ಅಂಗೈ ಮೇಲೆ ಉಜ್ಜಿದರೆ ಕಪ್ಪಾಗುತ್ತದೆ. ರಾತ್ರಿ ಮಲಗುವಾಗ ಒಂದು ತೆಂಗಿನ ಕರಟದಲ್ಲಿ ಮೂತ್ರ ಮಾಡಿ ಹುರುಳಿಕಾಳನ್ನು ನೆನೆಹಾಕಿದರೆ ಬೆಳಿಗ್ಗೆ ಹೊತ್ತಿಗೆ ನಾಲ್ಕಾರು ಕಾಳುಗಳು ಮಾತ್ರ ಕಪ್ಪಾಗಿರುತ್ತವೆ. ಸೀಗೆ ಬೀಜಗಳನ್ನು ದವಡೆಗೆ ಒತ್ತಲಿಸಿ ಮಲಗಿ ಬೆಳಿಗ್ಗೆ ನೋಡಿದರೆ ಕೆಲವು ಚೆನ್ನಾಗಿ ನೆನೆದಿರುತ್ತವೆ (ಮೆದುವಾಗಿರುತ್ತವೆ). ಹುರುಳಿಕಾಳು ಮತ್ತು ಸೀಗೆ ಬೀಜಗಳು ಎಷ್ಟು ನೆನೆದಿವೆ ಎಂಬುದರ ಮೇಲೆ ಮದ್ದು ಹಾಕಿ ಎಷ್ಟು ದಿನಗಳಾಗಿವೆ ಎಂಬುದನ್ನು ಗುರುತಿಸಲಾಗುತ್ತದೆ. ಕೈಮದ್ದು ಹಾಕಲಾಗಿದೆ ಎಂಬ ವ್ಯಕ್ತಿಗೆ ಊಟ, ತಿಂಡಿ, ಕಾಫೀ, ಟೀ ಇತ್ಯಾದಿಗಳಲ್ಲಿ ಯಾವುದು ಊಟಮಾಡಲು ಅಥವಾ ಕುಡಿಯಲು ಒಗ್ಗುವುದಿಲ್ಲವೋ ಅದರಲ್ಲೇ ಕೈ ಮಸಗು ಕೊಡಲಾಗಿದೆ ಎನ್ನುತ್ತಾರೆ. ಹಳ್ಳಿಗಳಲ್ಲಿ ಮಕ್ಕಳು ಬೆಕ್ಕಿನೊಡನೆ ಆಟವಾಡುತ್ತಿದ್ದರೆ ಹಿರಿಯರು ಕೈಮಸಗು ಆಗುತ್ತದೆಂಬ ನಂಬಿಕೆಯಿಂದ ಅವರಿಗೆ ಬೆಕ್ಕನ್ನು ಬಿಟ್ಟುಬಿಡಲು ಹೇಳುತ್ತಾರೆ.

ಕೈಮದ್ದು ತೆಗೆಯುತ್ತೇವೆಂದು ಹೇಳಿಕೊಂಡು ಅದನ್ನೇ ಒಂದು ವೃತ್ತಿಯಾಗಿಸಿಕೊಂಡಿರುವ ಕೆಲವರು ಮಾತ್ರ ಡಾ॥ ಚಂದ್ರಶೇಖರ್ ಹೇಳಿರುವಂತೆ ವಾಂತಿಮಾಡಿಸುತ್ತಾರೆ ನಿಜ. ಆದರೆ ಏನೂ ಪ್ರತಿಫಲ ಬಯಸದ ಹಳ್ಳಿಯ ಅನುಭವಸ್ಥರನೇಕರು ಇದೊಂದು ಪವಿತ್ರ ಕಾರ್ಯ ಎಂದು ತಿಳಿದಿರುತ್ತಾರೆ. ಗರುಕಲು ಸೊಪ್ಪು, ಒಂದಲಗನ ಸೊಪ್ಪು, ಕಕ್ಕೆ ಸೊಪ್ಪು ಮುಂತಾದ ಹಸಿರಿನೊಂದಿಗೆ

ಏಲಕ್ಕಿಯನ್ನು ಇಡಿದ್ದು ಗುಳಿಗೆಗಳನ್ನು ತಯಾರಿಸಿಕೊಂಡು ಮಾಂಸಾಹಾರಿಗಳಿಗಾದರೆ ಕೋಳಿ ಸಾರಿನಲ್ಲಿ, ಸಸ್ಯಾಹಾರಿಗಳಿಗಾದರೆ ಬೇಳೆ ಸಾರು, ಹುರುಳಿಸಾರು, ಹಸುವಿನ ಹಾಲು ಇತ್ಯಾದಿಗಳಲ್ಲಿ ಔಷಧಿ ಕುಡಿಸುತ್ತಾರೆ. ಬಾಳೇ ಹಣ್ಣು ಮತ್ತು ವೀಳ್ಯದೆಲೆಗಳೊಂದಿಗೂ ಔಷಧಿ ಕೊಡುತ್ತಾರೆ.

ಔಷಧಿ ಕುಡಿಸುವ ಕ್ರಮವೇ ವಿಶಿಷ್ಟ. ಸಾರಿನಲ್ಲಿ ಔಷಧಿ ಮತ್ತು ಸ್ವಲ್ಪ ಹೆಚ್ಚಾಗಿ ಹಸುವಿನ ತುಪ್ಪ ಬೆರೆಸಿ ರೋಗಿಯನ್ನು ಸ್ನಾನಕ್ಕೆ ಕುಳ್ಳರಿಸಿ ತಲೆಯ ಮೇಲೆ ನಾಲ್ಕು ಚಂಬು ಬಿಸಿನೀರು ಹಾಕಿ ಔಷಧಿ ಕುಡಿಸಿ ನಂತರ ಸ್ನಾನ ಮಾಡಿಸಿ ಮಲಗಿಸುತ್ತಾರೆ. ಔಷಧಿಯೊಂದಿಗೆ ಕೋಳಿ ಮೇಕೆಯಲ್ಲಿ ಸಿಗುವ ಕಲ್ಲಿನ ಪುಡಿ ಮಾತ್ರ ಮಾಂಸಹಾರಿಗಳಿಗಾಗಲೀ ಸಸ್ಯಾಹಾರಿಗಳಿಗಾಗಲಿ ಸೇರಬೇಕು. ಔಷಧಿಯನ್ನು ರೋಗಿಗೆ ವಾಂತಿಯಾಗುವಂತೆ ಮತ್ತು ಹೊಟ್ಟೆಯಲ್ಲಿ ಬೆಳೆದ ಕೈಮದ್ದಿನ ಗಡ್ಡೆ ಹಾಗೆಯೇ ಕರಗಿಹೋಗುವಂತೆಯೂ ಕುಡಿಸುವುದು ಹಾಗೂ ನುಂಗಿಸುವುದು ಉಂಟು.

ಈ ಕೈಮದ್ದು ರೋಗವನ್ನು ತಡೆಗಟ್ಟುವ ವಿಧಾನವೂ ಉಂಟು. ಯಾರಮನೆಯಲ್ಲೇ ಆಗಲಿ ಏನಾದರೂ ತಿಂದರೆ, ಕುಡಿದರೆ, ಕೂಡಲೇ ಏಲಕ್ಕಿ ಕಾಳನ್ನು ಬಾಯಲ್ಲಿ ಹಾಕಿಕೊಳ್ಳಬೇಕು. ಏಲಕ್ಕಿಯನ್ನು ನೆನಸಿಕೊಂಡರೂ ಸಾಕು ಎಂದು ಹೇಳುತ್ತಾರೆ.

* * *

## ೨೧. ಆಮಾಂಶ

ಎಲ್.ಆರ್. ಹೆಗಡೆ

ರಕ್ತಾತಿಸಾರವಾದ ಅನಂತರ ಅಥವಾ ಅದರ ಸಂಗಡಲೇ ಮಲದಲ್ಲಿ ಎಣ್ಣೆಯಂಥ ಅಥವಾ ಸಿಂಬಳದಂಥ ದ್ರವವು ಹೊರಬೀಳುತ್ತದೆ. ಪ್ರತ್ಯೇಕವಾಗಿಯೂ ಬರಬಹುದು. ಇದಕ್ಕೆ ಆಮಾಂಶ ಎಂದು ಹೇಳುತ್ತಾರೆ.

ಇದರಿಂದ ಆಶಕ್ತತೆಯಾಗುತ್ತದೆ. ರಕ್ತ ಕ್ಷೀಣತೆಯುಂಟಾಗುತ್ತದೆ. ಅಲಕ್ಷಿಸಿದರೆ, ಮೈಕೈಯಲ್ಲಿ ಅಲ್ಲಲ್ಲಿ ಸಂದುಗಳಲ್ಲಿ ನೋವು ಸಹ ಆಗುತ್ತದೆ. ಉಷ್ಣ ಪ್ರದೇಶದಲ್ಲಿ ಹೆಚ್ಚಾಗಿ ಬಾಧಿಸುವ ಈ ರೋಗವು ಹಲವು ರೋಗಗಳಿಗೆ ಮೂಲವಾಗಿದೆಯೆಂದು ಕೆಲವು ಡಾಕ್ಟರರ ಅಭಿಪ್ರಾಯವಿದೆ. ಪ್ರಾರಂಭಾವಸ್ಥೆಯಲ್ಲಿ ಸರಿಯಾದ ಉಪಚಾರವಾಗದಿದ್ದರೆ ಮುಂದೆ ಅನ್ನಕೋಶದಲ್ಲಿ ಹುಣ್ಣಾಗಿ ರೋಗವನ್ನು ವಾಸಿಮಾಡುವುದೇ ಕಷ್ಟವಾಗುತ್ತದೆ.

ಹಗುರವಾದ ಆಹಾರ ಇದಕ್ಕೆ ಅವಶ್ಯ. ಮೆಣಸು, ಹಸಿಮೆಣಸು, ಹಸಿ ಶುಂಠಿ ಇವನ್ನು ಅತಿಯಾಗಿ ಸೇವಿಸಬಾರದು. ಶುಂಠಿಯು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಅಷ್ಟುಮಟ್ಟಿಗೆ ರೋಗಕ್ಕೆ ಉಪಯುಕ್ತವಾಗಿದೆ. ಪ್ರಮಾಣ ಮೀರಿದರೆ ವಿರುದ್ಧ ಪರಿಣಾಮ ಕೊಡುತ್ತದೆ.

ಹಗುರವಾದ ಹೆಚ್ಚು ಆಹಾರ ತಕ್ಕೊಳ್ಳಲೂಬಾರದು. ಉಪವಾಸ ಮಾಡಲೂ ಬಾರದು. ಇದಕ್ಕೆ ಕಡೆದ ಮಜ್ಜಿಗೆಯು ಬಹಳ ಹಿತಕಾರಿಯಾಗಿದೆ.

ಹಾಲನ್ನು ಹೆಚ್ಚು ಸೇವಿಸುವುದು, ಬೆಂಡೆಕಾಯಿ, ಕೆಂಪು ಹರಿವೆ ಸೊಪ್ಪು, ತೊಗರಿಬೇಳೆ, ಕಡಲೆ ಹಿಟ್ಟಿನಿಂದ ಮಾಡಿದ ತಿಂಡಿ, ಹೆಸರುಕಾಳು, ಕಡಲೆಕಾಳು, ಕಾಡು ಕೆಸುವಿನ ಮೇಲೊಗರ, ಗೋದಿಯ ಹಿಟ್ಟಿನ ಚಪಾತಿಗಳನ್ನು ಹೆಚ್ಚು ಸೇವಿಸುವುದು, ಕೆಂಜೋಳ, ಮೊಗೆ ಕಾಯಿ ಮೇಲೊಗರ ಇವು ಇದಕ್ಕೆ ಹಿತಕರವಲ್ಲ.

ದಾಳಿಂಬರ ಹಣ್ಣಿನ ಕವಚ, ಹಣ್ಣಿನ ಸೇವನೆ, ದಾಳಿಂಬರ ಗಿಡದ ಕುಡಿ, ಬಿಲ್ವಪತ್ರೆಯ ಕುಡಿ, ಬಿಲ್ವದ ಹಣ್ಣಿನ ತಿರುಳು, ಎಳೇ ಕರಿ ಬಾಳೆಕಾಯಿ, ಎಳೇ ಬದನೇಕಾಯಿ, ಹನೆಮರದ ಕಾಯಿಯ ತಿರುಳು ಮತ್ತು ಬೆಳ್ಳುಳ್ಳಿ, ಉಳ್ಳಾಗಡ್ಡೆ ಇವು ಪ್ರಯೋಜಕವಾಗಿವೆ.

ದಾಳಿಂಬರ ಹಣ್ಣಿನ ಕವಚವನ್ನು ಮಜ್ಜಿಗೆಯಲ್ಲಿ ತೇದು ಕುಡಿಯಬೇಕು. ಕೊಡಸಿಗದ ಬೇರನ್ನು ಮಜ್ಜಿಗೆಯಲ್ಲಿ ತೇದು ಸೇವಿಸಬೇಕು. ವರ್ಲೆ ಹುತ್ತಿನ

ಮಣ್ಣನ್ನು ಅಥವಾ ಮಿದುವಾದ ಬೇರೆ ನುಣುಪು ಮಣ್ಣನ್ನು ನೀರಿನೊಡನೆ ಕಲಸಿ, ಹೊಟ್ಟೆಯ ಮೇಲೆ ಲೇಪಮಾಡುವುದು ಲಾಭಕರವಾಗಿದೆ.

ಅತಿವಿಷ (ಇದು ವಿಷವಲ್ಲ) ವನಸ್ಪತಿಯ ವನಸ್ಪತಿ ಔಷಧ ಮಾರಾಟಗಾರರಲ್ಲಿ ದೊರೆಯುತ್ತದೆ. ಅದನ್ನು ಲಿಂಬೆರಸದೊಡನೆ ತೇದು ಸೇವಿಸಬೇಕು. ಚಹದ ಅರ್ಕವನ್ನು (ಕಣ್ಣನ್ನು) ಹಾಲನ್ನೂ ಸಕ್ಕರೆಯನ್ನೂ ಸೇರಿಸದೆ ಕುಡಿಯಬೇಕು. ಅನೇಕ ವನಸ್ಪತಿಗಳಲ್ಲಿ ಯಾವುದಾದರೊಂದನ್ನು ಸೇರಿಸಿ, ತಂಬುಳಿ (ತುಸು ಹುಳಿ) ಮಾಡಿಕಂಡು ಮೊದಲು ಅನ್ನದೊಡನೆ ಉಣ್ಣಬೇಕು. ತೆಂಗಿನ ಕಾಯಿ ತುರಿ, ಮಜ್ಜಿಗೆ ಈ ತಂಬುಳಿಯಲ್ಲಿ ಸೇರುತ್ತವೆ. ದಾಳಿಂಬರ ಕುಡಿಗಳನ್ನು ಕೆಲವನ್ನು ತುಪ್ಪದಲ್ಲಿ ಸೇರಿಸಿ ಹುರಿದು, ತೆಂಗಿನಕಾಯಿ ತುರಿಯೊಡನೆ ಸೇರಿಸಿ, ಒರಳು ಕಲ್ಲಿನಲ್ಲಿ ಬೀಸಿ, ಮಜ್ಜಿಗೆ ಸೇರಿಸಿದರೆ ದಾಳಿಂಬರ ಕುಡಿ ತಂಬುಳಿಯಾಗುತ್ತದೆ. ಇದರಂತೆಯೇ ಕೌಲ ಮರದ ಮೇಲೆ ಬೆಳೆದ ಬಂದಳಿಕೆಯನ್ನೂ ಅಥವಾ ನೆಲನೆಲ್ಲಿ ಮತ್ತು ಭೃಂಗರಾಜ (ಕಾಡಿಗ್ಗರಗ) ಕುಡಿಯನ್ನೂ ಅಥವಾ ಅತ್ತಿಗಿಡದ ಚಿಗುರುಗಳನ್ನೂ ಇಲ್ಲವೆ ತೀರ ಎಳೆಯ ಕಾಯಿಗಳನ್ನೂ ಗಜ್ಜುಗದ ಗಿಡದ ಚಿಗುರೆಲೆಗಳನ್ನೂ ಇದರಂತೆ ತಂಬುಳಿಗೆ ಬಳಸಬೆಕು.

ಮೆಂತ್ಯದ ಹಿಟ್ಟನ್ನು ಒಂದು ಟೇಬಲ್ ಚಮಚೆ, ಓಮದ ಹಿಟ್ಟನ್ನೂ ಒಂದು ಚಮಚೆಯಷ್ಟು ತೆಗೆದುಕೊಂಡು, ಬೆಣ್ಣೆಯ ಸಂಗಡ ಸೇರಿಸಿ, ಮೊದಲಿಗೆ ಅನ್ನ ಕಲಸಿ ಉಣ್ಣಬೇಕು. ಅಥವಾ ಮುರಗಲ ಬೀಜದಿಂದ ತಯಾರಿಸಿದ ತುಪ್ಪವನ್ನು ಬೆಣ್ಣೆಯ ಸಂಗಡ ಸೇರಿಸಿ ಅನ್ನದೊಡನೆ ಕಲಸಿ ಪ್ರಾರಂಭದಲ್ಲಿ ಊಟ ಮಾಡಬೇಕು.

ಆಯುರ್ವೇದದಲ್ಲಿ ಮೇಥಿಯೋದಕ, ದಾಡಿಮಾಷ್ಟಕ ಚೂರ್ಣ ಇವೂ ಸೌಭಾಗ್ಯ ಶುಂಠಿ (ಶುಂಠಿಯ ಲೇಹ್ಯ)ಯೂ ಚ್ಯವನಪ್ರಾಶಾವ ಲೇಹ್ಯವೂ ಅಪಾಯದ ಭೀತಿಯಿಲ್ಲದೆ ತೆಗೆದುಕೊಳ್ಳಬಹುದಾದ ಔಷಧಗಳಾಗಿವೆ. ಹೀಗೆಯೇ ಮಾದಲ ಕಂಚಿ ಹಣ್ಣಿನ ಲೇಹ್ಯವೂ ಗುಣಕಾರಿಯಾಗಿದೆ.

ನಿದ್ರೆಗೆಡದಿರುವುದು, ಅತಿಯಾಗಿ ಕಾಫಿ ಸೇವನೆಮಾಡದಿರುವುದು ಈ ರೋಗದ ಹತೋಟಿಗೆ ಅಗತ್ಯವಾಗಿದೆ. ಊಟ ಮಾಡಿದ ಕೂಡಲೆ ವೇಗವಾಗಿ ನಡೆವುದಾಗಲಿ, ಕಠಿಣ ಕೆಲಸ ಮಾಡುವುದಾಗಲಿ ಕೂಡದು.

* * *

# ೨೨. ದನಗಳ ರೋಗಗಳು ಹಾಗೂ ಚಿಕಿತ್ಸೆ

ಡಾ|| ಎಂ.ಎಸ್. ವಾಲಿ

**ಕೃಷಿಕರು ಸಾಕುವ ದನಗಳಿಗೆ ಬರುವ ರೋಗಗಳು ಹಾಗೂ ಅವುಗಳ ಚಿಕಿತ್ಸೆಯನ್ನು ಈ ಲೇಖನದಲ್ಲಿ ಸೂಚಿಸಲಾಗಿದೆ.**

–ಸಂ.

ಒಕ್ಕಲುತನ ಪ್ರಧಾನವಾದ ನಮ್ಮ ದೇಶದಲ್ಲಿ ಪ್ರತಿಶತ 80ರಷ್ಟು ಜನರು ಕೃಷಿಯನ್ನೇ ಅವಲಂಬಿಸಿ ಜೀವನ ಸಾಗಿಸುವುವರಾಗಿದ್ದಾರೆ. ಕೃಷಿಕರಿಗೆ ದನಗಳೇ ಸಂಪತ್ತು. ಬೇಸಾಯದ ಕೆಲಸಕ್ಕಾಗಿ ಎತ್ತು, ಹೋರಿ, ಕೋಣಗಳನ್ನೂ, ಹೈನುಗಾರಿಕೆಗಾಗಿ ಆಕಳು, ಎಮ್ಮೆ, ಆಡುಗಳನ್ನೂ ಒಕ್ಕಲಿಗರು ಸಾಕುವುದುಂಟು. ದನಗಳನ್ನೇ ಕೊಳ್ಳುವ, ವಿಕ್ರಯಿಸುವ ಉದ್ಯೋಗದ ಕೆಲವರನ್ನು ನಾವು ಕಾಣುತ್ತೇವೆ. ವಾರಕ್ಕೊಮ್ಮೆ ಕೂಡುವ ದನಗಳ ಸಂತೆ ಹಾಗೂ ವರುಷಕ್ಕೊಮ್ಮೆ ನೆರೆಯುವ ದನಗಳ ಜಾತ್ರೆಗಳಲ್ಲಿ ಇಂತಹ ದನಗಳ ವ್ಯಾಪಾರಿಗಳು ವಿಶೇಷವಾಗಿ ಕಂಡು ಬರುತ್ತಾರೆ.

ಒಕ್ಕಲಿಗರು ದನಗಳನ್ನು ವಿಶೇಷ ಆಸಕ್ತಿಯಿಂದ ಜೋಪಾನಮಾಡುತ್ತಾರೆ. ದನಗಳು ಒಕ್ಕಲಿಗರ ಜೀವನಾಡಿಗಳು. ದನಗಳ ಮಹತ್ವವನ್ನು 'ಹೆಂಡತಿ ಇಲ್ಲದವನಿಗೆ ಮನೆ ಇಲ್ಲ, ದನಾ ಇಲ್ಲದವನಿಗೆ ದಗದ (ಕೆಲಸ) ಇಲ್ಲ, ಎಂಬ ಗಾದೆ ಸಾರಿ ಹೇಳುತ್ತದೆ. ಜನರಿಗೆ ಆಕಸ್ಮಿಕವಾಗಿ ರೋಗಗಳು ಬರುತ್ತವೆ. ಆಗ ಉಪಚಾರ ಅನಿವಾರ್ಯವಾಗುತ್ತದೆ. ಹಳ್ಳಿಗಳಲ್ಲಿ ದನಗಳನ್ನು ಉಪಚರಿಸಿ ಗುಣಪಡಿಸುವ ದೇಶಿ ವೈದ್ಯರಿರುವರು. ಇವರು ಉಚಿತವಗಿ ಚಿಕಿತ್ಸೆ ಮಾಡುವರು. ಗಿಡಮೂಲಿಕೆಗಳನ್ನೇ ಇವರು ಔಷಧಕ್ಕಾಗಿ ಬಳಸುತ್ತಾರೆ. ಅನುಭವದಿಂದ ಬಳಸುತ್ತ ಬಂದ ಈ ಔಷಧಗಳು ಫಲಕಾರಿಯಾಗುವುದಲ್ಲದೆ ರೋಗಪೀಡಿತ ದನಗಳು ಬೇಗ ಗುಣಮುಖವಾಗುತ್ತವೆ. ಇಲ್ಲಿ ದನಗಳ ಕೆಲವು ರೋಗಗಳು ಹಾಗೂ ಚಿಕಿತ್ಸೆ ಕುರಿತು ಬರೆಯಲಾಗಿದೆ.

1. **ಬಾಯಿಬೇನೆಗೆ** : ಹೊನ್ನವರಿ ತಪ್ಪಲನ್ನು ಮಜ್ಜಿಗೆಯಲ್ಲಿ ಅರೆದು, ಅರ್ಧ ತಂಬಿಗೆಯಷ್ಟು ರಸ ತೆಗೆದು ದಿನಾಲು 2 ಸಾರೆಯಂತೆ ಮೂರು ದಿವಸ ಕುಡಿಸಬೇಕು. ದಿನಾಲು ಅರ್ಧ ಕಿಲೋ ಒಳ್ಳೆಣ್ಣೆ 2–3 ದಿವಸ ಕುಡಿಸಬೇಕು. ಕಳೆತ ಬಾಳೆಹಣ್ಣು 8–10 ಒಂದೆರಡು ಸಾರೆ ತಿನಿಸಬೇಕು. ಕೊತ್ತಂಬರಿ ಸೂಡನ್ನು ಒಳ್ಳೆಣ್ಣೆಯಲ್ಲಿ

ಅದ್ದಿ 2–3 ಸೂರು ಒಮ್ಮೆ ತಿನಿಸಬೇಕು. ಪ್ರತಿದಿನ 2–3 ಸಾರೆ ಬಾಯಿಬೇನೆ ಪೀಡಿತ ದನದ ಬಾಯಿಯನ್ನು ಸ್ವಚ್ಛವಾಗಿ ತೊಳೆದು ಅರಿಶಿನಪುಡಿ ಮತ್ತು ಒಳ್ಳೆಣ್ಣೆ ಕೂಡಿಸಿ ಕಲೆಸಿ ನಾಲಿಗೆಗೆ ಸವರಬೇಕು.

2. **ಗಂಟಲ ಬೇನೆಗೆ** : ಟರ್ಪೆಂಟಾಯಿನ್ ಮತ್ತು ಒಳ್ಳೆಣ್ಣೆ ಕೂಡಿಸಿ ಗಂಟಲಿನ ಹೊರಭಾಗಕ್ಕೆ ಹಚ್ಚಿ ಕಾವು ಕೊಡಬೇಕು.

3. **ಕುಕ್ಕಡಿಗೆ** : ಕಂಬಳಿ ತುಣುಕು (ಕೋರಿ) ಸುಟ್ಟು ಬೆಣ್ಣೆಯಲ್ಲಿ ಕಲೆಸಿ, ಅರಿಶಿನ ಪುಡಿ ಕೂಡಿಸಿ ಆ ಮಿಶ್ರಣವನ್ನು ನಾಲಿಗೆಗೆ ಹಚ್ಚಿ ಕೆಂಪು ಹಂಚಿನಿಂದ ನಿಧಾನವಾಗಿ ತಿಕ್ಕಬೇಕು. ಇಲ್ಲವೆ ಉಪ್ಪಿನಕಾಯಿ ರಸ, ಬೆಲ್ಲ, ಅಜಿವಾನ ಕೂಡಿಸಿ ಅರೆದು ನಾಲಿಗೆಗೆ ಹಚ್ಚಿ ಬೆರಳುಗಳಿಂದ ತಿಕ್ಕಬೇಕು. ಈ ರೋಗಪೀಡಿತ ದನಕ್ಕೆ ಬಿಸಿ ನೀರನ್ನೇ ಕುಡಿಸಬೇಕು.

4. **ಗುಂಡಿಗೆ ರೋಗಕ್ಕೆ** : ಮೆಟ್ಟುಗಾಲಿನಿಂದ ಬಿರುಸಾಗಿ ಒದೆಯಲು ದನವು ರೋಗ ಮುಕ್ತವಾಗುವುದು. ಈ ರೋಗ ಪೀಡಿತ ದನಕ್ಕೆ ಕೋಡಿನ ಮೇಲೆ ಸಾವಕಾಶವಾಗಿ ಗುಣಿಯಿಂದ ಬಡಿಯಬೇಕು ಅಥವಾ ಹುಣಸೇಹಣ್ಣಿನ ರಾಡಿಯನ್ನು ಮಜ್ಜಿಗೆಯಲ್ಲಿ ತಯಾರಿಸಿ 2 ತಂಬಿಗೆಯಷ್ಟು ಗೊಟ್ಟ ಹಾಕಬೇಕು.

5. **ಕಣ್ಣಲ್ಲಿ ಹೂವು ಆದರೆ** : ಕುಂಕುಮವನ್ನು ಬೆಣ್ಣೆ ಇಲ್ಲವೆ ಒಗೆಯುವ ಸಾಬೂನಿನ ನೊರೆಯಲ್ಲಿ ಕೂಡಿಸಿ ಅದನ್ನು ದಿನಾಲು 2–3 ಸಾರೆ ಕಣ್ಣಲ್ಲಿ ಹಾಕಬೇಕು. 2–3 ದಿನಗಳಲ್ಲಿ ರೋಗ ವಾಸಿಯಾಗುವುದು.

6. **ಹೊಟ್ಟೆ ಕಡಿತಕ್ಕೆ** : 250 ಗ್ರಾಂ ಗಾಣದ ಎಣ್ಣೆಯಲ್ಲಿ ಒಂದು ಬಾಟ್ಲಿ (200) ಮಿಲಿ ಟರ್ಪೆಂಟಾಯಿನ್ ಕೂಡಿಸಿ ಗೊಟ್ಟಹಾಕಬೇಕು. ಅಜಿವಾನ, ಬೆಲ್ಲ, ಉಳ್ಳಿಗಡ್ಡಿ (ಈರುಳ್ಳಿ) ಕೂಡಿಸಿ ತಿನ್ನಿಸಬೇಕು.

7. **ಹೊಟ್ಟೆ ಉಬ್ಬಿದರೆ** : 5 ಗ್ರಾಂ ಕರ್ಪೂರವನ್ನು 200 ಗ್ರಾಂ ತಿನ್ನುವ ಸೋಡಾದೊಡನೆ ಬೆರೆಸಿ ನೀರಿನಲ್ಲಿ ದ್ರಾವಣ ತಯಾರಿಸಿ ಗೊಟ್ಟ ಹಾಕಬೇಕು. ಇಲ್ಲವೆ 4–5 ಬುಂದೇವ ಉಂಡಿಗಳನ್ನು ತಿನಿಸಬೇಕು.

8. **ಉಚಗೊಳ್ಳುತ್ತಿದ್ದರೆ** : 4–5 ಖಡು 5 ಗ್ರಾಂ ಹಿಂಗು ಮಜ್ಜಿಗೆಯಲ್ಲಿ ಕೂಡಿಸಿ ಗೊಟ್ಟ ಹಾಕಬೇಕು. ಇಲ್ಲವೆ ಒಂದು ಕಿಲೋ ತೊಗರಿಯನ್ನು ಸಣ್ಣಾಗಿ

ಒಡೆದು ತೋಯಿಸದೆ ಬೆಳಿಗ್ಗೆ ತಿನಿಸಬೇಕು. 2) ಕಕ್ಕಿಕಾಯನ್ನು ನುಣ್ಣಗಾಗಿ ಅರೆದು ಮಜ್ಜಿಗೆಯಲ್ಲಿ ಅಥವಾ ಹಾಲಿನಲ್ಲಿ 2-3 ಸಾರೆ (4 ತಾಸಿಗೊಮ್ಮೆ) ಒಂದು ತಂಬಿಗೆಯಷ್ಟು ಪ್ರತಿಸಲ ಗೊಟ್ಟ ಹಾಕಬೇಕು.

9. **ರಕ್ತ ಉಚಗೊಳ್ಳುತ್ತಿದ್ದರೆ :** ಜೀರಿಗೆ, ಲಿಂಬಿಹ್ಣು, ಪಟಕ ಕೂಡಿಸಿ ಅರೆದು ಮಜ್ಜಿಗೆಯಲ್ಲಿ ಗೊಟ್ಟ ಹಾಕಬೇಕು. ಇದರಿಂದ ಮೂತ್ರದಲ್ಲಿ ರಕ್ತ ಬೀಳುತ್ತಿದ್ದರೂ ನಿಲ್ಲವುದು.

10. **ಮೂತ್ರದಲ್ಲಿ ರಕ್ತ ಬರುತ್ತಿದ್ದರೆ :** ಮೇಲಿನ ಉಪಚಾರದಿಂದ ಗುಣಮುಖವಾಗದಿದ್ದರೆ 200 ಗ್ರಾಂ ಹವೀಜನ್ನು ದಿನಾಲು ಒಮ್ಮೆ ತಿನಿಸಬೇಕು. ಹೀಗೆ 2-3 ದಿವಸ ಉಪಚರಿಸಬೇಕು.

11. **ಮೂತ್ರ ಕಟ್ಟಿದರೆ :** ಉದ್ದ ಎಲೆಯ ಹೊಸಲಕ್ಕಿ ತಪ್ಪಲಿನ ರಸವನ್ನು ತೆಗೆದು ಒಂದು ಬಟ್ಟಲಿನಷ್ಟು ಹೊಟ್ಟೆಯಲ್ಲಿ ಹಾಕಬೇಕು.

12. **ಹೆಗಲು ಬಂದರೆ :** ಹೆಗಲಿಗೆ ಗಾಯವಾಗಿ ಗಂಟುಕಟ್ಟಿ ರಕ್ತ ಸೋರುವುದು, ಬಾವು ಬರುವುದು ಇದಕ್ಕೆ ಹೆಗಲು ಬರುವುದು ಎಂಬ ಹೆಸರು. ಹೀಗಾದಾಗ ಮೇಣದಬತ್ತಿಯನ್ನು ಒಳ್ಳೆಣ್ಣೆ ಕೂಡಿಸಿ ಕುದಿಸಿ ಗಾಯಕ್ಕೆ ಲೇಪಿಸಬೇಕು. ಈ ರೋಗದ ದನವನ್ನು ಹೂಡಬಾರದು. ವಿಶ್ರಾಂತಿ ಅಗತ್ಯ.

12. **ಗಾಯವಾಗಿ ಕ್ರಿಮಿಗಳಾದರೆ :** ಆ ಗಾಯವನ್ನು ಚೆನ್ನಾಗಿ ತೊಳೆದು ನಸ್ಯದ ಪುಡಿ ಮತ್ತು ಸುಣ್ಣವನ್ನು ಗಾಯಕ್ಕೆ ಲೇಪಿಸಬೇಕು. ಅಥವಾ ಹೀರೇಬಳ್ಳಿಯ ಎಲೆಯ ರಸವನ್ನು ಗಾಯದ ಮೇಲೆ ದಿನಾಲು ಮೂರು ಸಾರೆಯಂತೆ 2 ದಿವಸ ಹಿಂಡಬೇಕು.

14. **ಕುಂದು ಆದರೆ :** ತುಂಬಿ ಕಸವನ್ನು ತಂದು ಜಜ್ಜಿ ರಸ ತೆಗೆದು ಒಂದು ಗ್ಲಾಸಿನಷ್ಟು ರಸವನ್ನು ಗೊಟ್ಟ ಹಾಕಬೇಕು ಮತ್ತು ಆ ರಸವನ್ನು ಕಿವಿಯಲ್ಲಿಯೂ ಹಾಕಬೇಕು. ಹಾಗೆಯೇ ರಸಯುಕ್ತ ತಪ್ಪಲನ್ನು ದನದ ಬೆನ್ನಿಗೆ ಹಚ್ಚಿ ತಿಕ್ಕಬೇಕು. ಇದಲ್ಲದೆ ಹೊಸಲಕ್ಕಿ ರಸವನ್ನು ತೆಗೆದು ಒಂದು ಚಮಚೆಯಷ್ಟು ರೋಗಪೀಡಿತ ದನದ ಕಿವಿಯಲ್ಲಿ ಹಾಕಬೇಕು. 2) ಬೆಲ್ಲದ ಚಹಾ ಮಾಡಿ ಹಾಲು ಬೆರೆಸದೆ ಪ್ರತಿಸಾರೆ ಒಂದು ತಂಬಿಗೆಯಷ್ಟು 4-5 ಸಾರೆ ಕೊಡಬೇಕು.

**15. ಕಾಲುಬೇನೆಗೆ :** ಟರ್ಪೆಂಟಾಯಿನ್ ನಾಲ್ಕೂ ಕಾಲುಗಳ ಗೊರಸುಗಳ ಕೆಳಭಾಗದಲ್ಲಿ ಹನಿಹನಿಯಾಗಿ ಬಿಡಬೇಕು. 2) ಅರಿಶಿನಪುಡಿ, ಡಿಕ್ಕಿಮಲಿಪುಡಿ, ಕುಸುಬೆ ಎಣ್ಣೆಯಲ್ಲಿ ಕಲೆಸಿ ಗಾಯಕ್ಕೆ ಲೇಪಿಸಬೇಕು.

**16. ಚಪ್ಪೆ ಬೇನೆಗೆ :** ಇದಕ್ಕೆ ಫರಿರೋಗ ಎಂಬ ಇನ್ನೊಂದು ಹೆಸರು ಉಂಟು. ಬಾವು ಬಂದ ಭಾಗದಲ್ಲಿ ಕ್ಯಾರ ಎಣ್ಣೆಯಿಂದ X ಚಿನ್ಹೆ ಮಾಡಿ ಕಾವು ಕೊಡುತ್ತಿರಬೇಕು. ಇದನ್ನು 2–3 ದಿವಸ ಕಾವು ಕೊಟ್ಟರೆ ಗುಣವಾಗುವುದು.

**17. ಬಾಲಸೊಡ್ಡಿಗೆ :** ರವಿವಾರ ದಿವಸ ಬಾಲದ ತುದಿಯನ್ನು ಚಾಕುವಿನಿಂದ X ಹೀಗೆ ಕೊರೆದು 1–2 ಹನಿ ರಕ್ತ ಬರುವಂತೆ ಮಾಡಿ ಕ್ಯಾರ ಮತ್ತು ಅಜಿವಾನ ಕೂಡಿಸಿ ಕುಟ್ಟಿ ಕುಸುಬಿ ಎಣ್ಣೆಯಲ್ಲಿ ಕೂಡಿಸಿ ಕುದಿಸಿ, ಕುದಿಯುವ ಎಣ್ಣೆಯಲ್ಲಿ ಆ ಬಾಲದ ತುದಿಯನ್ನು ಅದ್ದುವುದು.

**18. ಈಯ್ದ ದನದ ಕೆಚ್ಚಲಿಗೆ ಬಾವು ಬಂದರೆ :** ಅರಿಶಿನ ಪುಡಿಯನ್ನು ಬೆಣ್ಣೆಯಲ್ಲಿ ಕಲಸಿ ಕೆಚ್ಚಲಿಗೆ ಲೇಪಿಸಬೆಕು. ಇಲ್ಲವೆ ಬರ್ಪದ ತುಂಡನ್ನು ಕೆಚ್ಚಲಿನ ಮೇಲೆ ಆಡಿಸಬೇಕು.

**19. ಕಿರುಳು ಹತ್ತಿದರೆ :** ಮಾನವನ ಮೂತ್ರವನ್ನು ಈ ರೋಗಪೀಡಿತ ದನದ ಕಿವಿಯಲ್ಲಿ ಹಾಕಿದರೆ ತಕ್ಷಣ ಗುಣಮುಖವಾಗುವುದು.

**20. ಮೊಳೆ, ಸೂಜಿ ನುಂಗಿದರೆ :** ಶಿಲಾಜಿತ (ಸೂಜಿಗಲ್ಲು) ಅರೆದು ಹೊಟ್ಟೆಯಲ್ಲಿ ಹಾಕಬೇಕು.

**21. ವಿಷಬಾಧೆಗೆ :** ವಿಷಬಾಧೆ ಆದದ್ದು ಕಂಡುಬಂದೊಡನೆ ಉಪಚಾರ ಅರಂಭಿಸಬೇಕು. ವಿಷಬಾಧೆಗೊಳಗಾದ ದನವು ನಡಗುತ್ತದೆ, ಇದನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ದನದ ತುಟಿಗೆ ಅರಿಶಿನಪುಡಿ ಹಚ್ಚಬೆಕು. ಅದು ತಕ್ಷಣ ಕೆಂಪಗಾಗುತ್ತದೆ. ಹೀಗಾದರೆ ಅದು ವಿಷಬಾಧೆಗೊಳಗಾದುದು ನಿಶ್ಚಿತ. ಆಗ ಅದಕ್ಕೆ ಅರ್ಧ ಕಿಲೋ ತುಪ್ಪವನ್ನು ಕುಡಿಸಬೇಕು. ಔಡಲಬೇರು ಒಂದು ಹಿಡಿ, ಗುಂಡ ಹೊಸಲಕ್ಕಿ ತಪ್ಪಲು ಕಾಯಿ ಸಹಿತ ಮತ್ತು ಒಂದು ಹಿಡಿ ಗೋರಖಚಿಚ ಕೂಡಿಸಿ ಅರೆದು ಅರ್ಧಕಿಲೋ ತುಪ್ಪದಲ್ಲಿ ಗೊಟ್ಟಹಾಕಬೇಕು.

**22. ಕೂದಲು ಉದುರಿದ್ದರೆ :** ದನಗಳಿಗೆ ಹೇನುಹತ್ತಿ ಕೂದಲು ಉದುರಿದ್ದರೆ ಆ ಭಾಗಕ್ಕೆ 4–6 ದಿವಸ ತುಪ್ಪ ಹಚ್ಚಬೇಕು.

* * *

# ೨೩. ಮಕ್ಕಳ ಪೀಡೆಯ ಹಾಡುಗಳು

ಡಾ|| ಎಂ.ಎನ್. ವಾಲಿ

**ಕೃಷೀವಲ ಸಂಸ್ಕೃತಿಯುಲ್ಲಿ ಆರ್ಥಿಕ ಅವಶ್ಯಕತೆಗಳಾದ ಜಾನುವಾರುಗಳ ಯೋಗಕ್ಷೇಮವನ್ನು ಹಾರೈಸಿ ದೀಪಾವಳಿ ಹಬ್ಬದಲ್ಲಿ ಹಾಡುವ, ಆಣಿ-ಪೀಣಿ ಹಾಡುಗಳೆಂದು ಹೆಸರಾದ ಪೀಡೆಯ ಹಾಡುಗಳನ್ನು ಕುರಿತಾದ ಅಭ್ಯಾಸ ಪೂರ್ಣ ವಿವರಣೆಯನ್ನು ಲೇಖಕರು ಒದಗಿಸಿರುತ್ತಾರೆ.**

-ಸಂ.

ಪೀಡೆಯ ಹಾಡುಗಳು ಉತ್ತರ ಕರ್ನಾಟಕದಲ್ಲಿ ಅದೂ ವಿಜಾಪುರ ಜಿಲ್ಲೆಯಲ್ಲಿ ವ್ಯಾಪಕವಾಗಿ, ಬೆಳಗಾವಿ ಜಿಲ್ಲೆಯಲ್ಲಿ ಕ್ವಚಿತ್ತಾಗಿ ಕಂಡುಬರುವ ಒಂದು ವಿಶಿಷ್ಟವಾದ ಜಾನಪದ ಪ್ರಕಾರ. ಆದರೆ ಈ ಸಾಹಿತ್ಯ ಪ್ರಕಾರದತ್ತ ಇದುವರೆಗೆ ಯಾರೂ ಗಮನಹರಿಸದಿರುವುದು ಅಚ್ಚರಿಯ ಸಂಗತಿ.

ಹಳ್ಳಿಯ ದನಗಾಹಿಗಳು ದೀಪಾವಳಿಯಲ್ಲಿ ನರಕಚತುರ್ದಶಿಯಿಂದ ಕಡೇ ಪಂಚಮಿಯವರೆಗೆ ತಮ್ಮ ಹಾಗೂ ತಾವು ಕಾಯುವ ಅಕ್ಕಪಕ್ಕದ ದನಗಳಿಗೆ ರೋಗ-ರುಜಿನಗಳು ಬರದಿರಲಿ ಎಂದು ದೀಪಬೆಳಗಿ ಹಾಡುವ ಹಾಡುಗಳೇ ಈ ಪೀಡೆಯ ಹಾಡುಗಳು. ಇವುಗಳಿಗೆ 'ಆಣಿ-ಪೀಣಿ' ಹಾಡುಗಳೆಂದೂ ಹೆಸರು. ದೀಪಾವಳಿ ಸಮಯದಲ್ಲಿ ಹೊಲಗದ್ದೆಗಳಲ್ಲಿ ಹಸಿರು ಪಸರಿಸುವುದರಿಂದ ಆ ಹುಲ್ಲನ್ನು ಯಥೇಚ್ಛ ಮೇಯ್ದು ಒಡ್ಡಿನಲ್ಲಿ ನಿಂತ ಮೇಲಿನ ನೀರನ್ನು ಕುಡಿಯುವ ದನಗಳಿಗೆ ಹಲವು ರೋಗರುಜಿನಗಳು ಬರುವ ಸಂಭವವುಂಟು. ಅಂತೆಯೇ ಈ ದಿನಗಳಲ್ಲಿ ದೀಪ ಬೆಳಗಿ ರೋಗಗಳು ಬರದಿರಲಿ ಎಂದು ಮಕ್ಕಳು ಶುಭವನ್ನು ಹಾರೈಸುತ್ತ ಬಂದಂತಿದೆ. ದನಗಳೇ ಸಂಪತ್ತಾಗಿದ್ದ ಹಿಂದಿನ ಕಾಲದಲ್ಲಿ ತಮ್ಮ ಹಾಗೂ ತಾವು ಕಾಯುವ ದನಗಳಿಗೆ ಅಡ್ಡೆ-ಪೀಡೆಗಳು ಬರದಿರಲಿ ; ಇಂಥ ರೋಗಗಳು ದೂರ ಹೊಳೆಯಾಚೆಗೆ ಹೋಗಲಿ ಎಂದು ಈ ದನಗಾಹಿ ಮಕ್ಕಳು ಪ್ರಾರ್ಥಿಸುತ್ತ ಬಂದಿದ್ದಾರೆ. ಈ ಹಾಡುಗಳ ಕೊನೆಗೆ ಬರುವ ಅಡ್ಡೆ ಪೀಡೆ ಹೊಳಿ ಆಚೇಕೋ (ಇದು ಮಕ್ಕಳ ಬಾಯಲ್ಲಿ ಅಪಭ್ರಂಶವಾಗಿ ಆಣಿ-ಪೀಣಿ ಹೊಡಿಚೆಕ್ಕ್ಯೋ ಎಂದಾಗಿದೆ) ಎಂಬುದು ಗಮನಿಸಬೇಕಾದ ಅಂಶವಾಗಿದೆ. ಮಕ್ಕಳು ಅದರಲ್ಲೂ ಅಶಿಕ್ಷಿತ ಬಾಲಕರು ಈ ಹಾಡು (ನುಡಿಗಟ್ಟು) ಗಳನ್ನು

ಹೇಳುತ್ತ ಬಂದಿರುವುದರಿಂದ ಅನೇಕ ಕಡೆ ಇವುಗಳಿಗೆ ಅರ್ಥ ಹುಡುಕುವುದು ಅಸಂಭವವಾದರೂ ಇವುಗಳ ಪ್ರಾಸದಲ್ಲಿ ಸೊಗಸಿದೆ; ಕೇಳಲು ರಂಜನೀಯವೆನಿಸುತ್ತದೆ.

ದನಕಾಯುವ ಹತ್ತೆಂಟು ಹುಡುಗರು ಕೂಡಿ ದನಗಳನ್ನು ಕಾಯುತ್ತ ಹಗಲಿನಲ್ಲಿ ಜೇಕು ಇಲ್ಲವೆ ಆಪಿನಿಂದ (ಹುಲ್ಲಿನ ಒಂದು ಪ್ರಕಾರ) ನಾಗರ ಹೆಡೆಯ ಆಕಾರದಲ್ಲಿ ಹೆಣೆದು ಗೂಡು ತಯಾರಿಸಿ ಅದರಲ್ಲಿ ಮಣ್ಣಿನ ಹಣತೆ ಇಡಲು ಸ್ಥಳ ಮಾಡುತ್ತಾರೆ. ಇದರ ಕೆಳಗಡೆ ಸುಮಾರು ಒಂದು ಅಡಿ ಉದ್ದದವರೆಗೆ ಬೆಳೆಸು ಹಿಡಿಯಲು ಅನುಕೂಲ ಮಾಡಿಕೊಂಡಿರುತ್ತಾರೆ. ಇದಕ್ಕೆ ಹೂವಿನ ಮಾಲೆ ತೊಡಿಸಿ ನೋಡಲು ಆಕರ್ಷಕವಾಗುವಂತೆ ಸಿಂಗರಿಸುವರು. ಸಂಜೆಗೆ ಮನೆಗೆ ಬಂದು ಅದರಲ್ಲಿ ಪಣತಿಯಿಟ್ಟು ಒಳ್ಳೆಣ್ಣೆ ಹಾಕಿ ಬತ್ತಿಯಿಂದ ದೀಪಹಚ್ಚಿ ರಾತ್ರಿ 8 ಗಂಟೆಯ ಹೊತ್ತಿಗೆ ಮನೆಮನೆಗೆ ತಿರುಗುತ್ತ ದನಗಳಿಗೆ ದೀಪ ಬೆಳಗುತ್ತಾರೆ. ನಾಗರಹೆಡೆ ಆಕಾರವಿರುವುದರಿಂದ ಗಾಳಿಯಿಂದ ದೀಪವು ಆರದಂತೆ ರಕ್ಷಿಸಲ್ಪಡುತ್ತದೆ. ಆಗ ಪಟ ಪಟನೆ ಮಕ್ಕಳು ಮಗ್ಗಿ ಹೇಳಿದಂತೆ, ಹಾಡುವ ಹಾಡುಗಳಿವು. ಎತ್ತು, ಎಮ್ಮೆ, ಕೋಣ, ಆಕಳು, ಆಡು ಪ್ರತಿಯೊಂದಕ್ಕೂ ಬೇರೆ ಬೇರೆ ಹಾಡುಗಳನ್ನು ಹೇಳುತ್ತಾರೆ. ಮಾದರಿಗಾಗಿ ಕೆಲವು ನುಡಿಗಟ್ಟುಗಳು ;

**ಎಮ್ಮೆಗೆ ಬೆಳಗುವಾಗ –**

ಹಳ್ಳದ ದಂಡ್ಯಾಗ ಕಳ್ಳರು ಕುಂತಾರ
ಕಳ್ಳರ ಕೈಯಾಗ ಬೆಳ್ಳಿಯ ಕುಡಗೋಲ
ಬೆಳ್ಳಿಯ ಕುಡುಗೋಲಿಗಿ ಮಾರು ಮಾರು ಹುಲ್ಲ
ಮಾರು ಮಾರು ಹುಲ್ಲಿಗಿ ಭರ ಭರ್ ಹಾಲ
ಭರ್ ಭರ್ ಹಾಲಿಗಿ ಕಣ್ಣಿ ಕಣ್ಣಿ ಮೊಸರ
ಕಣ್ಣಿ ಕಣ್ಣಿ ಮೊಸರಿಗಿ ಚಿಲಿಪಿಲಿ ಮಜ್ಜಿಗಿ
ಚಿಲಿಪಿಲಿ ಮಜ್ಜಿಗಿಗಿ ಮುದ್ದಿ ಮುದ್ದಿ ಬೆಣ್ಣೆ
ಮುದ್ದಿ ಮುದ್ದಿ ಬೆಣ್ಣಿಗಿ ಖಳ ಖಳ ತುಪ್ಪ
ಖಳ ಖಳ ತುಪ್ಪಿಗಿ ಭಾಳ ಭಾಳ ರೊಕ್ಕ ಆಣೇಪೀಣಿ...

ಇಲ್ಲಿ ಧಾಟಿ ಆಕರ್ಷಕವಾದುದು. ಪ್ರತಿಯೊದು ಪಾದದ ಕೊನೆಯ ಪದಗಳು ಮುಂದಿನ ಪಾದದ ಆರಂಭದಲ್ಲಿ ಬರುವುದರಿಂದ ಕಿವಿಗೆ ಇಂಪು ನೀಡುತ್ತದೆ.

**ಆಕಳಿಗೆ ಬೆಳಗುವಾಗ**

ಹಂಡಾಕಳೊ ಬಂಡಾಕಳೊ
ಕಲಬುರ್ಗಿ ದಾನಾಕಳೊ
ಕಳ್ಳರು ಕಡಿದಾರ
ಬ್ಯಾಡರು ತಿಂದಾರ
ನಿಂಗಯ್ಯನ ಗೂಳಿಬಂದು ನಿಗರಿ ನಿಗರಿ ಹಾಯಿತು
ಸಂಗಯ್ಯನ ಗೂಲಿ ಬಂದು ಸರಸರದು ಹಾಯಿತು
ಐದ್ದೂರ ಗೂಳಿ ಬಂದು ಎದುರ ಎದುರ ಹಾಯಿತು ಆಣೀ ಪೀಣಿ

**ಹೋರಿಗೆ ಬೆಳಗುವಾಗ –**

1) ಥಳ್ಳ ಥಳ್ಳ ಥಳಿಸಲಾರೆ
ಬಳುವಿನ ತತ್ತಿ ಉಳ್ಳಸಲಾರೆ
ಕರೀಗುಡ್ಡದಾಗ ಕಾಮನ ಕಂಟಿ
ಬಿಳೀಗುಡ್ಡದಾಗ ಭೀಮನಕುಂಟಿ
ಒತ್ತಿ ಹೊಡದರ ಒಂದೇ ಕಂಟಿ
ಮುತ್ತಿನಂಥಾ ಹೋರಿಕಟ್ಟಿ
ಹೋರಿ ಕಾಲಾಗ ಗೆಜ್ಜಿ ಕಟ್ಟಿ
ಹಳಿಎತ್ತಿನ ಹಣ್ಯಾನ ಹಣಿ ಪಟ್ಟಿಕಟ್ಟಿ ಆಣೀಪೀಣೀ...

2) ಹೋರಿ ಬರಾಗ ಮೋರಿ ಎಲ್ಲಿತ್ತೊ
ಕಲ್ಲ ಖಣ್ಯಾಗ ಗಜಾ ನಿಂತಿತ್ತೊ
ಹೋರಿ ಹಣಿಮ್ಯಾಗ ಚಂದರ ಬಟ್ಟೊ
ಮೋರಿ ಹಣಿಮ್ಯಾಗ ಕುಂಕುಮ ಬಟ್ಟೊ
ಹಳ್ಳ ಬಂತೊ ಹಾರ ಮೋರಿ
ಡೊಳ್ಳ ಬಡಿಯೊ ಡೊಂಬರ ಮೋರಿ ಆಣೀಪೀಣೀ...

ಇವುಗಳಲ್ಲೆಲ್ಲ ಅರ್ಥ ಹುಡುಕುವುದು ಕಷ್ಟದ ಕೆಲಸವೇ ಸರಿ. ಆದರೂ ಇವುಗಳಲ್ಲಿ ಕಾಣುವ ಪದಗಳ ಜೋಡಣೆ ಮಂತ್ರ ಮುಗ್ಧರನ್ನಾಗಿಸುತ್ತದೆ.

**ಆಡು-ಕುರಿಗಳಿಗೆ ಅನ್ವಯಿಸಿ :**

ಕುರಿಕಾಯುತ ಬಂದೇವಣ್ಣ
ಕುರುಬರ ಕೇರ್‍ಯಾಗ ಇಳಿದೇವಣ್ಣ
ಸಣ್ಣ ಶ್ಯಾವಿಗಿ ಬಸ್ತಾಳಣ್ಣ
ದಡಿಯ ದೋತರ ಹೊಚ್ಚಾಳಣ್ಣ
ಮುಂದು ಕುಂತು ಎಣಿಸ್ಯಾಳಣ್ಣ
ಹಿಂದ ಬಂದು ಒದ್ದಾಳಣ್ಣ ಆಣೀಪೀಣಿ...

**ಕುದುರೆಗೆ ಬೆಳಗುವಾಗ :**

ಏಳೂರ ಬಾಬಾನ ದನಾ ಎಲ್ಲೊ ಕರಾ ಎಲ್ಲೊ
ಕಡಗದ್ದ್ಯಾಗ ಕಾದಾಡತಾವ
ಹಂಡ ಕುದುರಿಯಂವಾ ಹಾರಕೊಂತ ಬರತಾನ
ಚಿಂಚ ಕುದುರಿಯಂವಾ ಚೀರಿಕೊಂತ ಬರತಾನ
ಬಿಳಿ ಕುದುರಿಯಂವಾ ಬಿಕ್ಕೊತ ಬರತಾನ
ಕೆಂಪ ಕುದುರಿಯಂವಾ ಕೆಮ್ಮಿಕೊಂತ ಬರತಾನ
ಮಾಸ ಕುದುರಿಯಂವಾ ಮಸಗೊಂತ ಬರತಾನ,
ಕಲ್ಲಾಗ ಸಿಕ್ಕಾಗ ಕಾಗಿಮರಿ, ಹುಬ್ಬ ಹಾರಿಸ್ತದ ಗುಬ್ಬಿಮರಿ
ಟಿಂವ್ ಟಿಂವ್ ಅಂತಾದ ಟಿಂವಕ್ಕಿಮರಿ
ಆಯ್ಕೊಂಡು ತಿಂತಾದ ಆಡಿನಮರಿ,
ಬೇಡಿಕೊಂಡು ತಿಂತಾದ ಬೆಕ್ಕಿನ ಮರಿ ಆಣೀಪೀಣಿ...

ತಮ್ಮ ವೈಯುಕ್ತಿಕ ಜೀವನದ ಘಟನೆಗಳೂ ಕೆಲವೆಡೆ ಚಿತ್ರಿತವಾದಂತಿವೆ. ನಿಸರ್ಗದ ಮಡಿಲಲ್ಲಿ ಈ ಮುಗ್ಧ ಮಕ್ಕಳು ಅನುಭವಿಸಿದ ಅನುಭವಗಳೇ ಇಲ್ಲಿ ಮೂಡಿಬಂದಿವೆ. ಒಂದು ಉದಾಹರಣೆ.

ಲಕ್ಕಪ್ಪ ಲಕ್ಕಪ್ಪ ಹ್ಯಾಂಗಿರಬೇಕ
ಲಕ್ಕಿ ಕಂಟ್ಯಾಗ ಜೇನಿರಬೇಕ

ಜೇನು ಬಿಡಿಸಾಂವ ಜಾಣಿರಬೇಕ
ದುಡ್ಡಿನ ಸೂಳಿ ಎದ್ದಿರಬೇಕ
ಅದ್ದೇಲಿ ಸೂಳಿ ಬಿದ್ದಿರಬೇಕ
ನಡಾ ನೋಡಿದರ ನಾಜೂಕ ಬೇಕ
ಲಿಂಬಿಕಾಯಷ್ಟು ಎದಿಯಿರಬೇಕ
ತೆಂಗಿನಕಾಯಷ್ಟು ತಲಿಯಿರಬೇಕ ಆಣೀಪೀಣಿ.....

ಹೀಗೆ ನುಡಿಗಟ್ಟುಗಳನ್ನು ಹೇಳುತ್ತ 'ಗಳದಮ್ಯಾಲ ಗಗ್ಗರಿ, ಒಗಿ ನಮ್ಮ ಕೊಬ್ಬರಿ' ಎಂದು ದುಂಬಾಲು ಬಿದ್ದು ಮನೆಯವರಿಗೆ ಕೊಬ್ಬರಿಯ ಗುಂಡನ್ನೋ ಇಲ್ಲವೆ ಅದಕ್ಕೆ ಪ್ರತಿಯಾಗಿ ಹಣವನ್ನೋ ಪಡೆಯುವರು. ಈ ದನಗಾಹಿಗಳಲ್ಲಿ ಕೆಲವರು ಸಾಹಸಿಗರಿರುವುದು ಸಹಜ. ಅಂಥವರ ಚಿತ್ರಣ ಈ ಮುಂದಿನ ಹಾಡಿನಲ್ಲಿದೆ :

ಹಳ್ಳದ ದಂಡ್ಯಾಗೊಂದು ಬನ್ನಿಗಿಡ ಹುಟ್ಟಿ
ಬಡ್ಡ್ಯಾಂದು ಕಡದು ಬಂಡಿಗಾಲಿ ಮಾಡಿ
ನಡುವಿಂದು ಕಡದು ನಂದಿಕೋಲ ಮಾಡಿ
ತುದ್ಯಾಂದು ಕಡದು ತಿಪ್ಪರಗೋಲ ಮಾಡಿ
ತಿಪ್ಪರಗೋಲ ಆಡ್ಯಾಡಿ ಕೈತುಂಬ ಗುಳ್ಳಿ
ಕೈತುಂಬ ಗುಳ್ಳೀಗಿ ಜುಳುಜುಳು ನೀರ
ಜುಳುಜುಳು ನೀರಿಗಿ ಮಂಚದಂಥ ಎಮ್ಮಿ
ಮಂಚದಂಥ ಎಮ್ಮಿಗಿ ಮಗಿಮಗಿ ಹಾಲ
ಮಗಿಮಗಿ ಹಾಲ ಕುಡದೀನಪ್ಪ
ಮಾಸಿಮ್ಯಾಲ ಕೈಯ ತಿರುವೀನಪ್ಪ
ಸಡ್ಡ ಹೊಡದ ಕುಸ್ತೀ ಹಿಡಿದೀನಪ್ಪ
ಸೊಳಬಾಯಿ ತಿರುವಿ ಒಗದೀನಪ್ಪ ಆಣೀಪೀಣಿ...

ಇಲ್ಲಿಯ ಸಾಹಸ ವರ್ಣನೆ ಕಣ್ಣು ಕಟ್ಟುವಂತಿದೆ.

ಎತ್ತ ಮಾರುತಾ ಹೋದೀನಣ್ಣ
ಚಡಚಣ ಸಂತ್ಯಾಗ ಇಳದೀನಣ್ಣ
ಚಂದರಗೊಂಬಿ ತರದಾಳಣ್ಣ

ಸಣ್ಣ ಶ್ಯಾವಿಗಿ ಬಸದಾಳಣ್ಣ
ಚಿನ್ನಿಸಕ್ಕರೆ ತರಸ್ಯಾಳಣ್ಣ
ಒಲ್ಲೊಲ್ಲಂದರ ಉಣಿಸ್ಯಾಳಣ್ಣ
ಊರಿನ ದಾರೀಲಿ ಕಳಿಸ್ಯಾಳಣ್ಣ
ಕಣ್ತುಂಬ ನೀರ ತಂದಾಳಣ್ಣ ಆಣೀಪೀಣಿ....

ಎತ್ತು ಮಾರಲು ಹೋದವನ ಪ್ರಣಯ ಜೀವನದ ಚಿತ್ರವು ಇಲ್ಲಿ ಸೊಗಸಾಗಿ ಬಂದಿದೆ. ಇನ್ನೂ ಕೆಲವು ಪ್ರಾಸಬದ್ಧ ಹಾಡುಗಳು :

ಹೊತ್ತು ಮುಣಗತೊ ಲಾಲ, ಹನ್ನೆರಡೆತ್ತಿನ ಬಾಲ
ಬಾಲಮ್ಯಾಲ ಬಂಡಿ, ಬಂಡಿಮ್ಯಾಲ ನವಿಲ
ನವಿಲಪುಚ್ಚ ಕಿತ್ತಿ, ಚಿಗರಿ ಕೋಡಿಗಿ ಹಚ್ಚಿ
ಚಿಗರಿ ಹೊಡ್ಯಾಂವ ಯಾರು, ಕಂಚಗೇರ ಮಲ್ಲ
ಅವನಿಗೇನು ಧಾಡಿ ಹುಣಸೀರಾಡಿ
ಜೋಳದ ಹಿಟ್ಟ, ಜಾಡಿಸಿಕೊಟ್ಟ
ಸಜ್ಜಿ ಹಿಟ್ಟ, ಸೋಸಿಕೊಟ್ಟ ಆಣೀಪೀಣಿ....

ಈ ಹಾಡುಗಳು ಇಂದು ಮರೆಯಾಗುತ್ತಲಿವೆ. ದನಗಾಹಿ ಮಕ್ಕಳ ಸಂಖ್ಯೆ ಇಂದು ವಿರಳವಾಗುತ್ತಲಿದೆ. ವಿಜ್ಞಾನದ ಗಾಳಿಯಿಂದ ಇವು ಕಣ್ಮರೆಯಾಗುವ ಮೊದಲು ಇವನ್ನು ರಕ್ಷಿಸಬೇಕಾದುದು ಅವಶ್ಯವೆನಿಸಹತ್ತಿದೆ. ಇಂಥ ಸಂಗ್ರಹ ಕಾರ್ಯಕ್ಕೆ ನನ್ನ ಲೇಖನ ದಿಕ್ಸೂಚಿಯಾಗಬಹುದೆಂದುಕೊಂಡಿದ್ದೇನೆ. ಈ ಹಾಡುಗಳು ದಕ್ಷಿಣ ಕರ್ನಾಟಕದ ಅಂಟಿಗೆ-ಪಂಟಿಗೆ ಹಾಡುಗಳಿಂದ ಭಿನ್ನವಾದವುಗಳು.

* * *

# ೨೪. ಜಾನಪದದಲ್ಲಿ 'ಎಕ್ಕದ ಗಿಡ'

ಡಾ. ಜಿ.ಆರ್. ತಿಪ್ಪೇಸ್ವಾಮಿ

ಎಕ್ಕ 'ಶ್ರವಣ ನಕ್ಷತ್ರ ವೃಕ್ಷ' ಎಂಬ ಹೆಸರನ್ನು ಹೊಂದಿದೆ. ಹಾಲಿನಂಥ ರಸವನ್ನು ಹೊಂದಿರುವ ಈ ಗಿಡ ಒಣಗಿದರೆ ಗಟ್ಟಿಯಾಗುವ ಗುಣವನ್ನೂ ಹೊಂದಿದೆ. ಇದರಲ್ಲಿ ಸಣ್ಣ ಎಕ್ಕ, ದೊಡ್ಡ ಎಕ್ಕ, ಬಿಳಿ ಹೂವು ಎಕ್ಕ, ಕೆಂಪು ಹೂವು ಎಕ್ಕ ಎಂಬ ನಾಲ್ಕು ಭೇದಗಳಿವೆ. ಎಕ್ಕದ ಒಳ ತೊಗಟೆ ಮೆದುವಾದ ನಾರಿನಿಂದ ಕೂಡಿದ್ದು ಕಾಗದ ತಯಾರಿಕೆಗೆ ಮತ್ತು ಬೀಜದ ಸುತ್ತ ಆವರಿಸಿಕೊಂಡಿರುವ ರೇಷ್ಮೆಯಂತೆ ನುಣುಪಾದ ಹತ್ತಿ ಅಗ್ಗದ ರೇಷ್ಮೆಬಟ್ಟೆ ತಯಾರಿಕೆಗೆ ಪ್ರಯೋಜನಕಾರಿಯಾಗಿದೆ. ಜೊತೆಗೆ ಎಕ್ಕದ ಪ್ರತಿಯೊಂದು ಭಾಗವೂ ಔಷಧೀಯ ಗುಣಗಳಿಂದ ತುಂಬಿಕೊಂಡಿದೆ. ಎಕ್ಕದ ಹೂವು, ಶಿವ ಮತ್ತು ಗಣಪತಿಯ ಪೂಜೆಗೆ ಶ್ರೇಷ್ಠವೆಂಬ ನಂಬಿಕೆಯೂ ಇದೆ. ಅದಕ್ಕಾಗಿಯೇ ಗುಡಿಯ ಮುಂಭಾಗ ಅಥವಾ ಹಿಂಭಾಗದಲ್ಲಿ ಎಕ್ಕವನ್ನು ಬೆಳೆಸುವ ರೂಢಿಯಿದೆ. ಆದರೆ ಮನೆಯ ಸುತ್ತಮುತ್ತ ಎಕ್ಕವನ್ನು ಬೆಳೆಸಿದರೆ ಶುಭ ಮತ್ತು ಅಶುಭಗಳುಂಟಾಗುತ್ತವೆಂದು ನಂಬುವವರೂ ಇದ್ದಾರೆ. ಅದಕ್ಕೆ ನಂಬಿಕೆಗಳೇನೇ ಇರಲಿ ಎಕ್ಕವನ್ನು ಪೂಜಿಸುವ ಸಂಪ್ರದಾಯವಂತೂ ನಮ್ಮಲ್ಲಿದೆ.

ಮಕ್ಕಳು ಹುಟ್ಟಿದ ಕೆಲವೇ ದಿನಗಳಲ್ಲಿ ಸಂಭವಿಸುವ ಖಾಯಿಲೆಯ ನಿವಾರಣೆಗಾಗಿ ಆ ಮಗುವನ್ನು ಎಕ್ಕದ ಗಿಡದ ಬಳಿ ಕುಳ್ಳಿರಿಸಿ ಮಗುವಿನ ಸೋದರಮಾವನಿಂದ ಎಕ್ಕದ ಪೂಜೆಮಾಡಿಸಿ ಮಗುವಿನ ಕೊರಳಿಗೆ ಎಕ್ಕದ ಮೊಗ್ಗುಗಳ ಹಾರವನ್ನು ಹಾಕುವ ಸಂಪ್ರದಾಯ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿದೆ.

ಮಗು ಹುಟ್ಟಿದ ಕೆಲವೇ ತಿಂಗಳ ಮೇಲೆ ಆಗಿಂದಾಗ್ಗೆ ಅರಚುವುದು, ಕಿಟ್ಟನೆ ಚೀರುವುದು, ಮೈ ಬೆಚ್ಚಗಾಗುವುದು, ನಿದ್ರೆ ಮಾಡದಿರುವುದು, ವಾಂತಿಬೇಧಿಗಳಾಗುವುದು - ಮುಂತಾದ ಸೂಚನೆಗಳು ದೊರೆತಾಗ ಕಂಡ ದೇವರುಗಳಿಗೆಲ್ಲಾ ಹರಕೆ ಹೊರುತ್ತಾರೆ. ಒಂದು ಕಡೆ ಶಿಷ್ಟವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಯೂ ಮಾನಸಿಕ ತುಡಿತಗಳಿಗೆ ಸಿಕ್ಕಿ ಇಂಥಾ ಪೂಜಾಕ್ರಮಗಳಲ್ಲಿ ತೊಡಗುತ್ತಾರೆ. ಇದಕ್ಕೆ ಎಕ್ಕೆ ಪೂಜೆ ಎಂದೂ ಆ ಖಾಯಿಲೆಗೆ "ದಿಂದಾಗಳು

ಖಾಯಿಲೆ" ಅಥವಾ "ದಿಂದಾಗಳದಾಗ್ಯೆಯ್ತೆ" ಎಂತಲೂ ಕರೆಯುತ್ತಾರೆ. ಖಾಯಿಲೆಯಿಂದ ಮಗು ತುಂಬ ತತ್ತರಿಸಿದ್ದರೆ ಬುಧವಾರ, ಶನಿವಾರಗಳನ್ನು ಬಿಟ್ಟು ಉಳಿದ ವಾರಗಳಂದು (ಅಮಾವಾಸ್ಯೆ, ಹುಣ್ಣಿಮೆಗಳಂತೂ ಶ್ರೇಷ್ಠ) ಸೂರ್ಯ ಮುಳುಗುವ ಹೊತ್ತಿನಲ್ಲಿ ಬಿಳಿ ಎಕ್ಕದ ಬಳಿ ಖಾಯಿಲೆ ಮಗುವನ್ನು ಕುಳ್ಳಿರಿಸಿ ತುಂಬಿದ ಗಡಿಗೆಯಲ್ಲಿನ ನೀರನ್ನು ಆ ಗಿಡದ ಸುತ್ತ ಚಿಮುಕಿಸಿ ವೀಳೆಯದೆಲೆಯಲ್ಲಿ ಅಡಿಕೆ, ತೆಂಗಿನಕಾಯಿ ಅಥವಾ ಬೆಲ್ಲ, ಮೂರು ಅಥವಾ ಐದು ಎಳೆ ದಾರವನ್ನಿಟ್ಟು ಅದಕ್ಕೆ ಅರಿಶಿನ ಕುಂಕುಮ ಬಳಿದು ಗಿಡಕ್ಕೆ ಪೂಜಿಸಿ ಕಾಯಿಹೊಡೆಯುತ್ತಾರೆ. ಈ ಕೆಲಸವನ್ನು ಸೋದರ ಮಾವ ಅಥವಾ ಅತ್ತೆಯರು ಮಾತ್ರ ಮಾಡುವ ಪದ್ಧತಿ ಇದೆ. ಮಗುವಿಗೆ ಎಷ್ಟು ತಿಂಗಳಲ್ಲಿ ನಡೆಯುತ್ತಿದೆಯೋ ಅಷ್ಟನ್ನೂ ಅದೇ ಬಿಳೀ ಎಕ್ಕದ ಒಂದೊಂದು ದಂಟನ್ನು ಒಂದೇ ಬಾರಿಗೆ (ಒಂಭತ್ತು ತಿಂಗಳಾಗಿದ್ದರೆ 9 ಭಾಗಗಳು) ಚಾಕುವಿನಿಂದ ಕತ್ತರಿಸಿ ಅರಿಶಿನ ಬಳಿದು ಮಂತ್ರಿಸಿದ ಮೂರು ಅಥವಾ ಐದು ಎಳೆಯ ದಾರಕ್ಕೆ ಅವನ್ನು ಪೋಣಿಸಬೇಕು (ಏರಿಸಬೇಕು). ಇದಕ್ಕೆ 'ಎಕ್ಕೇಮಣಿ ಸರ', 'ಮಣಿ ಹಾಕುವುದು' ಎಂದೂ ಕರೆಯುತ್ತಾರೆ. ಇದು ಸಿದ್ಧವಾದ ಮೇಲೆ ಪಶ್ಚಿಮಾಭಿಮುಖವಾಗಿ ಮಗುವನ್ನು ಕುಳ್ಳಿರಿಸಿ, ಆ ಸರವನ್ನೂ ಮೂರು ಬಾರಿ ಎಕ್ಕದ ಗಿಡಕ್ಕೆ ನೀವಳಿಸಿ, ಮಗುವಿನ ಕೊರಳಿಗೆ ಕಟ್ಟುತ್ತಾರೆ. ಇದೇ ರೀತಿ ಮೂರು ವಾರಗಳು ಎಡೆಬಿಡದೆ ಮಾಡುತ್ತಾರೆ. ಮಕ್ಕಳಿಗೆ 'ಹೊಲೆಸೋಕು' (ಮುಟ್ಟಾದವರ ನೆರಳು) ತಗುಲಿ ಅದರ ಪರಿಣಾಮವಾಗಿ ಆಗುವ ವಾಂತಿ ಭೇದಿಗಳ ನಿವಾರಣೆಗಾಗಿಯೂ ಹುಟ್ಟಿದಾಗಿನಿಂದ ನರಳುತ್ತಿರುವ ಮಕ್ಕಳಿಗೂ ಬಿಳಿ ಎಕ್ಕವನ್ನು ಪೂಜಿಸಿ ಎಕ್ಕೇಮಣಿಸರವನ್ನು ಹಾಕುತ್ತಾರೆ. ಮಕ್ಕಳಿಲ್ಲದ ಸ್ತ್ರೀಯರು ಎಕ್ಕದ ಗಿಡವನ್ನು ಪೂಜಿಸಿದರೆ ಮಕ್ಕಳಾಗುತ್ತವೆಂಬ ನಂಬಿಕೆಯನ್ನಿಟ್ಟುಕೊಂಡಿದ್ದಾರೆ.

ಇಂಥ ನಂಬಿಕೆ ಮತ್ತು ಆರಾಧನೆಗಳಿಗೆ ಮುಖ್ಯ ಕಾರಣಗಳು ಎರಡು ಅಂತ ನನಗನ್ನಿಸುತ್ತೆ. ಒಂದು ಬಿಳಿ ಎಕ್ಕದ ಗಿಡವನ್ನು ಸಾಕ್ಷಾತ್ ಈಶ್ವರ ಅಥವಾ ಸೂರ್ಯನೆಂದು ನಂಬಿರುವುದು. ಆಯುರ್ವೇದದ ಪ್ರಕಾರ ಎಕ್ಕದ ಭಾಗಗಳು ಮಾನವನಿಗೆ ತನ್ನ ಅಂಗಾಂಗಗಳಲ್ಲಿರುವ ತೊಡಕಿನ ಅಂಶವನ್ನು ಹೋಗಲಾಡಿಸುವುದರ ಮುಖೇನ ಉತ್ತೇಜನವನ್ನು ಕೊಡುವುದರಿಂದ ಇಂಥ ಆರಾಧನೆಗೆ ಕಾರಣವಾಗಿದೆ ಎಂಬುದು ಅದರ ಮತ್ತೊಂದು ಅಂಶ. ಕೆಲವು ಸಸ್ಯಗಳ ಬಗ್ಗೆ ಜನರಿಗೆ ಪೂಜ್ಯಭಾವನೆಯಿದೆ. ಈ ನಂಬಿಕೆಗೆ ಕಾರಣಗಳೇನೇ

ಆಗಿದ್ದರೂ ಪೂಜಿಸುವಂಥ ಸಸ್ಯಗಳ ಮೇಲಿನ ಗಾಳಿ ಅಥವಾ ಸಸ್ಯದ ಅಂಗಾಂಗಗಳನ್ನು ಬೇರೆ ಬೇರೆ ರೂಪಗಳಲ್ಲಿ ಶರೀರಕ್ಕೆ ಸೇರಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ವೈಜ್ಞಾನಿಕ ಅಂಶಗಳನ್ನಂತೂ ಪಡೆದೇ ಪಡೆಯುತ್ತಾನೆ. ಉದಾಹರಣೆಗೆ ಅರಳಿ, ಬೇವು, ತುಳಸಿ ಮುಂತಾದವು. ಇಂಥ ವೈಜ್ಞಾನಿಕ ಅಂಶಗಳು ಎಕ್ಕದಲ್ಲೂ ಇರುವುದರಿಂದ ಅವುಗಳ ಸದುಪಯೋಗಕ್ಕಾಗಿ ಇಂಥ ಪೂಜೆಗಳು ನಡೆಯುತ್ತಿರಬೇಕು.

ಯಾವ ಪ್ರಕಾರದ ಹೂವಿನ ಗಿಡವಾದರೂ ಅದರ ಬೇರು, ಬೇರಿನ ತೊಗಟೆ, ಎಲೆ, ಮೊಗ್ಗು, ಹೂವು, ಹಾಲು ಕಡೆಗೆ ಒಣಗಿಹೋದ ಗಿಡ ಇಷ್ಟೆಲ್ಲವೂ ಉಪಯೋಗಕ್ಕೆ ಬರುವಂಥವು. ಬೆವರನ್ನು ತರಿಸತಕ್ಕ ಎಕ್ಕದ ಬೇರು ಶ್ವಾಸಕೋಶದ ನಾನಾ ವಿಧದ ವಿಕಾರಗಳಿಗೆ ಸಿದ್ಧೌಷಧ. ಬೇರಿನ ತೊಗಟೆಯನ್ನು ಕಷಾಯ ಮಾಡಿ ಕುಡಿಯುವುದರಿಂದ ವಾಂತಿ ನಿಲ್ಲುತ್ತದೆ. ಅಲ್ಲದೆ ಉಪದಂಶವನ್ನೂ ಹೋಗಲಾಡಿಸುತ್ತದೆ. ಎದೆಯಿಂದ ಬರುವ ಕಫವನ್ನು ಕಿತ್ತುಹಾಕಲು, ಕ್ಷಯರೋಗದಲ್ಲಿ ಬರುವ ಕೆಮ್ಮಲು, ವಿಷ ಬಾಧೆ, ಹೊಟ್ಟೆ ಹಿಚುಕುವಂತೆ ಆಗುವ ಭೇದಿ ಇವುಗಳಿಗೂ ಆ ಭಾಗ ಔಷಧಿಯಾಗುತ್ತದೆ. ಹುಚ್ಚು ನಾಯಿ ಕಡಿದಂಥ ಸಂದರ್ಭದಲ್ಲಿ ಎಕ್ಕದ ಬೇರಿನ ತೊಗಟೆ ಒಂದು ಭಾಗ ಮತ್ತು ಬೆಲ್ಲ ಒಂದು ಭಾಗ ಸೇರಿಸಿ ಸಣ್ಣ ಮಾತ್ರೆ ಮಾಡಿಕೊಂಡು ಸುಮಾರು 80 ದಿನ ಉಪಯೋಗಿಸಿದರೆ ಹುಚ್ಚು ನಾಯಿಯ ವಿಷ ಶರೀರಕ್ಕೆ ಅಂಟುವುದಿಲ್ಲ. ಚೆನ್ನಾಗಿ ಪುಡಿಮಾಡಿದ ಬೇರಿನ ತೊಗಟೆಯನ್ನು ಆಮಶಂಕೆ ಭೇದಿ ನಿವಾರಣೆಗೆ ಬಳಸುವುದಲ್ಲದೆ ಸರಿಯ ರೂಪದಲ್ಲಿ ಆನೆಕಾಲು ರೋಗಿಗಳ ಚರ್ಮಕ್ಕೆ ಬಳಿಯುತ್ತಾರೆ. ಎಕ್ಕದ ಬೇರಿನ ತೊಗಟೆಯನ್ನು ಮೇಕೆ ಹಾಲಿನಲ್ಲಿ ತೇಯ್ದು ನಾಲ್ಕಾರು ಹನಿಗಳನ್ನು ಮೂರ್ಛೆ ರೋಗದವರ ಮೂಗಿಗೆ ಬಿಟ್ಟರೆ ರೋಗವು ಕಡಿಮೆಯಾಗುತ್ತದೆ.

ಶರೀರದ ಯಾವ ಭಾಗದಲ್ಲಿಯಾದರೂ ಉಂಟಾದ ಗಟ್ಟಿಯಾದ ಬಾವಿನಲ್ಲಿ ವಿಪರೀತ ನೋವು ಕಾಣಿಸಿಕೊಂಡರೆ ಎಕ್ಕದ ಎಲೆಗೆ ಎಣ್ಣೆ ಅಥವಾ ತುಪ್ಪವನ್ನು ಹಚ್ಚಿ ಬಿಸಿಮಾಡಿ ಕಟ್ಟಿದರೆ ಬಾವು ಮತ್ತು ನೋವು ಇಳಿಯುತ್ತದೆ. ಯಾವುದಾದರೂ ಅಂಗ ಜೋಮುಹಿಡಿದಾಗಂತೂ ಎಕ್ಕದ ಎಲೆ ರಾಮಬಾಣವಾಗುತ್ತದೆ. ಬಿಟ್ಟುಬಿಟ್ಟು ಬರುವ ಜ್ವರದ ನಿವಾರಣೆಗೆ ಟಿಂಕ್ಚರ್ ರೂಪದಲ್ಲಿ ಎಕ್ಕದ ಎಲೆಗಳನ್ನು ಬಳಸುತ್ತಾರೆ. ಕಿವಿ ನೋವುಂಟಾದಾಗ ಎಕ್ಕದ

ಎಲೆಯನ್ನು ತೋಟದಲ್ಲಿ ಬೆಳೆದ ಹತ್ತಿಗಿಡದ ಎಲೆ, ಕಣಗಿಲೆ ಎಲೆಗಳೊಡನೆ ಸೇರಿಸಿ ಅರೆದು ಶೋಧಿಸಿ ರಸವನ್ನು ಬಿಸಿಮಾಡಿ ನೋಯುತ್ತಿರುವ ಕಿವಿಗೆ ಬಿಟ್ಟರೆ ಕಿವಿನೋವು, ಕಿವಿಯಲ್ಲಿ ಸೇರಿರುವ ಹುಳುಗಳು ನಾಶವಾಗುತ್ತವೆ.

ಊರಿನಲ್ಲಿ ಯಾರಾದರೂ ಸತ್ತಾಗ ಅವರ ಸಂಸ್ಕಾರಗಳನ್ನು ಪೂರೈಸಿ ಮನೆಗೆ ಬರುವಾಗ ಸತ್ತ ವ್ಯಕ್ತಿಯ ಕುಟುಂಬದವರು ಊರಿನ ಮಧ್ಯೆ ಅಥವಾ ಮುಂಭಾಗದ ಒಂದು ಕಲ್ಲಿನ ಮೇಲೆ ಎತ್ತಿನ ಸಗಣಿಯಲ್ಲಿ ಎಕ್ಕೇ ಎಲೆ ಮತ್ತು ಎಕ್ಕೇ ಮೊಗ್ಗುಗಳನ್ನು ಸಿಕ್ಕಿಸಿ ಮನೆಗೆ ಬರುವ ಸಂಪ್ರದಾಯವಿದೆ. ಅಂದರೆ ಎಕ್ಕೇ ಎಲೆ ಮತ್ತು ಮೊಗ್ಗುಗಳನ್ನು ಸಿಕ್ಕಿಸಿದ ಸಗಣಿ ಸಾವಿನ ಸಂಕೇತವಾಗಿಯೂ ಇಲ್ಲಿ ಬಳಕೆಯಾಗಿದೆ.

ಎಕ್ಕದ ಹೂವಿನ ಮೊಗ್ಗುಗಳು 125, ಜಾಕಾಯಿ, ಜಾಪತ್ರೆ, ಅಕ್ಕರಕರೆಗಳನ್ನು ತಲಾ ಒಂದು ತೊಲದಂತೆ ಕುಟ್ಟಿ ನೀರೊಡನೆ ಅರೆದು ಕಡಲೇಕಾಳಿನಷ್ಟು ಮಾತ್ರೆಗಳನ್ನು ಮಾಡಿ ಒಣಗಿಸಿಟ್ಟು ಮೇಲೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಒಂದೊಂದು ಮಾತ್ರೆಯನ್ನು ನುಂಗಿ ಬಿಸಿನೀರನ್ನು ಕುಡಿಯುವುದರಿಂದ ಕೆಮ್ಮು ಮತ್ತು ದಮ್ಮುಗಳು ನಿವಾರಣೆಯಾಗುತ್ತವೆ. ಶೀತ, ಗೂರಲು ಮತ್ತು ಅಜೀರ್ಣ ದೋಷಗಳಲ್ಲಿ ಹೂವಿನ ಪುಡಿಯನ್ನು ಬಳಸುತ್ತಾರೆ. ಎಕ್ಕದ ಮೊಗ್ಗುಗಳನ್ನು ಮೆಣಸಿನೊಂದಿಗೆ ನೀರಿನ ಸಹಾಯದಿಂದ ನುಣ್ಣಗೆ ಅರೆದು ಎರಡು ಗುಲಗಂಜಿಗಳ ಪ್ರಮಾಣಕ್ಕೆ ಗುಳಿಗೆಗಳನ್ನು ಕಟ್ಟಿ ನೆರಳಿನಲ್ಲಿಯೇ ಒಣಗಿಸಿ ದಿನಕ್ಕೆ ನಾಲ್ಕು ಸಲ ಒಂದೊಂದು ಮಾತ್ರೆಯನ್ನು ನುಂಗಿ ನೀರು ಕುಡಿಯುವುದರಿಂದ ಮೂರ್ಛೆರೋಗ, ದಮ್ಮು, ವಾತರೋಗಗಳು ವಾಸಿಯಾಗುತ್ತವೆ. ಹೂವಿನಲ್ಲಿರುವ ಉದ್ದವಾದ ಕುಸುಮಗಳನ್ನು ಒಂದೊಂದು ಸಲಕ್ಕೆ ಮೂರು ಅಥವಾ ನಾಲ್ಕನ್ನು ಸ್ವಲ್ಪ ಉಪ್ಪಿನೊಡನೆ ತಿಂದರೆ ಹೊಟ್ಟೆನೋವು, ಅಜೀರ್ಣ, ಕೆಮ್ಮಲು ಮುಂತಾದವು ಗುಣಕಾರಿಯಾಗುತ್ತವೆ.

ಎಕ್ಕದ ಹಾಲನ್ನು ನಾಯಿ ಕಚ್ಚಿದ ಜಾಗಕ್ಕೆ ಮತ್ತು ಚೇಳು ಕುಟುಕಿದ ಜಾಗಕ್ಕೆ ಹಚ್ಚಿದರೆ ಅವುಗಳ ವಿಷ ಮಾಯವಾಗುತ್ತದೆ. ಶರೀರದ ಯಾವ ಭಾಗದಲ್ಲಿಯಾದರೂ ಗಾಯವಾಗಿದ್ದು ಕೀವು ತುಂಬಿ ಹುಳುಬಿದ್ದಿದ್ದರೆ ಎಕ್ಕದ ಹಾಲನ್ನು ಹಚ್ಚಿ ವಾಸಿಮಾಡಬಹುದು. ಬಾಯಲ್ಲಿರುವ ಜೊಲ್ಲನ್ನು ಸಂಪೂರ್ಣವಾಗಿ ಉಗಿದು ಎಕ್ಕದ ಹಾಲನ್ನು ಹುಳುಕಲ್ಲು ಆಗಿರುವ ಜಾಗಕ್ಕೆ

ಪದೇ ಪದೇ ಹಚ್ಚುವುದರಿಂದ ಒಸಡು ಮತ್ತು ದವಡೆಗಳು ಊದುವಿಕೆಯನ್ನು ತಡೆಗಟ್ಟುತ್ತಾರೆ. ಆದರೆ ಯಾವ ಕಾರಣಕ್ಕೂ ಎಕ್ಕದ ಹಾಲು ಶರೀರದೊಳಗೆ ಹೋಗಬಾರದು. ಎಕ್ಕದ ಹಾಲನ್ನು ಮುಟ್ಟಿಸುತ್ತಿರುವಾಗಲೇ ಬಿಸಿ ನೀರನ್ನು ಬಾಯಲ್ಲಿ ತುಂಬಿಕೊಂಡು ಮುಕ್ಕಳಿಸುವುದು ಅಗತ್ಯ.

ದನಗಳಿಗೆ 'ಬಾವು' ಬಂದಂಥ ಸಂದರ್ಭದಲ್ಲಿಯೂ ಎಕ್ಕದ ಹಾಲು ಮತ್ತು ಹಸುವಿನ ಬೆಣ್ಣೆಯನ್ನು ಬೆರಸಿ ಚೆನ್ನಾಗಿ ತಿಕ್ಕಿ ದನದ ಪಕ್ಕೆಗಳಿಗೆ ದಿನಕ್ಕೆರಡು ಸಲದಂತೆ ಹಚ್ಚಿದರೆ ಬಾವು ಇಂಗುತ್ತದೆ. ಚರ್ಮ ಹದಮಾಡುವಾಗ ಕೂದಲು ಮತ್ತು ವಾಸನೆಯನ್ನು ಹೋಗಲಾಡಿಸಲು, ಚರ್ಮಕ್ಕೆ ಹಳದಿ ಬಣ್ಣ ಬರುವಂತೆ ಮಾಡಲು ಸ್ವಲ್ಪ ಮಟ್ಟಿಗೆ ಎಲೆ ಕಳ್ಳಿಯ ರಸದೊಂದಿಗೆ ಎಕ್ಕದ ಹಾಲನ್ನೂ ಬಳಸುತ್ತಾರೆ.

ಒಟ್ಟಿನಲ್ಲಿ ಮಾನವ ಮತ್ತು ಪಶುವೈದ್ಯಗಳೆರಡರಲ್ಲಿಯೂ ಎಕ್ಕದ ಅಂಗಾಂಗಗಳ ಪ್ರಯೋಜನವಿದೆ. ಆಯುರ್ವೇದ ಮತ್ತು ಜನಪದ ವೈದ್ಯಗಳಲ್ಲಿ ಕೆಲವು ವ್ಯತ್ಯಾಸಗಳಿರುವುದನ್ನು ಮನಗಂಡಾಗ ಜನಪದ ಔಷಧ ದ್ರವ್ಯಗಳು ವಿಷದ ಗುಣವನ್ನು ಹೊಂದಿದ್ದು ಅವು ಪರಿಷ್ಕರಣಗೊಂಡವುಗಳಲ್ಲ. ಆದರೆ ಆಯುರ್ವೇದದ ಔಷಧಗಳು ಪರಿಷ್ಕರಣಗೊಂಡು ಔಷಧ ದ್ರವ್ಯಗಳಲ್ಲಿರುವ ನಂಜಿನ ಅಂಶವನ್ನು ಹೋಗಲಾಡಿಸಿ ಹದಮಾಡುತ್ತಾರೆ. ಇಂಥ ಹದಗಾರಿಕೆ ಜನಪದ ವೈದ್ಯದಲ್ಲಿ ಬಹುಪಾಲು ಕಾಣುವುದಿಲ್ಲ. ಕಾರಣ ಅವರದೇ ಆದ ಒಂದು ಕೈ ಅಳತೆಯಲ್ಲಿ ಬಳಸುವ ಕಚ್ಚಾಮಾಲುಗಳನ್ನು ಅನಾಮತ್ತಾಗಿ ಬಳಸುವುದುಂಟು. ಹೀಗಾಗಿ ಅವುಗಳ ನೇರ ಬಳಕೆ ಶರೀರದ ಊನಿಗೆ ಕೆಲ ಸಂದರ್ಭಗಳಲ್ಲಿ ಕಾರಣವಾಗಲೂ ಬಹುದು. ಇದಕ್ಕೆ ಉದಾಹರಣೆಯಾಗಿ 'ಹುಳುಕು ಹಲ್ಲು' ಆದಾಗ ಎಕ್ಕದ ಹಾಲನ್ನು ಆ ಹಲ್ಲಿಗೆ ಮತ್ತು ಒಸಡುಗಳಿಗೆ ಮುಟ್ಟಿಸುವಾಗ ಉಂಟಾಗುವ ಜೊಲ್ಲುರಸವನ್ನು ಹೊರಕ್ಕೆ ಉಗುಳದೆ ಅಕಸ್ಮಾತ್ ಹೊಟ್ಟೆಯೊಳಗೆ ನುಂಗಿದರೆ ಶರೀರಕ್ಕೆ ಅಪಾಯವುಂಟಾಗುತ್ತದೆ. ತನಗೆ ಇಷ್ಟವಿಲ್ಲದ ಗರ್ಭವನ್ನು (ಬಸಿರು) ಗುಪ್ತವಾಗಿ ತೆಗೆಸುವುದು ಈಗಲೂ ನಡೆಯುತ್ತಿದೆ. ಇಂಥ ಸಂದರ್ಭಗಳಲ್ಲಿ ಕೆಲವು ಒರಟು ಕ್ರಮಗಳನ್ನು ಅವರು ಅನುಸರಿಸುವುದುಂಟು. ಅಂಥವುಗಳಲ್ಲಿ ಒಂದು : ಎಕ್ಕದ ಕಡ್ಡಿಗಳನ್ನು ಯೋನಿಯ ಮೂಲಕ ಗರ್ಭಚೀಲಕ್ಕೆ ತಳ್ಳಿ ಒಳಗಡೆ ಅತ್ತ ಇತ್ತ ಕಲಕುವುದರಿಂದ ಗರ್ಭಪಾತ ಮಾಡುವುದು. ಎಕ್ಕದ ಕಡ್ಡಿ ವಿಷದ ಅಂಶವನ್ನು ಹೊಂದಿರುವುದರಿಂದ ಸುಲಭವಾಗಿ ಗರ್ಭಪಾತವಾದರೂ ಕೂಡ

ಮುಂದೆ ಆಕೆಗೆ ಕೆಟ್ಟ ಪರಿಣಾಮಗಳು ಒದಗುತ್ತವೆಂದು ಕೆಲವು ವೈದ್ಯಕೀಯ ವಿಶ್ಲೇಷಣೆಗಳಿಂದ ತಿಳಿದುಬರುತ್ತದೆ. ಇಂಥ ಸಂದರ್ಭಗಳಲ್ಲಿ ಗಮನಿಸಬೇಕಾದ ಅಗತ್ಯದ ಅನಿವಾರ್ಯತೆಗಳ ಕಡೆಗೆ ಹೆಚ್ಚು ಗಮನಿಸಬೇಕಾದ ಮತ್ತು ತಿಳುವಳಿಕೆ ನೀಡೇಕಾದ ಹೊಣೆಯನ್ನು 'ಜನಪದ ವೈದ್ಯ' ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ಹೊರಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ ಇನ್ನೊಂದು ಮುಖ್ಯ ವಿಷಯ. ಅದೇನೆಂದರೆ, ಭಾರತೀಯರಲ್ಲಿ ಕೆಲವು ಗಿಡಮರಗಳ ಬಗ್ಗೆ ಅಪಾರವಾದ ನಂಬಿಕೆಗಳಿವೆ. ಈ ಹಿನ್ನಲೆಯಲ್ಲಿ ಒಂದೇ ಕಡೆ ಬೆಳೆದ ಅರಳಿ ಮತ್ತು ಬೇವಿನ ಮರಗಳಿಗೆ ಮನುಷ್ಯರ ಮದುವೆಗಳಂತೆಯೇ ತುಂಬಾ ಖರ್ಚಿನಿಂದ ಮದುವೆ ಮಾಡಿಸುವ ಸಂಪ್ರದಾಯ ಈಗಲೂ ಕೆಲವು ಕಡೆ ಇದೆ. ಮರ–ಮರಗಳಿಗೆ ಮದುವೆ ಮಾಡಿಸುವಂತೆಯೇ ಗಿಡಮರಗಳಿಗೆ ಗಂಡಸರು ತಾಳಿಕಟ್ಟುವ ಸಂಪ್ರದಾಯಗಳೂ ಚಾಲ್ತಿಯಲ್ಲಿವೆ. ಇಬ್ಬರು ಹೆಂಡತಿಯರನ್ನು ಕಳೆದುಕೊಂಡ ಒರಿಸ್ಸಾದ ವೀರನೊಬ್ಬ ಮೂರನೆಯವಳನ್ನು ಮದುವೆಯಾಗಬೇಕಾಗಿ ಬಂದಾಗ ಸತ್ತವರಿಗೆ ಬಂದಂಥ ಪೀಡೆ ಈಕೆಗೆ ಬರಬಾರದೆಂದು ಭಾವಿಸಿ ಈಕೆಯನ್ನು ಮದುವೆಯಾಗುವ ಮುಂಚೆ ಹಿಪ್ಪುನೇರಳೆ ಮರವನ್ನು ಮದುವೆಯಾದಂತೆಯೇ ನಮ್ಮಲ್ಲೂ ಕೂಡ ಇದೇ ರೀತಿಯ ವಿವಾಹ ಎಕ್ಕದೊಂದಿಗೆ ನಡೆಯುತ್ತಿದ್ದುದ್ದನ್ನು ಗಮನಿಸಬಹುದು. ವಿವಾಹದ ನಂತರ ಎಕ್ಕದ ಗಿಡವನ್ನು ಸುಡುತ್ತಿದ್ದರೆಂದು ಮದುವೆ ಶಾಸ್ತ್ರಗಳಿಂದ ತಿಳಿಯುತ್ತದೆ. ಕಾಟ ಪೀಡೆಗಳಂಥ ದುಷ್ಟ ಶಕ್ತಿಗಳಿಂದ ಪಾರಾಗುವುದೊಂದೇ ಇಂಥ ಅಣಕು ಮದುವೆಗಳ ಹಿಂದಿರುವ ಆಶಯವೆಂದರೆ ತಪ್ಪಾಗಲಾರದು.

* * *

# ಲೇಖಕರು

1. **ಪ್ರೊ. ಡಿ. ಲಿಂಗಯ್ಯ**
690, 7ನೇ ಬ್ಲಾಕ್, 2ನೇ ಫೇಸ್,
ಬನಶಂಕರಿ 3ನೇ ಹಂತ, ಬೆಂಗಳೂರು – 560 085

2. **ಡಾ. ಪಿ.ಕೆ. ಸಾವಲಗಿ**
'ಚೆಂಬೆಳಗು', ವಿದ್ಯಾನಗರ,
ಗೋಕಾಕ – 591 307

3. **ಡಾ. ದಸ್ತಗೀರ ಅಲ್ಲೀಭಾಯಿ**
ಮುಖ್ಯಸ್ಥರು, ಕನ್ನಡ ವಿಭಾಗ
ನೆಹರು ಮಹಾವಿದ್ಯಾಲಯ, ಹುಬ್ಬಳ್ಳಿ

4. **ಡಾ. ಚನ್ನಣ್ಣ ವಾಲೀಕಾರ**
ಎಲ್ಐಸಿ 120, ಬಡೇಪುರ ಕಾಲೋನಿ,
ಗುಲ್ಬರ್ಗ : 585 705

5. **ಡಾ. ರಾಜೇಗೌಡ ಹೊಸಹಳ್ಳಿ**
287, 2ನೇ ಹಂತ, ಪಶ್ಚಿಮ ಕಾರ್ಡ್ ರಸ್ತೆ,
ಬೆಂಗಳೂರು – 560 086

6. **ಡಾ. ಟಿ. ಗೋವಿಂದರಾಜು**
ಎಂಎಫ್ 32/8, ನಂದಿನಿ ಬಡಾವಣೆ,
ಬೆಂಗಳೂರು – 560 096

7. **ಡಾ. ಕೆ.ಆರ್. ಸಂಧ್ಯಾ ರೆಡ್ಡಿ**
1044, 'ಸಮಯ', 4ನೇ ಕ್ರಾಸ್, 8ನೇ ಮುಖ್ಯ ರಸ್ತೆ,
ಬೆಂಗಳೂರು – 560 050

8. **ಡಾ. ಹಿ.ಶಿ. ರಾಮಚಂದ್ರೇಗೌಡ**
222, ಹೊಂಬಾಳೆ, 1ನೇ ಮೇನ್,
ಬಾಪೂಜಿ ಬಡಾವಣೆ, ಬೋಗಾದಿ,
ಮೈಸೂರು – 570 006

9. **ಹಿ.ಗೂ. ದುಂಡ್ಯಪ್ಪ**
ಜೋಡು ಸೇತುವೆ ಹತ್ತಿರ
ಶಿವಮೊಗ್ಗ ರಸ್ತೆ, ಹರಿಹರ – 577 601

10. **ಡಾ. ವೈ.ಸಿ. ಭಾನುಮತಿ**
1173, ಕೇಶವದೀಪ, ಲಲಿತಾದ್ರಿ, 1ನೇ ಕ್ರಾಸ್,
ಕುವೆಂಪು ನಗರ, ಮೈಸೂರು – 570 023

11. **ಪ್ರೊ. ಎಂ.ಎಲ್. ನರಸಿಂಹ ಮೂರ್ತಿ**
ಪ್ರಾಧ್ಯಾಪಕರು, ಟಿ.ವಿ.ವಿ. ಕಾಲೇಜು,
ಮಧುಗಿರಿ, ತುಮಕೂರು ಜಿಲ್ಲೆ

12. **ಡಾ. ಸಿ.ಆರ್. ಚಂದ್ರಶೇಖರ್**
38, 2ನೇ ಕ್ರಾಸ್, ಸಿಂಡಿಕೇಟ್ ಬ್ಯಾಂಕ್ ಕಾಲೋನಿ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 076

13. **ಬಿ.ಕೆ. ರೆಡ್ಡಿ**

14. **ಶಕುಂತಲಾ ದಡೇದ**

15. **ಎಂ.ಜಿ. ಹೆಗ್ಡೆ**

16. **ಡಾ. ಎಸ್.ಪಿ. ಪದ್ಮಪ್ರಸಾದ್**
ಅಂಚೆ ಪೆಟ್ಟಿಗೆ ನಂ. 36, ಮಧುಗಿರಿ,
ತುಮಕೂರು ಜಿಲ್ಲೆ

17. **ಡಾ. ಎಸ್. ಜಿ. ಹೆಗಡೆ**

18. **ವಿ.ಎನ್. ಶಿವರಾಮು**
ಹಟ್ಟಿ, ಕಾರಸವಾಡಿ ರಸ್ತೆ, ವಿನಾಯಕ ಬಡಾವಣೆ ಪೂರ್ವ,
ಮಂಡ್ಯ – 571 401

19. **ಡಾ. ಎಂ. ಎನ್. ವಾಲಿ**
'ಶಿವಯೋಗಿ' ನಿಲಯ, ವಿದ್ಯಾನಗರ ಕಾಲೋನಿ,
ಬಿ.ಎಲ್.ಡಿ.ಇ. ಆಸ್ಪತ್ರೆ ಎದುರು,
ವಿಜಾಪುರ – 586 103

20. **ಡಾ. ಜಿ. ಆರ್. ತಿಪ್ಪೇಸ್ವಾಮಿ**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು

21. **ಡಾ. ಚಕ್ಕೆರೆ ಶಿವಶಂಕರ್**
21, ಕುಪ್ಪಿಯ ಕವಿ ಕೇಶಿರಾಜ ರಸ್ತೆ, 10ನೇ 'ಎ' ಕ್ರಾಸ್,
ಶ್ರೀನಗರ, ಬೆಂಗಳೂರು – 560 050

ಸಮಗ್ರ ಜಾನಪದದ ಬೃಹತ್ ವಿನ್ಯಾಸದಲ್ಲಿ ರೋಗ ಜಾನಪದದ ಅಧ್ಯಯನವೂ ಒಂದು. ಮನುಕುಲದ ಹುಟ್ಟಿನೊಡನೆಯೇ ಕಾಣಿಸಿಕೊಂಡಿರಬಹುದಾದ ವಿವಿಧ ರೋಗ ಚಿಕಿತ್ಸೆಗೆ ಮನುಷ್ಯನ ಮೌಖಿಕ ಅರಿವು ಹಲವು ದಾರಿಗಳನ್ನು ಕಲ್ಪಿಸಿಕೊಂಡಿದೆ. ಆಯಾ ಕಾಲಕ್ಕೆ ಅದು ಜ್ಞಾನದ ಮೊತ್ತವೇ. ಕಾಲಾನುಕ್ರಮದಲ್ಲಿ ಅದು ಬದಲಾಗಿರಬಹುದು. ಆದರೂ ಮೌಖಿಕ ಪರಂಪರೆ ಕಡಿದುಹೋಗಿಲ್ಲ. ಎಷ್ಟೊಂದು ನಂಬಿಕೆ, ಎಷ್ಟೊಂದು ನಡಾವಳಿ! ಮೌಲಿಕವಾದುದನ್ನು ಉಳಿಸಿಕೊಳ್ಳಬೇಕು, ಅನಗತ್ಯವಾದುದನ್ನು ಕೈಬಿಡಬೇಕು. ಇದಕ್ಕೆ ಹಿಂದಿನ ಜಾನಪದ ಅರಿವು, ಆಧುನಿಕ ವೈಜ್ಞಾನಿಕ ಅರಿವು ಪರಸ್ಪರ ಮುಖಾಮುಖಿಯಾಗಬೇಕು. ಜಾನಪದ ಅನ್ವಯಿಕತೆ ರೋಗ ಜಾನಪದಕ್ಕೂ ಪೂರಕವಾಗ ಬಾರದೆಂದಿಲ್ಲ.

ಪ್ರಸ್ತುತ ಗ್ರಂಥದ ವಿವಿಧ ಲೇಖನಗಳ, ವಿವಿಧ ವಿದ್ವಾಂಸರ ಒಳನೋಟಗಳು ಹೊಸದೊಂದು ಲೋಕವನ್ನೇ ತೋರಿಸುತ್ತವೆ. ಪ್ರತಿಯೊಂದು ರೋಗದ ಹಿನ್ನೆಲೆಯಲ್ಲೂ ಜಾನಪದದ ಮನಸ್ಸು ತೊಡಗಿಕೊಂಡಿರುವುದು ವಿಸ್ಮಯ ಹುಟ್ಟಿಸುತ್ತದೆ.

ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು